ಶನಿವಾರ, ಡಿಸೆಂಬರ್ 16, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಖುಷಿ

ಕ್ರಿಸ್‌ಮಸ್ ಹಬ್ಬಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ದೆಹಲಿಯಲ್ಲಿ ಯುವತಿಯೊಬ್ಬರು ಸಾಂಟಾಕ್ಲಾಸ್ ಜೊತೆ ಫೋಟೊಗೆ ಪೋಸ್ ನೀಡಿದ್ದು ಹೀಗೆ...

AMRITA VISHWA VIDYAPEETHAM
DEEMED TO BE UNIVERSITY UNDER SECTION 3 OF UGC ACT, 1956

Come. Become.

20 YEARS OF SHAPING YOUNG MINDS

WE MAKE YOU BE WHO YOU WANT TO BE

APPLICATION OPEN FOR B.TECH & MBA 2024



*subject to approval

AMARAVATI | AMRITAPURI (KOLLAM) | BENGALURU | CHENNAI | COIMBATORE | NAGERCOIL*

SCHOOL OF ENGINEERING, COMPUTING & AI

APPLY FOR B.TECH. WITH SCORES FROM

AEEE Amrita Entrance Examination - Engineering

Phase-I : January 16 - 22, 2024 (Tentative)
Phase-II : May 10 - 14, 2024 (Tentative)

Applicants can attempt AEEE twice to improve the score.

AEEE Phase-1 Application Closes on 2nd Jan 2024

JEE MAINS 2024

85%	95%	₹56.95
Seats with Scholarship*	Placements with High CTC	Lakh P.A Highest CTC

amrita.edu/btech 044 4627 6066

APPLY NOW

*T & C apply

SCHOOL OF BUSINESS

MBA 2024 Application Open

Apply with
ACAT 2024
AMRITA COMMON APTITUDE TEST
February 2024

Upto 100% Scholarship* for ACAT Rank Holders	98.41% Placement in 2023	₹24.85 LPA Highest CTC in 2023

amrita.edu/mba 044 481 33399

*Applicants registering for ACAT can opt for Amrita MBA Program through CAT/XAT/MAT/CMAT/GMAT/GRE.

APPLY NOW

SPECIALISATIONS

AI & Business Analystics | Finance | Human Resource Management
Marketing | Operations & Supply Chain Management.

AMARAVATI | AMRITAPURI (KOLLAM) | BENGALURU | COIMBATORE | KOCHI

*T & C apply

Education for Life. Education for Living.

nirf GOVT. OF INDIA | 7TH RANKED UNIVERSITY IN INDIA 2023 | NAAC A++ ACCREDITED | CATEGORY 1 GRADED AUTONOMY UGC, GOVT. OF INDIA | No.1 IN INDIA THE IMPACT RANKINGS 2023 | NBA NATIONAL BOARD of ACCREDITATION ASE COIMBATORE CAMPUS | AACSB ACCREDITED ASB COIMBATORE CAMPUS | University at Buffalo MBA-MS Dual Degree An ASB Bengaluru collaboration

ಪ್ರಜಾವಾಣಿ

ಭತ್ತದ ಉತ್ಪಾದನೆ ಕುಂಠಿತ: ರಾಜ್ಯದ ಗಿರಣಿಗಳಿಗೆ ತೆಲಂಗಾಣವೇ ಸದ್ಯಕ್ಕೆ ಆಸರೆ

ರಾಜ್ಯದಲ್ಲಿ ಅಕ್ಕಿ ಮತ್ತಷ್ಟು ತುಟ್ಟಿ?

• ಕೆ.ಎಚ್. ಓಬಳೇಶ್

ಬೆಂಗಳೂರು: ಪ್ರಸಕ್ತ ಮುಂಗಾರು ಹಂಗಾಮಿನಡಿ ರಾಜ್ಯದಲ್ಲಿ ತೀವ್ರ ಮಳೆ ಕೊರತೆಯಿಂದಾಗಿ ಭತ್ತದ ಬಿತ್ತನೆ ಪ್ರದೇಶವು ನಿಗದಿತ ಗುರಿಗಿಂತ ಶೇ 35ರಷ್ಟು ಕಡಿಮೆಯಾಗಿದ್ದು, ಉತ್ಪಾದನೆಯೂ ಕುಂಠಿತವಾಗಿದೆ.

ಹಾಗಾಗಿ, ಮುಂದಿನ ಮೂರ್ನಾಲ್ಕು ತಿಂಗಳಿನಲ್ಲಿ ಅಕ್ಕಿ ಧಾರಣೆಯು ಶೇ 10ರಿಂದ 20ರಷ್ಟು ಹೆಚ್ಚಳವಾಗಲಿದೆ ಎನ್ನುತ್ತಾರೆ ಅಕ್ಕಿ ಗಿರಣಿ ಮಾಲೀಕರು. ಈಗಾಗಲೇ, ದರ ಹೆಚ್ಚಳದಿಂದ ತತ್ತರಿಸಿರುವ ಗ್ರಾಹಕರ ಜೇಬಿಗೆ ಕತ್ತರಿ ಬೀಳುವ ಸಾಧ್ಯತೆ ಇದೆ. ಮತ್ತೊಂದೆಡೆ ರಾಜ್ಯ ಸರ್ಕಾರದ 'ಅನ್ನಭಾಗ್ಯ' ಯೋಜನೆಗೂ ಅಕ್ಕಿ ಪೂರೈಕೆ ಕೊರತೆಯಾಗುವ ಆತಂಕ ಎದುರಾಗಿದೆ. ಸದ್ಯ ಸಗಟು ಮಾರುಕಟ್ಟೆಯಲ್ಲಿ ಒಂದು ಕ್ವಿಂಟಲ್ ಸಾಮಾನ್ಯ ಸೋನಾ ಮಸೂರಿ ಅಕ್ಕಿ ದರ ₹6 ಸಾವಿರ ಇದ್ದರೆ, ಆರ್‌ಎನ್‌ಆರ್ ಸೋನಾ ತಳಿ ಅಕ್ಕಿ ಧಾರಣೆ ₹6,500 ಇದೆ.

ರಾಜ್ಯದಲ್ಲಿ ಕಳೆದ ವರ್ಷ ಸುಮಾರು 11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತದ ಬಿತ್ತನೆಯಾಗಿತ್ತು. ಈ ಬಾರಿ ಸುಮಾರು 7–8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಷ್ಟೇ ಬಿತ್ತನೆಯಾಗಿದೆ. ಇದು ಅಕ್ಕಿ ಉತ್ಪಾದನೆ ಕುಸಿತಕ್ಕೆ ಕಾರಣವಾಗಲಿದೆ ಎಂದು ಅಕ್ಕಿ ಗಿರಣಿ ಮಾಲೀಕರು ಹೇಳುತ್ತಾರೆ.

'ಈ ಬಾರಿ ಸಕಾಲದಲ್ಲಿ ಮಳೆ ಸುರಿಯಲಿಲ್ಲ. ಹಾಗಾಗಿ, ಜಲಾಶಯಗಳಲ್ಲಿ ನೀರು ಸಂಗ್ರಹವಾಗಲಿಲ್ಲ. ಮಳೆಯಾಶ್ರಿತ ಪ್ರದೇಶದಲ್ಲೂ ಭತ್ತದ ಬಿತ್ತನೆ ನಿರೀಕ್ಷಿತ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಇದು ಉತ್ಪಾದನೆ ಮೇಲೆ ಪರಿಣಾಮ ಬೀರುವುದು ಸಹಜ' ಎಂದು ಹೇಳುತ್ತಾರೆ ಬೆಂಗಳೂರು ಜಿಕೆವಿಕೆಯ ಅಖಿಲ ಭಾರತ ಸಂಘಟಿತ ಸಂಶೋಧನಾ ಪ್ರಾಯೋಜನೆಯ (ಭತ್ತದ ವಿಭಾಗ) ಬೇಸಾಯ ಶಾಸ್ತ್ರಜ್ಞ ಡಾ.ಜಿ.ಆರ್. ದಿನೇಶ್.

ತೆಲಂಗಾಣದಿಂದ ಭತ್ತ ಪೂರೈಕೆ: ರಾಜ್ಯದಲ್ಲಿ 2000ಕ್ಕೂ ಹೆಚ್ಚು ಅಕ್ಕಿ ಗಿರಣಿಗಳಿವೆ. ಕರ್ನಾಟಕ ಸೇರಿದಂತೆ ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡಿನ ಜಲಾಶಯಗಳ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆಯುವ ಭತ್ತವು ಈ ಗಿರಣಿಗಳಿಗೆ ಪೂರೈಕೆಯಾಗುತ್ತದೆ. ಆದರೆ, ನೆರೆಯ ರಾಜ್ಯಗಳಲ್ಲೂ ಈ ಬಾರಿ ಮಳೆ ಅಭಾವದಿಂದ ಭತ್ತದ ಬಿತ್ತನೆ ಪ್ರದೇಶ ಕುಂಠಿತವಾಗಿದೆ.

ಸದ್ಯ ತೆಲಂಗಾಣದ ಗೋದಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆದಿರುವ ಭತ್ತವನ್ನು ನಂಬಿಕೊಂಡೇ ರಾಜ್ಯದ ಅಕ್ಕಿ ಗಿರಣಿಗಳು ಕಾರ್ಯ ನಿರ್ವಹಿಸುವಂತಾಗಿದೆ. ಈ ರಾಜ್ಯದಿಂದ ರಾಯಚೂರು ಸೇರಿದಂತೆ ಇತರೆ ಭಾಗದಲ್ಲಿರುವ ಗಿರಣಿಗಳಿಗೆ ಪ್ರತಿದಿನ 40–60 ಸಾವಿರ ಚೀಲಗಳಷ್ಟು ಭತ್ತ ಪೂರೈಕೆಯಾಗುತ್ತಿದೆ.

'ರಾಜ್ಯದಲ್ಲಿ ಬೇಸಿಗೆ ಅವಧಿಯಲ್ಲಿನ ಭತ್ತದ ಉತ್ಪಾದನೆಯೂ ಶೇ 25ರಿಂದ 30ರಷ್ಟು ಕಡಿಮೆಯಾಗಿದೆ. ಹಾಗಾಗಿ, ತೆಲಂಗಾಣದಿಂದ ಪೂರೈಕೆಯಾಗುವ ಭತ್ತವನ್ನೇ ಗಿರಣಿಗಳು ಅವಲಂಬಿಸುವಂತಾಗಿದೆ' ಎಂದು ಕರ್ನಾಟಕ ರಾಜ್ಯ ಅಕ್ಕಿ ಗಿರಣಿ ಮಾಲೀಕರ ಸಂಘದ ಕಾರ್ಯಾಧ್ಯಕ್ಷ ಸಾವಿತ್ರಿ ಪುರುಷೋತ್ತಮ್ ತಿಳಿಸಿದರು.

ರಾಜಮುಡಿ ಅಕ್ಕಿ ದರ ಹೆಚ್ಚಳ

ಮೈಸೂರು ಜಿಲ್ಲೆಯ ತಿ.ನರಸೀಪುರ, ಕೆ.ಆರ್. ನಗರ ಹಾಗೂ ಹಾಸನ ಜಿಲ್ಲೆಯ ಸಕಲೇಶಪುರ ಭಾಗದಲ್ಲಿ ಹೆಚ್ಚಾಗಿ ರಾಜಮುಡಿ ಭತ್ತ ಬೆಳೆಯಲಾಗುತ್ತಿದೆ. 'ಮೈಸೂರಿನಲ್ಲಿ ಎರಡು–ಮೂರು ತಿಂಗಳ ಹಿಂದೆ ಒಂದು ಕೆ.ಜಿಗೆ ರಾಜಮುಡಿ ಅಕ್ಕಿ ದರ ₹60ರಿಂದ ₹63ರ ವರೆಗೆ ಇತ್ತು. ಸದ್ಯ ₹ 80ರಿಂದ ₹90ರ ವರೆಗೆ ಹೆಚ್ಚಳವಾಗಿದೆ' ಎಂದು ವ್ಯಾಪಾರಿಗಳು ಹೇಳುತ್ತಾರೆ.

'ಪ್ರಜಾವಾಣಿ' ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ಪ್ರಜಾವಾಣಿ' ಹಮ್ಮಿಕೊಂಡಿರುವ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಶನಿವಾರ ಬೆಳಿಗ್ಗೆ 10 ಗಂಟೆಯಿಂದ ಜಯನಗರದ ವಿವೇಕ ಸಭಾಂಗಣದಲ್ಲಿ ನಡೆಯಲಿದೆ.

ಪರಿಶ್ರಮ ಪಿಯು ಕಾಲೇಜು ಹಾಗೂ ಭೀಮಾ ಗೋಲ್ಡ್ ಸಹಯೋಗದಲ್ಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಬೆಂಗಳೂರು ವಲಯದ ಸ್ಪರ್ಧೆಯಲ್ಲಿ 8 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳು–ವಿದ್ಯಾರ್ಥಿನಿಯರು ಭಾಗವಹಿಸಬಹುದಾಗಿದೆ. ಈ ಸ್ಪರ್ಧೆ ಬೆಳಿಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ. ಆಸಕ್ತರು, ಶಾಲೆಯ ಸಮ್ಮತಿಯೊಂದಿಗೆ ಸ್ಥಳದಲ್ಲಿಯೇ ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು.

ಮಧ್ಯಾಹ್ನ 3 ಗಂಟೆಯಿಂದ ರಾಜ್ಯಮಟ್ಟದ ಫೈನಲ್ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ರಸಪ್ರಶ್ನೆ ಸ್ಪರ್ಧೆ ನಡೆಯುವ ಸ್ಥಳ: ವಿವೇಕ ಸಭಾಂಗಣ(ಯುವಕ ಸಂಘ), ಯುವ ಪಥ, #4, 31ನೇ ಅಡ್ಡ ರಸ್ತೆ, 4ನೇ ಟಿ ಬ್ಲಾಕ್ ಪೂರ್ವ, 4ನೇ ಬ್ಲಾಕ್, ಜಯನಗರ.

'ಪಾಸ್‌ಪೋರ್ಟ್ ವಶ: ಡಿಆರ್‌ಟಿಗಿಲ್ಲ ಅಧಿಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಲ ವಸೂಲಾತಿ ನ್ಯಾಯಮಂಡಳಿಗೆ (ಡಿಆರ್‌ಟಿ) ನಾಗರಿಕರ ಪಾಸ್‌ಪೋರ್ಟ್ ಅನ್ನು ವಶಕ್ಕೆ ಪಡೆದುಕೊಳ್ಳುವ ಅಧಿಕಾರವಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಡಿಆರ್‌ಟಿ ಕ್ರಮ ಪ್ರಶ್ನಿಸಿ ಮುಂಬೈನ ಶಂಭು ಕುಮಾರ್ ಕಸ್ಲಿವಾಲಾ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಆದೇಶ ನೀಡಿದ್ದು, ಅರ್ಜಿದಾರರಿಂದ ವಶಕ್ಕೆ ಪಡೆದಿರುವ ಪಾಸ್‌ಪೋರ್ಟ್ ಹಿಂದಿರುಗಿಸುವಂತೆ ಡಿಆರ್‌ಟಿಗೆ ನಿರ್ದೇಶಿಸಿದೆ. 'ಡಿಆರ್‌ಟಿ ಸಿವಿಲ್ ನ್ಯಾಯಾಲಯದಂತೆ ಕಾರ್ಯ ನಿರ್ವಹಿಸುವ ಕಾರಣ ಈ ನ್ಯಾಯಾಲಯಕ್ಕೆ ಪಾಸ್‌ಪೋರ್ಟ್ ಅನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ಪಡೆದ ಸಾಲಕ್ಕೆ ಮಾಡಿಕೊಂಡಿದ್ದ ಭದ್ರತಾ ಒಪ್ಪಂದ ಮತ್ತು ಈ ಕುರಿತಂತೆ 1999ರಿಂದ ಮುಂದುವರಿದಿದ್ದ ತಕರಾರುಗಳ ಅನುಸಾರ ವ್ಯಾಜ್ಯ ಡಿಆರ್‌ಟಿ ಮೆಟ್ಟಿಲೇರಿತ್ತು. ವ್ಯಾಜ್ಯದ ಅವಧಿಯಲ್ಲಿ ಕಸ್ಲಿವಾಲಾ 2016ರ ಏಪ್ರಿಲ್ 5ರಂದು ತಮ್ಮ ಪಾಸ್‌ಪೋರ್ಟ್ ಅನ್ನು ಡಿಆರ್‌ಟಿ ವಶಕ್ಕೆ ಒಪ್ಪಿಸಿದ್ದರು. 2016ರ ಡಿಸೆಂಬರ್ 2ರಂದು ಡಿಆರ್‌ಟಿಗೆ ಅರ್ಜಿಯೊಂದನ್ನು ಸಲ್ಲಿಸಿ ಪಾಸ್‌ಪೋರ್ಟ್ ಬಿಡುಗಡೆ ಮಾಡುವಂತೆ ಕೋರಿದ್ದರು. ಆದರೆ, ಡಿಆರ್‌ಟಿ ಈ ಅರ್ಜಿಯನ್ನು ಪರಿಗಣಿಸಿರಲಿಲ್ಲ. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಹೊರವಲಯದಲ್ಲಿ ಚಳಿ ಪ್ರಭಾವ ತುಸು ಹೆಚ್ಚು

ಕುಸಿದ ತಾಪಮಾನ: ಹೆಚ್ಚಿದ ಚಳಿ

• ಆದಿತ್ಯ ಕೆ.ಎ.

ಬೆಂಗಳೂರು: ಮೋಡಗಳ ಕಣ್ಣಾಮುಚ್ಚಾಲೆ ನಡುವೆ ನಗರಕ್ಕೆ ಚಳಿ ಕಾಲಿರಿಸಿದ್ದು ಎರಡು ದಿನಗಳಿಂದ ತಾಪಮಾನ ಸಾಮಾನ್ಯಕ್ಕಿಂತ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್ ನಷ್ಟು ಕುಸಿದಿದೆ.

ನಗರದಲ್ಲಿನ ವಾತಾವರಣವು ಜನರಿಗೆ ಥಂಡಿ ಎನಿಸುತ್ತಿದೆ. ಮುಂಜಾನೆ ಹಾಗೂ ಸಂಜೆ ವೇಳೆಯಲ್ಲಿ ಶೀತಗಾಳಿ ಬೀಸುತ್ತಿದ್ದು ಜನರು ಬಿಸಿ ಪಾನೀಯ ಹಾಗೂ ಬೆಚ್ಚಗಿರುವ ಉಡುಪಿನ ಮೊರೆಹೋಗುತ್ತಿದ್ದಾರೆ. ಹಗಲು ವೇಳೆಯಲ್ಲೂ ಚಳಿ ಕಾಣಿಸುತ್ತಿದೆ. ಮಕ್ಕಳು, ವೃದ್ಧರು, ಯುವತಿಯರು ಟೋಪಿ– ಸ್ವೆಟರ್ ಧರಿಸಿ ಸಂಚರಿಸುತ್ತಿರುವುದು ಸಾಮಾನ್ಯವಾಗಿದೆ.

ನಗರದ ಹೊರವಲಯದಲ್ಲಿ ಚಳಿ ಪ್ರಭಾವ ತುಸು ಹೆಚ್ಚಿದೆ. ರಾತ್ರಿ ವೇಳೆ ಬೈಕ್‌ನಲ್ಲಿ ಸಂಚರಿಸಲು ಸಾಧ್ಯವಾಗುತ್ತಿಲ್ಲ.

ಡಿಸೆಂಬರ್ 20ರಿಂದ ಜನವರಿ 15ರ ವರೆಗೆ ಉಷ್ಣಾಂಶ ಮತ್ತಷ್ಟು ಕುಸಿಯಲಿದೆ. ಆಗ ಚಳಿ ಪ್ರಭಾವ ಹೆಚ್ಚಿರಲಿದ್ದು ಜನರು ಎಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ತಜ್ಞರು ತಿಳಿಸಿದ್ದಾರೆ.

ನಗರದ ಮೂರು ಸ್ಥಳದಲ್ಲಿ ತಾಪಮಾನ ಕೇಂದ್ರಗಳಿವೆ. ಎಚ್‌ಎಎಲ್, ಬೆಂಗಳೂರು ನಗರ ಪ್ರದೇಶ, ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವೀಕ್ಷಣಾಲಯವಿದ್ದು, ಕಳೆದ ವಾರ ಮೂರು ಕೇಂದ್ರದಲ್ಲೂ ಕನಿಷ್ಠ ಉಷ್ಣಾಂಶ 19 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.



ಬೆಂಗಳೂರಿನ ಮೆಜೆಸ್ಟಿಕ್ ಬಳಿ ಅಜ್ಜ ಹಾಗೂ ಮಗುವೊಂದು ಟೋಪಿ ಧರಿಸಿ ಸಾಗಿದರು. ಪ್ರಜಾವಾಣಿ ಚಿತ್ರ:ಎಸ್‌.ಕೆ.ದಿನೇಶ್

ನಗರದ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ವೀಕ್ಷಣಾಲಯ	ಗರಿಷ್ಠ	ಕನಿಷ್ಠ
ಎಚ್‌ಎಎಲ್	26.5	15.4
ಬೆಂಗಳೂರು ನಗರ	26.5	17.4
ಕೆಐಎಎಲ್	27.5	16.9

ಆದರೆ, ಗುರುವಾರ ಹಾಗೂ ಶುಕ್ರವಾರ ಮೂರು ಕೇಂದ್ರದ ಸುತ್ತಮುತ್ತಲ ಪ್ರದೇಶಗಳಲ್ಲಿ ತಾಪಮಾನವು 15ರಿಂದ 17 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ತೇವಾಂಶದ ಪ್ರಮಾಣವು ಹೆಚ್ಚಾಗಿದೆ. ಹಗಲು ವೇಳೆಯಲ್ಲಿ ಮೋಡ ಕವಿದ ವಾತಾವರಣ, ಮಧ್ಯದಲ್ಲಿ ಸೂರ್ಯನ ದರ್ಶನದ ನಡುವೆ ಚಳಿ ಅನುಭವ ಉಂಟಾಗುತ್ತಿದೆ.

‘ಕಳೆದ ವರ್ಷ ನಗರದ ಕೆಲವು ಭಾಗದಲ್ಲಿ ತಾಪಮಾನ ತೀವ್ರವಾಗಿ ಕುಸಿದಿತ್ತು. ಆದರೆ, ಈ ವರ್ಷ ಕನಿಷ್ಠ ತಾಪಮಾನ 14 ಡಿಗ್ರಿಗೆ ಸೆಲ್ಸಿಯಸ್ ವರೆಗೆ ಕುಸಿಯಬಹುದು’ ಎಂದು ಹವಾಮಾನ ಇಲಾಖೆ ವಿಜ್ಞಾನಿ ಎ.ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

> **ಮಾರ್ಚ್ ಅಂತ್ಯದ ವರೆಗೆ ‘ಎಲ್ ನಿನೊ’ ಪ್ರಭಾವ ಇರಲಿದೆ. ಹೀಗಾಗಿ, ಕನಿಷ್ಠ ಮಟ್ಟಕ್ಕೆ ತಾಪಮಾನ ಕುಸಿಯುವ ಸಾಧ್ಯತೆ ತೀರ ಕಡಿಮೆ. 45 ದಿನಗಳ ಕಾಲ ನಗರದಲ್ಲಿ ಸಾಮಾನ್ಯ ಚಳಿ ಇರಲಿದೆ.**
> **ಎ.ಪ್ರಸಾದ್,**
> ವಿಜ್ಞಾನಿ, ಹವಾಮಾನ ಇಲಾಖೆ

‘ಡಿಸೆಂಬರ್ 31ಕ್ಕೆ ಹಿಂಗಾರು ಅವಧಿ ಮುಕ್ತಾಯವಾಗಲಿದೆ. ನೈಋತ್ಯ ಬಂಗಾಳ ಕೊಲ್ಲಿಯಲ್ಲಿ ಮೇಲ್ಮೈ ಸುಳಿಗಾಳಿ ಎದ್ದಿದೆ. ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು ಬೆಂಗಳೂರಿನಲ್ಲೂ ಮೂರು ದಿನಗಳ ಕಾಲ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ವೇಳೆ ಹಗುರವಾಗಿ ಮಳೆಯಾಗುವ ಸಾಧ್ಯತೆಯಿದೆ’ ಎಂದೂ ಮಾಹಿತಿ ನೀಡಿದರು.

‘1883ರ ಡಿಸೆಂಬರ್ 29ರಂದು ಕನಿಷ್ಠ ಉಷ್ಣಾಂಶ 8.9 ಡಿಗ್ರಿ ಸೆಲ್ಸಿಯಸ್ ಹಾಗೂ 1884ರ ಜನವರಿ 13ರಂದು 7.9 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ದಾಖಲಾಗಿತ್ತು. ಅದು ಇದುವರೆಗಿನ ಕನಿಷ್ಠ ಉಷ್ಣಾಂಶದ ದಾಖಲೆಯಾಗಿದೆ. ಆ ಪ್ರಮಾಣದಲ್ಲಿ ಈ ವರ್ಷ ತಾಪಮಾನ ಕುಸಿಯುವ ಸಾಧ್ಯತೆ ತೀರ ಕಡಿಮೆ’ ಎಂದು ಎ.ಪ್ರಸಾದ್ ಹೇಳುತ್ತಾರೆ.

ಶೀತ ಸಂಬಂಧಿ ಕಾಯಿಲೆಗಳು ಹೆಚ್ಚಳ

ತಾಪಮಾನ ಕುಸಿದ ಬೆನ್ನಲ್ಲೇ ಶೀತ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಳವಾಗಿದೆ. ನೆಗಡಿ, ಕೆಮ್ಮು, ಜ್ವರ, ಉಸಿರಾಟ, ಅಸ್ತಮ ರೋಗಿಗಳು ಆಸ್ಪತ್ರೆಗಳತ್ತ ಬರುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಸಿಬ್ಬಂದಿ ತಿಳಿಸಿದ್ದಾರೆ.

‘ಚಳಿಗಾಲದಲ್ಲಿ ಜೀರ್ಣಕ್ರಿಯೆ ಕಡಿಮೆ ಇರಲಿದೆ. ಸುಲಭವಾಗಿ ಜೀರ್ಣವಾಗುವ ಪದಾರ್ಥ ಸೇವಿಸಿದರೆ ಒಳ್ಳೆಯದು. ಬಿಸಿನೀರನ್ನೇ ಹೆಚ್ಚು ಬಳಸಬೇಕು’ ಎಂದು ತಜ್ಞರು ಸಲಹೆ ನೀಡುತ್ತಾರೆ.

504 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ವಿವಿಧ ಇಲಾಖೆಯಲ್ಲಿ ಖಾಲಿ ಇರುವ 504 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕು’ ಎಂದು ರಾಜ್ಯ ದಲಿತ ಪದವೀಧರರ ಒಕ್ಕೂಟ ಆಗ್ರಹಿಸಿದೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಒಕ್ಕೂಟದ ಅಧ್ಯಕ್ಷ ವಿ. ಲೋಕೇಶ್, ‘ಪ್ರತಿ ವರ್ಷವೂ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಬೇಕು’ ಎಂದು ಪಿ.ಸಿ. ಹೋಟಾ ಸಮಿತಿ ಶಿಫಾರಸು ಮಾಡಿತ್ತು. 2011, 2014, 2015, 2017ರಲ್ಲಿ ಮಾತ್ರ ಅಧಿಸೂಚನೆ ಹೊರಡಲಾಗಿದೆ. 2017ರ ಬಳಿಕ ಯಾವುದೇ ಅಧಿಸೂಚನೆ ಹೊರಡಿಸಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘504 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಈಗಾಗಲೇ ಒಪ್ಪಿಗೆ ನೀಡಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್) ಕೇವಲ 276 ಹುದ್ದೆಗಳ ಭರ್ತಿಗೆ ಮುಖ್ಯಮಂತ್ರಿಯವರ ಅನುಮೋದನೆಗೆ ಕಳುಹಿಸಿದೆ. ಈ ನಿರ್ಧಾರದಿಂದ ಲಕ್ಷಾಂತರ ಆಕಾಂಕ್ಷಿಗಳಿಗೆ ನಿರಾಸೆಯಾಗಿದೆ ಎಂದು ಆಕ್ಷೇಪಿಸಿದ್ದಾರೆ.

‘ಪ್ರತಿ ವರ್ಷ ಕೆಪಿಎಸ್‌ಸಿ ನಡೆಸುವ ಪರೀಕ್ಷೆ ಬರೆಯುವವರ ಸಂಖ್ಯೆ ಹೆಚ್ಚಳವಾಗುತ್ತಿದೆ. ಈ ವರ್ಷ 6 ಲಕ್ಷ ಮಂದಿ ಪರೀಕ್ಷೆ ಬರೆಯಲಿದ್ದಾರೆ. ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುವಾಗ 504 ಹುದ್ದೆಗಳೂ ಕಡಿಮೆ. ಈಗಾಗಲೇ ಹುದ್ದೆಗಳ ಸಂಖ್ಯೆಯನ್ನು ಕಡಿತ ಮಾಡಬಾರದು. ಎಲ್ಲ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

18ರಿಂದ ಗಣಿತ ಮೇಳ

ಬೆಂಗಳೂರು: ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಅವರ ಜನ್ಮದಿನದ ಪ್ರಯುಕ್ತ ವಿಶ್ವ ವಿದ್ಯಾಪೀಠ ಶಿಕ್ಷಣ ಸಮೂಹವು ಇದೇ 18ರಿಂದ 22ರವರೆಗೆ ಹೊನ್ನೇನಹಳ್ಳಿಯ ತಕ್ಷಶಿಲಾ ಕ್ಯಾಂಪಸ್‌ನಲ್ಲಿ ಗಣಿತ ಮೇಳವನ್ನು ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ನಿರ್ದೇಶಕಿ ಸುಶೀಲಾ ಸಂತೋಷ್, ‘ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಅವರು ಮೇಳ ಉದ್ಘಾಟಿಸಲಿದ್ದಾರೆ. ಪ್ರಮುಖ ಗಣಿತ ಶಾಸ್ತ್ರಜ್ಞರು ಹಾಗೂ ವಿಜ್ಞಾನಿಗಳೊಂದಿಗೆ ಸಂವಾದ ಆಯೋಜಿಸಲಾಗಿದೆ. ಗಣಿತ ಕ್ರೀಡೆಗಳು, ಸೇರಿ ಹಲವು ಚಟುವಟಿಕೆಗಳು ಇರಲಿವೆ’ ಎಂದು ಹೇಳಿದರು.

ಕ್ಲಾಸಿಫೈಡ್ಸ್
PROPERTY CORNER

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ಕ್ರಿಸ್ಮಸ್ ಸಂಭ್ರಮವೆಂದರೆ ಮೊದಲು ನೆನಪಾಗುವುದೇ ಹೂಮೃದುಲ ಕೇಕುಗಳು. ಮನೆಯಲ್ಲಿಯೇ ಕೇಕು ತಯಾರಿಸುವ ಬಗೆ

ಆಳ-ಅಗಲ: ಬಿಜೆಪಿ ನೆಲೆ ವಿಸ್ತರಿಸಬಲ್ಲ ಕ್ಷೇತ್ರ ಮರುವಿಂಗಡಣೆ

ದೇಶದಲ್ಲಿ ಗೃಹ ಬೆಲೆ ಶೇ 6ರಷ್ಟು ಏರಿಕೆ 10

ಕೆಟಿಪಿಪಿ ಸೇರಿ 3 ಮಸೂದೆಗಳಿಗೆ ಅಂಗೀಕಾರ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,483 ▲	21,456 ▲	₹64,400 (ಬೆಂಗಳೂರು) ▲	₹76,400 (ಬೆಂಗಳೂರು) ▲	83.03 ▲

ಅಸಲು ಪಾವತಿಸಿದರೆ ಮಾತ್ರ ಸೌಲಭ್ಯ, ಸಹಕಾರಿ ಬ್ಯಾಂಕ್‌ಗಷ್ಟೇ ಅನ್ವಯ: ಸಿ.ಎಂ

ಕೃಷಿ ಸಾಲದ ಬಡ್ಡಿ ಮನ್ನಾ

ಪ್ರಜಾವಾಣಿ ವಾರ್ತೆ

ವಿಧಾನಸಭೆ/ವಿಧಾನಪರಿಷತ್ತು (ಸುವರ್ಣಸೌಧ, ಬೆಳಗಾವಿ): ರೈತರು ಸಹಕಾರಿ ಬ್ಯಾಂಕುಗಳಿಂದ ಪಡೆದಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ. ಅಸಲನ್ನು ಸಕಾಲದಲ್ಲಿ ಪಾವತಿಸಿದವರಿಗೆ ಮಾತ್ರ ಈ ರಿಯಾಯಿತಿ ದೊರೆಯಲಿದೆ. ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಉಭಯ ಸದನಗಳಲ್ಲಿ ಉತ್ತರ ನೀಡಿದ ಅವರು ಈ ವಿಚಾರವನ್ನು ಶುಕ್ರವಾರ ಪ್ರಕಟಿಸಿದರು.

‘ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ಭರವಸೆಯನ್ನು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿರಲಿಲ್ಲ. ಆದರೆ ಬರ ಮತ್ತು ರೈತರ ಸಂಕಷ್ಟದ ಕಾರಣದಿಂದ ಬಡ್ಡಿ ಮನ್ನಾ ತೀರ್ಮಾನ ತೆಗೆದುಕೊಂಡಿದ್ದೇವೆ’ ಎಂದರು.

‘2018ರ ವಿಧಾನಸಭೆ ಚುನಾವಣೆಗೆ ಮುನ್ನ ಬಿಜೆಪಿ ಪ್ರಕಟಿಸಿದ್ದ ಪ್ರಣಾಳಿಕೆಯಲ್ಲಿ ₹1 ಲಕ್ಷದ ವರೆಗಿನ ಕೃಷಿ ಸಾಲ ಮನ್ನಾ ಮಾಡುವುದಾಗಿ ಭರವಸೆ ನೀಡಿತ್ತು. ಯಡಿಯೂರಪ್ಪ ಮುಖ್ಯಮಂತ್ರಿ ಆದ ಬಳಿಕ ಕೃಷಿ ಸಾಲ ಮನ್ನಾ ಮಾಡಲಿಲ್ಲ. ವಿಧಾನಪರಿಷತ್‌ನಲ್ಲಿ ವಿ.ಎಸ್. ಉಗ್ರಪ್ಪ ಅವರು ಈ ವಿಷಯ ಪ್ರಸ್ತಾಪಿಸಿದಾಗ, ‘ನಾವು ನೋಟು ಪ್ರಿಂಟ್ ಮಾಡುವ ಯಂತ್ರ ಇಟ್ಟಿಲ್ಲ’ ಎಂದು ಯಡಿಯೂರಪ್ಪ ಉತ್ತರ ಕೊಟ್ಟಿದ್ದರು’ ಎಂದು ಸಿದ್ದರಾಮಯ್ಯ ಹೇಳಿದರು.

ಪ್ರತ್ಯೇಕ ರಾಜ್ಯ ಬೇಡಿಕೆ ಸಲ್ಲದು: ‘ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಪ್ರತ್ಯೇಕ ರಾಜ್ಯದ ಬೇಡಿಕೆ ಸರಿಯಲ್ಲ. ಅದರಿಂದ ಯಾವುದೇ ಪರಿಹಾರ ಸಿಗುವುದಿಲ್ಲ’ ಎಂದು ಅವರು ಹೇಳಿದರು.

6ನೇ ಪುಟ ನೋಡಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಳಿಗಾಲದ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಬರ ಪರಿಹಾರ ಕುರಿತ ಚರ್ಚೆ ವೇಳೆ ಮಾತನಾಡಿದರು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ

‘ತಾರತಮ್ಯ ನಿವಾರಣೆಗೆ ಉನ್ನತಾಧಿಕಾರ ಸಮಿತಿ’

ನಂಜುಂಡಪ್ಪ ವರದಿಯ ಅನುಷ್ಠಾನದ ಬಳಿಕವೂ ತಾಲ್ಲೂಕುಗಳು ಹಿಂದುಳಿದಿರುವಿಕೆಗೆ ಕಾರಣ ಹುಡುಕಿ, ಅಧ್ಯಯನ ವರದಿ ಪಡೆಯಲು ಅರ್ಥ-ಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಪ್ರಮುಖ ಘೋಷಣೆಗಳು

- ಬೆಳಗಾವಿ ಸಮೀಪ ಸುಮಾರು 2,000 ಎಕರೆಯಲ್ಲಿ ಹೊಸ ಕೈಗಾರಿಕಾ ಪ್ರದೇಶ ಮತ್ತು 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಸ್ಥಾಪನೆ. ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ಒತ್ತು.
- ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಸ್ಥಾಪನೆ, ಈಗಾಗಲೇ 19 ಘಟಕಗಳಿಂದ ₹1,255 ಕೋಟಿ ಬಂಡವಾಳ ಹೂಡಿಕೆ. ಸುಮಾರು 2,450 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ. 3,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ.
- ರಾಯಚೂರಿನಲ್ಲಿ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಒತ್ತು.
- ವಿಜಯಪುರದಲ್ಲಿ 1,500 ಎಕರೆ ಪ್ರದೇಶದಲ್ಲಿ ಉತ್ಪಾದನಾ ಕ್ಲಸ್ಟರ್ ಸ್ಥಾಪನೆ.
- ಉತ್ತರ ಕರ್ನಾಟಕದಲ್ಲಿ ಮಹತ್ವದ ಪ್ರವಾಸೋದ್ಯಮ ತಾಣಗಳಿವೆ. ಈ ತಾಣಗಳ ಅಭಿವೃದ್ಧಿಗೆ ಸಮಗ್ರ ಕ್ರಿಯಾ ಯೋಜನೆ ರೂಪಿಸಿ, ಉದ್ಯೋಗಾವಕಾಶ ಸೃಷ್ಟಿ.
- ಧಾರವಾಡದಲ್ಲಿರುವ ವಾಲ್ಮಿಯ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ ಉನ್ನತೀಕರಣ. ಇದನ್ನು ಜಲ ನಿರ್ವಹಣೆಯ ಶ್ರೇಷ್ಠತಾ ಕೇಂದ್ರವಾಗಿ ಪರಿವರ್ತನೆ. ಇಲ್ಲಿ ಜಲ ಶಿಕ್ಷಣ ನೀಡುವುದರ ಜತೆಗೆ, ಉತ್ತರ ಕರ್ನಾಟಕದ ಮಣ್ಣಿನ ಸವುಳು–ಜವುಳು ಸಮಸ್ಯೆಯ ನಿರ್ವಹಣೆ, ರೈತರ ಆದಾಯ ಹೆಚ್ಚಳದ ಕಡೆಗೆ ಒತ್ತು.

ಭದ್ರತಾಲೋಪ: ಸಂಸತ್ತಿನ ಉಭಯ ಸದನಗಳಲ್ಲೂ ನಡೆಯದ ಕಲಾಪ

ಅಮಿತ್ ಶಾ ಹೇಳಿಕೆಗೆ ವಿಪಕ್ಷ ಪಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆಯಲ್ಲಿನ ಭದ್ರತಾ ವೈಫಲ್ಯದ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಬೇಕು ಎಂದು ಪಟ್ಟು ಹಿಡಿದು ವಿರೋಧ ಪಕ್ಷಗಳು ಗದ್ದಲ ಹಾಗೂ ಪ್ರತಿಭಟನೆ ನಡೆಸಿದ್ದರಿಂದ ಉಭಯ ಸದನಗಳ ಕಲಾಪ ಶುಕ್ರವಾರವೂ ನಡೆಯಲಿಲ್ಲ.

ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭವಾದ ಕೂಡಲೇ ಎರಡೂ ಸದನಗಳಲ್ಲಿ ವಿಪಕ್ಷಗಳ ಸದಸ್ಯರು ಫಲಕಗಳನ್ನು ಹಿಡಿದು ಘೋಷಣೆಗಳನ್ನು ಕೂಗಿ ಶಾ ಹೇಳಿಕೆಗೆ ಆಗ್ರಹಿಸಿದರು.

ಬುಧವಾರದ ಭದ್ರತಾ ವೈಫಲ್ಯದ ಕುರಿತು ಚರ್ಚೆ ನಡೆಯಬೇಕು ಎಂದು ಒತ್ತಾಯಿಸಿದರು. ಸದನದೊಳಗೆ ನುಗ್ಗಿದ ಆರೋಪಿಗಳಿಗೆ ಪಾಸ್ ವ್ಯವಸ್ಥೆ ಮಾಡಿಕೊಟ್ಟ ಮೈಸೂರಿನ ಸಂಸದ ಪ್ರತಾಪಸಿಂಹ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಬೇಡಿಕೆ ಮುಂದಿಟ್ಟರು.

ಕಲಾಪವನ್ನು ಮಧ್ಯಾಹ್ನ 2ಕ್ಕೆ ಮುಂದೂಡಲಾಯಿತು. ಮಧ್ಯಾಹ್ನ ಕಲಾಪ ಶುರುವಾದ ಕೂಡಲೇ ವಿಪಕ್ಷಗಳ ಸದಸ್ಯರು ಗದ್ದಲ ಆರಂಭಿಸಿದ್ದರಿಂದ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

7ನೇ ಪುಟ ನೋಡಿ

ರಾಘವ್ ಛಡ್ಡಾಗೆ ಧನಕರ್ ತರಾಟೆ

ರಾಜ್ಯಸಭೆಯಲ್ಲಿ ಭದ್ರತಾ ಲೋಪದ ಚರ್ಚೆಗೆ ವಿರೋಧ ಪಕ್ಷದ ನಾಯಕರ ಬೇಡಿಕೆಯನ್ನು ಅನುಸರಿಸಿ ಕ್ರಿಯಾಲೋಪ ಎತ್ತಲು ಕೈ ಸನ್ನೆ ಬಳಸಿದ್ದಕ್ಕಾಗಿ ಎಎಪಿಯ ಸದಸ್ಯ ರಾಘವ್ ಛಡ್ಡಾ ಅವರನ್ನು ಜಗದೀಪ್ ಧನಕರ್ ತರಾಟೆಗೆ ತೆಗೆದುಕೊಂಡರು.

ಕ್ರಿಯಾಲೋಪ ಎತ್ತಲು ಅನುಮತಿ ಕೇಳುತ್ತಿದ್ದ ಸಂದರ್ಭದಲ್ಲಿ ಚಡ್ಡಾ ಅವರು ಕ್ರಿಕೆಟ್‌ನಲ್ಲಿ ಟಿವಿ ಅಂಪೈರ್‌ಗಳನ್ನು ಕೋರುವ ರೀತಿಯಲ್ಲಿ ಕೈಸನ್ನೆ ಮಾಡಿದರು. ಇದರಿಂದ ಕೋಪಗೊಂಡ ಧನಕರ್ ಅವರು ಈ ರೀತಿ ಮಾಡದಂತೆ ಸೂಚಿಸಿದರು. ‘ನೀವು ಕ್ರಿಯಾಲೋಪ ಎತ್ತಲು ಕೈಸನ್ನೆ ಮಾಡಬೇಕಾಗಿಲ್ಲ. ಬಾಯಿಯಿಂದ ಮಾತನಾಡಿ. ಬಿಟ್ಟರೆ ನೃತ್ಯವನ್ನೂ ಮಾಡುತ್ತೀರಿ. ನಿಮ್ಮ ಸೀಟಿನಲ್ಲಿ ಕುಳಿತುಕೊಳ್ಳಿ’ ಎಂದು ಧನಕರ್ ತಾಕೀತು ಮಾಡಿದರು.

ರಾಷ್ಟ್ರೀಯ ಭದ್ರತೆಯ ಗಂಭೀರ ವಿಷಯದ ಕುರಿತು ಧ್ವನಿ ಎತ್ತುವುದು ನಮ್ಮ ಕರ್ತವ್ಯ. ಅಮಿತ್ ಶಾ ಅವರು ಸದನದಲ್ಲಿ ಹೇಳಿಕೆ ನೀಡಬೇಕು. ಈ ವಿಷಯದಲ್ಲಿ ರಾಜಿ ಇಲ್ಲ

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಸ್ಪೀಕರ್ ಅವರ ನಿರ್ದೇಶನಗಳನ್ನು ಸರ್ಕಾರ ಪಾಲಿಸುತ್ತಿದೆ. ಈ ವಿಚಾರ ನ್ಯಾಯಾಲಯದಲ್ಲಿಯೂ ಇದ್ದು, ಉನ್ನತ ಮಟ್ಟದ ತನಿಖೆ ನಡೆಯುತ್ತಿದೆ. ಪ್ರತಿಪಕ್ಷಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು

ಪ್ರಲ್ಹಾದ ಜೋಶಿ
ಸಂಸದೀಯ ವ್ಯವಹಾರಗಳ ಸಚಿವ



‘ಕ್ರಮ ಕೈಗೊಳ್ಳಿ, ಇಲ್ಲ ಸಾಯಲು ಬಿಡಿ’

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಬಾಂದಾ ಜಿಲ್ಲೆಯ ಮಹಿಳಾ ನ್ಯಾಯಾಧೀಶರೊಬ್ಬರು, ಸಿಜೆಐ ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದು ಘನತೆಯಿಂದ ಜೀವ ಕಳೆದುಕೊಳ್ಳಲು ಅನುಮತಿ ಕೋರಿದ್ದಾರೆ. ಜಿಲ್ಲಾ ನ್ಯಾಯಾಧೀಶರೊಬ್ಬರ ವಿರುದ್ಧ ತಾವು ದಾಖಲಿಸಿದ್ದ ಲೈಂಗಿಕ ದೌರ್ಜನ್ಯ ದೂರಿಗೆ ಸಂಬಂಧಿಸಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಆರೋಪಿಸಿದ್ದಾರೆ. 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಉನ್ನತ ಸಿದ್ಧಾಂತಗಳೊಂದಿಗೆ ಮುಂದಿನ ಚುನಾವಣೆಯಲ್ಲಿ ಭಾರತ ಸರ್ಕಾರದ ಮಾಜಿ ಪ್ರಧಾನ ಮಂತ್ರಿಗಳಾದ
ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಹಾಗೂ ಕರ್ನಾಟಕ ಸರ್ಕಾರದ ಮಾಜಿ ಮುಖ್ಯ ಮಂತ್ರಿಗಳಾದ
ಮಾನ್ಯ ಶ್ರೀ ಹೆಚ್. ಡಿ. ಕುಮಾರ ಸ್ವಾಮಿಯವರ ನೇತೃತ್ವದಲ್ಲಿ ಫಿನೀಕ್ಸ್ ಪಕ್ಷಿಯಂತೆ ಮತ್ತೆ ಎದ್ದು
ಬರಲಿರುವ ಕಿಂಗ್ ಮೇಕರ್ ಪಕ್ಷ ಜೆ.ಡಿ.ಎಸ್
ಶ್ರೀ ರಾಜಣ್ಣನವರು
ಮಾಜಿ ವೈಸ್ ಛೇರ್‌ಮೆನ್, ಗೊಟ್ಟಿಗೆರೆ
ಮಾಜಿ ಮುಖ್ಯ ಮಂತ್ರಿಗಳಾದ ತಾಯಿ ಹೃದಯ ಮನಸಿನ
ಸನ್ಮಾನ್ಯ ಶ್ರೀ ಹೆಚ್. ಡಿ. ಕುಮಾರಸ್ವಾಮಿ ರವರಿಗೆ
ಜನ್ಮದಿನದ ಶುಭಾಷಯಗಳು
ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್.
ಶ್ರೀ ಬಿ. ಎನ್. ಕುಮಾರ್
ಬಸವನಪುರ
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿ.ಬಿ.ಎಂ.ಪಿ, ಮಾಜಿ ಗ್ರಾ. ಪಂ. ಮತ್ತು
ತಾ॥ ಪಂ. ಸದಸ್ಯರು ಉತ್ತರಹಳ್ಳಿ
ವಿಧಾನ ಸಭಾ ಕ್ಷೇತ್ರ
ದಿನಾಂಕ :
16-12-2023
ಶನಿವಾರ
ಶುಭಕೋರುವವರು :
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ
ನಂದಿ ಪ್ರಿಂಟ್ಸ್, ಗೊಟ್ಟಿಗೆರೆ ಮೊ: 9845198845

‘ಸಿಐಐ ಎಕ್ಸಾನ್’ ಬೃಹತ್ ವಸ್ತುಪ್ರದರ್ಶನ: ಸಾರ್ವಜನಿಕರು ಹೈರಾಣ

ಮಾದಾವರ: ವಾಹನ ದಟ್ಟಣೆ ಸಮಸ್ಯೆ ತೀವ್ರ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ತುಮಕೂರು ರಸ್ತೆಯ ಮಾದಾವರ ಬಳಿಯ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ‘ಸಿಐಐ ಎಕ್ಸಾನ್’ ಬೃಹತ್ ವಸ್ತುಪ್ರದರ್ಶನ ನಡೆಯುತ್ತಿದ್ದು, ಈ ಭಾಗದಲ್ಲಿ ವಾಹನ ದಟ್ಟಣೆ ತೀವ್ರವಾಗಿದೆ. ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ.

ದೇಶದ ಪ್ರತಿಷ್ಠಿತ ಸಾವಿರಾರು ವಾಣಿಜ್ಯ ಉದ್ಯಮಿಗಳು, ಕೈಗಾರಿಕೋದ್ಯಮಿಗಳು, ಗ್ರಾಹಕರು ಬರುತ್ತಿರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿ ಸಂಚಾರ ಅಸ್ತವ್ಯಸ್ತವಾಗುತ್ತಿದೆ.

ಪ್ರಯಾಣಿಕರು ಟಿಸಿಐ ಅಂಚೆಪಾಳ್ಯ, ಮಾದಾವರ, ಚಿಕ್ಕಬಿದರಕಲ್ಲು, 8ನೇ ಮೈಲು ಬಳಿ 2 ಕಿ.ಮೀ ದಟ್ಟಣೆ ಆಗುತ್ತಿದೆ. ಜನರು ಪ್ರತಿನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ.

ತುಮಕೂರು ರಸ್ತೆ ಮೇಲ್ಸೇತುವೆ, ಮೆಟ್ರೊ ಬಂದರೂ ಸಹ ಟ್ರಾಫಿಕ್ ಕಿರಿಕಿರಿ ತಪ್ಪಿಲ್ಲ. ಈಗ ಬೆಂಗಳೂರು ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಪದೇಪದೇ ವಸ್ತು ಪ್ರದರ್ಶನ ನಡೆಯುತ್ತಿರುವುದರಿಂದ ಯಾವಾಗಲೂ ಟ್ರಾಫಿಕ್ ಸಮಸ್ಯೆ ಉಲ್ಬಣಿಸುತ್ತಿದೆ.

ಗೊರಗುಂಟೆಪಾಳ್ಯದಿಂದ ಪಾರ್ಲೆಜಿ ಟೋಲ್‌ವರೆಗೂ ಮೇಲ್ಸೇತುವೆ ದುರಸ್ತಿ ಕಾರ್ಯ ನಡೆಯುತ್ತಿದೆ. ಇದರಿಂದ ಬೃಹತ್ ವಾಹನಗಳಿಗೆ ಅಲ್ಲಿ ಅವಕಾಶವಿಲ್ಲ. ಸೇವಾ ರಸ್ತೆಯಲ್ಲಿ ವಾಹನ ದಟ್ಟಣೆ ಜಾಸ್ತಿಯಾಗಿದೆ.

‘ಮಾದಾವರ ಮತ್ತು ಚಿಕ್ಕಬಿದರಕಲ್ಲು ಬಳಿ ಕೆಳಸೇತುವೆ ತಿರುವಿನಲ್ಲಿ ಸಂಚಾರ ಪೊಲೀಸರು, ಸಾರ್ವಜನಿಕರಿಗೆ ವಸ್ತು ಪ್ರದರ್ಶನ ಕೇಂದ್ರದ ಕಡೆಗೆ ಬಿಡುವುದಿಲ್ಲ. ಆಗ ಪೊಲೀಸರಿಗೂ ಮತ್ತು ವಾಹನ ಸವಾರರಿಗೆ ಸಣ್ಣಪುಟ್ಟ ಮಾತಿನ ಚಕಮಕಿ ನಡೆಯುತ್ತಿದೆ. ಅಲ್ಲಿ ಟ್ರಾಫಿಕ್ ಸಮಸ್ಯೆ ಜಾಸ್ತಿ ಆಗುತ್ತದೆ. ಅವರನ್ನು ಟಿಸಿಐ ಹೋಗಿ ತಿರುಗಿ ಬರಲು ಹೇಳುತ್ತಾರೆ. ಜಿಂದಾಲ್ ಪಬ್ಲಿಕ್ ಶಾಲೆ ಮತ್ತು ಚಿಕ್ಕ ಬಿದರಕಲ್ಲು ಸರ್ಕಾರಿ ಶಾಲೆಯಲ್ಲಿ ಸಾವಿರಾರು ವಿದ್ಯಾರ್ಥಿಗಳಿದ್ದು ಪೋಷಕರು ಅವರನ್ನು ಕರೆತರಲು ದ್ವಿಚಕ್ರ ವಾಹನಗಳಲ್ಲಿ ತೆರಳುತ್ತಾರೆ. ‘ಇದು ಕೂಡ ಟ್ರಾಫಿಕ್ ಸಮಸ್ಯೆಗೆ ಕಾರಣವಾಗಿದೆ’ ಎಂದು ಚಿಕ್ಕಬಿದರಕಲ್ಲು ನಿವಾಸಿ ಸೋಮಶೇಖರ್ ತಿಳಿಸಿದರು.

ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರಕ್ಕೆ ಇತ್ತೀಚೆಗೆ ಕೇಂದ್ರ ಸಚಿವರಾದ ರಾಜನಾಥ್ ಸಿಂಗ್ ಮತ್ತು ನಿತಿನ್ ಗಡ್ಕರಿ ಕೂಡ ಆಗಮಿಸಿದ್ದರು. ಆಗಲೂ 3-4 ಕಿಲೋಮೀಟರ್ ಟ್ರಾಫಿಕ್ ಸಮಸ್ಯೆ ಆಗಿತ್ತು. ಇದಕ್ಕೆ ಪರ್ಯಾಯ ಮಾರ್ಗದ ಅವಶ್ಯಕತೆ ಇದೆ ಎಂದು ಸ್ಥಳೀಯರು ಹೇಳುತ್ತಾರೆ.

ತುಮಕೂರು ರಸ್ತೆ ಮಾದಾವರ ಮತ್ತು ಚಿಕ್ಕಬಿದರಕಲ್ಲು ಬಳಿ ವಾಹನ ದಟ್ಟಣೆ.

ಮುಖ್ಯಾಂಶಗಳು
- 8ನೇ ಮೈಲು ಬಳಿ ಸುಮಾರು 2 ಕಿ.ಮೀ.ನಷ್ಟು ದಟ್ಟಣೆ
- ಮೇಲ್ಸೇತುವೆ ದುರಸ್ತಿ ಕಾರ್ಯವು ವಾಹನ ದಟ್ಟಣೆಗೆ ಕಾರಣ
- ವಾಹನ ಸವಾರರು, ಪೊಲೀಸರ ನಡುವೆ ಮಾತಿನ ಚಕಮಕಿ

ಕುಲಶಾಸ್ತ್ರೀಯ ಅಧ್ಯಯನ: ಅಗತ್ಯ ಅನುದಾನಕ್ಕೆ ಆಗ್ರಹ

ಬೆಂಗಳೂರು: ಕುಂಬಾರ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಹಾಗೂ ಅಭಿವೃದ್ಧಿ ನಿಗಮಕ್ಕೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ರಾಜ್ಯ ಕುಂಬಾರ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಾಬು ಎಸ್. ಕುಂಬಾರ್, ‘ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗ ಡಿ.ದೇವರಾಜ ಅರಸು ಸಂಶೋಧನಾ ಸಂಸ್ಥೆ ಮೂಲಕ ಕುಂಬಾರ ಕುಲಶಾಸ್ತ್ರೀಯ ಅಧ್ಯಯನ ನಡೆಸುತ್ತಿದೆ. ಈ ಸಮಾಜದಲ್ಲಿ 18 ಉಪ ಜಾತಿ ಗುರುತಿಸಲಾಗಿದೆ ಎಂದರು.

ಈ ಅಧ್ಯಯನಕ್ಕೆ 2022ರಲ್ಲಿ ₹ 6.25 ಲಕ್ಷ ಹಣ ಬಿಡುಗಡೆ ಮಾಡಲಾಗಿತ್ತು. ಈ ಹಣ ಖರ್ಚಾಗಿದೆ. ಸಂಶೋಧನಾ ಸಂಸ್ಥೆಯು ₹13.75 ಲಕ್ಷ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಸರ್ಕಾರ ಕೂಡಲೇ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು’ ಎಂದು ಒತ್ತಾಯಿಸಿದರು.

‘ಕುಂಬಾರ ಸಮುದಾಯದ ಅಭಿವೃದ್ಧಿ ನಿಗಮ 2023ರ ಮಾರ್ಚ್‌ನಲ್ಲಿ ಸ್ಥಾಪನೆಯಾಗಿದ್ದರೂ ಅಧ್ಯಕ್ಷರ ನೇಮಕಾತಿ ನಡೆಯಲಿಲ್ಲ. ಸಮುದಾಯದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಅರ್ಹ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ನಿಗಮಕ್ಕೆ ₹ 100 ಕೋಟಿ ಅನುದಾನ ಬಿಡುಗಡೆ ಮಾಡಬೇಕು. ಇದರಿಂದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಪ್ರಗತಿ ಸಾಧ್ಯವಾಗುತ್ತದೆ’ ಎಂದು ಹೇಳಿದರು.

ನೈರುತ್ಯ ರೈಲ್ವೆ
GEM/2023/B/4320285 Dated: 09-12-2023
ಕಾಮಗಾರಿ ವಿವರಣೆ | ಅಂದಾಜು ಮೌಲ್ಯ: ರೂ. 2,42,27,652/-
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01-01-2024, 18:30
https://gem.gov.in
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಜಿಎಸ್‌ಯು ಬೆಂಗಳೂರು
PUB/558/AAV/PRB/SWR/2023-24
South Western Railway-SWR SWRRLY SWRRLY

ಸಂಸದ ಪ್ರತಾಪ್ ಸಿಂಹ ಉಚ್ಚಾಟಿಸಲು ಆಗ್ರಹ

ಅಮಿತ್ ಶಾ ರಾಜೀನಾಮೆಗೆ ಒತ್ತಾಯ: ಸ್ವಾತಂತ್ರ್ಯ ಉದ್ಯಾನದಲ್ಲಿ ಎಎಪಿ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರತಾ ವ್ಯವಸ್ಥೆ ಭೇದಿಸಿ ಲೋಕಸಭೆ ಒಳಗೆ ಸ್ಮೋಕ್ ಕ್ಯಾನ್ (ಅನಿಲ ಉಗುಳುವ ಡಬ್ಬಿ) ಪ್ರಯೋಗಿಸಿದ್ದ ಯುವಕರಿಗೆ ಪಾಸ್ ನೀಡಿದ್ದ ಸಂಸದ ಪ್ರತಾಪ್ ಸಿಂಹ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಿದರು.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು. ಪ್ರತಾಪ್ ಸಿಂಹ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

‘ಸಂಸತ್ತಿನ ಭದ್ರತಾ ಲೋಪ ಆಘಾತಕಾರಿ ಘಟನೆ. ಪ್ರತಾಪ್ ಸಿಂಹ ಅವರು ವಿದ್ಯಾವಂತ ಸಂಸದರಾಗಿ ಅಪರಿಚಿತರಿಗೆ ಪಾಸ್ ನೀಡಲು ಹೇಗೆ ಸಾಧ್ಯ? ಬೇಜವಾಬ್ದಾರಿಯಿಂದ ನಡೆಯುವುದು ಕೂಡಾ ಅಪರಾಧ. ತಕ್ಷಣ ಪ್ರತಾಪ್ ಸಿಂಹ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ಉಚ್ಚಾಟನೆ ಮಾಡಬೇಕು. ಸಂಸತ್‌ಗೆ ರಕ್ಷಣೆ ನೀಡಲಾಗದ ಗೃಹ ಸಚಿವರು ರಾಜೀನಾಮೆ ನೀಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

‘ಹೊಸ ಸಂಸತ್ ಭವನದ ಉದ್ಘಾಟನೆ ನಂತರ ನಡೆದ ಎರಡನೇ ಭದ್ರತಾ ಲೋಪ ಇದಾಗಿದೆ. 22 ವರ್ಷಗಳ ಹಿಂದಿನ ಭಯೋತ್ಪಾದಕರ ದಾಳಿ ದಿನದಂದೇ ಈ ದಾಳಿ ನಡೆಸಿರುವುದನ್ನು ಗಮನಿಸಿದರೆ, ಈ ಘಟನೆ ಹಿಂದೆ ಬೇರೆ ಹುನ್ನಾರಗಳು ಇರಬಹುದು. ಇದು ದೇಶದ ಸುರಕ್ಷತೆಯ ದೃಷ್ಟಿಯಿಂದ ಹಲವು ಪ್ರಶ್ನೆಗಳನ್ನು ಸೃಷ್ಟಿಸಿದೆ’ ಎಂದು ಮೋಹನ್ ದಾಸರಿ ಹೇಳಿದರು.

ಮುಖಂಡರಾದ ಜಗದೀಶ್ ವಿ. ಸದಂ, ಸತೀಶ್ ಮೋಹನ್, ವೀಣಾ, ಜಗದೀಶ್ ಚಂದ್ರ, ಉಷಾ ಮೋಹನ್, ಅನಿಲ್ ನಾಚಪ್ಪ, ವಿಶ್ವನಾಥ್, ಶಶಿಧರ್ ಆರಾಧ್ಯ, ಅಂಜನಾಗೌಡ, ಮಹಾಲಕ್ಷ್ಮಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸಂಸದ ಪ್ರತಾಪ್ ಸಿಂಹ ಅವರನ್ನು ಉಚ್ಚಾಟಿಸುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

ಅನ್ಯ ಕಾರ್ಯಕ್ಕೆ ಅನುದಾನ: 21ಕ್ಕೆ ಪ್ರತಿಭಟನೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ (ಟಿಎಸ್‌ಪಿ) ಅನುದಾನವು ಅನ್ಯ ಕಾರ್ಯಗಳಿಗೆ ಬಳಕೆಯಾಗುತ್ತಿದೆ. ಇದನ್ನು ಖಂಡಿಸಿ ಇದೇ 21ರಂದು ಬೆಳಿಗ್ಗೆ 11.30ಕ್ಕೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಎಂ.ಸಿ. ನಾರಾಯಣ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ದಲಿತರ ಅಭಿವೃದ್ಧಿಗೆ ಸ್ಥಾಪಿತವಾದ ನಿಗಮ ಮಂಡಳಿಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ದೌರ್ಜನ್ಯ ಪ್ರಕರಣಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

LOST AND FOUND

ವನಜಾಕ್ಷಿ ಜಿ ಅವರು, ಬೆಂಗಳೂರು ಪೂರ್ವ ತಾಲೂಕಿನ ಕೊಡತಿ ಗ್ರಾಮ, ವರ್ತೂರು-2 ಹೋಬಳಿಯಲ್ಲಿ ನೆಲೆಸಿರುವ 6 ಎಕರೆ 29 ಗುಂಟಾಗಳು ಮತ್ತು 01 ಎಕರೆ ಕರಬ್ ಅಳತೆಯ ಸರ್ವೆ ನಂ.81 ರ ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಚೆಕ್ಕುಬಂದಿ ಪೂರ್ವದಿಂದ ಸೈ.ನಂ.170, ಪಶ್ಚಿಮದಿಂದ ಸೈ.ನಂ.59 ಮತ್ತು ಸೈ.ನಂ.169, ಉತ್ತರದಿಂದ ಸೈ.ನಂ.80 ಮತ್ತು ಸೈ.ನಂ.82, ದಕ್ಷಿಣದಿಂದ ರಸ್ತೆ ಮತ್ತು ಸೈ.ನಂ.58. ನಾನು 1.Doc.no.3379/1947-48, ದಿನಾಂಕ 15-01-1948, 2.Doc.no.2050/1970-71, ದಿನಾಂಕ 20-07-1970, 3.Doc.no.1734/1971-72, ದಿನಾಂಕ 28-06-1971, 4.Doc.No. 4982/1974-75, ದಿನಾಂಕ 09-09-1974, 5.Doc.No..7236/1974-75, ದಿನಾಂಕ 12-12-1974, 6.Doc.No.7310/1974-75, ದಿನಾಂಕ 16-12-1974 ಮೂಲಕ ನೋಂದಾಯಿತ ಕ್ರಯ ಪತ್ರ (Sale Deeds) ಕಳೆದುಕೊಂಡಿದ್ದೇನೆ/ ತಪ್ಪಿಹೋಗಿರುತ್ತದೆ. ಈ ಮೂಲಕ ಸಾರ್ವಜನಿಕರಿಗೆ ಮೇಲ್ಕಂಡ ದಾಖಲೆಯ ಆಧಾರದ ಮೇಲೆ ಯಾವುದೇ ವಹಿವಾಟು ನಡೆಸದಂತೆ ಎಚ್ಚರಿಕೆ ವಹಿಸಲಾಗಿದೆ ಮತ್ತು ಯಾವುದೇ ಸಾರ್ವಜನಿಕರು ಕಂಡುಕೊಂಡರೆ, ಅದನ್ನು ಕೆಳಗೆ ಸಹಿ ಮಾಡಿದವರಿಗೆ ತಲುಪಿಸತಕ್ಕದ್ದು. ಇಂತಿ JDA ಮತ್ತು GPA ಹೋಲ್ಡರ್ M/s PSR Builders and Developers represented by ಪಿ. ಶ್ರೀಧರ್ ರೆಡ್ಡಿ, ಕಚೇರಿ "PSR ಮಾರ್ವೆಲ್", ನಂ.32/1, ಬಳ್ಳಾರಿ ಮುಖ್ಯ ರಸ್ತೆ, ಹೆಬ್ಬಾಳ, ಬೆಂಗಳೂರು -560 024".

ಇಂದು, ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ನಗರದ ಹಲವೆಡೆ ಎರಡು ದಿನಗಳ ಕಾಲ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಡಿ.16ರಂದು ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಬಾಪೂಜಿ ನಗರ, ಗಂಗೊಂಡನಹಳ್ಳಿ, ದೀಪಾಂಜಲಿನಗರ, ಅತ್ತಿಗುಪ್ಪೆ, ಪಂತರಪಾಳ್ಯ, ಕೆಂಚೇನಹಳ್ಳಿ, ರಾಜರಾಜೇಶ್ವರಿನಗರ, ಕೆಂಗೇರಿ, ಕೆಂಗೇರಿ ಉಪ ನಗರ, ಜ್ಞಾನಭಾರತಿ ಲೇಔಟ್, ಬಂಡೇಮಠ, ಮೈಲಸಂದ್ರ, ವಿಶ್ವೇಶ್ವರಯ್ಯ ಲೇಔಟ್, ಆರ್.ಆರ್. ಲೇಔಟ್, ಕೆಂಗುಂಟೆ, ಕೊಡಿಗೇಹಳ್ಳಿ, ಮರಿಯಪ್ಪನಪಾಳ್ಯ, ಮುದ್ದಿನಪಾಳ್ಯ, ಸುಭಾಷ್ ನಗರ, ಗಿರಿನಗರ, ಬ್ಯಾಂಕ್ ಕಾಲೊನಿ, ಶ್ರೀನಗರ, ಹನುಮಂತನಗರ, ವಿದ್ಯಾಪೀಠ, ತ್ಯಾಗರಾಜನಗರ, ಹೊಸಕೆರೆಹಳ್ಳಿ, ನಾಗೇಂದ್ರ ಬ್ಲಾಕ್, ಆವಲಹಳ್ಳಿ, ಹಾಗೂ ಮೈಸೂರು ರಸ್ತೆ ಸುತ್ತಮುತ್ತಲಿನ ಪ್ರದೇಶ, ಉಲ್ಲಾಳ ಮುಖ್ಯರಸ್ತೆ, ಜ್ಞಾನ ಜ್ಯೋತಿನಗರ, ಮುನೇಶ್ವರನಗರ, ಎಪಿಎಂಸಿ ಲೇಔಟ್, ಮಲ್ಲತ್ತಹಳ್ಳಿ ‘ಡಿ’ ಗ್ರೂಪ್ ಲೇಔಟ್, ದೊಡ್ಡಬಸ್ತಿ, ಚಿಕ್ಕಬಸ್ತಿ, ರಾಮಸಂದ್ರ, ಸೊನ್ನೇನಹಳ್ಳಿ, ಅಂಜನಾನಗರ, ಕನ್ನಲ್ಲಿ, ದೊಡ್ಡಗೊಲ್ಲರಹಟ್ಟಿ, ಸರ್ ಎಂವಿ ಲೇಔಟ್ 1ರಿಂದ 9ನೇ ಬ್ಲಾಕ್, ಹೇರೋಹಳ್ಳಿ, ಬಿಇಎಲ್ ಲೇಔಟ್ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಅಬ್ಬಿಗೆರೆ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಡಿ.17ರಂದು ಕಮ್ಮಗೊಂಡನಹಳ್ಳಿ, ಧನಪಾಲ್ ಲೇಔಟ್, ಶೆಟ್ಟಿಹಳ್ಳಿ, ಲಕ್ಷ್ಮೀಪುರ, ಶ್ರೀರಾಮ ಸಮೀಕ್ಷಾ ಅಪಾರ್ಟ್‌ಮೆಂಟ್, ಏರ್‌ಫೋರ್ಸ್, ಸಿಂಗಾಪುರ, ಭದ್ರಸ್ವಾಮಿ ಲೇಔಟ್, ನಿಸರ್ಗ ಲೇಔಟ್, ಲಕ್ಷ್ಮೀ ದೇವಸ್ಥಾನ ರಸ್ತೆ, ಕೆಂಪೇಗೌಡ ಗಾರ್ಡನ್, ಕೆ.ಜಿ. ಹಳ್ಳಿ, ಕಲಾನಗರ, ಕುವೆಂಪುನಗರ, ಎಚ್.ವಿ.ವಿ. ಲೇಔಟ್, ವಿಶ್ವೇಶ್ವರಯ್ಯ ಲೇಔಟ್, ಕಾನ್ಶಿರಾಮನಗರ, ನೇತಾಜಿ ಲೇಔಟ್, ಸೆವೆನ್ ಹಿಲ್ಸ್ ಕೌಂಟಿ, ಲಕ್ಷ್ಮೀಪುರ ಮುಖ್ಯ ರಸ್ತೆ, ಬ್ರಿಗೇಡ್ ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಚಾರ: ಐಐಎಸ್ಸಿ–ಪೊಲೀಸರ ನಡುವೆ ಒಪ್ಪಂದ

ಬೆಂಗಳೂರು: ನಗರದಲ್ಲಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಜೊತೆಗೆ ಸಂಚಾರ ಪೊಲೀಸರು ಒಪ್ಪಂದ ಮಾಡಿಕೊಂಡಿದ್ದಾರೆ.

ದಟ್ಟಣೆ ನಿಯಂತ್ರಣ, ರಸ್ತೆ ಸುರಕ್ಷತೆ ತರಬೇತಿ ಹಾಗೂ ಸಂಚಾರ ವ್ಯವಸ್ಥೆಯ ಬಲವರ್ಧನೆಗೆ ಸಂಬಂಧಪಟ್ಟ ಒಪ್ಪಂದ ಇದಾಗಿದೆ. ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್ ಐಐಎಸ್ಸಿ ಪ್ರತಿನಿಧಿಗಳ ಜೊತೆ ಸಭೆ ನಡೆಸಿ, ಒಪ್ಪಂದಕ್ಕೆ ಸಹಿ ಹಾಕಿದರು.

ಎಂ.ಎನ್. ಅನುಚೇತ್ ಅವರು, ‘ದಟ್ಟಣೆಗೆ ಪರಿಹಾರ ಒದಗಿಸುವ ಜೊತೆಗೆ ಸಿಬ್ಬಂದಿಗೆ ತರಬೇತಿ ಮತ್ತು ಸುರಕ್ಷತಾ ಕ್ರಮ ಬಗ್ಗೆಯೂ ಜ್ಞಾನ ಒದಗಿಸಲಿದೆ’ ಎಂದರು.

ಡಿಸಿಪಿ ಕುಲದೀಪ್ ಕುಮಾರ್ ಜೈನ್, ಐಐಎಸ್ಸಿಯ ಪ್ರೊ. ಅಬ್ದುಲ್ ರವೂಫ್ ಪಿಂಜಾರಿ, ಪ್ರೊ. ವಿಜಯ್ ಕೋವಳ್ಳಿ, ಡಾ ರಘುಕೃಷ್ಣಪುರಂ ಭಾಗವಹಿಸಿದ್ದರು.

ಗುಂಪು ವಿಮೆ ಮೊತ್ತ ಏರಿಕೆ ಸೇರಿ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ, ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘದ ಸದಸ್ಯರು, ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟಿಸಿದರು – ಪ್ರಜಾವಾಣಿ ಚಿತ್ರ

‘ಪ್ರೇ ಫಾರ್ ಇಂಡಿಯಾ ಸಮಾವೇಶ’ ರದ್ದು?

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ಇದೇ 16 ಮತ್ತು 17ರಂದು ಆಯೋಜಿಸಲಾಗಿದ್ದ ದಕ್ಷಿಣ ಆಫ್ರಿಕಾದ ಪಾದ್ರಿ ಆಲ್ಫ್ ಲುಕಾವ್ ಅವರ ‘ಪ್ರೇ ಫಾರ್ ಇಂಡಿಯಾ ಸಮಾವೇಶ–2023’ ರದ್ದಾಗಿರುವುದಾಗಿ ತಿಳಿದುಬಂದಿದೆ.

ಈ ಸಮಾವೇಶದ ಮುಖ್ಯ ಅತಿಥಿಯಾಗಿ ಭಾಗವಹಿಸಬೇಕಿದ್ದ ಪಾದ್ರಿ ಆಲ್ಫ್ ಲುಕಾವ್ ಅವರು ಭಾರತ ಪ್ರವೇಶಿಸಲು ಸಲ್ಲಿಸಿದ್ದ ವೀಸಾ ಅರ್ಜಿ ತಿರಸ್ಕರಿಸಿದ್ದರಿಂದ ಕಾರ್ಯಕ್ರಮ ರದ್ದಾಗಿರುವುದಾಗಿ ತಿಳಿದುಬಂದಿದೆ.

‘ಇದೊಂದು ಧಾರ್ಮಿಕ ಕಾರ್ಯಕ್ರಮ. ಧರ್ಮದ ಹೆಸರಿನಲ್ಲಿ ಜನರನ್ನು ಪ್ರಚೋದಿಸುವ ಉದ್ದೇಶ ಆಲ್ಫ್ ಲುಕಾವ್ ಅವರದ್ದಾಗಿದೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇದು ವೀಸಾ ನಿಯಮ ಉಲ್ಲಂಘನೆ ಆಗಿದೆ. ಹೀಗಾಗಿ, ವೀಸಾ ಅರ್ಜಿಯನ್ನು ತಿರಸ್ಕರಿಸ ಬೇಕು’ ಎಂದು ಕೋರಿ ನಗರದ ಗಿರೀಶ್ ಭಾರದ್ವಾಜ ಅವರು ಕೇಂದ್ರದ ವಲಸೆ ಅಧಿಕಾರಿಗಳಿಗೆ ಪತ್ರ ಬರೆದಿದ್ದರು. ಅದರ ಪರಿಶೀಲನೆ ನಡೆಸಿದ ಅಧಿಕಾರಿಗಳು, ಕಾರ್ಯಕ್ರಮದ ಬಗ್ಗೆ ಮಾಹಿತಿ ಸಂಗ್ರಹಿಸಿ ಆಲ್ಫ್ ಲುಕಾವ್ ಅವರ ವೀಸಾ ರದ್ದುಪಡಿಸಿರುವುದಾಗಿ ಗೊತ್ತಾಗಿದೆ.

ಜಾಲತಾಣದಲ್ಲಿ ಪ್ರಕಟ: ಕಾರ್ಯಕ್ರಮ ಸಂಘಟನೆ ಹಾಗೂ ನಿರ್ವಹಣೆ ಉದ್ದೇಶದಿಂದ ಜಾಲತಾಣ ಸೃಷ್ಟಿಸಲಾಗಿತ್ತು. ಇದೇ ಜಾಲತಾಣದಲ್ಲಿ ತುರ್ತು ಸಂದೇಶವೊಂದನ್ನು ಶುಕ್ರವಾರ ಪ್ರಕಟಿಸಲಾಗಿದೆ. ‘ಪ್ರೇ ಫಾರ್ ಇಂಡಿಯಾ ಸಮಾವೇಶ 2023 ರದ್ದುಪಡಿಸಲಾಗಿದೆ. ನಾವು ನಿರೀಕ್ಷಿಸದ ಈ ನಿರ್ಧಾರಕ್ಕೆ ವಿಷಾದಿಸುತ್ತೇವೆ’ ಎಂದು ಸಂದೇಶದಲ್ಲಿ ಬರೆಯಲಾಗಿದೆ.

ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರ
7ನೇ–8ನೇ ಮಹಡಿ, ಹಿಂದೂಸ್ತಾನ್ ಟೈಮ್ಸ್ ಹೌಸ್,
18–20 ಕೆ.ಜಿ.ಮಾರ್ಗ, ನವದಹೆಲಿ – 110001
सत्यमेव जयते

ರಾಹವಪ್ರಾ, ಇವರು ತಮ್ಮ ದಿನಾಂಕ 23.11.2023ರ ಖಾಲಿ ಹುದ್ದೆಗಳ ಸುತ್ತೋಲೆ ಮುಖೇನ, ರಾಹವಪ್ರಾ’ದಲ್ಲಿನ ಕೆಳಕಂಡ ಹುದ್ದೆಗಳಿಗಾಗಿ ಅಖಿಲ ಭಾರತ ಅಧಿಕಾರಿಗಳಿಂದ ಅಥವಾ ಕೇಂದ್ರ ನಾಗರಿಕ ಸೇವೆಗಳ ಅಧಿಕಾರಿಗಳಿಂದ/ರಾಜ್ಯ ಸರ್ಕಾರಿ ಮತ್ತು ಕೇಂದ್ರಾಡಳಿತ ಸರ್ಕಾರಿ ಅಧಿಕಾರಿಗಳಿಂದ/ಆರ್‌ಬಿಐ ಅಧಿಕಾರಿಗಳಿಂದ/ಸಾರ್ವಜನಿಕ ಕ್ಷೇತ್ರ ಬ್ಯಾಂಕ್‌ಗಳ/ಸರ್ಕಾರಿ ಹಣಕಾಸು ಸಂಸ್ಥೆಗಳ/ನಿಯಂತ್ರಕ ಅಂಗಗಳ/ಸಾರ್ವಜನಿಕ ಕ್ಷೇತ್ರ ಅಧೀನ ಸಂಸ್ಥೆಗಳ/ಸ್ವಾಯುತ್ತ ಮತ್ತು ಶಾಸನಬದ್ಧ ಅಂಗಗಳ/ಇತರೆ ಸರ್ಕಾರಿ ಸಂಸ್ಥೆಗಳ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

i. ಚೀಫ್ ಜನರಲ್ ಮ್ಯಾನೇಜರ್ – (02 ಹುದ್ದೆಗಳು)
ii. ಜನರಲ್ ಮ್ಯಾನೇಜರ್ – (03 ಹುದ್ದೆಗಳು)
iii. ಡೆಪ್ಯೂಟಿ ಜನರಲ್ ಮ್ಯಾನೇಜರ್ – (02 ಹುದ್ದೆಗಳು)
iv. ಅಸಿಸ್ಟಂಟ್ ಜನರಲ್ ಮ್ಯಾನೇಜರ್ – (01 ಹುದ್ದೆ)
v. ಮ್ಯಾನೇಜರ್ – (02 ಹುದ್ದೆಗಳು)
vi. ಅಸಿಸ್ಟಂಟ್ ಮ್ಯಾನೇಜರ್ – (01ಹುದ್ದೆ)

ಪ್ರಾಧಿಕಾರದ www.nfra.gov.in ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ವಿವರಗಳ ಪ್ರಕಾರ ಅನ್ವಯಿಕ ಡೆಪ್ಯುಟೇಶನ್/ಅಲ್ಪಾವಧಿ ಗುತ್ತಿಗೆ ಆಧಾರದಲ್ಲಿ ಅರ್ಜಿ ಆಹ್ವಾನಿಸಲಾಗಿರುತ್ತದೆ. ಆಸಕ್ತಿಯುಳ್ಳ ಮತ್ತು ಅರ್ಹ ಅಧಿಕಾರಿಗಳು, ಈ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ 60 ದಿನಗಳೊಳಗೆ, ಸೂಕ್ತ ವಿಧಾನದಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದು.

CBC 07122/12/0001/2324

Annexure-A

DIRECTORATE OF SKILL DEVELOPMENT, MADHYA PRADESH
NARMADA ROAD, NEAR RAMPUR PETROL PUMP, JABALPUR-482001. Phone No.-0761-2660524
e-mail: spiu.dsdmp@gmail.com web site: mpskills.gov.in
No. DSD/Machines/2023-24/5210 Jabalpur, Date : 12-12-2023

INVITATION FOR BIDS

The Director, Skill Development, Narmada Road, Near Rampur petrol pump, Jabalpur M.P. invites Online bids (Two bid system) from Manufacturers or Authorized dealers for supply of Machines for Industrial Training Institutes of Madhya Pradesh as below:

Sl. No.	Description	Earnest Money Deposit	Bid Document Price
01.	Machines	INR 2,00,000/- (Rs. Two Lacs only)	INR 1000+ Processing Fees

2. Kindly go through https://www.mptenders.gov.in for online e-tenders as per key dates as follows-

Sl. No.	Particulars	Date & Time
1.	Bid Published Date	14/12/2023, 16:00 Hrs
2.	Bid Document Download/Sale Start Date	14/12/2023, 16:00 Hrst
3.	Pre bid Meeting at Directorate of Skill Development Jabalpur	19/12/2023, 13:00 Hrs
4.	Bid Submission Start Date	27/12/2023, 16:00 Hrs
5.	Bid Submission End Date	04/01/2024, 16:00 Hrs
6.	Bid Opening Of The Technical Bids	05/01/2024, 17:00 Hrs

Tender document and other details are available at the websites https://www.mptenders.gov.in and www.mpskills.gov.in
3. Cost of Tender {((Rs. 1000/+Processing fee) Non refundable)} is to be paid online only on http:\\www.mptenders.gov.in
4. The Manufacturers or their Authorized Dealers shall submit their Earnest Moncy Deposit is On-line to https://www.mptenders.gov
5. All Corrigendum/Amendments/Changes if any will only be issued and made available only on https://www.mptenders.gov.in

G-21649/23 Sd/- Director, Skill Development, Madhya Pradesh, Jabalpur.

ಆನೇಕಲ್ ಯೋಜನಾ ಪ್ರಾಧಿಕಾರ
“ಅಣ್ಣ” ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/27/2023–24 ದಿನಾಂಕ: 08.12.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿವಸಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ। ಬಿಎಸ್‌ಆರ್ ಪ್ರಾಜೆಕ್ಟ್ಸ್ ಪರವಾಗಿ ವ್ಯವಸ್ಥಾಪಕ ಪಾಲುದಾರರಾದ ಶ್ರೀ ಬಿ. ಚಿರಂಜೀವಿ ಮತ್ತು ಶ್ರೀ ಡಿ. ಕಿಶೋರ್ ರೆಡ್ಡಿ. ಶ್ರೀ ಡಿ. ಕಿಶೋರ್ ರೆಡ್ಡಿ ರವರ ಪರವಾಗಿ SPA Holder Sri A. Syam Prasad.	ಆನೇಕಲ್	ಸರ್ಜಾಪುರ	ವಳಗೆರೆಕಲ್ಲಹಳ್ಳಿ	128/5	0–21	ಕೈಗಾರಿಕಾ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ದೊರಕುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನುಬದ್ಧ ನಿವೇಶನಗಳು ಒದಗಿಸುತ್ತೇವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/2579/2023–24

3M ಇಂಡಿಯಾ ಲಿಮಿಟೆಡ್
CIN: L31300KA1987PLC013543
ನೋಂದಾಯಿತ ಕಚೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100 ದೂರವಾಣಿ: 080–22231414,
ಇ–ಮೇಲ್: investorhelpdesk.in@mmm.com, ವೆಬ್‌ಸೈಟ್: www.3m.com/in

ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಬಗ್ಗೆ ಮಾಹಿತಿ

ಕಂಪನಿಗಳ ಕಾಯಿದೆ, 2013ರ (“ಕಾಯಿದೆ”) ಕಲಮು 110, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 (‘ನಿಯಮಾವಳಿ’) ನಿಯಮಗಳು 20 ಮತ್ತು 22, ಮತ್ತು ಸದರಿ ಕಾಯಿದೆ ಮತ್ತು ನಿಯಮಾವಳಿಯಲ್ಲಿರುವ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳು, ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಸಂ. 14/2020 ದಿನಾಂಕ ಏಪ್ರಿಲ್ 08, 2020, ಸಂ. 17/2020 ದಿನಾಂಕ ಏಪ್ರಿಲ್ 13, 2020, ಸಂ. 20/2020 ದಿನಾಂಕ ಮೇ 05, 2020, ಸಂ. 22/2020 ದಿನಾಂಕ ಜೂನ್ 15, 2020, ಸಂ. 33/2020 ದಿನಾಂಕ ಸೆಪ್ಟೆಂಬರ್ 28, 2020, ಸಂ. 39/2020 ದಿನಾಂಕ ಡಿಸೆಂಬರ್ 31, 2020, ಸಂ. 10/2021 ದಿನಾಂಕ ಜೂನ್ 23, 2021, ಸಂ. 20/2021 ದಿನಾಂಕ ಡಿಸೆಂಬರ್ 08, 2021 ಮತ್ತು ಸಂ. 3/2022 ದಿನಾಂಕ ಮೇ 5, 2022 ಈ ಸಾಮಾನ್ಯ ಸುತ್ತೋಲೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಇತರ ಸಂಬಂಧಿತ ಸುತ್ತೋಲೆಗಳ ದಿನಾಂಕ 25, ಸೆಪ್ಟೆಂಬರ್, 2023 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023 ಒಳಗೊಂಡಂತೆ (“ಎಮ್‌ಸಿಎ ಸುತ್ತೋಲೆಗಳು”) ಜೊತೆ ಓದಿಕೊಂಡಂತೆ, ಭಾರತೀಯ ಸೆಕ್ಯೂರಿಟಿಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 (‘ಲಿಸ್ಟಿಂಗ್ ನಿಬಂಧನೆಗಳು’) ನಿಬಂಧನೆ 44, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯು ಸಾಮಾನ್ಯ ಸಭೆಗಳ ಕುರಿತಂತೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ (ಎಸ್‌ಎಸ್–2) ಮತ್ತು ಅನ್ವಯವಾಗುವಂತಹ ಇತರೆ ಕಾನೂನುಗಳು, ನಿಯಮಾವಳಿ ಮತ್ತು ನಿಬಂಧನೆಗಳು (ಸದ್ಯದಲ್ಲಿ ಚಾಲ್ತಿಯಲ್ಲಿರುವ ಮತ್ತು ಕಾಲ–ಕಾಲಕ್ಕೆ ಮಾರ್ಪಾಡಾಗಿರುವಂತಹ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಇತರ ಮರು–ಅಧಿನಿಯಮನಗಳೂ ಸೇರುತ್ತವೆ) ಜೊತೆಗೆ ಓದಿಕೊಂಡ ಪ್ರಕಾರ, 3ಎಮ್ ಇಂಡಿಯಾ ಲಿಮಿಟೆಡ್ (ಕಂಪನಿ) ಡಿಸೆಂಬರ್ 11, 2023 ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ನಿರ್ಣಯಗಳ, ಜೊತೆಗೆ ಇಲ್ಲಿ ಕೆಳಗೆ ಹೇಳಿರುವಂತಹ ವಿಷಯಗಳಿಗೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಯ ಮೇಲೆ, ಅಂಚೆ ಮತದಾನದ (ಇ–ವೋಟಿಂಗ್) ಮೂಲಕ, ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂಬುದಾಗಿ ಈ ಮೂಲಕ ಸೂಚನೆಯನ್ನು ಕೊಡಲಾಗುತ್ತಿದೆ:

1. ಶ್ರೀ ರಮೇಶ್ ರಾಮಾದೊರೈ (ಡಿಐಎನ್ ನಂ.07109252) ಇವರನ್ನು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರನ್ನಾಗಿ ಫೆಬ್ರವರಿ 13, 2024ರಿಂದ ಫೆಬ್ರವರಿ 12, 2027ರ ವರೆಗೆ ಮರುನೇಮಕ ಮಾಡಲಾಗಿದೆ.

ಎಲ್ಲ ಸದಸ್ಯರಿಗೂ ಈ ಮೂಲಕ ತಿಳಿಸುವುದೇನೆಂದರೆ:

1. ಯಾವೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟರು ಅಥವಾ ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್) ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಷೇರುಗಳ ಪಾವತಿಸಿದ ಮೌಲ್ಯವನ್ನು ಮತ್ತು ಸದಸ್ಯರ ಮತದಾನದ ಹಕ್ಕುಗಳನ್ನು ನಿರ್ಧರಿಸಲು ಅಂತಿಮ ದಿನವೂ ಆದ **ಸೋಮವಾರ, ಡಿಸೆಂಬರ್ 11, 2023** ರಂದು ಯಾವ ಸದಸ್ಯರ ಹೆಸರುಗಳು ಸದಸ್ಯರ/ಫಲಾನುಭವಿ ಯಜಮಾನರ ರಿಜಿಸ್ಟರಿನಲ್ಲಿ ಅಥವಾ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ದಾಖಲೆಗಳಲ್ಲಿ ಇರುವುದೋ ಅಂತಹವರಿಗೆ ಕಂಪನಿಯು ಅಂಚೆ ಮತದಾನ ಸೂಚನೆಯನ್ನು ಜೊತೆಗೆ ಇ–ವೋಟಿಂಗ್ ಕುರಿತಂತೆ ಸೂಚನೆಗಳನ್ನು ಡಿಸೆಂಬರ್ 15, 2023 ರಂದು ಇ–ಮೇಲ್ ಮೂಲಕ ಮಾತ್ರವೇ ಕಳುಹಿಸಿದೆ. ಮೇಲೆ ಉಲ್ಲೇಖಿಸಿರುವ ಎಮ್.ಸಿ.ಎ. ಸುತ್ತೋಲೆಗಳ ಪ್ರಕಾರ ಅಂಚೆ ಮತದಾನದ ಸೂಚನೆಯ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯತೆ ಇರುವುದಿಲ್ಲ.
2. ಮೇಲೆ ಹೇಳಿರುವಂತಹ ದಾಖಲೆಗಳು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/, ಕೆಫಿನ್ ವೆಬ್‌ಸೈಟ್ https://evoting.kfintech.com/ ಮತ್ತು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಗಳಲ್ಲಿಯೂ ಲಭ್ಯವಿವೆ. ಯಾರು ಅಂತಿಮ ದಿನಾಂಕದಂದು ಸದಸ್ಯರಾಗಿಲ್ಲವೋ ಅಂತಹವರು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರವೇ ಎಂದು ತಿಳಿಯಬೇಕು. ಮತ್ತೂ, ಎಮ್‌ಸಿಎ ಸುತ್ತೋಲೆಗಳ ಪ್ರಕಾರ ಈ ಅಂಚೆ ಮತದಾನಕ್ಕೆ, ಸದಸ್ಯರಿಗೆ ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಗಳ ಭೌತಿಕ ಪ್ರತಿ ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆ ಗಳನ್ನು ಕಳುಹಿಸಿಲ್ಲ.
3. ಯಾವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿಲ್ಲವೋ ಮತ್ತು ಆ ಕಾರಣವಾಗಿ ಅಂಚೆ ಮತದಾನದ ಸೂಚನೆ ಮತ್ತು ಇ–ಮತದಾನದ ಸೂಚನೆಗಳನ್ನು ಅವರಿಗೆ ಕಳುಹಿಸಲಾಗಿಲ್ಲವೋ ಅಂತಹವರು ಅದಕ್ಕಾಗಿ ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇದಕ್ಕಾಗಿ ಅವರು https://ris.kfintech.com/clientservices/postalballot/ ಮೇಲೆ ಕ್ಲಿಕ್ಕಿಸಿದರೆ ಸಾಕು. ಸದಸ್ಯರು ದಯವಿಟ್ಟು ಅದರಲ್ಲಿರುವ ಮಾರ್ಗದರ್ಶನಗಳನ್ನು ಅನುಸರಿಸುತ್ತ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ದಾಖಲಿಸಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ಇ–ಮತದಾನದ ಬಗೆಗಿನ ಸೂಚನೆಗಳು ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಏನಾದರೂ ಪ್ರಶ್ನೆಗಳಿದ್ದರೆ ಈ ವಿಳಾಸಕ್ಕೆ ಬರೆಯಬಹುದು: einward.ris@kfintach.com.
4. ಕಂಪನಿಗಳ ಅಧಿನಿಯಮ, 2013ರ ಕಲಮು 108 ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ನಿಬಂಧನೆ 44 ಅನ್ವಯ ತನ್ನ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಹರ್ಷಿಸುತ್ತಿದೆ. ಇ–ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಕಂಪನಿಯನ್ನು ನೇಮಕಮಾಡಿಕೊಂಡಿದೆ ಮತ್ತು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಲುವಾಗಿ ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿಕೊಂಡಿದೆ.
5. ಸದಸ್ಯರು ಇ–ವೋಟಿಂಗ್ ಸೌಲಭ್ಯದ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸುವ ಆಯ್ಕೆಯನ್ನು ಮಾಡಿಕೊಳ್ಳಬಹುದು. ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಅಂಚೆ ಮತದಾನದ ಸೂಚನೆಯಲ್ಲಿ ನೀಡಲಾಗಿದೆ. ಮತದಾನವು ಇ–ಮತದಾನದ ಮೂಲಕ **ಸೋಮವಾರ, ಡಿಸೆಂಬರ್ 18, 2023 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಮಂಗಳವಾರ 16, 2024ರಂದು ಸಂಜೆ 05.00ಕ್ಕೆ (ಭಾ.ಕಾ.)** ಮುಕ್ತಾಯಗೊಳ್ಳುತ್ತದೆ. ಸದಸ್ಯರು ಈ ಅವಧಿಯಲ್ಲೇ ತಮ್ಮ ಮತಗಳನ್ನು ಚಲಾಯಿಸಬೇಕೆಂದು ಕೋರುತ್ತೇವೆ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಕೆಫಿನ್, ಇ–ಮತದಾನ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ. ಬಳಿಕ ಸದಸ್ಯರು ಮತ ಚಲಾಯಿಸಲು ಸಾಧ್ಯವಿಲ್ಲ. ಸದಸ್ಯರು ಒಮ್ಮೆ ಮತವನ್ನು ದೃಢಪಡಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
6. ಅಂಚೆ ಮತದಾನದ ಫಲಿತಾಂಶಗಳನ್ನು ಗುರುವಾರ, ಜನವರಿ 18, 2024 ರಂದು ಅಥವಾ ಅದಕ್ಕೆ ಮೊದಲೇ ಪ್ರಕಟಿಸಲಾಗುವುದು. ಅಗತ್ಯವಿರುವ ಬಹುಮತದೊಂದಿಗೆ ನಿರ್ಣಯವು ಅಂಗೀಕಾರವಾದರೆ ಅದು, ಕಂಪನಿಯು ಇ–ವೋಟಿಂಗ್‌ಗಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಎಂದರೆ **ಮಂಗಳವಾರ 16, 2024** ರಂದು ಅಂಗೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಗಳನ್ನು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com/ ಗಳಲ್ಲಿ ಹಾಕಲಾಗುವುದು. ಫಲಿತಾಂಶಗಳನ್ನು ಕಂಪನಿಯ ಇಕ್ವಿಟಿ ಷೇರುಗಳು ಲಿಸ್ಟ್ ಆಗಿರುವ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗಳಿಗೂ ತಿಳಿಸಲಾಗುವುದು.
7. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಸಂಪರ್ಕ ವಿವರಗಳನ್ನು ದಾಖಲಿಸಿರದ/ನವೀಕರಿಸಿರದಂತಹ ಷೇರುದಾರರು https://ris.kfintech.com/clientservices/mobilereg/mobileemailreg.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಥವಾ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಿಗೆ ಮನವಿಯನ್ನು ಸಲ್ಲಿಸುವ ಮೂಲಕ ಅವುಗಳನ್ನು ದಾಖಲಿಸಬಹುದು/ನವೀಕರಿಸಬಹುದು. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ ‘ಷೇರುದಾರರ ಸಾಮಾನ್ಯ ಪ್ರಶ್ನೆಗಳು’ (FAQs) ಮತ್ತು ‘ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿ’ ಗಳನ್ನು ನೋಡಬಹುದು ಅಥವಾ ಕೆಳಗೆ ಹೆಸರಿಸಿರುವ ಕಂಪನಿಯ ಅಧಿಕಾರಿಯನ್ನು /ಅದರ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರನ್ನು ಸಂಪರ್ಕಿಸಬಹುದು:

ವಿವರಗಳು	ಕೆಫಿನ್ ಟೆಕ್ನಾಲಾಜೀಸ್ ಲಿಮಿಟೆಡ್	3M ಇಂಡಿಯಾ ಲಿಮಿಟೆಡ್
ವಿಳಾಸ	ಸೆಲೆನಿಯಮ್ ಟವರ್, ಬಿ, ಪ್ಲಾಟ್ 31–32, ಗಾಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಬಾದ್ - 500 032	ವೀವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560001, ಭಾರತ.
ಹೆಸರು ಮತ್ತು ಹುದ್ದೆ	ಶ್ರೀ ರಾಜೀವ್ ಕುಮಾರ್ ಡೆಪ್ಯೂಟಿ ಮ್ಯಾನೇಜರ್–ಕಾರ್ಪೊರೇಟ್ ರಿಜಿಸ್ಟ್ರಿ	ಪ್ರತಾಪ್ ರುದ್ರ ಭುವನಗಿರಿ ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ದೂರವಾಣಿ	040-6716 1524	080-22231414
ಇ–ಮೇಲ್	rajeev.kr@kfintech.com	investorhelpdesk.in@mmm.com

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
3M ಇಂಡಿಯಾ ಲಿಮಿಟೆಡ್‌ನ ಪರವಾಗಿ
ಪ್ರತಾಪ್ ರುದ್ರ ಭುವನಗಿರಿ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಡಿಸೆಂಬರ್ 15, 2023

ಶನಿವಾರದ ಉಷ್ಣಾಂಶ 27° ಗರಿಷ್ಠ 18° ಕನಿಷ್ಠ

ಹವಾಮಾನ ಮುನ್ಸೂಚನೆ ನಗರದಲ್ಲಿ ಮೋಡ ಕವಿದ ವಾತಾವರಣ. ಬೆಂಗಳೂರು– ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ: ಭಾನುವಾರ 27° 19° | ಸೋಮವಾರ 28° 19° | ಮಂಗಳವಾರ 29° 18°

ಸೂರ್ಯೋದಯ: 6:34 ಸೂರ್ಯಾಸ್ತ : 5:57 ಚಂದ್ರೋದಯ: ಬೆ. 8:48 ಚಂದ್ರಾಸ್ತ: ರಾ. 8:25 ಶುಕ್ರವಾರದ ಹವಾಮಾನ: ಗರಿಷ್ಠ 26° ಕನಿಷ್ಠ 18°

ಪ್ರಜಾವಾಣಿ

15 ದಿನಗಳಲ್ಲಿ ₹ 3 ಕೋಟಿ ವಂಚನೆ

ಬೆಂಗಳೂರು: ಡ್ರಗ್ಸ್ ಸಾಗಣೆ ಪ್ರಕರಣ ದಾಖಲಿಸುವುದಾಗಿ ಬೆದರಿಸಿ ಜನರಿಂದ ಹಣ ದೋಚುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆ ವ್ಯಾಪ್ತಿಯಲ್ಲಿ 15 ದಿನದಲ್ಲಿ 7 ಜನರಿಂದ ₹ 3 ಕೋಟಿ ಪಡೆದು ವಂಚಿಸಲಾಗಿದೆ.

‘ಕೊರಿಯರ್ ಕಂಪನಿ ಪ್ರತಿನಿಧಿಗಳು ಹಾಗೂ ಮುಂಬೈ ಪೊಲೀಸರ ಹೆಸರಿನಲ್ಲಿ ಕರೆ ಮಾಡುತ್ತಿರುವ ವಂಚಕರು, ಜೈಲಿಗೆ ಕಳುಹಿಸುವುದಾಗಿ ಹೇಳಿ ಜನರನ್ನು ಬೆದರಿಸುತ್ತಿದ್ದಾರೆ. ಇದಕ್ಕೆ ಹೆದರಿ ಜನರು ಹಣ ನೀಡುತ್ತಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಹೊರ ರಾಜ್ಯದ ನಿವಾಸಿಗಳು ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಡ್ರಗ್ಸ್ ಸಾಗಣೆ ಹೆಸರಿನಲ್ಲಿ ವಂಚನೆ ಮಾಡುತ್ತಿರುವ ಆರೋಪಿಗಳ ಪತ್ತೆಗೆ ವಿಶೇಷ ತಂಡ ಕಾರ್ಯಾಚರಣೆ ಆರಂಭಿಸಿದೆ’ ಎಂದು ಮೂಲಗಳು ತಿಳಿಸಿವೆ.

ಕೆರೆ, ರಾಜಕಾಲುವೆ ಒತ್ತುವರಿ: ಕ್ರಿಯಾಯೋಜನೆಯಂತೆ ತೆರವು ನಡೆದಿಲ್ಲ: ತುಷಾರ್ ಗಿರಿನಾಥ್

‘ಒತ್ತುವರಿ ಸರ್ವೆ ಕಾರ್ಯ ವಿಳಂಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ವೆ ಕಾರ್ಯ ಕ್ಷಿಪ್ರವಾಗಿ ನಡೆಯದ್ದರಿಂದ ಕೆರೆ ಹಾಗೂ ರಾಜಕಾಲುವೆಗಳ ಒತ್ತುವರಿ ತೆರವು ಹೈಕೋರ್ಟ್‌ಗೆ ಸಲ್ಲಿಸಿರುವ ಕ್ರಿಯಾಯೋಜನೆಯ ವೇಳಾಪಟ್ಟಿಯಂತೆ ನಡೆಯುತ್ತಿಲ್ಲ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರಿಗೆ ಪತ್ರ ಬರೆದು ಹೆಚ್ಚು ಭೂಮಾಪಕರನ್ನು ಒದಗಿಸಲು ಮನವಿ ಮಾಡಿಕೊಳ್ಳಲಾಗಿದೆ’ ಎಂದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬೃಹತ್ ನೀರುಗಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆಯ ಪ್ರಗತಿ ಪರಿಶೀಲನಾ ಸಭೆಯ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ಒತ್ತುವರಿ ತೆರವಿಗೆ ತಹಶೀಲ್ದಾರ್‌ಗಳಿಂದ ಆದೇಶವಾಗುತ್ತಿಲ್ಲ. ಜಿಲ್ಲಾಧಿಕಾರಿ ಆದೇಶ ನೀಡಬೇಕು ಎಂದು ನ್ಯಾಯಾಲಯ ಹೇಳಿದೆ. ಹೀಗಾಗಿ, ತಹಶೀಲ್ದಾರ್ ಅವರಿಗೆ ಅಧಿಕಾರ ವರ್ಗಾಯಿಸಬೇಕು ಎಂದು ಜಿಲ್ಲಾಧಿಕಾರಿ ಅವರಿಗೆ ಮನವಿ ಮಾಡಿಕೊಳ್ಳಲಾಗಿದೆ. ಕಂದಾಯ ಇಲಾಖೆಯ ಸಮ್ಮತಿ ಪಡೆದು ಅವರು ಅಧಿಕಾರ ವರ್ಗಾಯಿಸಿದ ನಂತರ ತಹಶೀಲ್ದಾರ್‌ಗಳಿಂದ ತೆರವಿಗೆ ಆದೇಶವಾಗುತ್ತದೆ’ ಎಂದು ಮಾಹಿತಿ ನೀಡಿದರು.

‘ಮಹದೇವಪುರದಲ್ಲಿ 100ಕ್ಕೂ ಹೆಚ್ಚು ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿ ಪ್ರಕರಣಗಳಿವೆ. ಇದರಲ್ಲಿ ಶೇ 60ರಷ್ಟು ತೆರವು ಮಾಡಲಾಗಿದೆ’ ಎಂದರು.

‘ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡಿರುವ ಸ್ಥಳಗಳನ್ನು ಭೂಮಾಪಕರಿಂದ ಸರ್ವೆ ನಡೆಸಿ, ಗುರುತು ಮಾಡಿ ತಹಶೀಲ್ದಾರ್ ಅವರಿಂದ ಆದೇಶಗಳನ್ನು ಜಾರಿಮಾಡಿರುವಂತಹ ಒತ್ತುವರಿಗಳನ್ನು ಕೂಡಲೆ ತೆರವುಗೊಳಿಸಬೇಕು. ನಿಗದಿತ ಸಮಯದಲ್ಲಿ ಕೆರೆ ಹಾಗೂ ರಾಜಕಾಲುವೆ ಒತ್ತುವರಿಗಳನ್ನು ಗುರುತಿಸಲು ಕಂದಾಯ ಇಲಾಖೆಗೆ ಸೂಚನೆ ನೀಡಲಾಗಿದೆ. ಪಾಲಿಕೆ ಹಾಗೂ ಕಂದಾಯ ಇಲಾಖೆಯು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಲಿದೆ’ ಎಂದು ಸಭೆಯಲ್ಲಿ ತುಷಾರ್ ಗಿರಿನಾಥ್ ತಿಳಿಸಿದರು.

75 ಒತ್ತುವರಿ ತೆರವು: ಮಹದೇವಪುರ ವ್ಯಾಪ್ತಿಯ ಎಬಿಕೆ, ಗುಂಜೂರು, ಕರಿಯಮ್ಮನ ಅಗ್ರಹಾರ, ಬೆಳ್ಳತ್ತೂರಿನಲ್ಲಿ ಹಾಗೂ ಕೆ.ಆರ್ ಪುರದ ಸರ್ವೆ ಸಂಖ್ಯೆ 69ರಲ್ಲಿ 3 ಅಂತಸ್ತಿನ ಕಟ್ಟಡದಲ್ಲಿ 10 ಮಳಿಗೆಗಳು ಸೇರಿದಂತೆ 62 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಯಲಹಂಕ ವಲಯ ವ್ಯಾಪ್ತಿಯಲ್ಲಿ 8 ಒತ್ತುವರಿಗಳು ಹಾಗೂ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ 5 ಒತ್ತುವರಿಗಳು ಸೇರಿದಂತೆ ಒಟ್ಟು 75 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ಎಂದು ಮಾಹಿತಿ ನೀಡಿದರು.

ಒತ್ತುವರಿಗಳ ವಿವರ: ಹೊಸ ಒತ್ತುವರಿಗಳು ಸೇರಿದಂತೆ 3,176 ಒತ್ತುವರಿಗಳನ್ನು ಗುರುತಿಸಲಾಗಿದ್ದು, 2,322 ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ. ಇನ್ನು 854 ಒತ್ತುವರಿಗಳಲ್ಲಿ 155 ಒತ್ತುವರಿ ಪ್ರಕರಣಗಳು ನ್ಯಾಯಾಲಯದಲ್ಲಿರುತ್ತದೆ. 487 ಒತ್ತುವರಿಗಳಿಗೆ ಆದೇಶಗಳನ್ನು ಜಾರಿಗೊಳಿಸುವ ಹಂತದಲ್ಲಿದೆ. ಇನ್ನು 162 ಒತ್ತುವರಿ ತೆರವಿಗೆ ತಹಶೀಲ್ದಾರ್‌ರಿಂದ ಆದೇಶಗಳನ್ನು ಜಾರಿಗೊಳಿಸಲಾಗಿದ್ದು, ಒತ್ತುವರಿ ತೆರವು ಕಾರ್ಯಾಚರಣೆಯನ್ನು ನಡೆಸಬೇಕಿದೆ ಎಂದು ರಾಜಕಾಲುವೆ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು.

ಯೋಜನಾ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್, ಬಿಎಂಟಿಎಫ್ ಎಸ್ಪಿ ವಿ.ಜೆ ಶೋಭಾ ರಾಣಿ ಪಾಲ್ಗೊಂಡಿದ್ದರು.

‘ಕೆರೆ ಸರ್ವೆ ನಡೆಸಿ’

ಪಾಲಿಕೆ ವ್ಯಾಪ್ತಿಯಲ್ಲಿ 202 ಕೆರೆಗಳಿದ್ದು, 159 ಕೆರೆಗಳಲ್ಲಿ ಒತ್ತುವರಿಯಾಗಿದೆ ಎಂಬುದನ್ನು ಗುರುತಿಸಲಾಗಿದೆ. ಅದರಂತೆ 140 ಕೆರೆಗಳಲ್ಲಿ ಒತ್ತುವರಿಯಾಗಿರುವ ಬಗ್ಗೆ ತಹಶೀಲ್ದಾರರಿಗೆ ಪತ್ರಗಳನ್ನು ಬರೆಯಲಾಗಿದೆ. ಈ ಪೈಕಿ 40 ಕೆರೆಗಳ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, 100 ಕೆರೆಗಳಲ್ಲಿ ಸರ್ವೆ ಕಾರ್ಯ ನಡೆಸಬೇಕಿದೆ. ಇವುಗಳ ಸರ್ವೆ ತ್ವರಿತವಾಗಿ ಪೂರ್ಣಗೊಳಿಸಿ ಎಂದು ತುಷಾರ್ ಗಿರಿನಾಥ್ ಸೂಚಿಸಿದರು.

ಸುದ್ದಿ 2 ನಿಮಿಷ

ತಾಂತ್ರಿಕ ತೊಂದರೆ: ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಬೆಂಗಳೂರು: ಪೀಣ್ಯ ಇಂಡಸ್ಟ್ರಿಯಲ್ ಮೆಟ್ರೊ ನಿಲ್ದಾಣದಲ್ಲಿ ಶುಕ್ರವಾರ ತಾಂತ್ರಿಕ ಸಮಸ್ಯೆ ಉಂಟಾಗಿದ್ದರಿಂದ ಮೆಟ್ರೊ ಹಸಿರು ಮಾರ್ಗದಲ್ಲಿ ಯಶವಂತಪುರದಿಂದ ನಾಗಸಂದ್ರವರೆಗೆ ರೈಲು ಸಂಚಾರ ಅರ್ಧ ಗಂಟೆ ಸ್ಥಗಿತಗೊಂಡಿತು.

ಬೆಳಿಗ್ಗೆ 10.15ಕ್ಕೆ ಸಿಗ್ನಲಿಂಗ್ ನಲ್ಲಿ ತಾಂತ್ರಿಕ ಸಮಸ್ಯೆ ಎದುರಾಯಿತು. ಬಿಎಂಆರ್ ಸಿಎಲ್ ತಾಂತ್ರಿಕ ಸಿಬ್ಬಂದಿ ಬಂದು 10.45ಕ್ಕೆ ಸರಿಪಡಿಸಿದರು. 10.50ರಿಂದ ಮೆಟ್ರೊ ರೈಲು ಸಂಚಾರ ಪುನರಾರಂಭಗೊಂಡಿತು.

ಈ ಅರ್ಧ ಗಂಟೆ ಅವಧಿಯಲ್ಲಿ ಮೆಟ್ರೊ ರೈಲು 6 ಟ್ರಿಪ್‌ಗಳನ್ನು ಯಶವಂತಪುರದಿಂದ ನಾಗಸಂದ್ರ ಕಡೆಗೆ ಸ್ಥಗಿತಗೊಳಿಸಲಾಗಿತ್ತು. ರೇಷ್ಮೆ ಸಂಸ್ಥೆಯಿಂದ ಯಶವಂತಪುರವರೆಗೆ ಶಾರ್ಟ್‌ಲೂಪ್ ಸೇವೆ ನೀಡಲಾಗಿತ್ತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಆರ್‌ಎಸ್ ಕಾರ್ಯಕರ್ತ ಬಂಧನ, ಬಿಡುಗಡೆ

ಬೆಂಗಳೂರು: ಇಂಧನ ಸಚಿವ ಕೆ.ಜೆ. ಜಾರ್ಜ್ ಹೆಸರಿಗೆ ಧಕ್ಕೆ ತರುವ ಉದ್ದೇಶದಿಂದ ನಕಲಿ ಸಂಭಾಷಣೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದ ಆರೋಪದಡಿ ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಕಾರ್ಯಕರ್ತ ರವಿಕಾಂತಿ ಸಾಮ್ರಾಟ್ (33) ಅವರನ್ನು ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಪ್ರಕಟಿಸಲಾಗಿದ್ದ ಪೋಸ್ಟ್ ಬಗ್ಗೆ ಬೆಸ್ಕಾಂ ಪ್ರಧಾನ ವ್ಯವಸ್ಥಾಪಕರು ನ. 28ರಂದು ದೂರು ನೀಡಿದ್ದರು. ಆರೋಪಿ ರವಿಕಾಂತಿ ಸಾಮ್ರಾಟ್‌ನನ್ನು ತೆಲಂಗಾಣದ ಕರೀಂನಗರದಲ್ಲಿ ಗುರುವಾರ ಬಂಧಿಸಿ ನಗರಕ್ಕೆ ಕರೆತರಲಾಗಿತ್ತು. ಆರೋಪಿಗೆ ಶುಕ್ರವಾರ ಜಾಮೀನು ಸಿಕ್ಕಿದ್ದು, ಅವರು ಬಿಡುಗಡೆ ಆಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕರೀಂನಗರ ನಿವಾಸಿ ರವಿಕಾಂತಿ, ಬಿಆರ್‌ಎಸ್ ಪಕ್ಷದ ಕಾರ್ಯಕರ್ತ. ಪಕ್ಷದ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಈತನ ತಂದೆ ಹಾಗೂ ತಾಯಿ ಬಿಆರ್‌ಎಸ್ ಪಕ್ಷದ ಮಾಜಿ ಕಾರ್ಪೊರೇಟರ್‌ಗಳೆಂಬುದು ಗೊತ್ತಾಗಿದೆ. ರಾಜ್ಯದ ವಿದ್ಯುತ್ ಪರಿಸ್ಥಿತಿ ಮತ್ತು ಗೃಹ ಜ್ಯೋತಿ ಯೋಜನೆ ಕುರಿತು ಸಚಿವರ ನಕಲಿ ಸಂಭಾಷಣೆ ವಿಡಿಯೊ ಸಿದ್ಧಪಡಿಸಿದ್ದ ಆರೋಪಿ, ಸಚಿವರ ಹೆಸರಿಗೆ ಧಕ್ಕೆ ತರುವುದು ಈತನ ಉದ್ದೇಶವಾಗಿತ್ತು’ ಎಂದಿವೆ.

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಗಮನ ಬೇರೆಡೆ ಸೆಳೆದು ₹10 ಲಕ್ಷ ದೋಚಿದ ಕಳ್ಳರು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಚಂದಾಪುರ ವೃತ್ತದಲ್ಲಿ ಶುಕ್ರವಾರ ವ್ಯಕ್ತಿಯೊಬ್ಬರ ಗಮನ ಬೇರೆಡೆ ಸೆಳೆದ ವ್ಯಕ್ತಿಗಳಿಬ್ಬರು ₹10 ಲಕ್ಷ ಹಣದ ಚೀಲ ದೋಚಿ ಪರಾರಿಯಾಗಿದ್ದಾರೆ.

ಚಂದಾಪುರದ ಸಾಯಿ ಮೆಡಿಕಲ್ಸ್ ಮಾಲೀಕ ಮಾಧವ ರೆಡ್ಡಿ ಹಣ ಕಳೆದುಕೊಂಡವರು. ಗೃಹ ಪ್ರವೇಶಕ್ಕಾಗಿ ಸ್ನೇಹಿತರಿಂದ ಪಡೆದಿದ್ದ ಹಣ ಹಿಂದಿರುಗಿಸಲು ಬ್ಯಾಂಕ್‌ನಲ್ಲಿ ಚಿನ್ನ ಅಡವಿಟ್ಟು ಸಾಲ ತಂದಿದ್ದ ಹಣ ಇದಾಗಿತ್ತು.

ಬ್ಯಾಂಕ್‌ನಿಂದ ಹಣ ಪಡೆದು ಅಂಗಡಿಯ ಬಳಿಗೆ ಬಂದಿದ್ದರು. ಅವರನ್ನು ಬ್ಯಾಂಕ್‌ನಿಂದ ಹಿಂಬಾಲಿಸಿಕೊಂಡು ಅಂಗಡಿಯ ಬಳಿಗೆ ಬಂದ ವ್ಯಕ್ತಿಗಳಿಬ್ಬರು ಕಸ ಬಿದ್ದಿದೆ ಎಂದು ಗಮನ ಬೇರೆಡೆ ಸೆಳೆದಿದ್ದಾರೆ. ಮಾಧವ ರೆಡ್ಡಿ ಹಣದ ಬ್ಯಾಗ್ ಕೆಳಗಿಟ್ಟು ಪಕ್ಕಕ್ಕೆ ನೋಡುತ್ತಿದ್ದಂತೆ ಹಣದ ಚೀಲ ದೋಚಿ ಪರಾರಿಯಾಗಿದ್ದಾರೆ.

ಸೂರ್ಯಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳರಿಗಾಗಿ ಶೋಧ ಮುಂದುವರೆದಿದೆ ಎಂದು ಸರ್ಕಲ್ ಇನ್‌ಸ್ಪೆಕ್ಟರ್ ಸಂಜೀವ್ ಮಹಾಜನ್ ಅವರು ತಿಳಿಸಿದರು.

‘ರಾಜ್‌ಕುಮಾರ್ ನೀಡಿದ ಬಿರುದು ದೊಡ್ಡದು’

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ್ ಮಹಾದೇವ್ ಬಿದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾವು ನಾಟಕ, ಸಿನಿಮಾಗಳಲ್ಲಷ್ಟೇ ಹೀರೊಗಳು, ನಿಜವಾದ ಹೀರೊಗಳು ನೀವು’ ಎಂದು ಡಾ.ರಾಜ್‌ಕುಮಾರ್ ಮನದಾಳದಿಂದ ಹೇಳಿದ ಮಾತಿನ ಮುಂದೆ ಭಾರತ ರತ್ನ ಕೂಡ ಸಣ್ಣದು ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ್ ಮಹಾದೇವ್ ಬಿದರಿ ಹೇಳಿದರು.

ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ (ಅಪ್ಪು) ಸೇವಾ ಸಮಿತಿ ಶುಕ್ರವಾರ ಹಮ್ಮಿಕೊಂಡಿದ್ದ ಕರ್ನಾಟಕ ಸುವರ್ಣ ಸಂಭ್ರಮ, ಡಾ. ರಾಜ್‌ಕುಮಾರ್ ರತ್ನ ಪ್ರಶಸ್ತಿ, ಡಾ. ಅಪ್ಪು ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ರಾಜ್‌ಕುಮಾರ್ ನನಗೆ ಒಬ್ಬನಿಗೆ ಹೇಳಿದ ಮಾತಲ್ಲ ಅದು, ಸಮಸ್ತ ಪೊಲೀಸ್ ಇಲಾಖೆಗೆ ಹೇಳಿದ ಮಾತು’ ಎಂದು ಬಣ್ಣಿಸಿದರು.

ನಿವೃತ್ತ ಎಸಿಪಿ ಬಿ.ಕೆ. ಶಿವರಾಂ ಅಧ್ಯಕ್ಷತೆ ವಹಿಸಿ ಮಾತನಾಡಿ, ‘ಕನ್ನಡವು ಧಮನಿ ಧಮನಿಗಳಲ್ಲಿ ಇರುವುದು ಪೊಲೀಸ್ ಇಲಾಖೆಯಲ್ಲಿ ಮಾತ್ರ. ಉಳಿದ ಯಾವ ಇಲಾಖೆಯಲ್ಲೂ ನಮ್ಮ ಇಲಾಖೆ ಬಳಸಿದಷ್ಟು ಕನ್ನಡವನ್ನು ಬಳಸುವುದಿಲ್ಲ’ ಎಂದು ತಿಳಿಸಿದರು.

‘40 ವರ್ಷಗಳ ಹಿಂದೆ ಟ್ಯಾನರಿ ರಸ್ತೆಯಲ್ಲಿ ಪರರಾಜ್ಯಗಳ ಬಾವುಟಗಳು ಹಾರಾಡುತ್ತಿದ್ದವು. ಆದರೆ, ಕನ್ನಡದ ಬಾವುಟ ಇರಲಿಲ್ಲ. ಹಾರಿಸಲು ಬಿಡುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ ಕನ್ನಡಪರ ಸಂಘಟನೆಗಳಿಗೆ ನಾನೇ ಬೆಂಗಾವಲಾಗಿ ನಿಂತು 80 ಅಡಿ ಎತ್ತರದಲ್ಲಿ ಕನ್ನಡ ಬಾವುಟ ಹಾರಿಸುವಂತೆ ಮಾಡಿದ್ದೆ’ ಎಂದು ನೆನಪು ಮಾಡಿಕೊಂಡರು.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಬಿ. ಅಶೋಕ್ ಕುಮಾರ್ ಮಾತನಾಡಿ, ‘ರಾಜ್‌ಕುಮಾರ್ ಅವರ ಬಂಗಾರದ ಮನುಷ್ಯ ಚಿತ್ರದಿಂದ ಸ್ಫೂರ್ತಿ ಪಡೆದು ಬೆಂಗಳೂರಿನಿಂದ ಹೊರಗೆ ತೋಟ ಮಾಡಿದ್ದೆ. ಕೃಷಿ ಮಾಡಿಕೊಂಡು ಮಣ್ಣಿನ ಮಗನಾಗಿದ್ದೇನೆ’ ಎಂದು ಹೇಳಿದರು.

ನಿವೃತ್ತ ಪೊಲೀಸ್ ಅಧಿಕಾರಿ ಬಿ.ಬಿ. ಅಶೋಕ್ ಕುಮಾರ್, ನವಯುಗ ಹೋಟೆಲ್ ಮಾಲೀಕ ಕೆ. ಮೋಹನ್‌ರಾವ್, ನಟಿ ಗಿರಿಜಾ ಲೋಕೇಶ್, ಶಬರಿಮಲೈ ಅಯ್ಯಪ್ಪ ಸೇವಾ ಸಮಾಜಂ ರಾಜ್ಯಾಧ್ಯಕ್ಷ ಎನ್. ಜಯರಾಂ ಅವರಿಗೆ ಡಾ. ರಾಜ್‌ಕುಮಾರ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಹಾನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಎ. ಅಮೃತರಾಜ್, ದಂಡು ಪ್ರದೇಶದ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ. ಜಗನ್ನಾಥ ರೆಡ್ಡಿ, ಪೊಲೀಸ್ ಹೆಡ್‌ಕಾನ್‌ಸ್ಟೆಬಲ್ ಬಿ. ಮಹಾದೇವಸ್ವಾಮಿ, ಭಾರತೀಯ ಸೇವಾ ಸಮಿತಿ ರಾಷ್ಟ್ರೀಯ ಅಧ್ಯಕ್ಷ ರಾಮಚಂದ್ರ, ನಮ್ಮ ಕರ್ನಾಟಕ ಸೇವೆ ರಾಜ್ಯಾಧ್ಯಕ್ಷ ಎಂ. ಬಸವರಾಜ ಪಡುಕೋಟೆ, ಎಸ್.ಎ. ಮಾರುತಿ ಅವರಿಗೆ ಡಾ. ಅಪ್ಪು ಸೇವಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ನಟಿ ಅಂಕಿತಾ ಜಯರಾಮ್, ಬಾಲಪ್ರತಿಭೆ ಜ್ಞಾನ ಗುರುರಾಜ್ ಅವರಿಗೆ ಡಾ. ಅಪ್ಪು ವಿಶೇಷ ಬಾಲಪ್ರತಿಭೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್, ಸಹಾಯಕ ಪೊಲೀಸ್ ಆಯುಕ್ತ ಪ್ರಕಾಶ್ ರೆಡ್ಡಿ, ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಮಂಜುಶ್ರೀ ಸಾಂಸ್ಕೃತಿಕ ಸೇವಾ ಟ್ರಸ್ಟ್ ಅಧ್ಯಕ್ಷೆ ಮಂಜುಶ್ರೀ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಪಾಲನೇತ್ರ, ಪುನೀತ್ ರಾಜ್‌ಕುಮಾರ್ ಸೇವಾ ಸಮಿತಿ ಅಧ್ಯಕ್ಷ ವಿ. ಗಣೇಶ್ ರಾವ್, ಕಾರ್ಯಾಧ್ಯಕ್ಷ ಜಾನ್ ಬ್ರಿಟೊ, ಕಾನೂನು ಸಲಹೆಗಾರ ಕೆ. ಶ್ರೀಧರ್ ಪಾಲ್ಗೊಂಡಿದ್ದರು.

ನಗರದಲ್ಲಿ ಶುಕ್ರವಾರ ಕೆ. ಮೋಹನ್ ರಾವ್, ಎನ್ ಜಯರಾಮ್, ಗಿರಿಜಾ ಲೋಕೇಶ್ ಮತ್ತು ಬಿ.ಬಿ. ಅಶೋಕ್ ಕುಮಾರ್ ಅವರಿಗೆ ಡಾ. ರಾಜ್‌ಕುಮಾರ್ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿವೃತ್ತ ಪೊಲೀಸ್ ಅಧಿಕಾರಿ ಬಿ.ಕೆ ಶಿವರಾಂ, ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಶಂಕರ್ ಬಿದರಿ, ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್‌ರಾಜ್‌ಕುಮಾರ್, ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಮತ್ತು ಸಮಿತಿ ಕಾರ್ಯಾಧ್ಯಕ್ಷ ಜಾನ್ ಬ್ರಿಟೊ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

‘ಸಂಸತ್’ ಕೇಕ್

ಬೆಂಗಳೂರಿನ ಸೇಂಟ್ ಜೋಸೆಫ್ಸ್ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಿರುವ 49ನೇ ಕೇಕ್ ಪ್ರದರ್ಶನದಲ್ಲಿ 1,120 ಕೆಜಿ ತೂಕ, 14 ಅಡಿ ಉದ್ದ, 14 ಅಡಿ ಅಗಲ ಮತ್ತು 9 ಅಡಿ ಎತ್ತರದ ಹೊಸ ಸಂಸತ್ ಭವನದ ಮಾದರಿ ಸಕ್ಕರೆ ಮಿಶ್ರಣದ ಕೇಕ್ ಗಮನ ಸೆಳೆಯಿತು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಅತ್ಯಾಚಾರ ಶಂಕೆ: ಯುವತಿ ದೂರು

ಕೋರಮಂಗಲ ಪಬ್‌ಗೆ ಹೋಗಿದ್ದ ಸಂತ್ರಸ್ತೆ • ಪುರಾವೆಗಾಗಿ ಪೊಲೀಸರ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಬ್‌ಗೆ ಹೋಗಿದ್ದ ಸಂದರ್ಭದಲ್ಲಿ ನನ್ನ ಪ್ರಜ್ಞೆ ತಪ್ಪಿಸಿ ಅತ್ಯಾಚಾರ ಎಸಗಿರುವ ಶಂಕೆ ಇದ್ದು, ಈ ಬಗ್ಗೆ ತನಿಖೆ ನಡೆಸಿ’ ಎಂದು ಯುವತಿಯೊಬ್ಬರು ಕೋರಮಂಗಲ ಠಾಣೆಗೆ ದೂರು ನೀಡಿದ್ದು, ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಡಿ. 12ರಂದು ರಾತ್ರಿ ನಡೆದಿರುವ ಘಟನೆ ಬಗ್ಗೆ ಯುವತಿ ದೂರು ನೀಡಿದ್ದಾರೆ. ಅತ್ಯಾಚಾರ (ಐಪಿಸಿ 376) ಆರೋಪದಡಿ ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪುರಾವೆಗಳನ್ನು ಕಲೆಹಾಕಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಬ್‌ಗೆ ಹೋಗಿದ್ದ ಯುವತಿ: ‘ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಯುವತಿ, ಡಿ. 12ರಂದು ರಾತ್ರಿ ಕೋರಮಂಗಲದ ಪಬ್‌ವೊಂದಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಮದ್ಯ ಕುಡಿದಿದ್ದರೆಂಬ ಮಾಹಿತಿ ಇದೆ. ಇದಾದ ನಂತರ, ಯುವತಿ ಏಕಾಏಕಿ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಡಿ. 13ರಂದು ನಸುಕಿನಲ್ಲಿ ಪ್ರಜ್ಞೆ ವಾಪಸು ಬಂದಾಗ ಅವರು ಆಡುಗೋಡಿ ಬಳಿ ರಸ್ತೆ ಪಕ್ಕದಲ್ಲಿ ಬಿದ್ದಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪ್ರಜ್ಞೆ ಬಂದಾಗ ಯುವತಿ ಕೈಗಳ ಮೇಲೆ ಪರಚಿದ ಗಾಯಗಳಿದ್ದವು. ಮನೆಯೊಂದಕ್ಕೆ ಹೋಗಿದ್ದ ಯುವತಿ, ಅವರ ಸಹಾಯದಿಂದ ನಿಯಂತ್ರಣ ಕೊಠಡಿಗೆ ಕರೆ ಮಾಡಿದ್ದರು. ಆಡುಗೋಡಿ ಠಾಣೆಯ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಸ್ಥಳಕ್ಕೆ ಹೋಗಿ ಘಟನೆ ಬಗ್ಗೆ ಮಾಹಿತಿ ಪಡೆದಿದ್ದರು. ನಂತರ, ಘಟನೆ ನಡೆದ ಸ್ಥಳದ ಆಧಾರದಲ್ಲಿ ಕೋರಮಂಗಲ ಠಾಣೆಗೆ ಮಾಹಿತಿ ತಿಳಿಸಿದ್ದರು’ ಎಂದು ಹೇಳಿವೆ.

ಅತ್ಯಾಚಾರವೆಂಬ ಶಂಕೆ: ‘ರಾತ್ರಿಯಿಂದ ನಸುಕಿನವರೆಗೆ ನನಗೆ ಪ್ರಜ್ಞೆ ಇರಲಿಲ್ಲ. ಇದೇ ಅವಧಿಯಲ್ಲಿ ಅಪರಿಚಿತರು ನನ್ನ ಮೇಲೆ ಅತ್ಯಾಚಾರ ನಡೆಸಿರುವ ಅನುಮಾನವಿದೆ’ ಆರೋಪಿ ಯುವತಿ ದೂರಿನಲ್ಲಿ ಆರೋಪಿಸಿದ್ದಾರೆ. ದೂರಿಗೆ ಸಂಬಂಧಪಟ್ಟಂತೆ ಘಟನಾ ಸ್ಥಳಗಳಲ್ಲಿ ಪರಿಶೀಲನೆ ನಡೆಸಲಾಗಿದ್ದು, ಸದ್ಯಕ್ಕೆ ಯಾವುದೇ ಪುರಾವೆ ಸಿಕ್ಕಿಲ್ಲವೆಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಯುವತಿ ಪಬ್‌ಗೆ ಹೋಗಿ ಮದ್ಯ ಕುಡಿದಿದ್ದು ಹಾಗೂ ಮದ್ಯದ ನಶೆಯಲ್ಲಿ ಅಲ್ಲಿಂದ ಹೊರಗೆ ಬಂದಿದ್ದ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿದೆ. ಜೊತೆಗೆ, ರಸ್ತೆಯಲ್ಲಿ ಯುವತಿ ನಡೆದುಕೊಂಡು ಹೋಗುವಾಗ ಆಯತಪ್ಪಿ ಬಿದ್ದಿದ್ದ ದೃಶ್ಯಗಳು ಲಭ್ಯವಾಗಿವೆ. ಬಿದ್ದ ಸ್ಥಳದಲ್ಲಿಯೇ ಯುವತಿ ಪ್ರಜ್ಞೆ ತಪ್ಪಿದ್ದರು. ನಸುಕಿನಲ್ಲೇ ಅವರೇ ಎದ್ದು ಸಮೀಪದ ಮನೆಗೆ ಹೋಗಿದ್ದರೆಂಬುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

‘ಅತ್ಯಾಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ಪುರಾವೆಗಳು ಸಿಕ್ಕಿಲ್ಲ. ಯುವತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದ್ದು, ಅದರ ವರದಿ ಬಂದ ನಂತರ ನಿಖರ ಮಾಹಿತಿ ತಿಳಿಯಲಿದೆ’ ಎಂದು ಮೂಲಗಳು ತಿಳಿಸಿವೆ.

ರಜೆ ನೀಡದಿದ್ದಕ್ಕೆ ಬೇಸರ: ಕಾರ್ಮಿಕ ಆತ್ಮಹತ್ಯೆ

ಅಪರಾಧ ಸುದ್ದಿ

ಬೆಂಗಳೂರು: ಪೀಣ್ಯದಲ್ಲಿರುವ ಗಡಿಯಾರ ತಯಾರಿಕೆ ಕಂಪನಿಯೊಂದರ ಕಾರ್ಮಿಕ ಗೋವಿಂದರಾಜ್ (24) ಅವರು ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಬಾಗಲಗುಂಟೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಆಂಧ್ರಪ್ರದೇಶದ ಗುಡಿಬಂಡೆಯ ಗೋವಿಂದರಾಜ್, 6 ವರ್ಷಗಳಿಂದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ತಾಯಿ, ಟಿ. ದಾಸರಹಳ್ಳಿ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಸ್ವಚ್ಛತೆ ಕೆಲಸ ಮಾಡುತ್ತಿದ್ದರು. ಅಲ್ಲಿಯೇ ಕೊಠಡಿಯೊಂದರಲ್ಲಿ ತಾಯಿ ಜೊತೆ ಗೋವಿಂದರಾಜ್ ವಾಸವಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗುರುವಾರ ಸಂಜೆ ಕೆಲಸ ಮುಗಿಸಿ ಗೋವಿಂದರಾಜ್ ಕೊಠಡಿಗೆ ಬಂದಿದ್ದರು. ತಾಯಿ ಇರಲಿಲ್ಲ. ಅವರ ಸೀರೆ ತೆಗೆದುಕೊಂಡು ಅಪಾರ್ಟ್‌ಮೆಂಟ್ ಸಮುಚ್ಚಯ ಏರಿದ್ದ ಗೋವಿಂದರಾಜ್, ಮೆಟ್ಟಿಲುಗಳ ಬಳಿಯ ಕಂಬಿಗೆ ಸೀರೆಯಿಂದ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ನಿವಾಸಿಗಳು ಮಾಹಿತಿ ನೀಡುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ವ್ಯವಸ್ಥಾಪಕ, ಮೇಲ್ವಿಚಾರಕ ವಿರುದ್ಧ ಪ್ರಕರಣ: ‘ಕಂಪನಿಯ ವ್ಯವಸ್ಥಾಪಕ ಗುರುರಾಜಪ್ಪ ಹಾಗೂ ಮೇಲ್ವಿಚಾರಕ ನಂಜಪ್ಪ, ನನಗೆ ರಜೆ ನೀಡುತ್ತಿರಲಿಲ್ಲ. ಕೆಲಸದ ಸ್ಥಳದಲ್ಲಿ ಕಿರುಕುಳ ನೀಡುತ್ತಿದ್ದರು. ರಜೆ ಕೇಳಿದ್ದಕ್ಕೆ, ಕೆಲಸದಿಂದ ತೆಗೆಯುವುದಾಗಿ ಬೆದರಿಸಿದ್ದರು’ ಎಂದು ಗೋವಿಂದರಾಜ್ ಮರಣಪತ್ರ ಬರೆದಿಟ್ಟಿದ್ದಾರೆ. ಜೊತೆಗೆ, ವಿಡಿಯೊ ಸಹ ಮಾಡಿರುವುದಾಗಿ ಪೊಲೀಸ್ ಮೂಲಗಳು ಹೇಳಿವೆ.

‘ಆತ್ಮಹತ್ಯೆಗೆ ಪ್ರಚೋದನೆ ಆರೋಪದಡಿ ಗುರುರಾಜಪ್ಪ ಹಾಗೂ ನಂಜಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇಬ್ಬರೂ ತಲೆಮರೆಸಿಕೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಬುಧವಾರ (ಡಿ. 13) ರಜೆ ಪಡೆದಿದ್ದ ಗೋವಿಂದರಾಜ್, ಗುರುವಾರ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿದ್ದರು. ರಜೆ ಪಡೆದಿದ್ದನ್ನು ಪ್ರಶ್ನಿಸಿದ್ದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ಬೈದಿದ್ದರು. ಇದೇ ವಿಚಾರವಾಗಿ ಗೋವಿಂದರಾಜ್ ಬೇಸರಗೊಂಡಿದ್ದರು ಎಂಬುದು ಸಹೋದ್ಯೋಗಿಗಳಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೆಆರ್‌ಎಸ್ ಸುರಕ್ಷತೆ ಪರಿಶೀಲನೆಗೆ ತಂಡ

ಬೆಳಗಾವಿ: ಕೆಆರ್‌ಎಸ್ ಜಲಾಶಯದಲ್ಲಿ ಹೂಳು ತುಂಬಿದೆಯೇ, ಆಧುನಿಕ ತಂತ್ರಜ್ಞಾನಕ್ಕೆ ಅಣೆಕಟ್ಟು ಹೊಂದಿಕೆ ಆಗುವಂತಿದೆಯೇ ಎಂದು ಪರಿಶೀಲಿಸಲು ಅಲ್ಲಿಗೆ ತುರ್ತಾಗಿ ತಜ್ಞರ ತಂಡ ಕಳುಹಿಸಿ ಅಧ್ಯಯನ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ನೀರಾವರಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ.

ಅಣೆಕಟ್ಟಿನ ಗರಿಷ್ಠ ಸಾಮರ್ಥ್ಯದ 49.50 ಟಿಎಂಸಿ ಅಡಿ ನೀರು ಈಗಲೂ ಸಂಗ್ರಹ ಆಗುತ್ತಿದೆಯೇ? ಸೀಪೇಜ್ ನಿರ್ವಹಣೆ, ಗೇಟ್ ಸುಸ್ಥಿತಿ ಸೇರಿ ಇತರ ಅಂಶಗಳನ್ನು ಪರಿಶೀಲಿಸಬೇಕು ಎಂದು ಶಾಸಕ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಚಿವರಿಗೆ ಮನವಿ ಮಾಡಿದ್ದರು.

ಸ್ಯಾಟ್‌ಲೈಟ್ ಫೋನ್ ಪರಿಶೀಲನೆ

ಯಾದಗಿರಿ: ಜಿಲ್ಲೆಯಲ್ಲಿ ಮತ್ತೆ ಸ್ಯಾಟ್‌ಲೈಟ್ ಫೋನ್ ಸದ್ದು ಮಾಡಿದೆ. ಸುರಪುರ ತಾಲ್ಲೂಕಿನ ಶೆಳ್ಳಗಿ ಗ್ರಾಮದ ಜಮೀನಿನಿಂದ ಸೆಪ್ಟೆಂಬರ್ 17ರ ನಸುಕಿನ ಜಾವ 3 ಗಂಟೆ ಸುಮಾರಿಗೆ ಸ್ಯಾಟ್‌ಲೈಟ್ ಫೋನ್‌ನಿಂದ ಕರೆ ಹೋಗಿರುವ ಶಂಕೆ ವ್ಯಕ್ತವಾಗಿದೆ.

2 ವರ್ಷದ ಹಿಂದೆ ಯಾದಗಿರಿ ತಾಲ್ಲೂಕಿನ ಹೆಡಗಿಮುದ್ರ ಗ್ರಾಮದಿಂದ ಸ್ಯಾಟ್‌ಲೈಟ್ ಫೋನ್‌ನಿಂದ ಕರೆ ಹೋಗಿತ್ತು. ಈಗ ಮತ್ತೆ ಫೋನ್ ಕರೆ ಹೋಗಿರುವ ಶಂಕೆ ವ್ಯಕ್ತವಾಗಿದೆ.

ಅಧಿಕಾರಿಗಳ ಭೇಟಿ: ಜಿಪಿಎಸ್ ಲೊಕೇಷನ್ ಆಧಾರದ ಮೇಲೆ ಸೆ. 20ರಂದು ಸ್ಥಳಕ್ಕೆ ಕೇಂದ್ರ ತನಿಖಾ ಸಂಸ್ಥೆ (ಐಎಸ್‌ಡಿ) ಅಧಿಕಾರಿಗಳು, ಪರಿಶೀಲನೆ ನಡೆಸಿ ವಾಪಸ್ ಆಗಿದ್ದಾರೆ.

ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಗೆ ಸಲಹೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ನಮ್ಮ ಪ್ರಗತಿ ಮತ್ತು ಆರ್ಥಿಕ ಅಭಿವೃದ್ಧಿ ದೇಶದ ಸಾಂಸ್ಕೃತಿಕ ಪರಂಪರೆಯ ಭಾಗವಾಗಬೇಕು. ತಾಂತ್ರಿಕ ಸಾಧನೆ ಅಸಮಾನತೆ ಸೃಷ್ಟಿಸಬಾರದು’ ಎಂದು ಪರಿಸರ ತಜ್ಞ, ಚಿತ್ರನಟ ಸುರೇಶ್ ಹೆಬ್ಳೀಕರ್ ತಿಳಿಸಿದರು.

ತಾಲ್ಲೂಕಿನ ಗಾಂಧಿಗ್ರಾಮದಲ್ಲಿ ಅವನಿ ಆರ್ಚರ್ಡ್ಸ್ ಸಾವಯವ ಕೃಷಿ ತೋಟದಲ್ಲಿ ದಾಸರಹಳ್ಳಿಯ ಸೌಂದರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್ ಕಾಲೇಜು ಶುಕ್ರವಾರ ಹಮ್ಮಿಕೊಂಡಿದ್ದ ‘ಉದ್ಯಮ ಹಾಗೂ ಅವುಗಳ ವಿಸ್ತರಣೆಯಲ್ಲಿ ಸುಸ್ಥಿರತೆ’ ವಿಷಯ ಕುರಿತು ಅಂತರಾಷ್ಟ್ರೀಯ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ‘ನೈಸರ್ಗಿಕ ಸಂಪನ್ಮೂಲಗಳನ್ನು ಮಿತವಾಗಿ ಬಳಸಿ ಅವುಗಳನ್ನು ಯಥಾಸ್ಥಿತಿಯಲ್ಲಿ ಸಂರಕ್ಷಿಸಿಕೊಳ್ಳುವುದರಲ್ಲಿ ನಮ್ಮ ಅಸ್ಮಿತೆ ಅಡಗಿದೆ’ ಎಂದರು.

ಕಾಲೇಜಿನ ಅಧ್ಯಕ್ಷ ಸೌಂದರ್ಯ ಪಿ.ಮಂಜಪ್ಪ ಅಧ್ಯಕ್ಷತೆವಹಿಸಿದ್ದರು. ಆಡಳಿತ ನಿರ್ದೇಶಕಿ ಸುನಿತಾ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಕೀರ್ತನ್‌ಕುಮಾರ್, ಟ್ರಸ್ಟಿ ಪ್ರತೀಕ್ಷಾ, ಇದ್ದರು. ಸಂಪನ್ಮೂಲ ವ್ಯಕ್ತಿಗಳಾದ ಪ್ರತಾಪ ಹೆಗಡೆ, ಡಾ.ಉಚಂದ್ರ ಶೇಖರ್, ಸಹಜ ಕೃಷಿ ತಜ್ಞ ಸೋಮೇಶ್, ಬೆಸ್ಟ್ ವಿಶ್ವವಿದ್ಯಾಲಯದ ಉಪಕುಲಪತಿ ನರಸಿಂಗ ನಕ್ಷತ್ರಿ, ವೇಣುಗೋಪಾಲ, ಗ್ರೀನ್ ಪಾತ್‌ನ ಎಚ್.ಆರ್.ಜಯರಾಂ ವಿಷಯ ಮಂಡಿಸಿದರು.

ಕಾರ್ಯಾಗಾರವನ್ನು ಸುರೇಶ್ ಹೆಬ್ಳೀಕರ್ ಉದ್ಘಾಟಿಸಿದರು. ಸೌಂದರ್ಯ ಕಾಲೇಜಿನ ಪ್ರಾಂಶುಪಾಲ ಬಿ.ಎ.ವಾಸು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಕೀರ್ತನ್ ಕುಮಾರ್, ಟ್ರಸ್ಟಿ ಎಂ.ವರುಣ್ ಕುಮಾರ್ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

‘ಧ್ವನಿ’ ಅಂತರ್ ಕಾಲೇಜು ಉತ್ಸವ: ಮುಖ್ಯ ಅತಿಥಿ: ಕೆ. ಗೋಪಾಲಯ್ಯ, ಜಗ್ಗೇಶ್, ಎಸ್. ಮುನಿರಾಜು, ಆಯೋಜನೆ ಹಾಗೂ ಸ್ಥಳ: ವಿವೇಕಾನಂದ ಮಹಿಳಾ ಕಾಲೇಜು, ಮಹಾಲಕ್ಷ್ಮೀ ಲೇಔಟ್, ಬೆಳಿಗ್ಗೆ 9

ಸೌರಶಕ್ತಿ ಬಗ್ಗೆ ವಿಚಾರಸಂಕಿರಣ: ಉದ್ಘಾಟನಾ ಭಾಷಣ: ಸೌಮ್ಯಕಾಂತ್, ಸಂಜು ದೇವಿ, ಆಯೋಜನೆ: ಸೆಲ್ಕೊ ಇಂಡಿಯಾ, ಸ್ಥಳ: ಲಾ ಮಾರ್ವೆಲ್ಲ, ಜಯನಗರ, ಬೆಳಿಗ್ಗೆ 9.30

ಮಹಿಳಾ ಸಾಹಿತ್ಯ–ಸಂಸ್ಕೃತಿ ಸಮಾವೇಶ: ಉದ್ಘಾಟನೆ: ಕೆ.ಆರ್. ಸಂಧ್ಯಾರೆಡ್ಡಿ,

ನ್ಯಾಷನಲ್ ಕಾಲೇಜು ಸಾಹಿತ್ಯೋತ್ಸವ: ಭಾಗವಹಿಸುವವರು: ಟಿ.ಎನ್. ಸೀತಾರಾಮ್. ಟಿ.ಪಿ. ಅಶೋಕ್, ಜಯರಾಮ್, ರಘುನಾಥ್ ಚ.ಹ., ವಿದ್ಯಾರಶ್ಮಿ, ಸಂಧ್ಯಾ ರಮೇಶ್, ಶ್ರೀಕಾಂತ ನೊಣಬೂರು, ಅಶ್ವತ್ಥ್ ಶಿಕಾರಿಪುರ, ಸುಧಾಕರ್ ಜೈನ್, ಗಣೇಶ್, ಆಯೋಜನೆ: ದಿ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ಎಚ್.ಎನ್. ಮಲ್ಟಿಮೀಡಿಯ ಹಾಲ್, ಬಸವನಗುಡಿ, ಬೆಳಿಗ್ಗೆ 9ರಿಂದ



ಟಿ.ಎನ್. ಸೀತಾರಾಮ್

ಅಧ್ಯಕ್ಷತೆ: ಎಸ್.ಜಿ. ಸುಶೀಲಮ್ಮ, ಸಾಧಕರಿಗೆ ಪ್ರಶಸ್ತಿ ಪ್ರದಾನ: ವೂಡೇ ಪಿ. ಕೃಷ್ಣ, ಸರ್ವಾಧ್ಯಕ್ಷತೆ: ಬಿ.ಆರ್. ಉಮಾ, ಪ್ರಶಸ್ತಿ ಪುರಸ್ಕೃತರು: ಬಿ.ಆರ್. ಉಮಾ, ಪಾಮಡಿ ನಾಗಮಣಿ ಮನೋಹರ್, ಆಯೋಜನೆ: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 10

‘ಫೇಸ್ ಆಫ್ ಇಂಡಿಯಾ, ನೇಮ್ಸ್ ಆಫ್ ಭಾರತ’ ಉಪನ್ಯಾಸ: ಕೊಯೆನ್ರಾಡ್ ಎಲ್ಸ್ಟ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಮಿಷನ್ ದಿಶಾ, ಪ್ರಜ್ಞಾ ಪ್ರವಾಹ, ಸ್ಥಳ: ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.30

ಕೆ.ಜಿ. ರಾಘವನ್ ಅವರ ‘ಸುಭಾಷಿತಾಸ್’ ಪುಸ್ತಕ ಬಿಡುಗಡೆ: ಅಬ್ದುಲ್ ನಜೀರ್, ಮುಖ್ಯ ಅತಿಥಿ: ಚಿರಂಜೀವಿ ಸಿಂಘ್, ಆಯೋಜನೆ ಹಾಗೂ ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

‘ಕವನಗಳ ಕೈಬುಟ್ಟಿ’ ಕವನ ಸಂಕಲನ ಬಿಡುಗಡೆ: ಮುಖ್ಯ ಅತಿಥಿಗಳು: ವಿ. ನಾಗರಾಜ್, ಸಂತೋಷ ಹಾನಗಲ್, ರಾಧಾಕೃಷ್ಣ ಕೌಂಡಿನ್ಯ, ಕೃಷ್ಣರಾಜ್, ಪ್ರಮೋದ್ ಮರವಂತೆ, ಅಧ್ಯಕ್ಷತೆ:

‘ದಲಿತ ಸಾಹಿತ್ಯ ಮತ್ತು ಚಳವಳಿಗೆ ಬಿ. ಬಸವಲಿಂಗಪ್ಪನವರ ಕೊಡುಗೆ–ಒಂದು ಚಿಂತನೆ: ಉದ್ಘಾಟನೆ: ಬಾನಂದೂರು ಕೆಂಪಯ್ಯ, ಅಧ್ಯಕ್ಷತೆ: ಗಣಪತಿ ಛಲವಾದಿ, ಮುಖ್ಯ ಅತಿಥಿಗಳು: ಎಚ್. ಲಕ್ಷ್ಮೀನಾರಾಯಣಸ್ವಾಮಿ, ಸೌಮ್ಯ ಕೋಡೂರು, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಸಾಹಿತ್ಯ ಸಂಘ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 4

ಎಂ.ಎಸ್. ನರಸಿಂಹಮೂರ್ತಿ, ಆಯೋಜನೆ: ಅಖಿಲ ಭಾರತೀಯ ಸಾಹಿತ್ಯ ಪರಿಷದ್, ಸ್ಥಳ: ಉತ್ತುಂಗ, ರಂಗರಾವ್ ರಸ್ತೆ, ಶಂಕರಪುರ, ಬಸವನಗುಡಿ, ಸಂಜೆ 5

ಕನ್ನಡದ ಧ್ರುವತಾರೆ ಸಾಧಕರೊಂದಿಗೆ ಮಾತು–ಕತೆ: ಶಂಕರ ಬಿದರಿ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

‘ಇಂಟರ್ನಾಷ್ಯನಲ್ ಪ್ರಿಂಟ್ ಎಕ್ಸಿಬಿಷನ್’: ಮುಖ್ಯ ಅತಿಥಿ: ಚಿ.ಸು. ಕೃಷ್ಣ ಸೆಟ್ಟಿ, ಆಯೋಜನೆ ಹಾಗೂ ಸ್ಥಳ: ಲಾವಾರು ಆರ್ಟ್ ಸೆಂಟರ್, ಬನ್ನೇರುಘಟ್ಟ, ಸಂಜೆ 5.30

ಬಿ.ಎಸ್. ವಿಶ್ವನಾಥನ್ ಹಾಗೂ ಡಿ.ಬಿ. ಚಂದ್ರೇಗೌಡ ಅವರಿಗೆ ನುಡಿ ನಮನ: ಮುಖ್ಯ ಅತಿಥಿಗಳು: ಎಚ್.ಕೆ. ಪಾಟೀಲ, ಬಿ.ಎಲ್. ಶಂಕರ್, ಪಿ.ಜಿ.ಆರ್. ಸಿಂಧ್ಯ, ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ: ಜಿ.ಎ. ಪುರುಷೋತ್ತಮಗೌಡ, ಆಯೋಜನೆ: ಸಹ್ಯಾದ್ರಿ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಸಂಜೆ 5.30

‘ಯಮನ ಸೋಲು’ ಪೌರಾಣಿಕ ನಾಟಕ ಪ್ರದರ್ಶನ: ನಿರ್ದೇಶನ: ಶಾಂತಕುಮಾರ್, ಆಯೋಜನೆ: ಕಾವೇರಿ ಕಲಾ ಸಂಘ, ಸ್ಥಳ: ಲಾಸ್ಯ ರಂಜನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

‘ಮಲ್ಲಿಗೆ ತೋಟದಲ್ಲಿ ಮರ್ಡರ್’ ನಾಟಕ ಪ್ರದರ್ಶನ: ತಂಡ: ನಮ್ಮೆ ನಟನೆ ಸಾಂಸ್ಕೃತಿಕ ವೇದಿಕೆ, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿರುವ ಆರೋಪ: ಉಭಯ ಸದನಗಳಲ್ಲೂ ಪ್ರಸ್ತಾಪಿಸಿದ ಬಿಜೆಪಿ

ಡಿಕೆಶಿ ಪ್ರಕರಣ ವಾಪಸ್: ವಾಗ್ವಾದ

ಪ್ರಜಾವಾಣಿ ವಾರ್ತೆ

ವಿಧಾನಸಭೆ/ ಪರಿಷತ್: ಆದಾಯಕ್ಕಿಂತ ಹೆಚ್ಚಿನ ಆಸ್ತಿ ಹೊಂದಿದ ಆರೋಪದ ಮೇಲೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ವಿರುದ್ಧ ಸಿಬಿಐ ತನಿಖೆಗೆ ಹಿಂದಿನ ಸರ್ಕಾರ ನೀಡಿದ್ದ ಅನುಮತಿ ವಾಪಸ್ ಪಡೆದ ಪ್ರಕರಣವನ್ನು ವಿರೋಧ ಪಕ್ಷ ಬಿಜೆಪಿ ಉಭಯ ಸದನಗಳಲ್ಲೂ ಪ್ರಸ್ತಾಪಿಸಿತು.

ಕಾಂಗ್ರೆಸ್ ನೇತೃತ್ವದ ಸರ್ಕಾರದ ಕ್ರಮ ಪ್ರಶ್ನಿಸಿ ನಿಲುವಳಿ ಸೂಚನೆ ಮಂಡಿಸಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಶುಕ್ರವಾರ ಯತ್ನಿಸಿದರು. ಪ್ರಕರಣದ ವಿಚಾರಣೆ ಕೋರ್ಟ್‌ನಲ್ಲಿ ನಡೆಯುತ್ತಿದೆ ಎಂದು ಹೇಳಿ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಅವಕಾಶ ನಿರಾಕರಿಸಿದರು.

ಇದಕ್ಕೂ ಮೊದಲು ವಿಷಯ ಪ್ರಸ್ತಾಪಿಸಿದ ಅಶೋಕ, ರಾಜ್ಯ ಸಚಿವ ಸಂಪುಟದಲ್ಲಿ ತೆಗೆದುಕೊಂಡ ತೀರ್ಮಾನ ಸಂವಿಧಾನ ಬಾಹಿರವಾಗಿದೆ. ರಾಜಕೀಯ ದುರುದ್ದೇಶಗಳಿಂದ ಕೂಡಿದೆ ಎಂದು ಹರಿಹಾಯ್ದರು.

ಯಡಿಯೂರಪ್ಪ ಸರ್ಕಾರ ಇದ್ದಾಗ ಡಿ.ಕೆ.ಶಿವಕುಮಾರ್ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿದ್ದರು. ಹಿಂದೆ ಕಾಂಗ್ರೆಸ್ ಸರ್ಕಾರ ಇದೇ ರೀತಿ ಯಡಿಯೂರಪ್ಪ ಮತ್ತು ಜನಾರ್ದನ ರೆಡ್ಡಿ ಅವರ ವಿರುದ್ಧದ ಪ್ರಕರಣಗಳನ್ನು ಸಿಬಿಐಗೆ ಒಪ್ಪಿಸಿತ್ತು. ಆ ಬಳಿಕ ಬಿಜೆಪಿ ಸರ್ಕಾರ ಬಂದರೂ ಪ್ರಕರಣ ಹಿಂತೆಗೆದುಕೊಳ್ಳುವ ಕೆಲಸ ಮಾಡಲಿಲ್ಲ. ಆದರೆ ಈ ಸರ್ಕಾರ ತಮಗೆ ತೋಚಿದಂತೆ ನಿರ್ಣಯವನ್ನು ಕೈಗೊಳ್ಳುವ ಮೂಲಕ ನ್ಯಾಯಾಂಗದ ಕಣ್ಣಿಗೆ ಮಣ್ಣೆರೆಚುವ ಕೆಲಸ ಮಾಡಿದೆ ಎಂದು ದೂರಿದರು.

ಇದಕ್ಕೆ ಬಿಜೆಪಿಯ ಎಲ್ಲಾ ಶಾಸಕರು ದನಿಗೂಡಿಸಿ ಈ ಕುರಿತ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು. ಅದನ್ನು ಸಭಾಧ್ಯಕ್ಷರು ಒಪ್ಪಲಿಲ್ಲ.

ಪರಿಷತ್‌ನಲ್ಲೂ ಆಗ್ರಹ: ಕಲಾಪ ಆರಂಭ ಆಗುತ್ತಿದ್ದಂತೆ ನಿಯಮ 59ರ ಅಡಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ, 'ಸಿಬಿಐ ದಾಖಲಿಸಿಕೊಂಡಿದ್ದ ಪ್ರಕರಣ ವಾಪಸ್ ಪಡೆದಿರುವುದು ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಮಾನ. ಈ ಕುರಿತು ಚರ್ಚೆಗೆ ಅವಕಾಶ ನೀಡಬೇಕು' ಎಂದು ಕೋರಿದರು.

ಈ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಆರೋಪ– ಪ್ರತ್ಯಾರೋಪದಲ್ಲಿ ತೊಡಗಿದಾಗ, ತಮ್ಮ ಅಭಿಪ್ರಾಯ ತಿಳಿಸುವಂತೆ ಕಾನೂನು ಸಚಿವ ಎಚ್.ಕೆ. ಪಾಟೀಲರಿಗೆ ಸಭಾಪತಿ ಬಸವರಾಜ ಹೊರಟ್ಟಿ ಸೂಚಿಸಿದರು.

'ಬಿಜೆಪಿ ಇದನ್ನು ನಿಲುವಳಿ ಸೂಚನೆಗೆ ಎತ್ತಿಕೊಂಡಿದ್ದೇ ತಪ್ಪು. ಯಾವ ವಿಚಾರ ನ್ಯಾಯಾಲಯದಲ್ಲಿ ಇದೆಯೊ ಅದನ್ನೇ ಚರ್ಚೆಗೆ ತಂದರೆ ಹೇಗೆ? ಅದಕ್ಕೆ ಅವಕಾಶ ಕೊಡಬಾರದು' ಎಂದು ಎಚ್.ಕೆ. ಪಾಟೀಲ ಹೇಳಿದರು.

ಆಗ ಸಭಾಪತಿ, 'ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ಚರ್ಚೆಗೆ ಅವಕಾಶ ನೀಡುವುದಿಲ್ಲ. ಇದು ನ್ಯಾಯಾಂಗ ನಿಂದನೆ ಆಗುತ್ತದೆ' ಎಂದು ರೂಲಿಂಗ್ ನೀಡಿದರು. ಅದನ್ನು ಒಪ್ಪದ ಬಿಜೆಪಿ ಸದಸ್ಯರು ಚರ್ಚೆಗೆ ಅವಕಾಶ ನೀಡುವಂತೆ ಪಟ್ಟುಹಿಡಿದರು.

'ಪ್ರಕರಣ ಕೋರ್ಟ್‌ನಲ್ಲಿ ಇರುವಾಗ ವಾಪಸ್ ಪಡೆದಿದ್ದು ಹೇಗೆ? ಇದು ನ್ಯಾಯಾಲಯದ ವಿಷಯದಲ್ಲಿ ಸರ್ಕಾರದ ಮಧ್ಯಪ್ರವೇಶ ಅಲ್ಲವೇ' ಎಂದ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನಿಸಿದರು.

'ಸರ್ಕಾರ ಅಡ್ಡದಾರಿ ಹಿಡಿದು ಸಿಬಿಐ ಕೇಸ್ ವಾಪಸ್ ಪಡೆದಿದೆ' ಎಂದು ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದಾಗ, 'ರಾಜಕೀಯ ದುರುದ್ದೇಶದಿಂದ ಸಿಬಿಐಗೆ ಕೊಟ್ಟಿದ್ದು ನೀವು' ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಈ ಹಂತದಲ್ಲಿ ಮಧ್ಯಪ್ರವೇಶಿಸಿದ ಸಭಾಪತಿ, 'ಈ ವಿಷಯದ ಮೇಲೆ ಮತ್ತೆ ಮಾತನಾಡಬೇಡಿ' ಎಂದು ಗರಂ ಆಗಿ ಚರ್ಚೆಗೆ ಅಂತ್ಯ ಹಾಡಿದರು.

ಶೇ 80ರಷ್ಟು ಶಾಸಕರು ಹಾಜರಿ: ಸ್ಪೀಕರ್ ಖಾದರ್ ಸಂತಸ

ಬೆಳಗಾವಿ: 'ವಿಧಾನಸಭೆ ಅಧಿವೇಶನಕ್ಕೆ ಶೇ 80ರಷ್ಟು ಶಾಸಕರು ಹಾಜರಾಗುವ ಮೂಲಕ ಯಶಸ್ವಿಯಾಗಿ ನಡೆದಿದೆ. ಅತೀ ಹೆಚ್ಚು 17 ಮಸೂದೆಗಳು, 150 ಗಮನಸೆಳೆಯುವ ಸೂಚನೆಗಳು ಚರ್ಚೆ ಆಗಿವೆ' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.

ಯು ಟಿ ಖಾದರ್

ಅಧಿವೇಶನ ಮುಕ್ತಾಯವಾದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸುವರ್ಣ ವಿಧಾನಸೌಧದಲ್ಲಿ ನಡೆದ 10 ದಿನಗಳ ಅಧಿವೇಶನವೂ ಸೇರಿ ಪ್ರಸಕ್ತ ಸಾಲಿನಲ್ಲಿ ಈವರೆಗೆ 28 ದಿನ ಅಧಿವೇಶನ ನಡೆದಂತಾಗಿದೆ' ಎಂದರು.

'ಸರ್ಕಾರದ ನಿಲುವು, ಧೋರಣೆಗಳಿಗೆ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟಿಸುವುದು, ಧರಣಿ ನಡೆಸುವುದು ಪ್ರಜಾಪ್ರಭುತ್ವದ ಸೌಂದರ್ಯ' ಎಂದೂ ಬಣ್ಣಿಸಿದರು.

'ಬೆಳಿಗ್ಗೆ 9 ಗಂಟೆಗೆ ಕಲಾಪಕ್ಕೆ ಹಾಜರಾದವರು ಮತ್ತು ಸಂಜೆ 7 ಗಂಟೆಯ ನಂತರವೂ ಸದನದಲ್ಲಿದ್ದ ಶಾಸಕರನ್ನು ಗುರುತಿಸಿ ವಿಶೇಷ ಬಹುಮಾನ ನೀಡಲಾಗುವುದು. ಎಲ್ಲ ಶಾಸಕರು ಅವರವರ ಜವಾಬ್ದಾರಿ ಅರಿತು ಕಲಾಪಗಳಲ್ಲಿ ಭಾಗವಹಿಸುವುದು ಕರ್ತವ್ಯ' ಎಂದೂ ಅಭಿಪ್ರಾಯಪಟ್ಟರು.

'ಸುವರ್ಣ ವಿಧಾನಸೌಧದಲ್ಲಿ ಶಾಶ್ವತವಾಗಿ ವಿದ್ಯುತ್ ಅಲಂಕಾರ ಮಾಡಲಾಗಿದೆ. ಇನ್ನು ಮುಂದೆ ಪ್ರತಿ ಶನಿವಾರ ಮತ್ತು ಭಾನುವಾರ ಸಾರ್ವಜನಿಕರಿಗೆ ಒಳಗೆ ಪ್ರವೇಶಿಸಲು ಅವಕಾಶ ನೀಡಲಾಗುವುದು' ಎಂದರು.

'ಸುವರ್ಣ ವಿಧಾನಸೌಧದ ಸಮೀಪದಲ್ಲಿರುವ ಖಾಲಿ ಜಾಗದಲ್ಲಿ ಶಾಸಕರ ಭವನ ನಿರ್ಮಿಸಬೇಕಿದೆ. ಆದರೆ, ಸರ್ಕಾರವೇ ನಿರ್ಮಿಸಿ, ನಿರ್ವಹಿಸುವುದು ಅಷ್ಟು ಸುಲಭವಲ್ಲ. ಹೀಗಾಗಿ, ಆದಾಯ ಹಂಚಿಕೆ ವ್ಯವಸ್ಥೆಯಡಿ ಖಾಸಗಿಯವರ ಸಹಭಾಗಿತ್ವದಲ್ಲಿ ನಿರ್ಮಿಸುವ ಉದ್ದೇಶವಿದೆ' ಎಂದೂ ತಿಳಿಸಿದರು.

ಎಫ್‌ಪಿಒಗಳಿಗೆ ಹೆಚ್ಚು ಅನುದಾನ ಸುನಿಲ್ ಕುಮಾರ್ ಆಗ್ರಹ

ವಿಧಾನಸಭೆ: ರಾಜ್ಯದಲ್ಲಿರುವ 1,262 ರೈತ ಉತ್ಪಾದಕ ಸಂಸ್ಥೆಗಳಿಗೆ (ಎಫ್‌ಪಿಒ) ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ₹ 2 ಕೋಟಿ ಅನುದಾನವನ್ನು ಮಾತ್ರ ಮೀಸಲಿಟ್ಟಿದ್ದು, ಹೆಚ್ಚಿನ ಅನುದಾನ ಒದಗಿಸಬೇಕು ಎಂದು ಬಿಜೆಪಿಯ ವಿ. ಸುನಿಲ್ ಕುಮಾರ್ ಆಗ್ರಹಿಸಿದರು.

ಅವರ ಪ್ರಶ್ನೆಗೆ ತೋಟಗಾರಿಕಾ ಸಚಿವರ ಪರವಾಗಿ ಶುಕ್ರವಾರ ಉತ್ತರಿಸಿದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, 'ಎಫ್‌ಪಿಒಗಳಲ್ಲಿ ₹ 281 ಕೋಟಿ ಮೌಲ್ಯದ ಪರಿಕರಗಳ ಮಾರಾಟ, ₹ 67 ಕೋಟಿ ಮೌಲ್ಯದ ಉತ್ಪನ್ನಗಳ ಮಾರಾಟ ಮತ್ತು ಯಂತ್ರೋಪಕರಣಗಳ ಬಾಡಿಗೆಯಿಂದ ₹ 60 ಕೋಟಿ ವಹಿವಾಟು ನಡೆದಿದೆ' ಎಂದರು. 1,262 ಎಫ್‌ಪಿಒಗಳಿಗೆ ಕೇವಲ ₹ 2 ಕೋಟಿ ಅನುದಾನ ಒದಗಿಸಿರುವುದು ಸರಿಯಲ್ಲ. ಇದರಿಂದ ರೈತರಿಗೆ ಅನುಕೂಲ ಆಗುವುದಿಲ್ಲ. ಹೆಚ್ಚಿನ ಅನುದಾನ ಒದಗಿಸಬೇಕು ಎಂದು ಸುನಿಲ್ ಆಗ್ರಹಿಸಿದರು.

ಕೋರಂ ಭರ್ತಿಯಲ್ಲೂ ರಾಜಕೀಯ

ವಿಧಾನಸಭೆ: ಈ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ಬೆಳಿಗ್ಗೆ 9ಕ್ಕೆ ಸದನ ಆರಂಭವಾಗಬೇಕಿತ್ತು. ಸದನದ ಒಳಗಿದ್ದ 20ಕ್ಕೂ ಹೆಚ್ಚು ಮಂದಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ದಿಢೀರ್ ಹೊರ ಹೋಗಿದ್ದರಿಂದ ಅರ್ಧ ಗಂಟೆ ತಡವಾಗಿ ಕಲಾಪ ಆರಂಭವಾಯಿತು.

ಕಾಂಗ್ರೆಸ್‌ನ ಹೆಚ್ಚು ಸದಸ್ಯರು ಸದನದಲ್ಲಿ ಇರಲಿಲ್ಲ. ಇದನ್ನು ಗಮನಿಸಿದ ಬಿಜೆಪಿಯ ಸುನಿಲ್ ಕುಮಾರ್ ತಮ್ಮ ಪಕ್ಷ ಹಾಗೂ ಜೆಡಿಎಸ್‌ನ ಸದಸ್ಯರನ್ನು ಹೊರಕ್ಕೆ ಕರೆದೊಯ್ದರು. 'ಬಿಜೆಪಿಯ ಕೆಲವು ಸದಸ್ಯರಾದರೂ ಸದನದ ಒಳಕ್ಕೆ ಬಂದು ಕೋರಂ ಭರ್ತಿಗೆ ಸಹಕರಿಸಿ' ಎಂದು ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಮನವಿ ಮಾಡಿದರು. ಕಾಂಗ್ರೆಸ್‌ನ 23 ಸದಸ್ಯರು ಸದನಕ್ಕೆ ಬಂದು ಕೋರಂ ಭರ್ತಿ ಆಗುವಾಗ ಅರ್ಧ ಗಂಟೆ ಕಳೆಯಿತು. ಸಭಾಧ್ಯಕ್ಷ ಪೀಠಕ್ಕೆ ಬಂದ ಬಳಿಕವೇ ಬಿಜೆಪಿ, ಜೆಡಿಎಸ್ ಸದಸ್ಯರು ಒಳಕ್ಕೆ ಬಂದರು.

ಅಸಮರ್ಪಕ ಪ್ರಮಾಣ ವಚನ ವಿರುದ್ಧದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿ.ಝಡ್ ಜಮೀರ್ ಅಹ್ಮದ್ ಖಾನ್ ಮತ್ತು ಕೆ.ಎನ್.ರಾಜಣ್ಣ ಸೇರಿದಂತೆ 9 ಸಚಿವರು ಹಾಗೂ 37 ಶಾಸಕರು ಸಂವಿಧಾನದ ಅನುಸಾರ ನಿಗದಿತ ನಮೂನೆಯಲ್ಲಿ ಪ್ರಮಾಣ ವಚನ ಸ್ವೀಕರಿಸಿಲ್ಲ' ಎಂದು ಆಕ್ಷೇಪಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ಒಂಬತ್ತು ಸಚಿವರು ಹಾಗೂ 37 ಶಾಸಕರ ಪ್ರಮಾಣ ವಚನ ಸ್ವೀಕಾರವನ್ನು ಅಸಾಂವಿಧಾನಿಕ' ಎಂದು ಘೋಷಿಸುವಂತೆ ಕೋರಿ ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಭೀಮಪ್ಪ ಗುಂಡಪ್ಪ ಗಡಾದ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

'ಇದು ಪ್ರಜಾಸತ್ತಾತ್ಮಕ ವ್ಯವಸ್ಥೆ. ಸಚಿವರು ಹಾಗೂ ಶಾಸಕರು ಮತದಾರರಿಂದ ಚುನಾಯಿತರಾಗಿದ್ದಾರೆ. ನಿಗದಿತ ನಮೂನೆ ಹೊರತಾಗಿ ಪ್ರಮಾಣ ವಚನ ಸ್ವೀಕರಿಸಿರುವುದು ತಾಂತ್ರಿಕ ಅಂಶವಷ್ಟೇ. ಕೆಲವೊಮ್ಮೆ ಉತ್ಸಾಹದಲ್ಲಿ ಯಾರನ್ನಾದರೂ ಹೆಸರಿಸಬಹುದು. ಅವರು ತಮ್ಮ ಕೆಲಸ ಕಾರ್ಯಗಳನ್ನು ಮಾಡಲಿ. ನಿಮಗೆ ಅಷ್ಟೊಂದು ಅತೃಪ್ತಿಯಿದ್ದರೆ ಮುಂಬರುವ ಚುನಾವಣೆಯಲ್ಲಿ ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿಕೊಳ್ಳಿ. ಯೋಗ್ಯವಾದ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ನಿಮಗಿದ್ದೇ ಇದೆ' ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ ಅರ್ಜಿ ತಿರಸ್ಕರಿಸುತ್ತಿರುವುದಾಗಿ ತಿಳಿಸಿತು.

ಕೋರಿಕೆ ಏನಿತ್ತು?: 'ಪ್ರತಿವಾದಿಗಳಾಗಿರುವ ಸಚಿವರು ಹಾಗೂ ಶಾಸಕರು ಅಸಮರ್ಪಕ ರೀತಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದು ಈ ಕುರಿತು ವಿಚಾರಣೆ ನಡೆಸುವಂತೆ ವಿಧಾನಸಭೆ ಅಧ್ಯಕ್ಷರಿಗೆ ನಿರ್ದೇಶಿಸಬೇಕು. ಸಂವಿಧಾನದ 188ನೇ ವಿಧಿ ಮತ್ತು ಷೆಡ್ಯೂಲ್-3ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ (ದೇವರ ಹೆಸರಿನಲ್ಲಿ) ಪುನಃ ಪ್ರಮಾಣ ವಚನ ಸ್ವೀಕರಿಸಲು ನಿರ್ದೇಶಿಸಬೇಕು. ಇವರೆಲ್ಲಾ ಪ್ರಮಾಣ ವಚನ ಸ್ವೀಕರಿಸಿದ ದಿನದಿಂದ ತಮ್ಮ ಕಚೇರಿ ಮತ್ತು ವಿಧಾನಸಭೆಗೆ ಈತನಕ ಹಾಜರಾಗಿರುವ ಪ್ರತಿದಿನಕ್ಕೆ ಸಂವಿಧಾನದ 193ನೇ ವಿಧಿಯಡಿ ನಿಗದಿಪಡಿಸಿರುವ (ದಿನಕ್ಕೆ ₹ 500) ದಂಡ ಪಾವತಿಸಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಮಹಿಳೆ ಮೇಲೆ ಹಲ್ಲೆ ಪ್ರಕರಣ: ಸಿಪಿಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಈಚೆಗೆ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ, ಹಲ್ಲೆ ನಡೆಸಿದ ಘಟನೆಗೆ ಸಂಬಂಧಿಸಿದಂತೆ ಕಾಕತಿ ಸಿಪಿಐ ವಿಜಯಕುಮಾರ್ ಸಿನ್ನೂರ ಅವರನ್ನು ಅಮಾನತು ಮಾಡಲಾಗಿದೆ.

ಅಪರಾಧ ಕೃತ್ಯ ತಡೆಯುವಲ್ಲಿ ಕರ್ತವ್ಯಲೋಪ ಮಾಡಿದ ಆರೋಪದ ಮೇಲೆ, ಹೈಕೋರ್ಟ್ ನಿರ್ದೇಶನದಂತೆ, ನಗರ ಪೊಲೀಸ್ ಆಯುಕ್ತ ಎಸ್.ಎನ್. ಸಿದ್ರಾಮಪ್ಪ ಈ ಅಮಾನತು ಆದೇಶ ಹೊರಡಿಸಿದ್ದಾರೆ.

ಸಿಪಿಐ ಅಮಾನತು: ಇನ್ನೊಂದು ಪ್ರಕರಣದಲ್ಲಿ ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತಿಗಡೊಳ್ಳಿ ಗ್ರಾಮದಲ್ಲಿ ಕೊಲೆಗೆ ಪ್ರತಿಕಾರವಾಗಿ ರೌಡಿಶೀಟರ್ ಹತ್ಯೆ ನಡೆದಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ್ದು ಕಂಡುಬಂದಿದ್ದರಿಂದ ಸಿಪಿಐ ಮಹಾಂತೇಶ ಹೊಸಪೇಟ ಅವರನ್ನು ಎಸ್ಪಿ ಡಾ.ಭೀಮಾಶಂಕರ ಗುಳೇದ ಅವರು ಅಮಾನತು ಮಾಡಿದ್ದಾರೆ.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೊಗಳ್ಳಿ ಗಣೇಶ್ (ಎಡದಿಂದ ಎರಡನೆಯವರು) ಅವರು 'ಕಥಾನಂತರ' ಪುಸ್ತಕವನ್ನು ಬಿಡುಗಡೆ ಮಾಡಿದರು. (ಎಡದಿಂದ) ನಟರಾಜ್ ಹುಳಿಯಾರ್, ನಟ ಕೆ.ವಿ.ಶಿವಪ್ರಸಾದ್, ದು. ಸರಸ್ವತಿ ಮತ್ತು ರವಿಕುಮಾರ್ ಬಾಗಿ ಭಾಗವಹಿಸಿದ್ದಾರೆ ಪ್ರಜಾವಾಣಿ ಚಿತ್ರ

'ಕಾರ್ಪೊರೇಟ್ ಜಗತ್ತಿಗೆ ಕನ್ನಡ ಕಥಾ ಲೋಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಪರಿಸ್ಥಿತಿಯಲ್ಲಿ ಕನ್ನಡ ಕಥಾ ಲೋಕ ಕಾರ್ಪೊರೇಟ್ ಜಗತ್ತಿಗೆ ಬಂದು ನಿಂತಿದೆ. ಕಥೆಗಳು ಅಲ್ಲಿಯೇ ಹುಟ್ಟಿ, ಅಲ್ಲಿಯೇ ಸಾಯುತ್ತಿವೆ' ಎಂದು ಕಥೆಗಾರ ಮೊಗಳ್ಳಿ ಗಣೇಶ್ ಬೇಸರ ವ್ಯಕ್ತಪಡಿಸಿದರು.

ಸಮತಾ ಚಿಂತನ ಮತ್ತು ಪಲ್ಲವ ಪ್ರಕಾಶನ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಟರಾಜ್ ಹುಳಿಯಾರ್ ಅವರ 'ಕಥಾನಂತರ' ಕೃತಿ ಬಿಡುಗಡೆ ಮಾಡಿ, ತಾವು ಈ ಹಿಂದೆ ಬರೆದಿದ್ದ 'ಒಂದು ಹಳೆಯ ಚಡ್ಡಿ' ಕಥೆ ಹುಟ್ಟಿದ ಬಗೆಯನ್ನು ಹಂಚಿಕೊಂಡರು.

'ಸ್ನಾತಕೋತ್ತರ ಪದವಿ ಮುಗಿಸಿ, ವಸತಿ ನಿಲಯದಿಂದ ಹೊರ ಹೋಗುವ ಹಿಂದಿನ ದಿನ ದುಃಖವಾಗಿತ್ತು. ಆ ವೇಳೆ ಬಿಳಿಯ ಹಾಳೆ ತೆಗೆದುಕೊಂಡು ಕಥೆ ಬರೆಯಲು ಪ್ರಾರಂಭಿಸಿದೆ. ನನ್ನ ಸಂಬಂಧಿಗಳೇ ಕಥೆಯಲ್ಲಿನ ಪಾತ್ರವಾಗಿದ್ದವು. ಆ ಕಥೆಯ ಬಳಿಕ ಕುಟುಂಬದ ಸದಸ್ಯರಿಗೆ ನನ್ನ ಮೇಲೆ ತುಂಬಾ ಸಿಟ್ಟು ಬಂದಿತು. ಇದರಿಂದ ಊರಿನ ಸಂಬಂಧವನ್ನೂ ಕಳೆದುಕೊಂಡೆ. ಆದರೆ, ಈ ಕಥೆಯಿಂದಲೇ ಪ್ರಸಿದ್ಧಿ ಪಡೆದೆ' ಎಂದು ಹೇಳಿದರು.

'ನನ್ನೊಳಗೆ ಪಾತ್ರಗಳು ಸದಾ ಜಗಳ ಮಾಡುತ್ತ ಇರುತ್ತವೆ. ಬರೆಯುವಾಗ ಅದೇ ಪಾತ್ರಗಳು ಬೇರೆ ಬೇರೆ ರೂಪದಲ್ಲಿ ಬರುತ್ತವೆ. ನನ್ನ ಆತ್ಮಕಥೆ ಸಿದ್ಧವಾಗುತ್ತಿದೆ' ಎಂದರು.

ಸಾಮಾಜಿಕ ಹೋರಾಟಗಾರ್ತಿ ದು. ಸರಸ್ವತಿ ತಮ್ಮ 'ಸಣ್ತಿಮ್ಮಿ' ಕಥೆಯ ಬಗ್ಗೆ ಮಾತನಾಡಿ, 'ಪಿತೃಪ್ರಧಾನ ವ್ಯವಸ್ಥೆಯಲ್ಲಿದ್ದ ರಾಮಾಯಣ ಕಾಲದಲ್ಲಿ ಸೀತೆ ಏನೇನು ಹಿಂಸೆ, ಕಷ್ಟ ಅನುಭವಿಸಿರಬಹುದು ಎಂಬುದನ್ನು ಬಹಳ ಮಾರ್ಮಿಕವಾಗಿ ಸಣ್ತಿಮ್ಮಿ ತನ್ನ ಆಡು ಮಾತಿನಲ್ಲಿ ಹೇಳಿದ್ದಾಳೆ. ನಾವು ಪ್ರಕೃತಿಗೆ ಹತ್ತಿರವಾದಷ್ಟೂ ನಮ್ಮ ಒಂಟಿತನ ನಿವಾರಣೆಯಾಗುತ್ತದೆ ಎಂಬುದು ಈ ಕಥೆಯ ಆಶಯ. ನನ್ನೊಳಗಿನ ಬೇಗುದಿಯನ್ನು ಬರೆಯದಿದ್ದರೆ ನಾನು ಕ್ರೂರಿ ಆಗುತ್ತಿದೆ. ಬರವಣಿಗೆ ನನ್ನನ್ನು ನಿರಾಳ ಮಾಡಿದೆ' ಎಂದು ಹೇಳಿದರು.

ಪುಸ್ತಕ ಪರಿಚಯ

- **ಪುಸ್ತಕ:** 'ಕಥಾನಂತರ'
- **ಲೇಖಕ:** ನಟರಾಜ್ ಹುಳಿಯಾರ್
- **ಪುಟಗಳು:** 124
- **ಬೆಲೆ:** ₹ 140
- **ಪ್ರಕಾಶನ:** ಪಲ್ಲವ ಪ್ರಕಾಶನ

ಶ್ರೀಕಂಠೇಶ್ವರ ದೇಗುಲ: ₹2.14 ಕೋಟಿ ಸಂಗ್ರಹ

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು ಜಿಲ್ಲೆ): ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದ 35 ಹುಂಡಿಗಳನ್ನು ಶುಕ್ರವಾರ ತೆರೆದು ಎಣಿಕೆ ಕಾರ್ಯ ನಡೆಸಿದ್ದು, ₹2.14 ಕೋಟಿ ಸಂಗ್ರಹಗೊಂಡಿದೆ.

ಹುಂಡಿಗಳಲ್ಲಿ ₹2,14,52,984 ನಗದು, 98 ಗ್ರಾಂ ಚಿನ್ನ, 4.5 ಕೆ.ಜಿ ಬೆಳ್ಳಿ ಹಾಗೂ 190 ವಿದೇಶಿ ಕರೆನ್ಸಿಗಳು ಲಭ್ಯವಾಗಿವೆ.

ಬ್ಯಾಂಕ್ ಆಫ್ ಬರೋಡಾ ಹಾಗೂ ದೇವಾಲಯದ ಸಿಬ್ಬಂದಿ ಹಾಗೂ ಸ್ತ್ರೀಶಕ್ತಿ ಸಂಘಗಳ 100ಕ್ಕೂ ಹೆಚ್ಚು ಮಹಿಳೆಯರು ಎಣಿಕೆ ಕಾರ್ಯಕ್ಕೆ ನೆರವಾದರು.

ಮುಜರಾಯಿ ತಹಶೀಲ್ದಾರ್ ವಿದ್ಯುಲ್ಲತ, ತಲಕಾಡು ವೈದ್ಯನಾಥೇಶ್ವರ ದೇವಾಲಯದ ಇಒ ವೆಂಕಟೇಶ್ ಪ್ರಸಾದ್, ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಇಒ ಜಗದೀಶ್‌ಕುಮಾರ್, ಎಇಒ ಸತೀಶ್, ಲೆಕ್ಕ ಅಧೀಕ್ಷಕ ಗುರುಮಲ್ಲಯ್ಯ, ಬಿಒಬಿ ಮ್ಯಾನೇಜರ್ ಟಿ.ಕೆ.ನಾಯಕ್ ಉಪಸ್ಥಿತರಿದ್ದರು.

ಮುಸ್ಲಿಮರಿಗೆ 3 ಕ್ಷೇತ್ರ ಕೇಳಿದ್ದೇವೆ: ಜಮೀರ್ ಅಹ್ಮದ್

ಹುಬ್ಬಳ್ಳಿ: 'ಲೋಕಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದವರಿಗೆ ಸ್ಪರ್ಧಿಸಲು ಮೂರು ಕ್ಷೇತ್ರಗಳಲ್ಲಿ ಅವಕಾಶ ನೀಡಬೇಕೆಂದು ಹೈಕಮಾಂಡ್‌ಗೆ ಕೇಳಿದ್ದೇವೆ' ಎಂದು ವಸತಿ ಸಚಿವ ಜಮೀರ ಅಹ್ಮದ್ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬೆಂಗಳೂರು ಸೆಂಟ್ರಲ್, ಹಾವೇರಿ ಹಾಗೂ ಬೀದರ್ ಲೋಕಸಭಾ ಕ್ಷೇತ್ರಗಳನ್ನು ಕೇಳಿದ್ದೇವೆ. ನಮ್ಮ ಬೇಡಿಕೆಯನ್ನು ಪಕ್ಷದ ಹೈಕಮಾಂಡ್ ಮುಂದೆ ಇಟ್ಟಿದ್ದೇವೆ. ಏನು ತೀರ್ಮಾನ ತೆಗೆದುಕೊಳ್ಳುತ್ತದೆಯೋ ನೋಡೋಣ' ಎಂದರು.



ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜು ನಗರದಲ್ಲಿ ಹಮ್ಮಿಕೊಂಡಿದ್ದ 'ಸರ್ಗಮ್' ಉತ್ಸವದಲ್ಲಿ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು

ರಂಜಿಸಿದ 'ಸರ್ಗಮ್' ಸಾಂಸ್ಕೃತಿಕ ಉತ್ಸವ

ಬೆಂಗಳೂರು: ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜು ನಗರದಲ್ಲಿ ಹಮ್ಮಿಕೊಂಡಿದ್ದ ಮೂರು ದಿನಗಳ 'ಸರ್ಗಮ್' ರಾಷ್ಟ್ರ ಮಟ್ಟದ ಅಂತರ್ ಕಾಲೇಜು ಸಾಂಸ್ಕೃತಿಕ ಉತ್ಸವದಲ್ಲಿ 20 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿ, ರಂಜಿಸಿದರು.

'ರಾಮಲೀಲಾ' ವಿಷಯದ ಮೇಲೆ ಕೇಂದ್ರೀಕೃತವಾಗಿದ್ದ ಈ ಉತ್ಸವ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿತು. 304 ಕಾಲೇಜುಗಳ ವಿದ್ಯಾರ್ಥಿಗಳು ಉತ್ಸವದಲ್ಲಿ ಭಾಗವಹಿಸಿದ್ದರು. ಶ್ರೀರಾಮನ ಶಕ್ತಿ ಮತ್ತು ಪ್ರತಿಭೆಯನ್ನು ನೃತ್ಯ ಮತ್ತು ವಿವಿಧ ಕಲಾ ಪ್ರಕಾರಗಳ ಮೂಲಕ ಅನಾವರಣ ಮಾಡಲಾಯಿತು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಚಲನಚಿತ್ರ ನಟ ರಮೇಶ್ ಅರವಿಂದ್, ಕಲೆಯ ಮಹತ್ವವನ್ನು ತಿಳಿಸಿದರು. ಮೂರು ದಿನಗಳ ಉತ್ಸವದಲ್ಲಿ ನೃತ್ಯ, ನಾಟಕ, ಚಿತ್ರಕಲೆ, ಕಿರು ಚಿತ್ರ, ಛಾಯಾಚಿತ್ರ ಸೇರಿ ವಿವಿಧ ಕಾರ್ಯಕ್ರಮಗಳು ನಡೆದವು.

'ರಾಮ ಕಥಾ' ವಿಷಯ ಆಧಾರಿತ ಬೃಹತ್ ನೃತ್ಯ ಪ್ರದರ್ಶನದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿ, ಪ್ರತಿಭೆ ಪ್ರದರ್ಶಿಸಿದರು. 'ರಾಮ ಕಥಾ' ಕಿರಿಯರ ವಿಭಾಗದಲ್ಲಿ ₹ 1 ಲಕ್ಷ ನಗದು ಸಹಿತ ನ್ಯೂ ಹಾರಿಜನ್ ಪದವಿಪೂರ್ವ ಕಾಲೇಜು ಪ್ರಥಮ ಸ್ಥಾನ ಪಡೆದುಕೊಂಡಿತು. ನ್ಯೂ ಹಾರಿಜನ್ ಗುರುಕುಲ ದ್ವಿತೀಯ (₹ 50 ಸಾವಿರ ನಗದು) ಹಾಗೂ ವಿನ್ಸೆಂಟ್ ಪಲ್ಲೊಟ್ಟಿ ಪದವಿಪೂರ್ವ ಕಾಲೇಜು ತೃತೀಯ (₹25 ಸಾವಿರ) ಸ್ಥಾನಪಡೆದುಕೊಂಡಿತು.

'ರಾಮ ಕಥಾ' ಹಿರಿಯರ ವಿಭಾಗದಲ್ಲಿ ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜು ಹಾಗೂ ಜೈನ್ ವಿಶ್ವವಿದ್ಯಾಲಯವು ಪ್ರಥಮ ಸ್ಥಾನದೊಂದಿಗೆ ತಲಾ ₹ 1 ಲಕ್ಷ ನಗದು ಪಡೆದವು. ಕಸ್ತೂರಿ ನಗರದ ನ್ಯೂ ಹಾರಿಜನ್ ಕಾಲೇಜು ದ್ವಿತೀಯ (₹ 50 ಸಾವಿರ) ಹಾಗೂ ಪಿಇಎಸ್ ವಿಶ್ವವಿದ್ಯಾಲಯ ತೃತೀಯ (₹ 25 ಸಾವಿರ) ಸ್ಥಾನ ಪಡೆದುಕೊಂಡಿತು. ಹಿರಿಯರ ವಿಭಾಗದಲ್ಲಿ ಜಯನಗರದ ಜೈನ್ ವಿಶ್ವವಿದ್ಯಾಲಯ ಹಾಗೂ ನ್ಯೂ ಹಾರಿಜನ್ ಎಂಜಿನಿಯರಿಂಗ್ ಕಾಲೇಜು ಸಮಗ್ರ ಪ್ರಶಸ್ತಿಗೆ ಭಾಜನವಾಯಿತು. ಕಿರಿಯರ ವಿಭಾಗದಲ್ಲಿ ನ್ಯೂ ಹಾರಿಜನ್ ಪದವಿ ಪೂರ್ವ ಕಾಲೇಜು ಸಮಗ್ರ ಪ್ರಶಸ್ತಿ ಪಡೆಯಿತು.

ಕೆರೆಗಳ ಒತ್ತುವರಿ ತೆರವಿಗೆ ಕ್ರಮ

ನೆಲ್ಲುಕುಂಟೆ ಗ್ರಾಮದಲ್ಲಿ ಆಯೋಜಿಸಿದ್ದ ಜನತಾದರ್ಶನದಲ್ಲಿ ಜಿಲ್ಲಾಧಿಕಾರಿ

ಪ್ರಜಾವಾಣಿ ವಾರ್ತೆ

ಯಲಹಂಕ: ಅರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೆಲವು ಕೆರೆಗಳ ಒತ್ತುವರಿಯಾಗಿರುವ ಬಗ್ಗೆ ಸ್ಥಳೀಯರಿಂದ ದೂರುಗಳು ಕೇಳಿಬಂದಿದ್ದು, ಕೆರೆಗಳ ಒತ್ತುವರಿ ತೆರವಿಗೆ ಶೀಘ್ರದಲ್ಲೇ ಕ್ರಮಕೈಗೊಳ್ಳಲಾಗುವುದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ ಕೆ.ಎ. ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಡಳಿತ ಹಾಗೂ ಯಲಹಂಕ ತಾಲ್ಲೂಕು ಆಡಳಿತದ ವತಿಯಿಂದ ಅರಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲುಕುಂಟೆ ಗ್ರಾಮದಲ್ಲಿ ಆಯೋಜಿಸಿದ್ದ ಜನತಾದರ್ಶನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

94 ಸಿಸಿ ಅಡಿಯಲ್ಲಿ 120 ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಪ್ರಕ್ರಿಯೆಯ ಸಮಯವನ್ನು ವಿಸ್ತರಣೆ ಮಾಡದೆ ಒಂದು ತಿಂಗಳ ಒಳಗಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ನೆಲ್ಲುಕುಂಟೆ ಗ್ರಾಮಸ್ಥರು ಶಾಸಕ ಎಸ್‌ಆರ್‌.ವಿಶ್ವನಾಥ್ ಅವರಿಗೆ ಮನವಿಪತ್ರ ಸಲ್ಲಿಸಿದರು. ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ.ಕೆ.ಎ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾ ಅಧಿಕಾರಿ ಕಾಂತರಾಜು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಾರಸಂದ್ರದಲ್ಲಿರುವ ಪ್ರಾವಿಡೆಂಟ್ ವೆಲ್‌ವರ್ತ್ ಸಿಟಿ ಅಪಾರ್ಟ್‌ಮೆಂಟ್ ಹಾಗೂ ದಿಬ್ಬೂರು ಸಮೀಪದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯನೀರನ್ನು ಸಂಸ್ಕರಣೆ ಮಾಡದೆ ನೇರವಾಗಿ ಕೆರೆಗಳಿಗೆ ಬಿಡುತ್ತಿರುವುದರಿಂದ ನೀರು ಮಲಿನವಾಗುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ. ಈ ಕುರಿತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿದರು.

ಇಲ್ಲಿನ ಕೆಲವು ಪ್ರತಿಷ್ಠಿತ ಕಾಲೇಜುಗಳ ಬಳಿ ಅಕ್ರಮವಾಗಿ ಡ್ರಗ್ಸ್ ಮಾರಾಟ ಮತ್ತು ವಿದ್ಯಾರ್ಥಿಗಳು ಮಾದಕವಸ್ತುಗಳ ವ್ಯಸನಕ್ಕೆ ದಾಸರಾಗುತ್ತಿರುವ ಬಗ್ಗೆ ನಾಗರಿಕರು ಅಳಲು ತೋಡಿಕೊಂಡಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುವುದು ಎಂದರು.

ಶಾಸಕ ಎಸ್.ಆರ್.ವಿಶ್ವನಾಥ್ ಮಾತನಾಡಿ, 'ರೈತರ ಮತ್ತು ಜನಸಾಮಾನ್ಯರ ಕೆಲಸಗಳು ಸಮಯಕ್ಕೆ ಸರಿಯಾಗಿ ಆಗದ ಕಾರಣ, ಜನಪ್ರತಿನಿಧಿಗಳ ಬಳಿಗೆ ಬರುತ್ತಿದ್ದಾರೆ. ಜನರನ್ನು ಕಚೇರಿಗಳಿಗೆ ಅಲೆದಾಡಿಸದೆ ಅಧಿಕಾರಿಗಳ ಮಟ್ಟದಲ್ಲಿ ಆಗಬೇಕಾದ ಕೆಲಸಗಳನ್ನು ಮಾಡಿಕೊಡಲು ಕಾಳಜಿ ವಹಿಸಬೇಕು' ಎಂದು ತಿಳಿಸಿದರು.

ನೈರುತ್ಯ ರೈಲ್ವೆಗೆ ಸ್ವಚ್ಛತಾ ಪ್ರಶಸ್ತಿ

• ಮಹಮ್ಮದ್ ಶರೀಫ್

ನವದೆಹಲಿ: 'ಕಳೆದ ಒಂಬತ್ತೂವರೆ ವರ್ಷಗಳಲ್ಲಿ 14 ಸಾವಿರ ಕಿ.ಮೀ ರೈಲ್ವೆ ವ್ಯಾಪ್ತಿ ವಿಸ್ತರಿಸಿದೆ. ಹಿಂದಿನ 14 ವರ್ಷಗಳಲ್ಲಿ ಕೇವಲ 1,400 ಕಿ.ಮೀನಷ್ಟು ವ್ಯಾಪ್ತಿಯ ಕಾರ್ಯ ನಡೆದಿದೆ' ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಇಲ್ಲಿನ ಪ್ರಗತಿ ಮೈದಾನದ ಭಾರತ್ ಮಂಟಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ 68ನೇ ರೈಲ್ವೆ ಸಪ್ತಾಹ ಕಾರ್ಯಕ್ರಮದಲ್ಲಿ ಸಾಧಕರಿಗೆ 'ಅತಿ ವಿಶಿಷ್ಟ ಸೇವಾ ಪುರಸ್ಕಾರ' ಪ್ರದಾನ ಮಾಡಿ ಅವರು ಮಾತನಾಡಿದರು.

'2015ರಲ್ಲಿ ರೈಲ್ವೆ ಬಜೆಟ್ ಅನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸಾಮಾನ್ಯ ಬಜೆಟ್ ಜೊತೆ ವಿಲೀನಗೊಳಿಸಿದ್ದರಲ್ಲಿ ದೂರಾಲೋಚನೆ ಇತ್ತು. ಎಲ್ಲರೂ ಈ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರು. ಆದರೆ, ಇದರಿಂದ ಇಲಾಖೆ ಅತ್ಯಂತ ದೊಡ್ಡ ಹೂಡಿಕೆಯ ಸಮಸ್ಯೆ ಸಂಪೂರ್ಣ ಬಗೆಹರಿದಿದೆ. 2014ರಲ್ಲಿ ₹35 ಸಾವಿರ ಕೋಟಿ ಒಟ್ಟು ಬೆಂಬಲ ಬಜೆಟ್ ಸಿಗುತ್ತಿತ್ತು. ಈಗ ಅದು ₹2.40 ಲಕ್ಷ ಕೋಟಿ ಆಗಿದೆ' ಎಂದರು.

ರೈಲ್ವೆ ವಿಭಾಗದ ಕುರಿತು ಎಲ್ಲರೂ ಇಟ್ಟುಕೊಂಡಿದ್ದ ಭರವಸೆ ಈಡೇರಿದೆ. ಪ್ರಧಾನಿಯವರು ಮಾತಿನಂತೆ ರೈಲ್ವೆಗೆ ಸುವರ್ಣ ಯುಗ ಆರಂಭವಾಗಿದೆ ಎಂದು ಹೇಳಿದರು.

ನವದೆಹಲಿಯ ಪ್ರಗತಿ ಮೈದಾನದಲ್ಲಿರುವ ಭಾರತ್ ಮಂಟಪಂನಲ್ಲಿ ಭಾರತೀಯ ರೈಲ್ವೆ ವತಿಯಿಂದ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ 'ಅತಿ ವಿಶಿಷ್ಟ ರೈಲ್ವೆ ಸೇವಾ ಪುರಸ್ಕಾರ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೈರುತ್ಯ ರೈಲ್ವೆ ವಿಭಾಗವು 'ಸ್ವಚ್ಛತಾ ವಿಭಾಗ'ದಲ್ಲಿ ಕೇಂದ್ರ ರೈಲ್ವೆಯೊಂದಿಗೆ ಪ್ರಶಸ್ತಿ ಹಂಚಿಕೊಂಡಿತು. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪ್ರಶಸ್ತಿ ಪ್ರದಾನ ಮಾಡಿದರು. ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ ಕಿಶೋರ್ ಪ್ರಶಸ್ತಿ ಸ್ವೀಕರಿಸಿದರು. ಭಾರತೀಯ ರೈಲ್ವೆ ಮಂಡಳಿ ಅಧ್ಯಕ್ಷೆ ಜಯವರ್ಮಾ ಸಿನ್ಹಾ ಪಾಲ್ಗೊಂಡಿದ್ದರು. –ಪ್ರಜಾವಾಣಿ ಚಿತ್ರ

100 ಸಾಧಕರಿಗೆ ಪ್ರಶಸ್ತಿ ಪ್ರದಾನ: ಸಮಾರಂಭದಲ್ಲಿ ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ರಾಜ್ಯಗಳ 100 ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ರೈಲ್ವೆ ಮಂಡಳಿ ಅಧ್ಯಕ್ಷೆ ಜಯವರ್ಮಾ ಸಿನ್ಹಾ, ಸಿಇಒ ಹಾಗೂ ಸದಸ್ಯರು, ಎಲ್ಲ ವಲಯ ರೈಲ್ವೆಗಳ ಪ್ರಧಾನ ವ್ಯವಸ್ಥಾಪಕರು ಪಾಲ್ಗೊಂಡಿದ್ದರು.

ಭಾರತೀಯ ರೈಲ್ವೆ ಕುರಿತು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು. ಏಕ ಭಾರತ, ಶ್ರೇಷ್ಠ ಭಾರತ ವಿಷಯದ ಅಡಿ ವೈವಿಧ್ಯಮಯ ಸಾಂಸ್ಕೃತಿಕ ನೃತ್ಯ ಪ್ರದರ್ಶನ ನಡೆಯಿತು.

ನೈರುತ್ಯ ರೈಲ್ವೆಗೆ 'ಸ್ವಚ್ಛತೆ'ಯ ಗರಿ: ಕೇಂದ್ರ ಸರ್ಕಾರ ಹಮ್ಮಿಕೊಂಡಿದ್ದ 'ಸ್ವಚ್ಛತಾ ಪಾಕ್ಷಿಕ ಅಭಿಯಾನ'ದ ಸ್ವಚ್ಛತಾ ವಿಭಾಗದಲ್ಲಿ ಪ್ರಥಮ ಸ್ಥಾನವನ್ನು ನೈರುತ್ಯ ರೈಲ್ವೆ ಪಡೆಯಿತು. ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ ಕಿಶೋರ್ ಪ್ರಶಸ್ತಿ ಸ್ವೀಕರಿಸಿದರು.

ಆಕ್ಷೇಪ ಸಲ್ಲಿಸಿದ್ದ ಕೇರಳದ ಅರ್ಜಿ ವಜಾ

'ಕೆಎಸ್‌ಆರ್‌ಟಿಸಿ' ಬಳಸಲು ಅಡ್ಡಿಯಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 'ಕೆಎಸ್‌ಆರ್‌ಟಿಸಿ' ಸಂಕ್ಷೇಪಣಾ ಗುರುತು ಬಳಸಬಾರದು ಎಂದು ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಲ್ಲಿಸಿದ ಮನವಿಯನ್ನು ಮದ್ರಾಸ್ ಹೈಕೋರ್ಟ್ ವಜಾಗೊಳಿಸಿದೆ.

ಕರ್ನಾಟಕವು 1973ರಿಂದ ಕೆಎಸ್‌ಆರ್‌ಟಿಸಿ ಲೋಗೊ ಬಳಸುತ್ತಿರುವ ಬಗ್ಗೆ ದಾಖಲೆಗಳನ್ನು ಚೆನ್ನೈ ಟ್ರೇಡ್ ಮಾರ್ಕ್ ನೋಂದಣಿ ಅಧಿಕಾರಿಗೆ ಸಲ್ಲಿಸಿ 2013ರಲ್ಲಿ ಟ್ರೇಡ್ ಮಾರ್ಕ್ ಪ್ರಮಾಣ ಪತ್ರವನ್ನು ಪಡೆದಿತ್ತು.

ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಚೆನ್ನೈನಲ್ಲಿರುವ ಬೌದ್ಧಿಕ ಆಸ್ತಿ ಮೇಲ್ಮನವಿ ಮಂಡಳಿಯ (ಇಂಟಲೆಕ್ಚುವಲ್ ಪ್ರಾಪರ್ಟಿ ಅಪೀಲ್ ಬೋರ್ಡ್) ಮುಂದೆ ಇದನ್ನು ಪ್ರಶ್ನಿಸಿತ್ತು.

ತಿರುವಾಂಕೂರು ರಾಜ್ಯ ಸಾರಿಗೆ 1937ರಿಂದ ಇತ್ತು. ಕೇರಳ ರಾಜ್ಯ ಉದಯವಾದ ಮೇಲೆ 1965ರಿಂದ ಕೇರಳ ರಾಜ್ಯ ರಸ್ತೆ ಸಾರಿಗೆ ನಿಗಮ ಆರಂಭವಾಯಿತು. ಕೆಎಸ್‌ಆರ್‌ಟಿಸಿ ಲೋಗೊ ಬಳಕೆ ಆರಂಭಿಸಲಾಯಿತು. ಕರ್ನಾಟಕ ರಾಜ್ಯವೂ 'ಕೆಎಸ್‌ಆರ್‌ಟಿಸಿ' ಎಂದೇ ಬಳಸುತ್ತಿದೆ ಎಂದು ಕೇರಳವು ಆಕ್ಷೇಪಿಸಿತ್ತು.

42 ವರ್ಷಗಳಿಂದ ಕೇರಳ ರಾಜ್ಯ ಆರ್‌ಟಿಸಿಯು 'ಕೆಎಸ್‌ಆರ್‌ಟಿಸಿ' ಬಳಸುತ್ತಿರುವುದರಿಂದ ಕರ್ನಾಟಕದ ಟ್ರೇಡ್ ಮಾರ್ಕ್ ಪ್ರಮಾಣ ಪತ್ರವನ್ನು ಅಮಾನ್ಯಗೊಳಿಸಬೇಕು ಎಂದು ವಾದಿಸಿತ್ತು.

ಕರ್ನಾಟಕದ ಲೋಗೊದಲ್ಲಿ 'ಗಂಡಭೇರುಂಡ' ಗುರುತು ಬಳಕೆಗೆ ಹಕ್ಕುಸ್ವಾಮ್ಯ ಪಡೆಯಲಾಗಿದೆ. ಕೇರಳದ ಲೋಗೊದಲ್ಲಿ 'ಆನೆ' ಗುರುತು ಇದ್ದು, ಪ್ರತ್ಯೇಕ ಟ್ರೇಡ್ ಮಾರ್ಕ್ ಹೊಂದಿದೆ ಎಂದು ಕರ್ನಾಟಕ ವಾದ ಮಂಡಿಸಿತ್ತು. ಕೇಂದ್ರ ಸರ್ಕಾರವು ಬೌದ್ಧಿಕ ಆಸ್ತಿ ಮೇಲ್ಮನವಿ ಮಂಡಳಿಯನ್ನು ರದ್ದುಗೊಳಿಸಿ, ಅಲ್ಲಿರುವ ಪ್ರಕರಣಗಳನ್ನು ಮದ್ರಾಸ್ ಹೈಕೋರ್ಟ್‌ಗೆ ವರ್ಗಾಯಿಸಿತ್ತು.

'ವಿಶೇಷ ಪ್ರಕರಣ' ಎಂದು ಪರಿಗಣಿಸಿದ ಮದ್ರಾಸ್ ಹೈಕೋರ್ಟ್ ಉಭಯ ರಾಜ್ಯಗಳ ವಾದ–ಪ್ರತಿವಾದ ಆಲಿಸಿತು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಈ ಹೆಸರು ಹಾಗೂ ಲಾಂಛನವನ್ನು ಕಳೆದ 42 ವರ್ಷಗಳಿಂದ ಬಳಸುತ್ತಿರುವುದು ಕೇರಳ ರಸ್ತೆ ಸಾರಿಗೆ ಸಂಸ್ಥೆಗೆ ತಿಳಿದ ವಿಷಯವಾಗಿದೆ. ಜತೆಗೆ ಈ ಹೆಸರು ಮತ್ತು ಲಾಂಛನ ಎಲ್ಲೆಡೆ ಚಿರಪರಿಚಿತವಾಗಿದ್ದು, ಒಪ್ಪಿತವಾಗಿದೆ. ಹೀಗಾಗಿ ಇದು ಅಮಾನ್ಯ ಎಂದು ಹೇಳುವ ಕೇರಳದ ವಾದದಲ್ಲಿ ಯಾವುದೇ ಹುರುಳಿಲ್ಲ ಎಂದು ಕೇರಳದ ಅರ್ಜಿಯನ್ನು ಡಿ.12ರಂದು ವಜಾಗೊಳಿಸಿತು. ಈ ಮೂಲಕ ಕರ್ನಾಟಕದ ವಾದವನ್ನು ಎತ್ತಿ ಹಿಡಿಯಿತು.

'ಕೇರಳ ರಾಜ್ಯದವರೂ 'ಕೆಎಸ್‌ಆರ್‌ಟಿಸಿ' ಎಂದೇ ಸಂಕ್ಷೇಪಣಾ ಗುರುತು ಬಳಕೆ ಮಾಡುವುದನ್ನು ನಾವು ಆಕ್ಷೇಪಿಸಿರುವುದಿಲ್ಲ. ಅವರೇ ಆಕ್ಷೇಪಣೆ ಸಲ್ಲಿಸಿದ್ದು, ಹೈಕೋರ್ಟ್ ಅರ್ಜಿಯನ್ನು ವಜಾ ಮಾಡಿದೆ. ಇಲ್ಲಿವರೆಗೆ ಮತ್ತು ಇನ್ನು ಮುಂದೆಯೂ ಕೆಎಸ್‌ಆರ್‌ಟಿಸಿ ಎಂದು ಬಳಸಲು ನಮಗೆ ಯಾವುದೇ ಕಾನೂನಿನ ಅಭ್ಯಂತರವಿಲ್ಲ' ಎಂದು ಕರ್ನಾಟಕ ರಾಜ್ಯ ಸಾರಿಗೆ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

ವೈಷ್ಣವಿ ಬೆಂಗಳೂರು 2000 ಗಿನ್ನೀಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರನ್ ಫಾರ್ ದಿ ಸನ್ 5. ಇಲ್ ವೊಲೊ 3, ಎಲ್‌ಫಿನ್ ನೈಟ್ 1
2ನೇ ರೇಸ್: ದಿ ವಿಸ್ಪರ್‌ಕ್ವೈಯಟ್ಲ 5, ಸ್ಟೆಪ್ ಟು ಡೆಸ್ಟಿನಿ 3. ಡೊಮಿನ 6
3ನೇ ರೇಸ್: ಬ್ರೇಝ್ ಬ್ಲಸ್ಟರ್ 2, ಟ್ರಯಾಂಫಂಟ್ 1, ಫೇರ್ ಕೌನ್ಸೆಲ್ 8
4ನೇ ರೇಸ್: ಏರ್‌ಡಿಸ್ಟೆ 1, ಅನಾಕಿನ್ 7, ಸೊಲೊ ಪ್ರಿನ್ಸ್ 2
5ನೇ ರೇಸ್: ಸಾಂಟೊರಿನೊ 3, ಫಾರೆಸ್ಟಿ 1, ಸಿರೆನಿಯಸ್ 4
6ನೇ ರೇಸ್: ಟಚ್ ಆಫ್ ಗ್ರೇ 6. ನೈಟ್ ಚಾರ್ಮರ್ 3. ಷಗಾಲ್ 2
7ನೇ ರೇಸ್: ಇಂಡಿಯನ್ ಬ್ಲೂಸ್ 3, ಸದರ್ನ್ ಫೋರ್ಸ್ 2, ಸಿಲ್ವರ್ ಸ್ವಿಫ್ಟ್ 5
8ನೇ ರೇಸ್: ಡಬಲ್ ವಿಷನ್ 7, ಸ್ಲಿಂಗ್ ಶಾಟ್ 2, ರಷ್ಯನ್ ರೊಮಾನ್ಸ್ 9

ಉತ್ತಮ ಬೆಟ್: ಇಂಡಿಯನ್ ಬ್ಲೂಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಸರಿ ಯಾವುದು ತಪ್ಪು ಯಾವುದು ತಿಳಿಯದೆ ಮಾಡಿದ ತಪ್ಪಿಗೆ ಘೋರವಾಗಿ ಶಿಕ್ಷಿಸಿದರೆ ಅವರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ

ಬಯ್ಯುವುದು ಹೇಗೆ?

ಡಾ. ವಿರೂಪಾಕ್ಷ ದೇವರಮನಿ

ನಾವು ಹೆಚ್ಚು ಕಷ್ಟಪಡದೇ ಕಲಿತುಕೊಳ್ಳುವ ಪದಗಳೆಂದರೆ ಬೈಗುಳ. ಚಿಕ್ಕಂದಿನಿಂದ ಕೇಳಿಸಿಕೊಂಡು ಬೆಳೆದ ಹಲವಾರು ಬೈಗುಳಗಳು ನಮ್ಮ ನೆನಪಿನ ಡಿಕ್ಷನರಿಯಲ್ಲಿ ತಂತಾನೆ ಸೇರಿಕೊಂಡು ಬಿಟ್ಟಿರುತ್ತವೆ. ಸಂದರ್ಭಾನುಸಾರ ಸರಾಗವಾಗಿ ನಾಲಿಗೆಗೆ ಬಂದು ಬಿಟ್ಟಿರುತ್ತವೆ. ಆದರೂ ಬಯ್ಯುವಾಗ ನಾವು ಜಾಗ್ರತೆ ಮಾಡಿಕೊಳ್ಳಬೇಕಾಗುತ್ತದೆ. Taste your words before you serve them to others ಎನ್ನುವ ಮಾತಿದೆ. ನಮಗೆ ಯಾವ ಶಬ್ಧಗಳನ್ನು ಕೇಳಿಸಿಕೊಳ್ಳಲು ಕಷ್ಟವಾಗುತ್ತದೆಯೋ ಸಾಧ್ಯವಾದಷ್ಟು ಆ ಶಬ್ದಗಳನ್ನು ಉಪಯೋಗಿಸದಿರುವುದು ಒಳಿತು.

ಸಾಮಾನ್ಯವಾಗಿ ಅಮ್ಮಂದಿರ ಸಿಟ್ಟು, ಮಕ್ಕಳಿಗೆ ಮೂಲವಾಗಿರುತ್ತವೆ. ಕೆಲಸದ ಒತ್ತಡದಲ್ಲಿ ಅಸಹಾಯಕ ಜೀವಗಳೇ ಬೈಗುಳಗಳಿಗೆ ಬಲಿಯಾಗುತ್ತವೆ. ಕೆಲವೊಮ್ಮೆ ಬೈಯ್ಯುವುದು ಅನಿವಾರ್ಯವಲ್ಲದಿದ್ದರೂ ಒತ್ತಡದಲ್ಲಿ ಬಾಯಿಮೀರಿ ದಾಟಿರುತ್ತವೆ. ಮಕ್ಕಳ ಮೇಲಿನ ಪರಿಣಾಮ ಏನಾಗಬಹುದು ಗೊತ್ತೆ?

ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡಿಯೂ ಯಾರಾದರೂ ಬೈದರೆ ನೋವಾಗುವುದು ಸಹಜ. ಬಯ್ಯುವ ವ್ಯಕ್ತಿಗೆ ಕೇಳಿಸಿಕೊಳ್ಳುವ ವ್ಯವಧಾನ ಇದ್ದರೆ ವಾಸ್ತವದ ವಿಚಾರಗಳನ್ನು ತಿಳಿಸಿ ಹೇಳಬೇಕು. ಆದರೆ ಕೋಪದಲ್ಲಿರುವ ವ್ಯಕ್ತಿ ಇದನ್ನು ಸಮಜಾಯಿಸಿ ಎಂದು ತಿಳಿದುಕೊಳ್ಳುವ ಅಪಾಯವಿದ್ದರೆ ಸುಮ್ಮನಿರುವುದು ಒಳಿತು. ಅಲ್ಲಿನ ವಾತಾವರಣ ತಣ್ಣಗಾದ ಮೇಲೆ ವಾಸ್ತವಾಂಶವನ್ನು ತಿಳಿಸಲು ಪ್ರಯತ್ನಿಸಬಹುದು.

ಮಕ್ಕಳನ್ನು ಬಯ್ಯುವಾಗ ಜಾಗ್ರತೆಯಿರಲಿ

ಬೆಳೆಯುವ ಮಕ್ಕಳಿಗೆ ಮೆಚ್ಚುಗೆ ಮಾತುಗಳು ಅವರ ಆತ್ಮ ವಿಶ್ವಾಸಕ್ಕೆ ಟಾನಿಕ್ ಇದ್ದ ಹಾಗೆ. ತಪ್ಪು ಮಾಡಿದಾಗ ಬೈದು ಸರಿದಾರಿಗೆ ತರಬೇಕು. ಮಕ್ಕಳು ಮೊದಲ ಸಲ ತಪ್ಪು ಮಾಡಿದಾಗ ನಾವು ಬಳಸುವ ಶಬ್ದಗಳು ಕಠೋರವಾಗಿರದಿರಲಿ. ಸರಿ ಯಾವುದು ತಪ್ಪು ಯಾವುದು ತಿಳಿಯದೆ ಮಾಡಿದ ತಪ್ಪುಗಳನ್ನು ಘೋರವಾಗಿ ಶಿಕ್ಷಿಸಿದರೆ ಅವರು ಮಾನಸಿಕವಾಗಿ ಕುಗ್ಗಿ ಹೋಗುತ್ತಾರೆ. ಪ್ರತಿ ಕೆಲಸ ಮಾಡುವಾಗ ಹೆದರುತ್ತಾರೆ. ಆ ಭಯದಲ್ಲಿ ಹೆಚ್ಚು ತಪ್ಪುಗಳನ್ನು ಮಾಡುತ್ತಾರೆ. ಮಕ್ಕಳು ತಪ್ಪು ಮಾಡಿದಾಗ, ಸರಿ ಮಾಡುವುದು ಹೇಗೆಂದು ತಿಳಿಸಿಕೊಡಿ. ಯಾವುದೇ ಕಾರಣಕ್ಕೂ ನೀನು ಅಪ್ರಯೋಜಕ, ನಿನ್ನಿಂದ ಏನೂ ಮಾಡಲು ಸಾಧ್ಯವಿಲ್ಲ, ನೀನು ಉದ್ಧಾರವಾಗಲ್ಲ, ನನಗೆ ಮುಖ ತೋರಿಸಬೇಡ, ನೀನು ಬದುಕಿರಲು ನಾಲಾಯಕ್ ಎನ್ನುವಂತಹ ವಾಕ್ಯಗಳನ್ನು ಬಳಸಬೇಡಿ. ಕೋಪದ ಭರದಲ್ಲಿ ಮಗುವಿನ ಆತ್ಮವಿಶ್ವಾಸವನ್ನು ಕೊಲ್ಲುವುದು ತರವಲ್ಲ.

ಮಕ್ಕಳನ್ನು ಬಯ್ಯದೇ ಬೆಳೆಸುವುದು ಅತಿ ಕಷ್ಟ. ಅದರಲ್ಲೂ ಪ್ರತಿದಿನ ಬೆಳಿಗ್ಗೆ ಮಕ್ಕಳನ್ನು ಎಬ್ಬಿಸಿ, ರೆಡಿ ಮಾಡಿ, ತಿನ್ನಿಸಿ ಶಾಲೆಯ ವಸ್ತುಗಳನ್ನು ಒಟ್ಟು ಮಾಡಿ ಶಾಲೆಗೆ ಕಳಿಸುವಷ್ಟರಲ್ಲಿ ತಾಯಂದಿರ ತಾಳ್ಮೆ ಕಳೆದು ಹೋಗಿ ಹೆಚ್ಚಿನ ಮನೆಗಳಲ್ಲಿ ಬೈಗುಳ ತಾರಕಕ್ಕೇರಿರುತ್ತದೆ. ಮಕ್ಕಳು ಶಾಲೆಗೆ ಹೋದ ತಕ್ಷಣ ಉಸ್ಸಪ್ಪಾ ಎಂದು ಕೂತು, ಮಕ್ಕಳಿಗೆ ಬೈದು ಕಳಿಸಿದ್ದನ್ನು ನೆನೆದು ಮತ್ತೆ ಕಣ್ಣೀರಾಗುತ್ತಾರೆ. ಬಹುಶಃ ಮನೆಯ ಜವಾಬ್ದಾರಿಗಳನ್ನು ಮಕ್ಕಳ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುತ್ತಿದ್ದೀನೋ ಇಲ್ಲವೋ ಎನ್ನುವ ಆತಂಕ. ಮಕ್ಕಳು ಸರಿಯಾಗಿ ಬೆಳೆಯುತ್ತಿಲ್ಲವೇನೋ ಎನ್ನುವ ಭಯ. ಮನೆಯ ಎಲ್ಲ ಕೆಲಸಗಳನ್ನು ನಾನೊಬ್ಬಳೇ ಮಾಡುತ್ತಿದ್ದೇನೆ. ಇತರರು ಸಹಾಯ ಮಾಡುತ್ತಿಲ್ಲವೆನ್ನುವ ಅಸಹನೆ. ಎಲ್ಲ ಕೆಲಸಗಳನ್ನು ಮುಗಿಸಿ ತಾನೂ ಕೆಲಸಕ್ಕೆ ಹೊರಡಬೇಕಾದ ಅನಿವಾರ್ಯತೆ. ಎಲ್ಲ ಒತ್ತಡಗಳು ಒಟ್ಟಾದಲ್ಲಿ ಪರಿಣಾಮ ಬೈಗುಳಗಳು.

ಪೋಷಕರಿಗೆ ಕೆಲವು ಸಲಹೆಗಳು

- ಮಕ್ಕಳ ಪ್ರತಿಯೊಂದು ಕೆಲಸಗಳನ್ನು ನೀವೇ ಮಾಡದೆ ಆಯ್ದ ಕೆಲಸಗಳನ್ನು ಅವರೇ ಮಾಡಿಕೊಳ್ಳಲಿ.
- ಮನೆಯ ಇತರ ಸದಸ್ಯರ ಸಹಕಾರ ಪಡೆದುಕೊಳ್ಳಿ. ನಿಮಗೆ ಯಾವ ರೀತಿಯ ಸಹಕಾರ ಬೇಕು ಎಂದು ಸ್ಪಷ್ಟವಾಗಿ ತಿಳಿಸಿ.
- ಎಲ್ಲಾ ಕೆಲಸಗಳನ್ನು ಮನೆಯ ಸದಸ್ಯರ ಜೊತೆ ಹಂಚಿಕೊಳ್ಳಿ.
- ಇತರ ಮಕ್ಕಳ ಜೊತೆ ನಿಮ್ಮ ಮಕ್ಕಳನ್ನು ಹೋಲಿಸಿ ಆತಂಕ ಬೇಡ

ಬೈಗುಳ ಮತ್ತು ಮಕ್ಕಳ ಮನಸ್ಸು

- ಮನಸ್ಸನ್ನು ನೋಯಿಸುವ ಮತ್ತು ನಿಂದಿಸುವ ಬೈಗುಳ 'ಭಾವನಾತ್ಮಕ ಶೋಷಣೆ'ಯಾಗುತ್ತದೆ.
- ನಿರಂತರ ಬೈಗುಳ ಅವರ ಆತ್ಮವಿಶ್ವಾಸವನ್ನು ಕುಗ್ಗಿಸಬಹುದು.
- ಕೀಳರಿಮೆ, ಆತ್ಮ ನ್ಯೂನ್ಯತೆ, ಅಪರಾಧಿ ಪ್ರಜ್ಞೆ ಬೆಳೆಸುತ್ತದೆ.
- ಖಿನ್ನತೆ, ಆತಂಕ, ಗೀಳು, ಮನೋಬೇನೆಗಳಿಗೆ ದಾರಿ ಮಾಡಿಕೊಡಬಹುದು.
- ಆತ್ಮವಿಶ್ವಾಸದ ಖನಿಗಳಾಗಿಸಿ.

ಮಕ್ಕಳಿಗೆ ಬೈಗುಳ ಹೇಗಿರಬೇಕು

- ತಪ್ಪಿಗೆ ತಕ್ಕಂತೆ ಇರಲಿ.
- ಹಳೆಯ ತಪ್ಪುಗಳನ್ನು ನೆನಪಿಸುವುದು ಬೇಡ.
- ಮನೆಯ ಸದಸ್ಯರೆಲ್ಲಾ ಒಟ್ಟಿಗೆ ಸೇರಿ ಬಯ್ಯುವುದು ಬೇಡ.
- ಅನಿವಾರ್ಯವಾಗದಿದ್ದಲ್ಲಿ ಎಲ್ಲರ ಸಮ್ಮುಖದಲ್ಲಿ ಬಯ್ಯದಿರಿ.
- ಮಕ್ಕಳು ಮಾಡಿದ ತಪ್ಪನ್ನು ತಿದ್ದಿಕೊಂಡು ಸರಿಪಡಿಸಿಕೊಳ್ಳುವಷ್ಟು ಕೋಪ ತೋರಿಸಿ.
- ನಿಮ್ಮ ಬೈಗುಳ ಅವರಲ್ಲಿ ನಿರಂತರ ಭಯ ಹುಟ್ಟಿಸಿ ಹೆಚ್ಚು ತಪ್ಪುಗಳನ್ನು ಮಾಡಿಸದಿರಲಿ.
- ನಿಮ್ಮ ಬೈಗುಳ ಅವರ ಅಂತರಾತ್ಮದ ಧ್ವನಿಗಳಾಗಿ ಬಿಡುತ್ತವೆ. 'ನೀನು ಅಪ್ರಯೋಜಕ, ನಿನ್ನಿಂದ ಏನೂ ಸಾಧನೆ ಮಾಡಲಾಗುವುದಿಲ್ಲ' 'ನೀನು ನನಗೆ ತಕ್ಕನಾದ ಮಗನಲ್ಲ' ಈ ರೀತಿಯ ನೋವುಂಟು ಮಾಡುವ ಬೈಗುಳಗಳು ಸಲ್ಲ.

ಹೆತ್ತವರ ಮನಸ್ಥಿತಿ ಮತ್ತು ಬೈಗುಳ

ಹೆತ್ತವರ ಮನಸ್ಥಿತಿ ಸರಿ ಇಲ್ಲದಿದ್ದರೆ, ಅತಿಯಾಗಿ ಸುಸ್ತಾಗಿದ್ದರೆ, ದುಶ್ಚಟಗಳ ಅಭ್ಯಾಸವಿದ್ದರೆ, ಮಕ್ಕಳು ನಿತ್ಯ ಮಾಡುವ ಚಟುವಟಿಕೆಗಳಲ್ಲೇ ಹೆಚ್ಚು ತಪ್ಪುಗಳು ಕಾಣತೊಡಗುತ್ತವೆ. ಅಲಕ್ಷ್ಯ ಮಾಡಬಹುದಾದ ವಿಚಾರಗಳಿಗೂ ಮಕ್ಕಳನ್ನು ದೂಷಿಸುವಂತಾಗಬಹುದು. ಒಂದು ವೇಳೆ ನೀವು ಪದೇ ಪದೇ ತಾಳ್ಮೆ ಕಳೆದುಕೊಳ್ಳುವುದು ಮಕ್ಕಳಿಗೆ ಬಯ್ಯುವಂತಾಗುತ್ತಿದ್ದಾರೆ ನೀವು ಆಪ್ತ ಸಮಾಲೋಚನೆಯ ಸಹಾಯ ಪಡೆದುಕೊಳ್ಳಬಹುದು. ಮಹಿಳೆಯರಲ್ಲಿ ಚಿಕಿತ್ಸೆ ಪಡೆಯದ ಮಾನಸಿಕ ಸ್ಥಿತಿಗಳು, ರಕ್ತ ಹೀನತೆ, ಮುಟ್ಟಿನ ಸಂಬಂಧಿ ಮಾನಸಿಕ ಒತ್ತಡಗಳು ಹಾಗೆಯೇ ದಾಂಪತ್ಯವಿರಸ, ಕೌಟುಂಬಿಕ ಕಲಹಗಳು, ಅತ್ತೆ ಸೊಸೆ ಮನಸ್ತಾಪಗಳು, ಹೊಂದಾಣಿಕೆ ಸಮಸ್ಯೆಗಳು ಇತ್ಯಾದಿ ಕೋಪ ಹೆಚ್ಚಾಗಲು ಕಾರಣವಾಗಿರುತ್ತದೆ. ಅಸಹಾಯಕತೆಯಿಂದ ಕೂಡಿದ ಅವರ ಕೋಪ ಚಿಕಿತ್ಸೆಯಿಂದ ಗಣನೀಯವಾಗಿ ಕಡಿಮೆಯಾಗಬಹುದು.

ಬೈಸಿಕೊಳ್ಳುವುದು ಹೇಗೆ?

ಬೈಸಿಕೊಳ್ಳುವುದನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳಿ :-

- ಬೈಸಿಕೊಳ್ಳುವುದರ ಭಯದಲ್ಲಿ ನಾವು ಕೆಲಸಗಳನ್ನು ಮತ್ತಷ್ಟು ಜಾಗ್ರತೆಯಿಂದ, ವಿಭಿನ್ನವಾಗಿ ಮಾಡುವುದರಿಂದ ಉತ್ಕೃಷ್ಟತೆಯನ್ನು ಬೆಳೆಸಿಕೊಳ್ಳಬಹುದು.
- ನಾವು ಮಾಡಿದ ಕೆಲಸದಲ್ಲಿನ ಲೋಪವನ್ನು ಯಾರಾದರೂ ಖಂಡಿಸಿ ಬೈದರೆ, ಅದು ನಾವು ಆ ದಿನ ಮಾಡಿದ ಕೆಲಸದಲ್ಲಿನ ತಪ್ಪಿಗೆ ಬೈದದ್ದು ಎಂದು ಪರಿಗಣಿಸಬೇಕೇ ವಿನಃ, ನಮ್ಮ ವ್ಯಕ್ತಿತ್ವದ ಕುರಿತಾದ ವಿಶ್ಲೇಷಣೆಯಲ್ಲ ಎಂದು ತಿಳಿದುಕೊಳ್ಳಬೇಕು.
- ಅಕಾರಣವಾಗಿ ಯಾರಾದರೂ ಅವಮಾನಿಸಲೆಂದೇ ಬಯ್ಯುತ್ತಿದ್ದಾರೆ ಎಂದು ತಿಳಿದರೆ, ವಿಚಲಿತರಾಗಬೇಡಿ.

ನೀವು ಏನೇ ಮಾಡಿದರೂ ಒಳಿತನ್ನು ಗುರುತಿಸದೆ, ಎಲ್ಲದಕ್ಕೂ ಬೈಯುತ್ತಿರುವವರು ನಿಮ್ಮ ಸುತ್ತ ಇರಬಹುದು. ಅವರನ್ನು ಹಾಗೆಯೇ ಒಪ್ಪಿಕೊಳ್ಳಿ. ಅವರ ಕೋಪ - ಬೈಗುಳ ಅವರ ವ್ಯಕ್ತಿತ್ವವನ್ನು ಸೂಚಿಸುತ್ತದೆಯೇ ವಿನಃ ನಿಮ್ಮ ಕುರಿತಲ್ಲ. ಒಂದು ವೇಳೆ ನೀವು ಅಲಕ್ಷಿಸಿಯೂ ನಿಮಗೆ ಹಾನಿ ಮಾಡುವ ಹಾಗೆ ಅವರ ದೂಷಿಸುವ ಪ್ರವೃತ್ತಿ ಮುಂದುವರಿದರೆ ಸ್ಥಳ ಬದಲಾಯಿಸಿ.

ಬೈಯುವುದು ಬೈಸಿಕೊಳ್ಳುವುದು ಬದುಕಿನ ಭಾಗವೇ ಆಗಿರುವುದರಿಂದ ಪ್ರೀತಿಯ ಬೈಗುಳಗಳನ್ನು ಹೆಚ್ಚಿಸಿಕೊಳ್ಳೋಣ. ಯಾರಿಂದಲೂ ಬೈಸಿಕೊಳ್ಳದಂತೆ ಕೆಲಸ ಮಾಡೋಣ. ನಮ್ಮ ಕುರಿತಾದ ಕಾಳಜಿ ನಾವು ಮಾಡುತ್ತಿಲ್ಲವೆಂದು ಬಯ್ಯುವ ಸ್ನೇಹಿತರು, ಬಂಧುಗಳು ಇರುವಷ್ಟು ದಿನ ಬದುಕು ಸುಂದರ.

ಕ್ರಿಸ್ಮಸ್ ಸಂಭ್ರಮ

ಮನೆಯಲ್ಲಿಯೇ ಮಾಡಿ, ರುಚಿಕರ ಕೇಕು

ಕ್ರೈಸ್ತರ ಸಂಭ್ರಮ ಇಮ್ಮಡಿಗೊಳಿಸುವ ಕ್ರಿಸ್ಮಸ್‌ಗೆ ಬೆರಳೆಣಿಕೆಯಷ್ಟು ದಿನಗಳು ಬಾಕಿ ಇದ್ದು, ಈಗಾಗಲೇ ಎಲ್ಲರೂ ತಯಾರಿ ಆರಂಭಿಸಿದ್ದಾರೆ. ಕ್ರಿಸ್ಮಸ್ ಅಂದ ತಕ್ಷಣ ಥಟ್ಟನೆ ನೆನಪಾಗುವುದು ಪ್ಲಮ್ ಕೇಕ್, ಪ್ಲೇನ್ ಪ್ಲಮ್ ಕೇಕ್ ಹಾಗೂ ರೋಸ್ ಕುಕಿಸ್ ಸ್ನೇಹಿತರು, ಸಂಬಂಧಿಕರಿಗೆ ಈ ಕೇಕ್‌ಗಳನ್ನು ನೀಡುವ ಮೂಲಕ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ. ಹಾಗಾದ್ರೆ ಮನೆಯಲ್ಲೆ ರುಚಿಕರವಾಗಿ ಹಾಗೂ ಸುಲಭವಾಗಿ ಕೇಕ್ ಮಾಡುವ ವಿಧಾನ ತಿಳಿಸಿದ್ದಾರೆ ಗೌರಮ್ಮ ಕಟ್ಟಿಮನಿ

ನಳಪಾಕ

ಪ್ಲಮ್ ಕೇಕ್

ಬೇಕಾಗುವ ಸಾಮಗ್ರಿಗಳು: ಅರ್ಧ ಕೆಜಿ ಮೈದಾ ಹಿಟ್ಟು, 2 ಮೊಟ್ಟೆ, ಸಕ್ಕರೆ ಪುಡಿ, ಚೆರ್ರಿ, ಡ್ರೈಫ್ರೂಟ್ಸ್, ಫ್ರೂಟಿ ಫ್ರೂಟಿ, ಹಾಲು, ಬೇಕಿಂಗ್ ಪೌಡರ್, ಬೇಕಿಂಗ್ ಸೋಡಾ, ವೆನಿಲಾ ಎಸ್ಸೆನ್ಸ್, ಚಾಕಲೇಟ್ ಪೌಡರ್ ಡ್ರೈಫ್ರೂಟ್ಸ್ ಎಲ್ಲವೂ ತಲಾ 50ಗ್ರಾಂನಷ್ಟು ಆರೆಂಜ್ ಜ್ಯೂಸ್‌ನಲ್ಲಿ ರಾತ್ರಿ ನೆನಿಸಿಡಬೇಕು.

ಮಾಡುವ ವಿಧಾನ: ಮೊಟ್ಟೆಯನ್ನು ಚೆನ್ನಾಗಿ ಬೀಟ್ ಮಾಡಿ, ನಂತರ ಅದಕ್ಕೆ 300 ಗ್ರಾಂ ಸಕ್ಕರೆ ಪುಡಿ ಹಾಕಿ ಕಲಿಸಿ, ಅದಕ್ಕೆ ಅರ್ಧ ಕಪ್ ಹಾಲು ಬೆರೆಸಿ ಮತ್ತೆ ಕಲಿಸಬೇಕು. ನಂತರ ಮೈದಾ ಹಿಟ್ಟನ್ನು ಸಾಣಿಸುತ್ತಾ ಈ ಮುಂಚೆ ತಯಾರಿಸಿದ ಸಕ್ಕರೆ ಪುಡಿಯ ಮೇಲೆ ಮೆಲ್ಲಗೆ ಹಾಕುತ್ತಾ ಕಲಿಸಬೇಕು, ಇದಕ್ಕೆ ಅರ್ಧ ಚಮಚ ಬೇಕಿಂಗ್ ಪೌಡರ್, ಅರ್ಧ ಚಮಚ ಬೇಕಿಂಗ್ ಸೋಡಾ, ವೆನಿಲಾ ಎಸ್ಸೆನ್ಸ್, ಸ್ವಲ್ಪ ಚಾಕಲೇಟ್ ಪೌಡರ್ ಹಾಕಿ ಅರ್ಧ ಗಂಟೆವರೆಗೂ ಚೆನ್ನಾಗಿ ಕಲಿಸಬೇಕು. ನಂತರ ಅದನ್ನು ಕುಕ್ಕರ್ ಅಥವಾ ಓವನ್‌ನಲ್ಲಿ ಇಡುವ ಮುನ್ನ ಡ್ರೈ ಫ್ರೂಟ್ಸ್ ಅನ್ನು ಕೇಕ್ ಮಾಡುವ ಹಿಟ್ಟಿಗೆ ಮಿಕ್ಸ್ ಮಾಡಿ ನಿಮಗೆ ಬೇಕಾದ ಆಕಾರದ ಡಬ್ಬಿಗಳಲ್ಲಿ(ಶೇಪ್) ಕೆಳಗೆ ಬಟರ್ ಪೇಪರ್ ಹಾಕಿ, ಸ್ವಲ್ಪ ತುಪ್ಪ ಸವರಿ ಮೇಲೆ ಒಂಚೂರು ಮೈದಾ ಹಿಟ್ಟು ಹಾಕಿಡಬೇಕು.

ನಂತರ ಖಾಲಿ ಕುಕ್ಕರ್‌ನಲ್ಲಿ ಸ್ಟ್ಯಾಂಡ್ ಇಟ್ಟು, ಹೆಚ್ಚಿನ ಪ್ರಮಾಣದಲ್ಲಿ ಕಾಯಿಸಿ, ನಂತರ ಉರಿ ಕಡಿಮೆ ಮಾಡಬೇಕು. ಈಗ ಡಬ್ಬಿಯನ್ನು ಸ್ಟ್ಯಾಂಡ್ ಮೇಲಿಟ್ಟು, ಕುಕ್ಕರ್‌ನ ಸಿಟಿ ತೆಗೆದು ಮುಚ್ಚಳವನ್ನು ಹಾಕಬೇಕು. ಒಂದು ಗಂಟೆವರೆಗೆ ಬೇಯಿಸಿ ನಂತರ ತಣ್ಣಗಾಗಲು ಬಿಡಬೇಕು. ಮೇಲೆ ಒಣದ್ರಾಕ್ಷಿ, ಗೋಡಂಬಿ ಹಾಗೂ ಪಿಸ್ತಾ ಹಾಕಿ ಅಲಂಕಾರ ಮಾಡಿದರೆ ಪ್ಲಮ್ ಕೇಕ್ ತಿನ್ನಲು ರೆಡಿ. ಇದನ್ನು 15 ದಿನಗಳವರೆಗೆ ಇಟ್ಟು ತಿನ್ನಬಹುದು.

ರೋಸ್ ಕುಕಿಸ್

ಬೇಕಾಗುವ ಸಾಮಗ್ರಿಗಳು: ಅರ್ಧ ಕೆಜಿ ಮೈದಾ ಹಿಟ್ಟು, 4 ಮೊಟ್ಟೆ, 250 ಗ್ರಾಂ ಕೆಜಿ ಸಕ್ಕರೆ ಪುಡಿ, ಏಲಕ್ಕಿ, ವೆನಿಲಾ, 1 ಕಪ್ ಹಾಲು

ಮಾಡುವ ವಿಧಾನ: ಮೊದಲಿಗೆ ಮೊಟ್ಟೆಯನ್ನು ಒಂದು ಬೌಲ್‌ಗೆ ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಬೇಕು, ನಂತರ ಮೈದಾ ಹಿಟ್ಟನ್ನು ಸಾಣಿಸಿ, ಅದಕ್ಕೆ ಮಿಕ್ಸ್ ಮಾಡಿಟ್ಟುಕೊಂಡ ಮೊಟ್ಟೆ, ಸಕ್ಕರೆ ಪುಡಿ, ಪುಡಿ ಮಾಡಿದ ಏಲಕ್ಕಿ ಅಥವಾ ವೆನಿಲಾ ಎಸ್ಸೆನ್ಸ್, ಹಾಲು ಜೊತೆಗೆ ಅಗತ್ಯ ಇದ್ದಲ್ಲಿ ನೀರು ಹಾಕಿ ದೋಸೆ ಹಿಟ್ಟಿನ ಹದಕ್ಕೆ ಕಲಿಸಿ ನಾಲ್ಕೈದು ಗಂಟೆ ನೆನೆಯಲು ಬಿಡಬೇಕು.

ನಂತರ ಗ್ಯಾಸ್‌ನ ಎರಡು ಒಲೆಗಳ ಮೇಲೆ ಎರಡು ಬಾಣಲಿಯಲ್ಲಿ ಎಣ್ಣೆ ಕಾಯಲು ಇಡಬೇಕು. ಒಂದರಲ್ಲಿ ರೋಸ್ ಕುಕಿಸ್ ಮಾಡುವ ಎರಡು ಸಾಚಾಗಳನ್ನು ಕಾಯಿಸಬೇಕು, ನಂತರ ಕಾದ ಸಾಚಾ ಮೇಲೆ ಹಿಟ್ಟನ್ನು ಹಾಕುತ್ತಾ ಎಣ್ಣೆಯಲ್ಲಿ ಬಿಡಬೇಕು. ಎಣ್ಣೆಯಲ್ಲಿ ಸರಿಯಾಗಿ ಬೆಂದ ನಂತರ ಅದು ಸಾಚಾದಿಂದ ಬೇರ್ಪಡುತ್ತದೆ. ಮತ್ತೆ ಸಾಚಾವನ್ನು ಕಾಯುತ್ತಿರುವ ಎಣ್ಣೆಯಲ್ಲಿ ಬಿಡಬೇಕು. ಕಾದಿರುವ ಮತ್ತೊಂದು ಸಾಚಾದಲ್ಲಿ ಹಿಟ್ಟನ್ನು ಹಾಕಿ ಮತ್ತೊಂದು ಬಾಣಲಿಗೆ ಹಾಕಬೇಕು. ಹೀಗೆ ಮಾಡುತ್ತಾ ಹೋದರೆ ರುಚಿಕರವಾದ ರೋಸ್ ಕುಕಿಸ್ ತಿನ್ನಲು ರೆಡಿ. ಮೊಟ್ಟೆ ತಿನ್ನದವರು ಮೊಟ್ಟೆ ಬದಲು ಕಾನ್‌ಫ್ಲೋರ್ ಹಿಟ್ಟನ್ನು ಬಳಸಿಯೂ ಕುಕಿಸ್ ತಯಾರಿಸಬಹುದು. ಇದನ್ನು ಒಂದು ತಿಂಗಳವರೆಗೆ ಇಟ್ಟು ತಿನ್ನಬಹುದು.

ಪ್ಲೇನ್ ಪ್ಲಮ್ ಕೇಕ್

ಪ್ಲಮ್ ಕೇಕ್ ಮಾಡುವ ರೀತಿಯಲ್ಲೆ ಪ್ಲೇನ್ ಪ್ಲಮ್ ಕೇಕ್ ಮಾಡಬಹುದು. ಆದರೆ ಇದರಲ್ಲಿ ಯಾವುದೇ ಫ್ರೂಟ್ಸ್ ಹಾಗೂ ಚಾಕಲೇಟ್ ಪೌಡರ್ ಬಳಸಬಾರದು.

ಮಾಹಿತಿ: ಫ್ರಾಂಜಲಾ ನವೀನ್

ಹಂಚಿಕೊಂಡು ಹಗುರಾಗದಿದ್ದರೆ...

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ನನ್ನಲ್ಲಿ ಹೇಳಲಾಗದಷ್ಟು ನೋವಿದೆ. ಜಗತ್ತಿನಲ್ಲಿ ನನ್ನಂತಹ ನತದೃಷ್ಟ ಯಾರೂ ಇಲ್ಲ ಅಂದುಕೊಂಡಿದ್ದೇನೆ. ನನಗೆ ಜೀವನ ಸಾಕಾಗಿದೆ. ಸೋತಿದ್ದೇನೆ. ಕಷ್ಟಗಳನ್ನು ಹೊರಗೆ ಹೇಳಿಕೊಳ್ಳುವಂತಿಲ್ಲ ಏನು ಮಾಡಬೇಕೋ ತೋಚುತ್ತಿಲ್ಲ. ಒಮ್ಮೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳಲೆ ಅನ್ನಿಸಿ ಬಿಡುತ್ತದೆ..

ಹೆಸರು ಊರು ತಿಳಿಸಿಲ್ಲ.

ನಿಮ್ಮೊಳಗೆ ತೀವ್ರವಾದ ಬೇಸರ ಹತಾಶೆ ಅಸಹಾಯಕತೆಗಳು ತುಂಬಿಕೊಂಡಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ನಿಮ್ಮ ಜೀವನದ ಅಸಹನೀಯ ಪರಿಸ್ಥಿತಿಗಳ ಕುರಿತು ಪತ್ರದಲ್ಲಿ ವಿವರಗಳಿಲ್ಲ. ಆದರೆ ಪತ್ರದ ಧ್ವನಿಯಿಂದ ಕೆಲವು ವಿಚಾರಗಳನ್ನು ಗಮನಿಸಬಹುದು.

1. ನನ್ನೊಳಗೆ ಹೇಳಲಾಗದ ನೋವಿದೆ, ಅದರೆ ಯಾರಿಗೂ ಹೇಳುವಂತಿಲ್ಲ ಎಂದು ತಿಳಿಸಿದ್ದೀರಿ. ಎಂದರೆ ನಿಮಗೆ ಮಾನವೀಯ ಸಂಪರ್ಕಗಳು ಬಹಳ ಕಡಿಮೆ ಮಟ್ಟದಲ್ಲಿದೆ ಎನ್ನುವುದರ ಸೂಚನೆಯಲ್ಲವೇ? ನಮ್ಮನ್ನು ಅರ್ಥ ಮಾಡಿಕೊಳ್ಳುವವರು ಯಾರೂ ಇಲ್ಲ ಎಂದುಕೊಂಡು ಮಾನವೀಯ ಸಂಪರ್ಕಗಳನ್ನು ಕಡಿದುಕೊಳ್ಳುತ್ತಾ ಹೋದರೆ ನಮ್ಮ ಹತಾಶೆ ಅಸಹಾಯತೆಗಳು ಹೆಚ್ಚುತ್ತವೆ.
2. ನನ್ನಂತಹ ನತದೃಷ್ಟ ಯಾರೂ ಇಲ್ಲ ಎಂದಿದ್ದೀರಿ. ಇದರ ಸೂಚನೆಯೆಂದರೆ ನೀವು ಮಾನವೀಯ ಸಂಪರ್ಕವನ್ನು ಕಳೆದುಕೊಂಡು ಬೇರೆಯವರ ಪರಿಸ್ಥಿತಿಗಳತ್ತ ನೋಡುವುದನ್ನೂ ನಿಲ್ಲಿಸಿದ್ದೀರಿ. ನಮ್ಮದೇ ದುಃಖಗಳ ಸಾಗರದಲ್ಲಿ ಮುಳುಗಿಹೋದಾಗ ಅದರ ಆಳ ಹೆಚ್ಚುತ್ತಲೇ ಹೋಗುತ್ತದೆ.
3. ಆತ್ಮಹತ್ಯೆ ಮಾಡಿಕೊಳ್ಳಬೇಕು ಎನ್ನಿಸುತ್ತದೆ ಎಂದಿದ್ದೀರಿ. ತೀವ್ರ ಅಸಹಾಯಕತೆಯಿಂದ ಪರಿಹಾರಗಳು ಹೊಳೆಯದಿದ್ದಾಗ ಬದುಕನ್ನು ಕೊನೆಗಾಣಿಸಿ ಕಷ್ಟಗಳನ್ನು ಅನುಭವಿಸುವುದರಿಂದ ಓಡಿಹೋಗಬಹುದು ಎನ್ನಿಸುತ್ತದೆ. ಆತ್ಮಹತ್ಯೆಯ ಯೋಚನೆ ನೀವು ಅನುಭವಿಸುತ್ತಿರುವ ನೋವು ಅಸಹಾಯಕತೆಗಳಿಂದ ಬಂದಿದೆ. ಎದುರಿಸುವುದು ಅಸಾಧ್ಯ ಎನ್ನಿಸಿದಾಗ ಓಡಿಹೋಗುವ ದಾರಿ ಹುಡುಕತೊಡಗಿದ್ದೀರಿ ಅಲ್ಲವೇ?

ಪರಿಹಾರವನ್ನು ಕಂಡುಕೊಳ್ಳುವ ಮೊದಲು ಕೆಲವು ವೈಜ್ಞಾನಿಕ ವಿಚಾರಗಳನ್ನು ತಿಳಿಯೋಣ. ನಾವೆಲ್ಲರೂ ಸಂಘಜೀವಿಗಳು. ಗುಂಪಿನಲ್ಲಿ ಸುಖದುಃಖಗಳನ್ನು ಹಂಚಿಕೊಂಡು ಬದುಕನ್ನು ಹಗುರಾಗಿಸಿಕೊಳ್ಳುವುದು ಮಾನವರ ಮೂಲಪ್ರವೃತ್ತಿ. ಹೀಗೆ ಹಂಚಿಕೊಂಡಾಗ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕಬೇಕೆಂದಿಲ್ಲ.

ಆದರೆ ನಮ್ಮ ಕಷ್ಟಗಳನ್ನು ಸಹಾನುಭೂತಿಯಿಂದ ಆಲಿಸುವ ಕಿವಿಗಳಿವೆ ಮತ್ತು ಅವರು ನಮಗೆ ಮಾನಸಿಕ ಆಸರೆ ನೀಡಬಲ್ಲರು ಎನ್ನಿಸಿದಾಗ ನಮ್ಮ ಮಿದುಳು ನರಮಂಡಲಗಳು ಶಾಂತವಾಗುತ್ತವೆ. ಆಗ ನಮಗೆ ವಿವೇಕದಿಂದ ಕಾರ್ಯಪ್ರವೃತ್ತರಾಗುವುದು ಸಾಧ್ಯ. ಇಂತಹ ಆತ್ಮೀಯ ಸ್ನೇಹ ಸಂಬಂಧಗಳು ಬದುಕಿನಲ್ಲಿ ಭರವಸೆಯಾಗಿ ಉಳಿಯುತ್ತವೆ.

ನಿಮಗೆ ಇಂತಹ ಸ್ನೇಹಸಂಬಂಧಗಳ ಕೊರತೆಯಿದೆ ಎನ್ನಿಸುತ್ತಿದೆ. ಈ ವರೆಗಿನ ಜೀವನಾನುಭವದಲ್ಲಿ ನೀವು ಕಷ್ಟಗಳನ್ನು ಹೇಳಿಕೊಂಡಾಗ ನಿಮಗೆ ದೊರಕಿದ್ದು ತಿರಸ್ಕಾರ, ಅವಗಣನೆ, ಅವಮಾನ ಮುಂತಾದವುಗಳು ಆಗಿರಬೇಕಲ್ಲವೇ? ಬಹಳ ವರ್ಷಗಳಿಂದ ಯಾರೊಡನೆಯೂ ನಿಮ್ಮ ಮನೋವೇದನೆಯನ್ನು ಹಂಚಿಕೊಳ್ಳದೆ ಅವು ಸ್ಫೋಟಗೊಳ್ಳುವ ಹಂತಕ್ಕೆ ಬಂದಿದೆ.

ಸಮಸ್ಯೆಗಳಿಗೆ ನಿಧಾನವಾಗಿಯಾದರೂ ಪರಿಹಾರಗಳನ್ನು ಹುಡುಕುವುದು ನಿಮಗೆ ಸಾಧ್ಯವಾಗಬೇಕಾದರೆ ಇಂತಹ ಹತಾಶೆ ಅಸಹಾಯಕತೆಗಳ ಒತ್ತಡ ಕಡಿಮೆಯಾಗಬೇಕು. ಇದಕ್ಕೆ ಹಂಚಿಕೊಂಡು ಹಗುರಾಗುವುದೊಂದೇ ಪರಿಹಾರ.

ನಿಮ್ಮ ಸ್ನೇಹಿತರ ಅಥವಾ ಆತ್ಮೀಯರ ಗುಂಪಿನಲ್ಲಿ ಯಾವುದೇ ನಿರೀಕ್ಷೆಯಿಲ್ಲದೆ ನಿಮ್ಮ ಮಾನಸಿಕ ತೊಳಲಾಟಗಳನ್ನು ಹಂಚಿಕೊಳ್ಳಲು ಪ್ರಯತ್ನಿಸಿ. ಇದಕ್ಕೆ ಸೂಕ್ತವಾದ ವ್ಯಕ್ತಿಯನ್ನು ಹುಡುಕಿಕೊಳ್ಳಬೇಕು. ನಿಮ್ಮ ವೇದನೆಯನ್ನು ಅರ್ಥಮಾಡಿಕೊಳ್ಳದವರಾದರೆ ಹಳೆಯ ಅನುಭವಗಳಾದ ಅವಮಾನ ತಿರಸ್ಕಾರಗಳು ಮರುಕಳಿಸಬಹುದು. ನಿಮ್ಮ ಸುತ್ತಲೂ ಅಂತಹ ವ್ಯಕ್ತಿ ಇಲ್ಲ ಎನ್ನಿಸಿದರೆ ತಜ್ಞ ಮನೋಚಿಕಿತ್ಸಕರ ಸಹಾಯ ಪಡೆಯಿರಿ. ಮನೋಚಿಕಿತ್ಸಕರಲ್ಲಿ ಕೂಡ ನಿಮ್ಮ ಜೀವನದ ಸಂದರ್ಭದಲ್ಲಿರುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರಗಳಿಲ್ಲದೆ ಇರಬಹುದು. ಆದರೆ ಅವರು ತಾತ್ಕಾಲಿಕವಾಗಿಯಾದರೂ ನಿಮಗೆ ತುರ್ತಾಗಿ ಅಗತ್ಯವಿರುವ ಮಾನವೀಯ ಸಂಪರ್ಕದ ಅನುಭವವನ್ನು ನೀಡಿ ಭಾವೋದ್ವೇಗಗಳನ್ನು ನಿಭಾಯಿಸಲು ಸಹಾಯ ಮಾಡುತ್ತಾರೆ. ಶುಭವಾಗಲಿ.

ಏನಾದ್ರೂ ಕೇಳ್ಬೋದು... ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಅಲೆಲೆ ಕೂದಲೆ ಬಣ್ಣದಲೆ

ಕಾರ್ಮೋಡದಷ್ಟು ಕಪ್ಪು ಕೂದಲು, ಕೂದಲ ಅಲೆ ಕಾರ್ಮೋಡ ನೆನಪಿಸಿತು. ನಾಗವೇಣಿಯಂಥ ಜಡೆ ಎಂದೆಲ್ಲ ಹೊಗಳುತ್ತಿದ್ದವರಿಗೆ, ಇದೀಗ ಸಂಜೆಯ ರಾಗರತಿಯೆಲ್ಲ ಕೂದಲ ಅಲೆಯಲ್ಲಿ ಕಾಣಿಸಬಹುದಾಗಿದೆ.

ಕಪ್ಪು ಕಾರ್ಮೋಡದಂಥ ಕೂದಲಲ್ಲಿ ದಟ್ಟವಾಗಿರುವ ಕಡಲುಹಸಿರು, ಕೆಮ್ಮುಗಿಲಿನ ಅಲೆಯೊಂದು ಹೊರಳಿದಂತೆ.. ಇನ್ನೇನು, ಬೀಟ್‌ರೂಟನ್ನೇ ಹೆಚ್ಚಿಟ್ಟು, ಬಣ್ಣ ಸುರಿದಿಟ್ಟಂತೆ ಇನ್ನೊಂದು ಬಣ್ಣ, ನೀಲ್ಕಡಲು, ನೀಲ ಗಗನ, ಕಾರ್ಮೋಡದ ಅಲೆಯಂತೆ ನಿಡಿದಾಗಿ ಇಳಿಬೀಳಬಹುದು.

ಇಂಥ ಬಣ್ಣದ ಸ್ಟ್ರೀಕ್ಸ್ ಈ ತಿಂಗಳ ಟ್ರೆಂಡ್ ಆಗಿ ಬದಲಾಗಿದೆ. ಕ್ರಿಸ್ಮಸ್ ಮತ್ತು ಹೊಸವರ್ಷದ ಹಿನ್ನೆಲೆಯಲ್ಲಿ ಕೇಶವಿನ್ಯಾಸ ಮತ್ತು ಕೇಶವರ್ಣದಲ್ಲಿಯೇ ಸಾಕಷ್ಟು ಬದಲಾವಣೆಗಳು ಕಂಡು ಬಂದಿವೆ. ಸದ್ಯದ ಟ್ರೆಂಡ್ ಏನಿದ್ದರೂ ಥಾಳಾಗಿ ಕಾಣುವ ಸ್ಟ್ರೀಕ್ಸ್‌ಗಳು. ಕೆಲವರು ನೆತ್ತಿಯಿಂದಲೇ ಈ ಬಣ್ಣದಲೆ ಕಾಣುವಂತೆ ಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರು ಕೂದಲು ಕೊನೆಗೊಳ್ಳುವಾಗ ಆ ಬಣ್ಣದ ಅಲೆಯಂತೆ ಕಾಣುವಂತೆಯೂ ಮಾಡಿಕೊಳ್ಳುತ್ತಾರೆ.

ಹೈಲೈಟರ್ ಬಳಸಿಕೊಳ್ಳುವವರು ಹೊಂಬಣ್ಣವನ್ನು ಹೆಚ್ಚು ನೆಚ್ಚುತ್ತಿದ್ದರು. ಇದೀಗ ಕೆಂಬಣ್ಣ, ಕಡುಗುಲಾಬಿ, ನೀಲಿ, ಹಸಿರು ಎನಿಸುವ ವಿಶೇಷ ವರ್ಣಗಳೂ ಹೆಚ್ಚು ಜನಪ್ರಿಯವಾಗುತ್ತಿವೆ.

ಸ್ಟ್ರೀಕ್ಸ್ ಪ್ರಯತ್ನಿಸುವುದಾದರೆ ಕೇಶವಿನ್ಯಾಸದ ತಜ್ಞರಬಳಿಯೇ ಹೋಗಿ. ಒಳ್ಳೆಯ ಬ್ರ್ಯಾಂಡ್ ಇರುವ ಬಣ್ಣಗಳನ್ನೇ ಬಳಸಿ. ಯಾವುದೇ ಕಾರಣಕ್ಕೂ ನೇರವಾಗಿ ಬಣ್ಣ ಲೇಪನಕ್ಕೆ ಮುಂದಾಗಬೇಡಿ. ಒಮ್ಮೆ ಚೂರು ಲೇಪಿಸಿಕೊಂಡು ಪರಿಶೀಲಿಸಿ. ನಿಮ್ಮ ಚರ್ಮದ ಬಣ್ಣ, ಕೇಶ ವಿನ್ಯಾಸ ಕೇಶಶೈಲಿ ಹಾಗೂ ಅವುಗಳ ರಚನೆಯನ್ನು ನೋಡಿಯೇ ನಿರ್ಧರಿಸಿ.

ಹೊಂಬಣ್ಣ, ಕೆಂಬಣ್ಣ, ನೀಲವರ್ಣಗಳೇನೇ ಇರಲಿ, ಆರೋಗ್ಯವಂತ ಕೂದಲು ನಿಮ್ಮ ಆಯ್ಕೆಯಾಗಿರಲಿ.

ಕ್ರಿಸ್ಮಸ್‌ಗೆ ಹಾಲಿನ ಕೇಕ್, ಮಲ್ಯೆ

ಕೆ.ವಿ.ರಾಜಲಕ್ಷ್ಮಿ

ಮಿಲ್ಕ್ ಕೇಕ್

ಬೇಕಾಗುವ ಸಾಮಗ್ರಿ: ಸಣ್ಣ ರವೆ 1ಕಪ್, ಹಾಲು ಕಪ್, ಮಿಲ್ಕ್ ಪೌಡರ್ 1/4 ಕಪ್,ಸಕ್ಕರೆ 1 ಕಪ್, ಅಡುಗೆ ಸೋಡಾ 1ಚಮಚ, ಗೋಡಂಬಿ-ಬಾದಾಮಿ,8-10.

ಮಾಡುವ ವಿಧಾನ: ಹಾಲನ್ನು ಚೆನ್ನಾಗಿ ಕಾಯಿಸಿ, ಬಿಸಿಯಿರುವಾಗಲೇ ಒಂದು ಪಾತ್ರೆಗೆ ಸುರುವಿಕೊಳ್ಳಿ. ಇದಕ್ಕೆ ಸಕ್ಕರೆಯನ್ನು ಸೇರಿಸಿ ಕರಗುವವರೆಗೆ ಕಲಕಿ. ನಂತರ ರವೆ ಮಿಲ್ಕ್ ಪೌಡರ್ ಹಾಕಿ, ಮಿಶ್ರಣ ಮಾಡಿ, ತಟ್ಟೆ ಮುಚ್ಚಿ ಹತ್ತು ನಿಮಿಷದವರೆಗೆ ನೆನೆಸಿ. ಒಲೆಯ ಮೇಲೆ ದಪ್ಪ ಕಡಾಯಿ ಇಟ್ಟು ಕೇಕ್ ಸ್ಟಾಂಡ್ ಅಥವಾ ಕುಕಿಂಗ್ ಪಾಟ್ ಸ್ಟಾಂಡ್ ಇಟ್ಟು ಕಡಾಯಿ ಮುಚ್ಚಿ ಸಣ್ಣ ಉರಿಯಲ್ಲಿ ಪ್ರೀ ಹೀಟ್ ಗೆ ಇಡಿ. ಕೇಕ್ ಪ್ಯಾನ್ ಒಳಗೆ ಎಣ್ಣೆ ಸವರಿ ಬಟರ್ ಪೇಪರ್ ಇಟ್ಟು ಸ್ವಲ್ಪ ಜಿಡ್ಡು ಸವರಿಟ್ಟುಕೊಳ್ಳಿ. ಇದರೊಳಗೆ, ಮಂದವಾಗಿ ಇಡ್ಲಿ ಹಿಟ್ಟಿನ ಹದಕ್ಕೆ ಬಂದಿರುವ ಕೇಕ್ ಮಿಶ್ರಣವನ್ನು ಮತ್ತೊಮ್ಮೆ ಕೈಯಾಡಿ ಸುರಿದು ಮೇಲೆ ಒಣಹಣ್ಣುಗಳನ್ನು ಹರಡಿ , ಕಡಾಯಿಯಲ್ಲಿಟ್ಟು ಸಣ್ಣ ಉರಿಯಲ್ಲೇ 45-50ನಿಮಿಷ ಅದೇ ಉರಿಯಲ್ಲಿ ಬೇಯಿಸಿ. ಫ್ರೂಟ್ ಪಿಕ್ ನಲ್ಲಿ ಕೇಕಿನೊಳಗೆ ಚುಚ್ಚಿ ತೆಗೆದರೆ ಮಿಶ್ರಣ ಅಂಟಬಾರದು-ಅಲ್ಲಿಗೆ, ಕೇಕ್ ಸಂಪೂರ್ಣವಾಗಿ ಬೆಂದಿರುತ್ತದೆ. ಉರಿ ಆರಿಸಿ ಕೇಕ್ ಪಾನ್ ಕೆಳಗಿರಿಸಿ ತಣಿಸಿ ನಂತರ ಬೇರೊಂದು ತಟ್ಟೆಗೆ ವರ್ಗಾಯಿಸಿ. ಮಿಲ್ಕ್ ಕೇಕ್ ಸವಿಯಲು ರೆಡಿ.

ಚಿಲ್ಡ್ ಬ್ರೆಡ್ ಮಲ್ಯೆ

ಬೇಕಾಗುವ ಸಾಮಗ್ರಿ: ಬ್ರೆಡ್ 4 ಹೋಳು, ಹಾಲು 1 ಕಪ್, ಕಂಡೆನ್ಸ್ಡ್ ಮಿಲ್ಕ್ ಎರಡು ಚಮಚ, ಕತ್ತರಿಸಿದ ಒಣದ್ರಾಕ್ಷಿ,ಗೋಡಂಬಿ,ಪಿಸ್ತಾ,ಬಾದಾಮಿ ತುಂಡುಗಳು 10-15.

ಮಾಡುವ ವಿಧಾನ: ಬ್ರೆಡ್ ಹೋಳುಗಳ ಕಂದುಬಣ್ಣದ ಅಂಚು ತೆಗೆದು ತ್ರಿಕೋನಾಕಾರಕ್ಕೆ ಕತ್ತರಿಸಿ ತುಪ್ಪದಲ್ಲಿ ಹಗುರವಾಗಿ ರೋಸ್ಟ್ ಮಾಡಿಟ್ಟುಕೊಳ್ಳಿ. ಮತ್ತೊಂದು ಪಾತ್ರೆಗೆ ಉಗುರುಬೆಚ್ಚಗಿನ ಹಾಲಿಗೆ ಕಂಡೆನ್ಸ್ಡ್ ಮಿಲ್ಕ್, ಒಣಹಣ್ಣುಗಳನ್ನು ಸೇರಿಸಿ ಮಲ್ಯೆ ರೆಡಿಮಾಡಿ ಫ್ರಿಜ್ ನಲ್ಲಿ ತಂಪಾಗಿಸಿ. ಬೇಕೆನಿಸಿದಾಗ ಸರ್ವಿಂಗ್ ಬೌಲ್ ನಲ್ಲಿ ರೋಸ್ಟ್ ಮಾಡಿದ ಬ್ರೆಡ್ ಹೋಳುಗಳ ಮೇಲೆ ತಂಪಾದ ಮಲ್ಯೆ ಮಿಶ್ರಣ ಹಾಕಿ ಸವಿಯಿರಿ.

ಬ್ರೆಡ್ ಫ್ರೈಡ್ ರೈಸ್

ಬೇಕಾಗುವ ಸಾಮಗ್ರಿ: ಉದುರುದುರು ಅನ್ನ 1 ಕಪ್,ಸಣ್ಣದಾಗಿ ಕತ್ತರಿಸಿದ ಈರುಳ್ಳಿ, ಕಾಪ್ಸಿಕಮ್ 1/4 ಕಪ್, ಒಣದ್ರಾಕ್ಷಿ 8-10, ಬ್ರೆಡ್ ಹೋಳು 1, ಹಸಿರುಮೆಣಸಿನಕಾಯಿ ಒಂದು,ಚಿಟಿಕಿ ದಾಲ್ಚಿನಿ ಪುಡಿ, ತುಪ್ಪ, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಮೊದಲಿಗೆ ಬ್ರೆಡ್ ಹೋಳಿನ ಅಂಚು ತೆಗೆದು ತುಪ್ಪ ಸವರಿ ತವಾ ಮೇಲೆ ಮೈಲ್ಡ್ ರೋಸ್ಟ್ ಮಾಡಿಕೊಳ್ಳಿ. ಬಾಣಲೆಗೆ ಎಣ್ಣೆ ಹಾಕಿ ಈರುಳ್ಳಿ, ಕಾಪ್ಸಿಕಮ್,ಸೀಳಿದ ಹಸಿರುಮೆಣಸಿನಕಾಯಿ, ದಾಲ್ಚಿನಿ ಪುಡಿ,ಉಪ್ಪುಹಾಕಿ ಚೆನ್ನಾಗಿ ಬಾಡಿಸಿ ಉರಿ ಆರಿಸಿ, ರೋಸ್ಟೆಡ್ ಬ್ರೆಡ್ಡನ್ನು ಸಣ್ಣಸಣ್ಣ ತುಂಡುಗಳನ್ನಾಗಿ ಕತ್ತರಿಸಿ ಒಣದ್ರಾಕ್ಷಿಯೊಂದಿಗೆ ಸೇರಿಸಿ ಮಿಶ್ರಣ ಮಾಡಿ, ಬಿಸಿ ಅನ್ನವನ್ನು ಹರಡಿ ಮೇಲೆ ಒಂದು ಚಮಚ ತುಪ್ಪ ಹಾಕಿ ಹದವಾಗಿ ಬೆರೆಯುವಂತೆ ಮೃದುವಾಗಿ ಕೈಯಾಡಿ.

ಬೆತ್ತಲೆ ಪ್ರಕರಣ: ಬಿಜೆಪಿ ಸತ್ಯಶೋಧನಾ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಳಗಾವಿ ಘಟನೆ ಕುರಿತು ಸತ್ಯಶೋಧನೆ ನಡೆಸಲು ನಾಲ್ವರು ಸಂಸದರನ್ನು ಒಳಗೊಂಡ ಐವರ ಸಮಿತಿಯನ್ನು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಶುಕ್ರವಾರ ರಚಿಸಿದ್ದಾರೆ.

ಈ ತಂಡವು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತೆ ಹಾಗೂ ಕುಟುಂಬ ಸದಸ್ಯರನ್ನು ಭೇಟಿ ಮಾಡಿ ವಾಸ್ತವ ಸ್ಥಿತಿ ಅರಿಯಲಿದೆ. ಬಳಿಕ ಅಧ್ಯಕ್ಷರಿಗೆ ವರದಿ ಸಲ್ಲಿಸಲಿದೆ. ಸಮಿತಿಯಲ್ಲಿ ಸಂಸದರಾದ ಅಪರಾಜಿತ ಸಾರಂಗಿ, ಸುನಿತಾ ದುಗ್ಗಲ್, ಲಾಕೆಟ್ ಚಟರ್ಜಿ, ರಂಜೀತಾ ಕೋಲಿ, ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಆಶಾ ಲಾಕ್ರಾ ಇರಲಿದ್ದಾರೆ. ಘಟನಾ ಸ್ಥಳಕ್ಕೆ ಸಮಿತಿಯು ಶನಿವಾರ ಭೇಟಿ ನೀಡಲಿದೆ.

ಪ್ರತಿಭಟನೆ: ಬೆತ್ತಲೆ ಪ್ರಕರಣ ಖಂಡಿಸಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಕರ್ನಾಟಕ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ರಾಜ್ಯದ ಬಿಜೆಪಿ ಸಂಸದರು ಸಂಸತ್‌ನ ಗಾಂಧಿ ಪ್ರತಿಮೆ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

'ಸಚಿವೆ ಲಕ್ಷ್ಮಿ ಹೆಬ್ಬಾಳಕರ ಕ್ಷೇತ್ರದಲ್ಲೇ ಈ ಘಟನೆ ನಡೆದಿದೆ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲೇ ಘಟನೆ ನಡೆದಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂತ್ರಸ್ತೆಯನ್ನು ಭೇಟಿ ಮಾಡಿಲ್ಲ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಯುಎವಿ ಪ್ರಯೋಗಾರ್ಥ ಹಾರಾಟ ಯಶಸ್ವಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಸ್ವಯಂಚಾಲಿತವಾಗಿ ಕಾರ್ಯನಿರ್ವಹಿಸುವ, ಅತಿ ವೇಗದ, ಮಾನವ ರಹಿತ ವೈಮಾನಿಕ ವಾಹನ (ಯುಎವಿ) ರಾಡಾರ್ ಸಂಪರ್ಕಕ್ಕೆ ಸಿಗದಂತೆ ಹಾರಾಟ ನಡೆಸುವ ಪ್ರಯೋಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿರುವ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ವಾಯುನೆಲೆಯಲ್ಲಿ ಶುಕ್ರವಾರ ಯಶಸ್ವಿಯಾಯಿತು.

ಬಾಲರಹಿತ (ಟೇಲ್‌ಲೆಸ್ ಕಾನ್ಫಿಗರೇಷನ್) ಸಂರಚನೆ ಹೊಂದಿದ

ಮಾನವ ರಹಿತ ವೈಮಾನಿಕ ವಾಹನ

ಯುಎವಿಯು ರಹಸ್ಯವಾಗಿ ಕಾರ್ಯನಿರ್ವಹಿಸುವ ತಂತ್ರಜ್ಞಾನ ಹೊಂದಿದ ಪ್ರಮುಖ ರಾಷ್ಟ್ರಗಳ ಸಾಲಿಗೆ ಭಾರತ ಸೇರಿದಂತಾಗಿದೆ. ರಕ್ಷಣಾ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುತ್ತಿರುವ ದೇಶವು ವೈಮಾನಿಕ ಕ್ಷೇತ್ರದ ತಂತ್ರಜ್ಞಾನದ ಪರಿಪಕ್ವತೆಗೆ ಇದು ಉದಾಹರಣೆಯಾಗಿದೆ ಎಂದು ರಕ್ಷಣಾ ಸಚಿವಾಲಯ ಮೆಚ್ಚುಗೆ ವ್ಯಕ್ತಪಡಿಸಿದೆ.

ಡಿಆರ್‌ಡಿಒ ಅಂಗಸಂಸ್ಥೆಯಾದ ಬೆಂಗಳೂರಿನ ವೈಮಾನಿಕ ಅಭಿವೃದ್ಧಿ ಸಂಸ್ಥೆ (ಎಡಿಇ) ವಿನ್ಯಾಸಗೊಳಿಸಿದ ಯುಎವಿ 2022ರ ಜುಲೈ 1ರಂದು ಪ್ರಯೋಗಾರ್ಥ ಹಾರಾಟದಲ್ಲಿ ಯಶಸ್ಸು ಕಂಡಿತ್ತು. ದೇಶೀಯವಾಗಿ ಸಿದ್ಧಪಡಿಸಿದ ಎರಡು ಮೂಲ ಮಾದರಿಗಳನ್ನು ಬಳಸಿಕೊಂಡು ಸಂರಚನೆಯಲ್ಲಿ ಸುಧಾರಣೆ ತರಲಾಯಿತು.

ಆರು ಪ್ರಯೋಗಾರ್ಥ ಹಾರಾಟ ನಡೆಸಿದ ಯುಎವಿ, ಏಳನೇ ಹಾರಾಟದಲ್ಲಿ ಹೊಸ ಮೈಲುಗಲ್ಲು ಸಾಧಿಸಿದೆ. ಹಾರಾಟವನ್ನು ನಿಯಂತ್ರಿಸುವ ಏವಿಯಾನಿಕ್ ವ್ಯವಸ್ಥೆ, ಹಾರಾಟದ ಕಾರ್ಯಾಚರಣೆ ಉತ್ತಮಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಈ ಹಿಂದಿನ ಡ್ರೋಣ್‌ಗಳು ಲಂಬಾಕಾರದ ರೆಕ್ಕೆಗಳನ್ನು ಹೊಂದಿರುತ್ತಿದ್ದವು. ಇದು ಬಾಲ ರಹಿತ ವ್ಯವಸ್ಥೆ ಹೊಂದಿದ್ದು, ಮಾತ್ರ ರಾಡಾರ್ ಹೊರತುಪಡಿಸಿ ಉಳಿದವುಗಳ ಸಂಪರ್ಕಕ್ಕೆ ಸಿಗದೇ ರಹಸ್ಯವಾಗಿ ಕಾರ್ಯಾಚರಣೆ ನಡೆಸಲಿದೆ.

RAMAN RESEARCH INSTITUTE
BANGALORE - 560 080.

CORRIGENDUM - ADVT. No. 2/2023 - DTD. 04-11-2023

The due date for submission of application with reference to our Advertisement No. 2/2023, Dated : 04-11-2023 for the posts of Administrative officer, Librarian and Personal Secretary has been extended till 04-02-2024.

Sd/-
Administrative Officer

ಮಾನವ ಹಕ್ಕು ಆಯೋಗ ನೋಟಿಸ್

ನವದೆಹಲಿ: ಬೆಳಗಾವಿಯಲ್ಲಿ ಮಹಿಳೆಯ ಬೆತ್ತಲೆಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ರಾಷ್ಟ್ರೀಯ ಮಾನವ ಹಕ್ಕು ಆಯೋಗವು ಕರ್ನಾಟಕ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾ-ನಿರ್ದೇಶಕರು ನಾಲ್ಕು ವಾರಗಳಲ್ಲಿ ವಿವರವಾದ ವರದಿ ಸಲ್ಲಿಸಬೇಕು ಎಂದು ಆಯೋಗ ಸೂಚಿಸಿದೆ. ಇದು ಎಫ್‌ಐಆರ್‌ನ ದಾಖಲಾತಿಯ ಸ್ಥಿತಿ, ತನಿಖೆಯ ಪ್ರಗತಿ, ಬಂಧನ, ಸಂತ್ರಸ್ತರಿಗೆ ಪರಿಹಾರ ನೀಡಿದ್ದರೆ ಆ ಬಗ್ಗೆ ವಿವರ ಹಾಗೂ ರಾಜ್ಯದಲ್ಲಿ ಅಂತಹ ಘಟನೆಗಳನ್ನು ತಡೆಗಟ್ಟಲು ತೆಗೆದುಕೊಂಡ ಅಥವಾ ತೆಗೆದು ಕೊಳ್ಳಬೇಕಾದ ಕ್ರಮಗಳನ್ನು ಒಳಗೊಂಡಿರಬೇಕು ಎಂದು ಹೇಳಿದೆ.

ಆಯೋಗದ ಡಿಐಜಿ ಅವರು ತ್ವರಿತವಾಗಿ ಸತ್ಯಶೋಧನಾ ತಂಡ ರಚಿಸಿ ಘಟನಾ ಸ್ಥಳದಲ್ಲಿ ವಿಚಾರಣೆ ನಡೆಸಬೇಕು ಹಾಗೂ ಎರಡು ವಾರಗಳಲ್ಲಿ ವರದಿ ಸಲ್ಲಿಸಬೇಕು ಎಂದೂ ಸೂಚಿಸಿದೆ.

'ಸಂತ್ರಸ್ತೆಗೆ ₹5 ಲಕ್ಷ ಪರಿಹಾರ'

ಬೆಳಗಾವಿ: 'ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಇತ್ತೀಚೆಗೆ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಗೆ ರಾಜ್ಯ ಸರ್ಕಾರದ ವತಿಯಿಂದ ₹5 ಲಕ್ಷ ಪರಿಹಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದ್ದಾರೆ.

'ಜತೆಗೆ, ನೊಂದ ಮಹಿಳೆಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ₹50 ಸಾವಿರ ಪರಿಹಾರ ಘೋಷಿಸಲಾಗಿದೆ' ಎಂದು ಶುಕ್ರವಾರ ತಿಳಿಸಿದ್ದಾರೆ.

ಸಂತ್ರಸ್ತೆಗೆ ಸೂಕ್ತ ನೆರವು ನೀಡಲು ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಸೂಚಿಸಿದ್ದಾರೆ.

'ಸಂತ್ರಸ್ತೆಗೆ ಅಗತ್ಯವಿರುವ ಎಲ್ಲಾ ಸವಲತ್ತುಗಳನ್ನು ಇಲಾಖೆಯಿಂದ ಒದಗಿಸಿಕೊಟ್ಟು, ಅವರಿಗೆ ನ್ಯಾಯ ಒದಗಿಸಿಕೊಡಲು ಬೇಕಾದ ಎಲ್ಲಾ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು' ಎಂದೂ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಮಹಿಳೆಗೆ ಮಂಗನ ಕಾಯಿಲೆ ದೃಢ

ತೀರ್ಥಹಳ್ಳಿ: ತಾಲ್ಲೂಕಿನ ಅತ್ತಿಸರ ಮಜರೆ ಗ್ರಾಮದಲ್ಲಿ 53 ವರ್ಷದ ಮಹಿಳೆಯೊಬ್ಬರಿಗೆ ಮಂಗನ ಕಾಯಿಲೆ (ಕ್ಯಾಸನೂರು ಫಾರೆಸ್ಟ್ ಡಿಸೀಸ್-ಕೆಎಫ್‌ಡಿ) ದೃಢಪಟ್ಟಿದೆ.

ಮಹಿಳೆಯನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಮಲೆನಾಡಿನಲ್ಲಿ ಇದು ಈ ವರ್ಷ ಪತ್ತೆಯಾದ ಪ್ರಥಮ ಪ್ರಕರಣವಾಗಿದೆ.

ಮಂಗನ ಕಾಯಿಲೆಗೆ ಈ ಹಿಂದೆ ನೀಡುತ್ತಿದ್ದ ಲಸಿಕೆ ಪರಿಣಾಮಕಾರಿ-ಯಾಗಿ ಕೆಲಸ ಮಾಡದ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಿಂದ ಸರ್ಕಾರ ಆ ಲಸಿಕೆ ಹಾಕುವುದನ್ನು ಸ್ಥಗಿತಗೊಳಿಸಿದೆ ಎಂದು ತಾಲ್ಲೂಕು ವೈದ್ಯಾಧಿಕಾರಿ ನಟರಾಜ್ ತಿಳಿಸಿದ್ದಾರೆ.

ಅನ್ಯಮತೀಯರ ವ್ಯಾಪಾರಕ್ಕೆ ನಿರ್ಬಂಧ ಬ್ಯಾನರ್ ತೆರವು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಇಲ್ಲಿನ ಕುಕ್ಕೆಸುಬ್ರಹ್ಮಣ್ಯದ ಕಾಶಿಕಟ್ಟೆ ಬಳಿ ಅಳವಡಿಸಿದ್ದ 'ಅನ್ಯಮತೀಯ ವ್ಯಾಪಾರ ನಿಷೇಧಿ ಸಲಾಗಿದೆ' ಎನ್ನುವ ಬರಹವಿದ್ದ ಬ್ಯಾನರ್‌ಅನ್ನು ಸ್ಥಳೀಯ ಪಂಚಾಯಿತಿಯವರು ತೆರವುಗೊಳಿಸಿದ್ದಾರೆ.

ಹಿಂದೂ ಹಿತರಕ್ಷಣೆ ವೇದಿಕೆ, ಸುಬ್ರಹ್ಮಣ್ಯ ಹೆಸರಿನಲ್ಲಿ ಬ್ಯಾನರ್ ಅಳವಡಿಸಲಾಗಿತ್ತು. ಚಂಪಾಷಷ್ಠಿ ಜಾತ್ರೆ ನಿಮಿತ್ತ ಇಲ್ಲಿ ಡಿ.16, 17ರಂದು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

'ಬ್ಯಾನರ್ ಕುರಿತು ಸ್ಥಳೀಯ ಪಂಚಾಯಿತಿಗೆ ಮಾಹಿತಿ ನೀಡಿದ್ದು, ಅವರು ತೆರವುಗೊಳಿಸಿದ್ದಾರೆ' ಎಂದು ಸುಬ್ರಹ್ಮಣ್ಯ ಠಾಣಾಧಿಕಾರಿ ಕಾರ್ತಿಕ್ ತಿಳಿಸಿದ್ದಾರೆ.

ನಗರಸಭಾ ಕಾರ್ಯಾಲಯ, ಹಿರಿಯೂರು-577598

ಫೋನ್ ನಂ. 08193-263220, ಸಹಾಯವಾಣಿ: 08193-260020,
E-mail:tmchiriyur@yahoo.in Webist: hiriyurcity.gov.in

ನಂ.ನ.ಸ.ಹಿ/ತಾ.ವಿ/ನಗರಸಭೆ ನಿಧಿ/24.10%, 7.25%, 5%/
ಟೆಂಡರ್/ಸಿಆರ್:09/2023-24 ದಿನಾಂಕ: 14.12.2023

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಹಿರಿಯೂರು ನಗರಸಭೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ನಗರಸಭೆ ನಿಧಿ ಅನುದಾನದ 24.10%, 7.25%, 5% ಯೋಜನೆಗಳಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karantaka.gov.in ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ (ಕ್ರ.ಸಂ. 1 ರಿಂದ 4ರವರೆಗೆ) ದಿನಾಂಕ:29/12/2023 ರ ಸಂಜೆ 5:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:30/12/2023ರ ಸಂಜೆ 5:15ರ ನಂತರ. (ಕ್ರ.ಸಂ. 5 ರಿಂದ 6ರವರೆಗೆ) ದಿನಾಂಕ:26/12/2023 ರ ಸಂಜೆ 5:00ರ ವರೆಗೆ, ಬಿಡ್‌ಗಳನ್ನು ತೆರೆಯುವ ದಿನಾಂಕ:27/12/2023ರ ಸಂಜೆ 5:15ರ ನಂತರ.

ಕಾಮಗಾರಿಗಳ ಇಂಡೆಂಟ್ ವಿವರ:- ನಗರಸಭೆ ನಿಧಿ ಅನುದಾನದ 24.10%, 7.25%, 5%.:- (1) DMA/2023-24/OW/WORK INDENT9644 (SC) ಅಂದಾಜು ಮೊತ್ತ:- 4.70 ಲಕ್ಷ, ಇಎಂಡಿ ಮೊತ್ತ: 4,950.00 (2) DMA/2023-24/RD/WORK INDENT9661 ಅಂದಾಜು ಮೊತ್ತ:- 10.90 ಲಕ್ಷ, ಇಎಂಡಿ ಮೊತ್ತ: 22,972.00 (3) DMA/2023-24/OW/WORK INDENT9672 ಅಂದಾಜು ಮೊತ್ತ:- 10.70 ಲಕ್ಷ, ಇಎಂಡಿ ಮೊತ್ತ:- 22,505.00 (4) DMA/2023-24/OW/WORK INDENT9887(ST) ಅಂದಾಜು ಮೊತ್ತ:- 3.94 ಲಕ್ಷ, ಇಎಂಡಿ ಮೊತ್ತ:- 4,160.00 ನಗರಸಭೆ ನಿಧಿ:- (5) DMA/2023-24/RD/WORK_INDENT6550/CALL-2 ಅಂದಾಜು ಮೊತ್ತ:- 2.20 ಲಕ್ಷ, ಇಎಂಡಿ ಮೊತ್ತ:- 4,624.00 (5) DMA/2023-24/BD/WORK INDENT9362 ಅಂದಾಜು ಮೊತ್ತ:- 9.90 ಲಕ್ಷ, ಇಎಂಡಿ ಮೊತ್ತ:- 20,356.00 ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಅಭಿಯಂತರರನ್ನು ಸಂಪರ್ಕಿಸಬಹುದು

ಸಹಿ/- ಆಡಳಿತಾಧಿಕಾರಿಗಳು, ನಗರಸಭೆ, ಹಿರಿಯೂರು. ಸಹಿ/- ಪೌರಾಯುಕ್ತರು, ನಗರಸಭೆ, ಹಿರಿಯೂರು.
DIPR/CTA/KSMCA/409/2023-24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ವಿಭಾಗ, ಪಶ್ಚಿಮ ವಲಯ
ಜಂಟಿ ಆಯುಕ್ತರು (ಪಶ್ಚಿಮ) ಕಚೇರಿ ಆವರಣ, 2ನೇ ಮಹಡಿ,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು - 560 020.

ಸಂಖ್ಯೆ:ಕಾಪಾಅ/ಯೋಪಶ್ಚಿಮ/ಟೆಂಡರ್/12/2023-24 ದಿನಾಂಕ:15.12.2023

ಅಲ್ಪಾವಧಿ ಟೆಂಡರ್ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಸೇವಾ ಟೆಂಡರ್)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ-ಪಶ್ಚಿಮ) ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಸೇವೆ/ಕಾಮಗಾರಿಗಳಿಗೆ ಹೆಸರಾಂತ ಸೇವಾ ಪೂರೈಕೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kppp.karnataka.gov.in ಮೂಲಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೊತ್ತ (₹.ಗಳಲ್ಲಿ)	ಇಎಂಡಿ (₹.ಗಳಲ್ಲಿ)
ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯ ಪಶ್ಚಿಮ ವಲಯ ಮತ್ತು ದಾಸರಹಳ್ಳಿ ವಲಯದ -ಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಕ್ಯಾಟರಿಂಗ್ ಸೇವೆಗಳನ್ನು ಒದಗಿಸುವುದು.	36,48,96,000/-	36,50,000/-

1.	ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್:http://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಸುವ ದಿನಾಂಕ	18.12.2023 ರಿಂದ
2.	ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	20.12.2023ರ ಸಂಜೆ 4:00 ಗಂಟೆಯವರೆಗೆ
3.	ಬಿಡ್ ಪೂರ್ವಭಾವಿ ಸಭೆಯ ದಿನಾಂಕ	22.12.20233ರ ಮಧ್ಯಾಹ್ನ 3:00 ಗಂಟೆಗೆ
4.	ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	30.12.2023ರ ಸಂಜೆ 4:00 ಗಂಟೆಯವರೆಗೆ
5.	ಇ-ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	01.01.2024ರ ಸಂಜೆ 4:30 ಗಂಟೆಗೆ (ಸಾಧ್ಯವಾದಲ್ಲಿ)

ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ www.bbmp.gov.in. ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಯೋಜನೆ - ಪಶ್ಚಿಮ

ನಗರಸಭಾ ಕಾರ್ಯಾಲಯ ಹೊಸಕೋಟೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ-562114.
ಸಹಾಯವಾಣಿ: 27931759, ದೂರವಾಣಿ: 27931221
ಇ-ಮೇಲ್: itstaff_ulb_hosakote@yahoo.com, ವೆಬ್‌ಸೈಟ್: www.hosakotecity.mrc.gov.in

ನಂ.ನಸಹೊ/ಆ.ಶಾ/ಘವನಿ/ಸಿ.ಆರ್/ಟೆಂಡರ್-1/2023-24 ದಿನಾಂಕ: 14-12-2023

ಟೆಂಡರ್ ಪ್ರಕಟಣೆ (ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಮೂಲಕ)

ಪೌರಾಯುಕ್ತರು. ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2023-24ನೇ ಸಾಲಿನ ನಗರಸಭಾ ನಿಧಿ, ಸ್ವಚ್ಛಭಾರತ್ ಮಿಷನ್-01, 15ನೇ ಹಣಕಾಸು ಮುಕ್ತ ನಿಧಿ-2022-23, 2023-24 ರ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರು / ಮಾನವ ಸಂಪನ್ಮೂಲ ಗುತ್ತಿಗೆದಾರರು ಹಾಗೂ ಸರಬರಾಜುದಾರರಿಂದ ಕೆ.ಪಿ.ಪಿ - ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ರೂ.ಗಳಲ್ಲಿ
01	DMA/2023-24/SE1499	87.36	1,75,000/-
02	DMA/2023-24/SE1502	83.79	1,68,000/-
03	DMA/2023-24/IND0953	17.20	35,000/-
04	DMA/2023-24/IND0954	5.25	13,500/-
05	DMA/2023-24/OW/WORK_INDENT9900	5.00	12,500/-
06	DMA/2023-24/OW/WORK_INDENT9909	30.00	60,000/-

1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. 2) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **29-12-2023 ರಂದು ಸಂಜೆ 5.00 ಗಂಟೆಯವರೆಗೆ. 3)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **01-01-2024 ರಂದು ಬೆಳಿಗ್ಗೆ 11.00 ಗಂಟೆಗೆ** ನಿಗದಿಪಡಿಸಲಾಗಿರುತ್ತದೆ. 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **03-01-2024 ರಂದು ಬೆಳಿಗ್ಗೆ 11.00 ಗಂಟೆಗೆ. 5)** ಹಚ್ಚಿನ ವಿವರಗಳನ್ನು ಕಚೇರಿಯ ತಾಂತ್ರಿಕ ಶಾಖೆಯಿಂದ ಅಥವಾ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಯುವುದು.

ಸಹಿ/- ಪೌರಾಯುಕ್ತರು ಪುರಸಭೆ, ಹೊಸಕೋಟೆ
ಸಹಿ/- ಆಡಳಿತಾಧಿಕಾರಿಗಳು ಪುರಸಭೆ, ಹೊಸಕೋಟೆ
DIPR/CP/2570/SPAN/2023-24

ಕರ್ನಾಟಕ ಸರ್ಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರ್ಕಾರ ಸ್ವಾಯತ್ತ ಸಂಸ್ಥೆ)
ವಿರೇಶ ನಗರ, ಸೇಡಂ ರಸ್ತೆ, ಕಲಬುರಗಿ, ಇ-ಮೇಲ್: directorgimsgulbarga@gmail.com ದೂ.: 08472-260252.

ಸಂಖ್ಯೆ: GIMS/KLB/TENDER/X-ray/CR/26/2023-24/Call-2/2268 ದಿನಾಂಕ: 14-12-2023

:: ಟೆಂಡರ ಪ್ರಕಟಣೆ ::

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿಯ ಜಿಮ್ಸ್ ಆಸ್ಪತ್ರೆಯ ಕ್ಷ-ಕಿರಣ ವಿಭಾಗದಲ್ಲಿ ರೋಗಿಗಳ ಉಪಚಾರಕ್ಕಾ ಅವಶ್ಯಕವಿರುವ "X-Ray Films & Contrast" ಖರೀದಿಸಲು ಅಧೀಕೃತ ಏಜೇನ್ಸಿ (ಸಂಸ್ಥೆ) ಯವರಿಂದ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ದತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ ಮೂಲಕ ಟೆಂಡರ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ : No. GIMS/KLB/TENDER/X-Ray/CR/26/2023-24/Call-2 Date: 14-12-2023 IND. No: DME/2023-24/IND0364, 2) ಅನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು E-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **29-12-2023 ಸಾಯಂಕಾಲ 4:30ಕ್ಕೆ,** 3) ಆನಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೋನೆಯ ದಿನಾಂಕ: **19-12-2023 ಸಾಯಂಕಾಲ 05.00 ಗಂ ಯವರೆಗೆ,** 4) ಟೆಂಡರ ಪೂರ್ವಭಾವಿ ಸಭೆ: **20-12-2023 ಬೆಳಿಗ್ಗೆ 11:30ಕ್ಕೆ,** 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **30-12-2023 ಸಾಯಂಕಾಲ 5:00ಕ್ಕೆ,** 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ : **01-01-2024 11:30ಕ್ಕೆ,** 7) ಟೆಂಡರನ ಮೊತ್ತ: **ರೂ. 76,65,866/-,** 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ. 1,91,647/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ, ದೂರವಾಣಿ ಸಂಖ್ಯೆ: 08472-260252, Mobile : 9482093568 directorgimsgulbarga@gmail.com

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/566/ಕೆ.ಎಸ್.ಎಂ.ಸಿ.&ಎ/2023-24

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನೀನಿನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ-584135.

ಸಂ:ಕಾ.ಅ-5/ಕ.ನೀ.ನಿ.ನಿ/ಬಜೆಟ್ ವರ್ಕ-2023/ಟೆಂಡರ್/2023-24/1046 ದಿನಾಂಕ:14.12.2023.

ಅಲ್ಪಾವಧಿ ಟೆಂಡರ್

ಈ ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು ಜಿಲ್ಲೆಯ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದಲ್ಲಿ ನೊಂದಾಯಿಸಲ್ಪಟ್ಟ KPWD/ CPWD Class-1 registration enrolled Contractors /Firm/ individual / JV Partner/ with Tie up partners ರವರಿಂದ "Survey, Investigation, Design, Supply, Installation, Testing and Commissioning of Lift Irrigation System (Head Works consisting of construction of Intake Trough, Jack well cum pump house, Vertical Turbine Pumps coupled to HT Motors, Pump house Electrical works, Necessary valves, Delivery Pipe, Manifold system, Power supply including 110 KV /33 KV transformer bay, terminal bay, 33 KV Electrical Sub Station, Transmission line, Raising Main, Pressure Distribution) for filling up of Basappa tank in Gunjalli Village & other tanks of Raichur taluk by lifting water from Tungabhadra River near Chikkamanchale village including Operation and Maintenance for a period of 5 years after successful completion of work for (BASAPPA) TANK FILLING SCHEMEon Turn-Key Basis". ಕಾಮಗಾರಿಯ ಟೆಂಡರ್‌ನ್ನು "ಟರ್ನ ಕೀ" ಆಧಾರದ ಮೇಲೆ ನಿಯಾಮಾವಳಿಗಳಂತೆ ವ್ಯವಸ್ಥಾಪಕ ನಿರ್ದೇಶಕರು ಕನೀನಿನಿ ಇವರ ಪರವಾಗಿ ಕರೆಯಲಾಗಿದೆ. ಟೆಂಡರ್‌ಗಿಟ್ಟ ಮೊತ್ತ ರೂ.142.80 ಕೋಟಿಗಳು ಮತ್ತು ಇ.ಎಂ.ಡಿ. ಮೊತ್ತ ರೂ. 1.43 ಕೋಟಿಗಳು, ವಿವರಗಳನ್ನು kppp.gov.in ಜಾಲದಲ್ಲಿ ಅಥವಾ ಈ ಕಛೇರಿಂದ ಕಛೇರಿ ವೇಳೆಯಲ್ಲಿ ಕೆಲಸದ ದಿನಗಳಲ್ಲಿ ಪಡೆಯಬಹುದು. ಈ ಕಛೇರಿಯ ಪೋ.ಸಂ:08532-251105 ಮತ್ತು email: ee5.divisionyer@gmail.com

ಸಹಿ/- ಕಾರ್ಯಪಾಲಕ ಅಭಿಯಂತರರು,
ಕನೀನಿನಿ, ನಂ.5 ಕಾಲುವೆ ವಿಭಾಗ, ಯರಮರಸ್ ಶಿಬಿರ.
DIP/RCR/335/KSMC&A/332/2023-24

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ

ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ತಾಶಾ-04/2023-24/1693 ದಿನಾಂಕ: 15.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಏಕಲಕೋಟೆ/ದ್ವಿಲಕೋಟೆ ಪದ್ಧತಿ (ಇ-ಪ್ರೊಕ್ಯೂರ್ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು KW-1, KW-2, KW-3 & KW-4 (Standard Bid Document) ನಿಬಂಧನೆಗಳೊಪಟ್ಟಂತೆ. 2021-22, 2022-23ನೇ ಸಾಲಿನ JJM ಯೋಜನೆ ಯಡಿಯಲ್ಲಿನ ರೂ. 23.55 ಲಕ್ಷ ದಿಂದ ರೂ. 129.59 ಲಕ್ಷಗಳ ಒಟ್ಟು 02 ಕಾಮಗಾರಿಗಳಿಗೆ ಅರ್ಹ ನೊಂದಾಯಿತ 4ನೇ, 3ನೇ, 2ನೇ & 1ನೇ ದರ್ಜೆ ಸಿವಿಲ್ ಗುತ್ತಿಗೆದಾರರು, ಭಾಗವಹಿಸಬಹುದಾದ ಕಾಮಗಾರಿಗಳಿಗೆ ಐಟಂವಾರು ಇ-ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ https://kppp.karnataka.gov.in ಸಂಪರ್ಕಿಸಬಹುದಾಗಿದೆ.

1. ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ : 15.12.2023 ರಿಂದ 22.12.2023 ವರೆಗೆ. 2) ಟೆಂಡರ ಪೂರ್ವಭಾವಿ ಸಭೆ ಸ್ಥಳ ಮತ್ತು ದಿನಾಂಕ : 21.12.2023 ರಂದು 11.00 ಗಂಟೆಯವರೆಗೆ Office of the Executive Engineer, RDW&S Division, Zilla Panchayat Office premises, Bidar-585 401. 3. ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : 22.12.2023 ರಂದು 17:00 ಗಂಟೆಯವರೆಗೆ 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26.12.2023 ರಂದು 11.00 ಗಂಟೆಯ ನಂತರ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ-ಬೀದರ
ವಾ.ಸಾ.ಸಂ.ಇ/ಬೀದರ/172/ಕೆಎಸ್ಎಂಸಿ&ಎ/2023-24

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ

ಸಂಖ್ಯೆ: ಕೃಉಮಾಸ(ಉಡುಪಿ)/1306/2023-24 ದಿನಾಂಕ: 12-12-2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪದ್ಧತಿಯಲ್ಲಿ ಮಾತ್ರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿತ ಹಾಗೂ Standard Tender Documents KW-4 Clause-3 (with latest amendments) ರಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ ರೂ. ಗಳಲ್ಲಿ	ಇ.ಎಂ.ಡಿ. ಮೊಬಲಗು ರೂ. ಶೇಕಡ 1.50 ರಂತೆ ಅಥವಾ ಕನಿಷ್ಠ (ಇ-ಪೇಮೆಂಟ್)	ಕೆಲಸ ಪೂರೈಸಲು ನಿಗದಿಪಡಿಸಿದ ಅವಧಿ (ಮಳೆಗಾಲ ಹೊರತುಪಡಿಸಿ)	ಅರ್ಹ ಗುತ್ತಿಗೆದಾರರ ದರ್ಜೆ	ಇ-ಪ್ರೋಸೆಸಿಂಗ್ ಫೀ (ಇ-ಪೇಮೆಂಟ್)
1.	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಉಡುಪಿ. 2023-24ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಅನುಮೋದಿತ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. (ಐಟಂವಾರು ಟೆಂಡರ್)	100,21,143.00	2,00,000.00	03 ತಿಂಗಳು	ಕೆಡಬ್ಲ್ಯೂ-4 ಕ್ಲಾಸ್-3ರಲ್ಲಿ ಅರ್ಹರಿರುವ & ಲೋ. ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ

ಪ್ರೀ ಬಿಡ್ ಮೀಟಿಂಗ್ ದಿನಾಂಕ: 18-12-2023 ಬೆಳಿಗ್ಗೆ 11.00 ಗಂಟೆಗೆ
ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ: 28.12.2023 ಮತ್ತು ವೇಳೆ:4.30 ಸಂಜೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29-12-2023 ಮತ್ತು ವೇಳೆ: 4.30 ಸಂಜೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ: 30-12-2023 ಮತ್ತು ವೇಳೆ: 11.00 ಬೆಳಿಗ್ಗೆ
Tender documents may be downloaded from Karnataka Public Procurement (Portal website: https://kppp.karnataka.gov.in/#/portal/portal-home under login for Contractors
ಟೆಂಡರುಗಳನ್ನು ತೆರೆಯುವ ಸ್ಥಳ: ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ, ಉಡುಪಿ ಜಿಲ್ಲೆ.
ಪತ್ರ ವ್ಯವಹಾರದ ವಿಳಾಸ: ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ, ಉಡುಪಿ ಜಿಲ್ಲೆ.

ಸಹಿ/- (ಎಂ. ಗಾಯಿತ್ರಿ) ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ.
ಸಹಿ/- ಮಮತಾ ದೇವಿ.ಜಿ.ಎಸ್.) ಆಡಳಿತಾಧಿಕಾರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಉಡುಪಿ.

ಕರ್ನಾಟಕ ಸರ್ಕಾರ

ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

"ಕಲ್ಯಾಣ ಸುರಕ್ಷಾ ಭವನ" ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029
ದೂರವಾಣಿ ಸಂಖ್ಯೆ: 080-29759983\8883, Email:kuwssb@gmail.com
ವೆಬ್‌ಸೈಟ್: ksuwssb.karnataka.gov.in

ಟೆಂಡರ್ ಪ್ರಕಟಣೆ

ಸಂಖ್ಯೆ: ಅಸಂಕಾ/ಇಎಸ್‌ಟಿ/ಟೆಂಡರ್/ಸಿಆರ್-13/2023-24 ದಿನಾಂಕ: 16-12-2023

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು, ಇವರು ಮಂಡಳಿಯ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪೂರೈಸಲು ಸೂಕ್ತ ಸಂಸ್ಥೆಯನ್ನು ಆಯ್ಕೆಮಾಡುವ ಉದ್ದೇಶಕ್ಕಾಗಿ, ಇ-ಆಡಳಿತ ಇಲಾಖೆಯ ಇ-ಸಂಗ್ರಹಣಾ ವೇದಿಕೆಯ ಮುಖಾಂತರ 15 ದಿನಗಳ ಅಲ್ಪಾವಧಿಯ ಟೆಂಡರ್ ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 03/01/2024 ರ ಸಾಯಂಕಾಲ 5 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ-ಸಂಗ್ರಹಣಾ ವೇದಿಕೆಯ ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/-
ಜಂಟಿ ಕಾರ್ಮಿಕ ಆಯುಕ್ತರು ಹಾಗೂ ಜಂಟಿ ಕಾರ್ಯದರ್ಶಿಗಳು,
ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ
ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.
DIPR/CP/2587/Zen/2023-24

ಕರ್ನಾಟಕ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾಂಡೇಲಿ ಉಪ ವಿಭಾಗ, ದಾಂಡೇಲಿ-581325
Office of the Assistant Conservator of Forests, Dandeli Sub Division, Dandell-581325
Telephone No: 08284-233946 Email: acfdandeli96@gmail.com
ಸಂಖ್ಯೆ : ಸ.ಅ.ಸಂ/ದಾಂಡೇಲಿ/ಟೆಂಡರ್/2023-24/ ದಿನಾಂಕ: 14-12-2023

ಟೆಂಡರ್ ಪ್ರಕಟಣೆ

1	ಟೆಂಡರ್ ಪ್ರಕಟಣೆ ಸಂಖ್ಯೆ/KFD/2023-24/IND0065 ದಿನಾಂಕ: 14-12-2023, ಗ್ರಾಮ ಅರಣ್ಯ ಸಮಿತಿ, ಮೌಳಂಗಿ/ದಾಂಡೇಲಿ ವಲಯ ಮೌಳಂಗಿ ಗ್ರಾಮ ಅರಣ್ಯ ಸಮಿತಿ, ಮೌಳಂಗಿ ಗ್ರಾಮ ವ್ಯಾಪ್ತಿಯಲ್ಲಿ ಅಲ್ಪಾವಧಿ ಟೆಂಡರ್
2	ಟೆಂಡರ್ ವಿವರ: 2023-24 ನೇ ಸಾಲಿಗೆ "SOLAR WATER HEATER 150 LPD" ಪೂರೈಕೆ ಮತ್ತು ಅಳವಡಿಕೆ.
3	ಮೊತ್ತ 35,00,000/-
4	ಇ.ಎಂ.ಡಿ. ಮೊತ್ತ 70,000/-
5	ಟೆಂಡರ್ ಆರಂಭ : ದಿನಾಂಕ: 14-12-2021
6	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:29-12-2023 ಮತ್ತು ಸಮಯ ಅಪರಾಹ್ನ 4.00 ಗಂಟೆ
7	ತಾಂತ್ರಿಕ ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ 30-12-2023 ಅಪರಾಹ್ನ 4.30 ಗಂಟೆ
8	ಆರ್ಥಿಕ ಟೆಂಡರ್ ತೆರೆಯಲು ದಿನಾಂಕ ಮತ್ತು ಸಮಯ 01-01-2024 ಅಪರಾಹ್ನ 4.30 ಗಂಟೆ.

ಹೆಚ್ಚಿನ ಮಾಹಿತಿಯನ್ನು (http://kppp.karnataka.gov.in) ವೆಬ್ ಸೈಟ್ ಅಥವಾ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ದಾಂಡೇಲಿ ಉಪ-ವಿಭಾಗ, ದಾಂಡೇಲಿ.

ಆಯುಷ್ ಇಲಾಖೆ

ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ

ಧನ್ವಂತರಿ ರಸ್ತೆ, ಬೆಂಗಳೂರು-560009.
ದೂರವಾಣಿ: 080-22872848/22341261, Email: principalgamc9@gmail.com
ಸಂಖ್ಯೆ: ಜಸಆಯುಳ/27/ಸರಬ/2023-24 ದಿನಾಂಕ: 15-12-2023

ಟೆಂಡರ್ ಅಧಿಸೂಚನೆಗೆ ತಿದ್ದುಪಡಿ

ವಿಷಯ: ಶ್ರೀ ಜಯಚಾಮರಾಜೇಂದ್ರ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆ ಮತ್ತು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿನ ಒಳರೋಗಿಗಳಿಗೆ ಪಥ್ಯಾಹಾರ ಸಿದ್ಧಪಡಿಸಿ ಪಥ್ಯಾಹಾರವನ್ನು ಸರಬರಾಜು ಮಾಡುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸಲು ಇ-ಟೆಂಡರ್ ಅಧಿಸೂಚನೆ.

ಉಲ್ಲೇಖ: ಟೆಂಡರ್ ಅಧಿಸೂಚನೆ ಸಂಖ್ಯೆ: ಜಸಾಯುಳ/27/ಸರಬ/2023-24, ದಿನಾಂಕ : 05-12-2023

ಉಲ್ಲೇಖಿತ ಟೆಂಡರ್ ಅಧಿಸೂಚನೆಯ ಟೆಂಡರ್ ಡಾಕ್ಯೂಮೆಂಟ್‌ಗೆ ಸೆಕ್ಷನ್-4 ರ ಮಧ್ಯಾಹ್ನದ ಪಥ್ಯಾಹಾರದ ಊಟಕ್ಕೆ Ragi Ball (Good Quality) ಎಂಬುದನ್ನು "Ragi Ball / Wheat Chapati (Good Quality) ಎಂದು ತಿದ್ದುಪಡಿ ಮಾಡಿ ಓದಿಕೊಳ್ಳುವುದು

ಸಹಿ/-
ಪ್ರಾಚಾರ್ಯರು /ಅಧ್ಯಕ್ಷರು,
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಶ್ರೀ.ಜ.ಸ.ಆ.ಯುಆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2576/ಆಕಾರ್/2023-24

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

#49, ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು-560 001
ಫೋನ್: 080-2558 6520/2558 9112 ಫ್ಯಾಕ್ಸ್: 080-2588 6321
e-mail: ho@kspcb.gov.in | Website: kspcb.karnataka.gov.in

IFT No:PCB/133/SS/AO/2022-23/1615 Date:13.12.2023

ಟೆಂಡರ್‌ಗಾಗಿ ಆಹ್ವಾನ

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಕಛೇರಿ ಮತ್ತು ಇತರ ಅಧೀನ ಕಛೇರಿಗಳಿಗೆ ಭದ್ರತಾ ಸೇವೆಗಳನ್ನು ಒದಗಿಸುವುದಕ್ಕಾಗಿ

ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ http://www.kppp.karnataka.gov.in ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಮಂಡಳಿಯ ಕಛೇರಿಗಳಿಗೆ **ಭದ್ರತಾ ಸೇವೆಗಳನ್ನು** ಒದಗಿಸಲು ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್‌ದಾರರು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ ಪ್ರಕಾರ ಸೇವಾ ಶುಲ್ಕವನ್ನು ಉಲ್ಲೇಖಿಸಬೇಕು. ಟೆಂಡರ್‌ದಾರರು VI ಮತ್ತು VII ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿದ ತಾಂತ್ರಿಕ ಮಾನದಂಡಗಳು ಮತ್ತು ಅರ್ಹತಾ ಮಾನದಂಡಗಳನ್ನು ಗಮನಿಸಬೇಕಾಗುತ್ತದೆ ಮತ್ತು ಇದನ್ನು ಅರ್ಹತೆ ಪಡೆಯಲು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಟೆಂಡರ್ ಡಾಕ್ಯುಮೆಂಟನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.kppp.karnataka.gov.in ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ
ಟೆಂಡರ್‌ನೊಂದಿಗೆ ಇಎಂಡಿ ಮೊತ್ತವನ್ನು ಇ-ಪಾವತಿಯ ಮೂಲಕ ಪಾವತಿಸಬೇಕು. ಇತರ ವಿವರಗಳಿಗಾಗಿ ಟೆಂಡರ್ ದಾಖಲೆಗಳನ್ನು ನೋಡಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ
ವಾಸಾಸಂಇ/ವಾಪ್ರ/ಜಿಎ/2562/2023-24

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹಾವೇರಿ ವಿಭಾಗ ಹಾವೇರಿ

E-Mail : dcfhaveri@gmail.com Tel No : 08375-298936
ಎ6/ರಾ.ಬೆ.ವ.ಜೀ/ನೀ.ಬು/ಟೆಂಡರ್-ಕಂ-ಬಹಿರಂಗ ಹರಾಜು/ಸಿಆರ್-/2023-24 ದಿನಾಂಕ : 08/12/2023

ನೀಲಗಿರಿ ಮರಗಳ ಬುಡಚಿಗಳ ಟೆಂಡರ್-ಕಂ-ಬಹಿರಂಗ ಹರಾಜು ಪ್ರಕಟಣೆ

ಹಾವೇರಿ ಪ್ರಾದೇಶಿಕ ಅರಣ್ಯ ವಿಭಾಗ ವ್ಯಾಪ್ತಿಯ ರಾಣೇಬೆನ್ನೂರು ವನ್ಯಜೀವಿ ವಲಯದ, ಹುಲ್ಲತ್ತಿ ಅಭಯಾರಣ್ಯದಲ್ಲಿರುವ 5249 ನೀಲಗಿರಿ ಮರಗಳ ಬುಡಚಿಗಳ ಬಹಿರಂಗ ಹರಾಜನ್ನು ದಿನಾಂಕ : **22-12-2023** ರಂದು ರಾಣೇಬೆನ್ನೂರು ವನ್ಯಜೀವಿ ವಲಯದ ಆವರಣದಲ್ಲಿ ನಡೆಸಲಾಗುವುದು. ವಿವರಗಳು : (1) ಟೆಂಡರ್-ಕಂ-ಬಹಿರಂಗ ಹರಾಜು ದಿನಾಂಕ : **22-12-2023** (2) ಟೆಂಡರ್-ಕಂ-ಬಹಿರಂಗ ಹರಾಜು ಫಾರ್ಮ ನೀಡುವ ದಿನಾಂಕ : **22-12-2023** ರಂದು ಬೆಳಿಗ್ಗೆ 10-00 ಗಂಟೆಯಿಂದ 1-00 ಗಂಟೆಯವರೆಗೆ (3) ಟೆಂಡರ್ ತೆರೆಯುವ ದಿನಾಂಕ : **22-12-2023** ರಂದು ಮಧ್ಯಾಹ್ನ 4-00 ಗಂಟೆಗೆ (4) ಸದರಿ ದಿನಾಂಕದಂದು ಟೆಂಡರನಲ್ಲಿ ಯಾರೂ ಭಾಗವಹಿಸದೇ ಇದ್ದ ಪಕ್ಷದಲ್ಲಿ ಹಾಗೂ ಹರಾಜು ಜರುಗದೇ ಇದ್ದ ಪಕ್ಷದಲ್ಲಿ ದಿನಾಂಕ : **28-12-2023** ರಂದು ಟೆಂಡರ್-ಕಂ-ಬಹಿರಂಗ ಹರಾಜನ್ನು ಜರುಗಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : **8951641082** ನೇದ್ದನ್ನು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ ಸಂಪರ್ಕಿಸಬಹುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಹಾವೇರಿ ವಿಭಾಗ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/373/2023-24

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆವಿಕಂ ಕೆಳಗೆ ತಿಳಿಸಲಾದ ಮಾರ್ಗದ ಸಾಮಗ್ರಿಗಳನ್ನು ಖರೀದಿಸುವ ಸಲುವಾಗಿ ಅರ್ಹ ಬಿಡ್ಡುದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮುಖಾಂತರ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಕ್ರ. ಸಂ	ವಿಚಾರಣೆ ಸಂಖ್ಯೆ	ಕಾಮಗಾರಿಯ ಹೆಸರು	ಬಿಡ್ ದಾಖಲೆಗಳ ಲಭ್ಯತೆ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಬಿಡ್ ದಾಖಲೆ ತೆರೆಯುವ ದಿನಾಂಕ
1.	ಬೆವಿಕಂ/2023-24/ಐಎನ್‌ಡಿ0023	7/10 ಎಸ್‌ಡಬ್ಲ್ಯೂಜಿ ಗಯ್ ವೈರ್ ಖರೀದಿ	18.12.2023 15:00 ಗಂಟೆ	01.01.2024 15:00 ಗಂಟೆ	02.01.2024 15:15 ಗಂಟೆ
2.	ಬೆವಿಕಂ/2023-24/ಐಎನ್‌ಡಿ0024	8 ಎಸ್‌ಡಬ್ಲ್ಯೂಜಿ ಜಿ ಐ ವೈರ್ ಖರೀದಿ	19.12.2023 15:00 ಗಂಟೆ	02.01.2024 15:00 ಗಂಟೆ	03.01.2024 15:15 ಗಂಟೆ
3.	ಬೆವಿಕಂ/2023-24/ಐಎನ್‌ಡಿ 0025	25ಕೆವಿಎ 4/5 ಸ್ಟಾರ್ ಶ್ರೇಣಿಯ ಪರಿವರ್ತಕಗಳ ಸಂರಚನೆಗಾಗಿ ಎಸ್‌ಪಿಎಂಟಿ ಸ್ಟ್ರಕ್ಚರಲ್ ಸಾಮಗ್ರಿಗಳ ಖರೀದಿ-(ಜಿಐ)	20.12.2023 15:00 ಗಂಟೆ	18.01.2024 15:00 ಗಂಟೆ	19.01.2024 15:15 ಗಂಟೆ

ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ಮೂಲಕ ಪಡೆಯಬಹುದು. ಆಸಕ್ತ ಬಿಡ್‌ದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಬಿಡ್‌ದಾರರು ಕೆಪಿಪಿಪಿ ಸಹಾಯವಾಣಿ ಸಂಪರ್ಕ ಸಂಖ್ಯೆಗಳು: (080-46010000, 080-68948777) ಅಥವಾ support@eprochelpdesk. com ನಲ್ಲಿ ಸಹಾಯ ಪಡೆದುಕೊಳ್ಳಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/- ಪ್ರಧಾನ ವ್ಯವಸ್ಥಾಪಕರು(ವಿದ್ಯುತ್),
ಖರೀದಿ, ಬೆವಿಕಂ, 4ನೇ ಮಹಡಿ, ಕೆ.ಆರ್. ವೃತ್ತ,
ಬೆಂಗಳೂರು-560001.
ದೂರವಾಣಿ: 080-22354939.

₹35,433 ಕೋಟಿ ಖರ್ಚು; ಪ್ರಗತಿ ಕಾಣದ ಉತ್ತರ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳು– ಮುಖ್ಯಮಂತ್ರಿ ಬೇಸರ

ತಾರತಮ್ಯ ನೀಗಿಸಲು ಉನ್ನತಾಧಿಕಾರ ಸಮಿತಿ

ಪ್ರಜಾವಾಣಿ ವಾರ್ತೆ

ವಿಧಾನಸಭೆ/ವಿಧಾನ ಪರಿಷತ್: ನಂಜುಂಡಪ್ಪ ವರದಿಯ ಅನುಷ್ಠಾನದ ಬಳಿಕವೂ ತಾಲ್ಲೂಕುಗಳು ಹಿಂದುಳಿದಿರುವಿಕೆಗೆ ಕಾರಣ ಹುಡುಕಿ, ಅಧ್ಯಯನ ವರದಿ ಪಡೆಯಲು ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಉನ್ನತಾಧಿಕಾರ ಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದರು.

ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಶುಕ್ರವಾರ ಉಭಯ ಸದನಗಳಲ್ಲಿ ಸುದೀರ್ಘ ಉತ್ತರ ನೀಡಿದ ಅವರು, ಆರು ತಿಂಗಳ ಕಾಲಮಿತಿಯಲ್ಲಿ ವರದಿ ಪಡೆದು ಜಿಲ್ಲೆ– ಜಿಲ್ಲೆಗಳ ಮತ್ತು ತಾಲ್ಲೂಕು– ತಾಲ್ಲೂಕುಗಳ ನಡುವೆ ಇರುವ ತಾರತಮ್ಯ ನಿವಾರಣೆಗೆ ದೃಢ ಹೆಜ್ಜೆ ಇಡಲಾಗುವುದು ಎಂದು ಹೇಳಿದರು.

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗ ಪ್ರಾದೇಶಿಕ ತಾರತಮ್ಯ ನಿವಾರಣೆಗೆ ಡಾ.ಡಿ.ಎಂ.ನಂಜುಡಪ್ಪ ಅವರ ನೇತೃತ್ವದ ಸಮಿತಿ ರಚಿಸಲಾಗಿತ್ತು. ನಂಜುಂಡಪ್ಪ ವರದಿ ಸಲ್ಲಿಕೆಯಾಗಿ 21 ವರ್ಷಗಳಾದವು. ಈ ವರದಿಯನ್ನು ಆಧರಿಸಿ ಹಿಂದುಳಿದ 114 ತಾಲ್ಲೂಕುಗಳ ತಾರತಮ್ಯ ನಿವಾರಣೆ ಮತ್ತು ಅಭಿವೃದ್ಧಿಗಾಗಿ ಈವರೆಗೆ ₹46,453 ಕೋಟಿ ಹಂಚಿಕೆ ಮಾಡಲಾಗಿತ್ತು. ಇದರಲ್ಲಿ ₹35,433 ಕೋಟಿ ಖರ್ಚಾಗಿದೆ.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉತ್ತರ ಕರ್ನಾಟಕ ಸಮಸ್ಯೆಗಳ ಕುರಿತ ಚರ್ಚೆಗೆ ಉತ್ತರ ನೀಡುವಾಗ ಬಿಜೆಪಿ ಶಾಸಕರು ಸಭಾಪತಿ ಪೀಠದ ಎದುರಿನ ಬಾವಿಗಿಳಿದು ಪ್ರತಿಭಟಿಸಿದರು –ಪ್ರಜಾವಾಣಿ ಚಿತ್ರ

ಆದರೆ ಈ ತಾಲ್ಲೂಕುಗಳಲ್ಲಿ ತಾರತಮ್ಯ ನಿವಾರಣೆ ಆಗಿಲ್ಲ. ಬದಲಿಗೆ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ಹೆಚ್ಚಾಗಿದೆ. ವರದಿ ನೀಡಿದ ಸಂದರ್ಭ 175 ತಾಲ್ಲೂಕುಗಳಿದ್ದವು. ಈಗ 236 ತಾಲ್ಲೂಕುಗಳಾಗಿವೆ. ಇಂದಿನ ಕಾಲಘಟ್ಟಕ್ಕೆ ಅನುಗುಣವಾಗಿ ತಾರತಮ್ಯ ನಿವಾರಣೆಗೆ ಉನ್ನತಾಧಿಕಾರ ಸಮಿತಿ ರಚಿಸಲಾಗುವುದು ಎಂದು ವಿವರಿಸಿದರು.

ಇಷ್ಟು ದೊಡ್ಡ ಪ್ರಮಾಣದ ಹಣ ಖರ್ಚು ಮಾಡಿದರೂ ಯಾದಗಿರಿ 30, ಕಲಬುರ್ಗಿ 29, ರಾಯಚೂರು28, ಹಾವೇರಿ 27, ದಾವಣಗೆರೆ 26, ಕೊಪ್ಪಳ 25, ಚಿತ್ರದುರ್ಗ 24, ವಿಜಯಪುರ 23, ಬೀದರ್ 22, ಚಾಮರಾಜನಗರ 21 ನೇ ಸ್ಥಾನಗಳಲ್ಲಿವೆ. ಇವುಗಳಲ್ಲಿ ಹಳೇ ಮೈಸೂರು ಭಾಗದ ಜಿಲ್ಲೆಗಳೂ ಇವೆ. ರಾಜ್ಯದ ಸರಾಸರಿ ತಲಾ ಆದಾಯ ₹2.66 ಲಕ್ಷ ಇದ್ದರೆ, ಹಿಂದುಳಿದ ಜಿಲ್ಲೆಗಳಲ್ಲಿ ₹1.5 ಲಕ್ಷ ಇದೆ ಎಂದರು.

‘ಪ್ರಧಾನಿ ಬಳಿ ಪಿಎಂ ನಿಯೋಗ’

‘ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುದಾನ ಮತ್ತು ನಿರಾಕ್ಷೇಪಣಾ ಪತ್ರ ಪಡೆಯಲು ಪ್ರಧಾನಿ ಬಳಿ ಸರ್ವ ಪಕ್ಷಗಳ ನಿಯೋಗ ಒಯ್ಯಲು ಸಿದ್ಧನಿದ್ದೇನೆ. ಅದಕ್ಕೆ ಬಿಜೆಪಿಯವರು ಸಮಯ ನಿಗದಿ ಮಾಡಿಕೊಡಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಕೇಂದ್ರದ ಮೇಲೆ ಒತ್ತಡ ಹಾಕಿ ತೀರುವಳಿ ಕೊಡಿಸಿದರೆ ತಕ್ಷಣವೇ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು’ ಎಂದು ಹೇಳಿದರು.

ಪರಿಷತ್‌ನಲ್ಲಿ ಬಿಜೆಪಿ ಧರಣಿ

ವಿಧಾನ ಪರಿಷತ್‌ನಲ್ಲಿ ಉತ್ತರ ಕರ್ನಾಟಕದ ಚರ್ಚೆಯ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ನೀಡುವಾಗ ಬಿಜೆಪಿ ಸದಸ್ಯರು ನಿರಂತರವಾಗಿ ಅಡ್ಡಿಪಡಿಸಿದರು. ಗದ್ದಲದ ಮಧ್ಯೆಯೇ ಮಾತನಾಡಿದ ಸಿದ್ದರಾಮಯ್ಯ ಸರ್ಕಾರದ ಯೋಜನೆಗಳನ್ನು ಸಮರ್ಥಿಸಿಕೊಂಡರು. ಬಿಜೆಪಿ ಅವಧಿಯಲ್ಲಿ ಯಾವ ಕೆಲಸವನ್ನೂ ಮಾಡಲಿಲ್ಲ ಎಂದು ಚುಚ್ಚಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಸದಸ್ಯರು ಸಭಾಪತಿಗಳ ಪೀಠದ ಮುಂದೆ ಧರಣಿ ಆರಂಭಿಸಿದರು.

ಸಿದ್ದರಾಮಯ್ಯ ಅವರು ಬರ, ಉತ್ತರ ಕರ್ನಾಟಕ ಕುರಿತ ಚರ್ಚೆಯನ್ನು ಮಣ್ಣುಪಾಲು ಮಾಡಿದ್ದಾರೆ. ಈ ಭಾಗದ ಜನರಿಗೆ ಜನರಿಗೆ ದ್ರೋಹ ಮಾಡಿದ್ದಾರೆ

ಆರ್.ಅಶೋಕ
ವಿರೋಧ ಪಕ್ಷದ ನಾಯಕ

57.46 ಗಂಟೆ ನಡೆದ ಕಲಾಪದಲ್ಲಿ 4.30 ಗಂಟೆ ಗದ್ದಲ, ಧರಣಿಯಿಂದ ವ್ಯರ್ಥವಾಗಿದೆ ಎಂದು ಹೇಳಿದ ಸಭಾಪತಿ ಬಸವರಾಜ ಹೊರಟ್ಟಿ ಧರಣಿ ಮುಂದುವರಿದಿರುವಂತೆಯೇ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಸುದ್ದಿ 2 ನಿಮಿಷ

‘ಕೈ’ ನಾಯಕರಿಗೆ ಬುಲಾವ್

ಬೆಳಗಾವಿ: ಮುಂಬರುವ ಲೋಕಸಭೆ ಚುನಾವಣೆಗೆ ತಯಾರಿ ಮತ್ತು ನಿಗಮ– ಮಂಡಳಿಗಳಿಗೆ ನೇಮಕ ಸಂಬಂಧ ಚರ್ಚಿಸಲು ಇದೇ 18ರಂದು ದೆಹಲಿಗೆ ಬರುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ವರಿಷ್ಠರು ಆಹ್ವಾನ ನೀಡಿದ್ದಾರೆ.

‘ಎಐಸಿಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರಾದ ಬೈರತಿ ಸುರೇಶ್ ಮತ್ತು ಲಕ್ಷ್ಮೀ ಹೆಬ್ಬಾಳಕರ ಸೇರಿ ಕೆಲವು ಸಚಿವರಿಗೆ ಗುರುವಾರ ಕರೆ ಮಾಡಿ ದೆಹಲಿಗೆ ಬರುವಂತೆ ಸೂಚಿಸಿದ್ದಾರೆ. 18ರಿಂದ ಮೂರು ದಿನ ಎಲ್ಲ ನಾಯಕರು ದೆಹಲಿಯಲ್ಲಿ ವಾಸ್ತವ್ಯ ಹೂಡಲಿದ್ದಾರೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ಪಕ್ಷದ ವರಿಷ್ಠರು ರಾಜ್ಯ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ. ಪಕ್ಷ ಸಂಘಟನೆ, ಲೋಕಸಭೆ ಚುನಾವಣೆಗೆ ತಂತ್ರಗಾರಿಕೆ, ನಿಗಮ– ಮಂಡಳಿಗಳಿಗೆ ನೇಮಕ ಮತ್ತಿತರ ವಿಷಯಗಳ ಕುರಿತು ಚರ್ಚೆ ನಡೆಯುವ ಸಾಧ್ಯತೆಯಿದೆ.

‘ರಾಜ್ಯದ ಲೋಕಸಭೆ ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯ ಸಹಿತ ವರಿಷ್ಠರನ್ನು ಭೇಟಿ ಮಾಡಲಿರುವ ಸಿದ್ದರಾಮಯ್ಯ ಮತ್ತು ಶಿವಕುಮಾರ್, ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಬಗ್ಗೆಯೂ ಸಮಾಲೋಚನೆ ನಡೆಸಲಿದ್ದಾರೆ. ನಿಗಮ, ಮಂಡಳಿಗೆ ನೇಮಕದ ಪಟ್ಟಿ ಈಗಾಗಲೇ ವರಿಷ್ಠರಿಗೆ ತಲುಪಿದೆ. ಆದರೆ, ಪಟ್ಟಿಯ ಬಗ್ಗೆ ಕೆಲವು ಶಾಸಕರು ಅಸಮಾಧಾನ ವ್ಯಕ್ತಪಡಿಸಿದ್ದು, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಸ್ಥಾನ ಒಪ್ಪಿಕೊಳ್ಳಲು ಕೂಡಾ ನಿರಾಕರಿಸುತ್ತಿದ್ದಾರೆ . ಈ ಬಗ್ಗೆಯೂ ಚರ್ಚೆ ನಡೆಯಲಿದೆ. ಜೊತೆಗೆ ಪಕ್ಷದ ಪದಾಧಿಕಾರಿಗಳ ಬದಲಾವಣೆ ಬಗ್ಗೆಯೂ ವಿಚಾರವಿನಿಮಯ ನಡೆಯಲಿದೆ’ ಎಂದೂ ಮೂಲಗಳು ಹೇಳಿವೆ.

ಡಿಕೆಶಿ ವಿರುದ್ಧದ ಯತ್ನಾಳ ಅರ್ಜಿ: ಜ.5ಕ್ಕೆ ಮುಂದೂಡಿಕೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಿರ್ಧಾರ ವಾಪಸು ಪಡೆದಿರುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ 2024ರ ಜನವರಿ 5ಕ್ಕೆ ಮುಂದೂಡಿದೆ.

ಈ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ, ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ಅರ್ಜಿಗೆ ಸಂಬಂಧಿಸಿದಂತೆ ಉತ್ತರಿಸಲು ಸಮಯಾವಕಾಶ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

‘9 ಜಿಲ್ಲೆಗಳಲ್ಲಿ ಡ್ರೋನ್ ಸರ್ವೆ’

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಕಟ್ಟಡ ಕಲ್ಲಿನ ಅಕ್ರಮ ಗಣಿಗಾರಿಕೆ ಕುರಿತು ನಿಖರವಾದ ಮಾಹಿತಿ ಸಂಗ್ರಹಿಸಲು ಒಂಬತ್ತು ಜಿಲ್ಲೆಗಳಲ್ಲಿ ಡ್ರೋನ್ ಕ್ಯಾಮೆರಾಗಳನ್ನು ಬಳಸಿ ಸಮೀಕ್ಷೆ (ಸರ್ವೆ) ಆರಂಭಿಸಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.

ಕಾಂಗ್ರೆಸ್‌ನ ಬಸನಗೌಡ ದದ್ದಲ್ ಪ್ರಶ್ನೆಗೆ ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ ಉತ್ತರಿಸಿದ ಅವರು, ‘ಡ್ರೋನ್ ಸರ್ವೆ ಪ್ರಗತಿಯಲ್ಲಿದೆ. ಯಾವುದೇ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆದಿರುವುದು ಕಂಡುಬಂದಲ್ಲಿ ಗಣಿ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಲಾಗುವುದು’ ಎಂದರು.

ಕೆಟಿಪಿಪಿ ಸೇರಿ 3 ಮಸೂದೆಗಳಿಗೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಸರ್ಕಾರದ ವಿವಿಧ ಇಲಾಖೆಗಳಲ್ಲಿ ₹1 ಕೋಟಿವರೆಗಿನ ವೆಚ್ಚದ ಕಾಮಗಾರಿಗಳಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ 1 ಪಟ್ಟಿಯಲ್ಲಿರುವ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಶೇ 4 ಮತ್ತು ಪ್ರವರ್ಗ 2–ಎ ಪಟ್ಟಿಯಲ್ಲಿರುವ ಜಾತಿಗೆ ಸೇರಿದ ಗುತ್ತಿಗೆದಾರರಿಗೆ ಶೇ 15 ಮೀಸಲಾತಿ ಕಲ್ಪಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಯೂ ಸೇರಿ ಒಟ್ಟು ಮೂರು ಮಸೂದೆಗಳಿಗೆ ಪರಿಷತ್ ಅಂಗೀಕಾರ ನೀಡಿತು.

ಕೆಟಿಪಿಪಿ ಕಾಯ್ದೆ–1999ಕ್ಕೆ ತಿದ್ದುಪಡಿ ತರುವ ಮಸೂದೆಯನ್ನು ಮುಖ್ಯಮಂತ್ರಿ ಪರವಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ಮಂಡಿಸಿದರು.

ಚರ್ಚೆಯ ವೇಳೆ ಮಾತನಾಡಿದ ಬಿಜೆಪಿಯ ಪಿ.ಎಚ್. ಪೂಜಾರ, ಎನ್.ರವಿಕುಮಾರ್, ಪ್ರತಾಪ್ ಸಿಂಹ ನಾಯಕ್, ಕೇಶವಪ್ರಸಾದ್, ಎಚ್. ವಿಶ್ವನಾಥ್, ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ, ಕಾಂಗ್ರೆಸ್‌ನ ನಾಗರಾಜ್ ಯಾದವ್, ಉಮಾಶ್ರೀ, ‘ಇದೊಂದು ಕ್ರಾಂತಿಕಾರಕ ಮಸೂದೆ. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು. ಮೀಸಲಾತಿ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು’ ಎಂದು ಮನವಿ ಮಾಡಿದರು.

ಶಾಸಕರು ನೀಡಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್.ಕೆ. ಪಾಟೀಲ ಭರವಸೆ ನೀಡಿದರು.

ವಕೀಲರು ಯಾವುದೇ ಭಯ, ಬಾಹ್ಯ ಪ್ರಭಾವಕ್ಕೆ ಒಳಗಾಗದೆ ವೃತ್ತಿಪರ ಸೇವೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲು ಮತ್ತು ಅವರ ಮೇಲಿನ ಹಿಂಸೆಯನ್ನು ನಿಷೇಧಿಸಲು ಹಾಗೂ ರಕ್ಷಣೆ ಒದಗಿಸಲು ಅವಕಾಶ ಕಲ್ಪಿಸುವ 2023ನೇ ಸಾಲಿನ ‘ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ’ ಮಸೂದೆಗೂ ಅಂಗೀಕಾರ ನೀಡಲಾಯಿತು.

ಚರ್ಚೆಯ ವೇಳೆ ಕಾಂಗ್ರೆಸ್‌ನ ನಾಗರಾಜ್ ಯಾದವ್, ‘ಹಿಂದಿನ ಸರ್ಕಾರಕ್ಕೆ ಬದ್ಧತೆ ಇರಲಿಲ್ಲ. ನಮ್ಮ ಸರ್ಕಾರ ವಕೀಲರ ಮೇಲಿನ ಹಲ್ಲೆ ತಡೆಗಟ್ಟುವ ಉದ್ದೇಶದಿಂದ ಈ ಕಾಯ್ದೆ ತರುತ್ತಿದೆ’ ಎಂದಾಗ ಬಿಜೆಪಿ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯ್ದೆಯ ಮೇಲೆ ಯಾವುದೇ ಚರ್ಚೆ ಇಲ್ಲದೆ ಪರಿಷತ್ ಅಂಗೀಕಾರ ನೀಡಿತು.

ಬಿ ಖಾತಾ: 30ಗಳಲ್ಲಿ ತೀರ್ಮಾನ– ರಹೀಂ ಖಾನ್

ವಿಧಾನಸಭೆ: ‘ರಾಜ್ಯದಾದ್ಯಂತ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ಕಂದಾಯ ಬಡಾವಣೆಗಳ ನಿವೇಶನಗಳಿಗೆ ಬಿ– ಖಾತಾ ನೀಡುವ ಕುರಿತು ತಿಂಗಳೊಳಗೆ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಪೌರಾಡಳಿತ ಸಚಿವ ರಹೀಂ ಖಾನ್ ಭರವಸೆ ನೀಡಿದರು.

ಜೆಡಿಎಸ್‌ನ ಜಿ.ಡಿ. ಹರೀಶ್ ಗೌಡ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, ‘ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಉದ್ದೇಶದಿಂದ ರೂಪಿಸಿರುವ ಅಕ್ರಮ– ಸಕ್ರಮ ಯೋಜನೆಯನ್ನು ಜಾರಿಗೊಳಿಸಲು 15 ವರ್ಷಗಳಿಂದ ಸಾಧ್ಯವಾಗಿಲ್ಲ. ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿದೆ. ಆದ್ದರಿಂದ ಬಿ– ಖಾತಾ ನೀಡುವ ಹೊಸ ಯೋಜನೆ ಜಾರಿಗೆ ನಿರ್ಧರಿಸಲಾಗಿದೆ’ ಎಂದರು.

ನಿವೇಶನಗಳಿಗೆ ಖಾತಾ ನೀಡುವುದಕ್ಕೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲು ನೇಮಕಗೊಂಡಿರುವ ಸಂಪುಟ ಉಪ ಸಮಿತಿ ಎರಡು ಸಭೆಗಳನ್ನು ನಡೆಸಲಾಗಿದೆ. ಒಂದು ತಿಂಗಳೊಳಗೆ ಈ ಕುರಿತ ಅಂತಿನ ನಿರ್ಧಾರ ಕೈಗೊಂಡು, ಬಿ– ಖಾತಾ ವಿತರಣೆಗೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಹುಣಸೂರು ನಗರಸಭೆ ವ್ಯಾಪ್ತಿಯಲ್ಲಿ 81 ಅನಧಿಕೃತ ಬಡಾವಣೆಗಳು ನಿರ್ಮಾಣಗೊಂಡಿವೆ ಎಂದು ಸಚಿವರು ವಿವರ ನೀಡಿದರು.

ವೀರಶೈವರ ಮಹಾ ಅಧಿವೇಶನ ಇದೇ 23ರಿಂದ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಅಖಿಲ ಭಾರತ ವೀರಶೈವ ಮಹಾಸಭೆಯಿಂದ ದಾವಣಗೆರೆಯಲ್ಲಿ ಡಿ.23 ಹಾಗೂ 24ರಂದು ವೀರಶೈವರ ಮಹಾ ಅಧಿವೇಶನ ನಡೆಯಲಿದೆ. ನಾಡಿನ ಮಠಾಧೀಶರು, ಎಲ್ಲ ನಾಯಕರನ್ನೂ ಒಂದೇ ವೇದಿಕೆಯಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಮಹಾಸಭೆಯ ಅಧ್ಯಕ್ಷ, ಶಾಸಕ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ನಗರದಲ್ಲಿ ಗುರುವಾರ ರಾತ್ರಿ ನಡೆದ ಸಭೆಯಲ್ಲಿ ಈ ಕುರಿತು ಚರ್ಚೆ ಮಾಡಲಾಯಿತು ಎಂದು ಸಚಿವ ಎಂ.ಬಿ.ಪಾಟೀಲ ಶುಕ್ರವಾರ ಮಾಹಿತಿ ನೀಡಿದರು.

ನೃತ್ಯರೂಪಕ ಮೂಡುಬಿದಿರೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಆಳ್ವಾಸ್ ವಿರಾಸತ್ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ಆಳ್ವಾಸ್ ಸಾಂಸ್ಕೃತಿಕ ತಂಡದ ವಿದ್ಯಾರ್ಥಿಗಳು ಪುತ್ತೂರಿನ ವಿದ್ವಾನ್ ದೀಪಕ್ ಕುಮಾರ್ ನಿರ್ದೇಶನದಲ್ಲಿ ‘ಮಹಿಷಾಸುರ ಮರ್ದಿನಿ’ ರೂಪಕವನ್ನು ಪ್ರಸ್ತುತ ಪಡಿಸಿದರು

‘ಅರ್ಜುನ’ನ ಸಮಾಧಿ ಬಳಿ ಕಾಡಾನೆ ದಾಂದಲೆ

ಪ್ರಜಾವಾಣಿ ವಾರ್ತೆ

ಹೆತ್ತೂರು (ಹಾಸನ): ಯಸಳೂರಿನ ದಬ್ಬಳಿಕಟ್ಟೆ ಅರಣ್ಯ ಪ್ರದೇಶದಲ್ಲಿರುವ ಅರ್ಜುನನ ಸಮಾಧಿ ಸ್ಥಳದಲ್ಲಿ ಗುರುವಾರ ರಾತ್ರಿ ಕಾಡಾನೆಗಳ ಹಿಂಡು ದಾಂದಲೆ ನಡೆಸಿವೆ. ಸುತ್ತಲೂ ಅಳವಡಿಸಿದ್ದ ತಂತಿ ಬೇಲಿ ಕಿತ್ತು ಹಾಕಿವೆ.

ತಂತಿ ಬೇಲಿ ಮುರಿದು ಒಳಗೆ ಪ್ರವೇಶಿಸಿದ ಆನೆಗಳು, ಸಮಾಧಿಯ ಮೇಲೆ ಹಾಕಿದ್ದ ಹೂಗಳನ್ನು ಚೆಲ್ಲಾಪಿಲ್ಲಿ ಮಾಡಿವೆ. ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

11 ದಿನದ ಪೂಜೆ: ಡಿ.4 ರಂದು ಕಾಡಾನೆ ಜೊತೆಗಿನ ಕಾಳಗದಲ್ಲಿ ಅರ್ಜುನ ಮೃತಪಟ್ಟಿದ್ದು, 11ನೇ ದಿನವಾದ ಶುಕ್ರವಾರ ಯಸಳೂರು, ಬಾಳೆಕೆರೆ, ದಬ್ಬಳ್ಳಿ, ಚಿಕ್ಕದೂರು, ದೊಡ್ಡಕುಂದೂರು ಗ್ರಾಮಸ್ಥರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ, ಯಸಳೂರಿನ ನವೀನಾರಾಧ್ಯ ನೇತೃತ್ವದಲ್ಲಿ ಪೂಜಾ ಕಾರ್ಯಕ್ರಮ ನಡೆಯಿತು.

ಸಮಾಧಿ ಬಳಿ ಕಾಡಾನೆಗಳು ತಂತಿ ಬೇಲಿ ಕಿತ್ತು ಹಾಕಿವೆ

ಉಮಾಶ್ರೀ ಹೆಸರು ‘ಮಾಲಾಶ್ರೀ’ ಆದಾಗ...

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: 2023ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಮಸೂದೆ ಮೇಲಿನ ಚರ್ಚೆಯ ವೇಳೆಯಲ್ಲಿ ಬಿಜೆಪಿಯ ಎಚ್. ವಿಶ್ವನಾಥ್ ಅವರು ಉಮಾಶ್ರೀ ಹೆಸರು ಉಲ್ಲೇಖಿಸುವಾಗ ಬಾಯಿತಪ್ಪಿ ಮಾಲಾಶ್ರೀ ಎಂದು ಸಂಬೋಧಿಸಿದ್ದು ಕೆಲಹೊತ್ತು ಸದನವನ್ನು ನಗೆಗಡಲಲ್ಲಿ ತೇಲಿಸಿತು. ಉಮಾಶ್ರೀ ಅವರ ನಟನೆ ಬಗ್ಗೆ ಮೆಚ್ಚುಗೆಯೂ ವ್ಯಕ್ತವಾಯಿತು.

ವಿಶ್ವನಾಥ್ ಅವರು ಮಾಲಾಶ್ರೀ ಎಂದಾಗ ಇಡೀ ಸದನದಲ್ಲಿ ನಗೆ ಉಕ್ಕಿತು. ‘ಮಾಲಾಶ್ರೀಯವರ ನೆನಪು ಈಗೇಕೆ ನಿಮಗೆ ಬಂತು’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹಾಸ್ಯ ಮಾಡಿದರು.

ಮಧ್ಯಪ್ರವೇಶಿಸಿದ ಬಿಜೆಪಿಯ ತೇಜಸ್ವಿನಿ ಗೌಡ, ‘ಭಾರತದಲ್ಲಿ ಹೇಮಮಾಲಿನಿ ಹೇಗೆ ಕನಸಿನ ಕನ್ಯೆ ಎಂದು ಹೆಸರು ಪಡೆದಿದ್ದರೊ, ಅದೇ ರೀತಿ ಕನ್ನಡ ಚಿತ್ರರಂಗದಲ್ಲಿ ಮಾಲಾಶ್ರೀ ತಮ್ಮ ನಟನೆಯಿಂದ ಹೆಸರು ಮಾಡಿದ್ದಾರೆ. ನಾಯಕಿ ಆಗಲು ಸೌಂದರ್ಯವೇ ಮಾನದಂಡ. ನಟನೆಯ ಮಾನದಂಡದ ಮೇಲೆ ಆಯ್ಕೆ ಮಾಡುವುದಿದ್ದರೆ ಉಮಾಶ್ರೀ ನಾಯಕಿಯಾಗಿ ಹಲವು ಚಿತ್ರದಲ್ಲಿ ನಟಿಸಬಹುದಿತ್ತು’ ಎಂದು ಅಭಿಪ್ರಾಯಪಟ್ಟರು.

ಆಗ ಎದ್ದು ನಿಂತ ಉಮಾಶ್ರೀ, ‘ನಾನು ರಂಗಭೂಮಿಯಿಂದ ಬಂದವಳು. ರಂಗಭೂಮಿಯಲ್ಲಿ ನಾಯಕಿ, ಪೋಷಕ ನಟಿ, ಹಾಸ್ಯ ನಟಿ ಎಂಬ ವರ್ಗವಿಲ್ಲ. ಸಿನಿಮಾದಲ್ಲಿದೆ. ಗಿರೀಶ್ ಕಾಸರವಳ್ಳಿಯವರು ನನಗೆ ‘ಗುಲಾಬಿ’ ಚಿತ್ರದಲ್ಲಿ ನಾಯಕಿ ನಟಿಯ ಅವಕಾಶ ನೀಡಿದ್ದು, ಅದರಿಂದ ರಾಜ್ಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಪ್ರಶಸ್ತಿ ಬಂತು’ ಎಂದು ಹೇಳಿದರು.

ಸಚಿವ ಎಚ್. ಕೆ. ಪಾಟೀಲ, ‘ಉಮಾಶ್ರೀಯವರ ‘ಒಡಲಾಳ’ ನಾಟಕ ನೋಡಿದರೆ, ಅವರು ಎಂತಹ ಅದ್ಭುತ ಕಲಾವಿದೆ ಎಂದು ಗೊತ್ತಾಗಲಿದೆ. ಈ ನಾಟಕವನ್ನು ಸೋನಿಯಾ ಗಾಂಧಿಯವರಿಗೆ ತೋರಿಸಿದ್ದೆವು. ಆ ನಂತರ ಉಮಾಶ್ರೀ ಅವರನ್ನು ಭೇಟಿ ಮಾಡಿಸಿದಾಗ ಆ ನಾಟಕದಲ್ಲಿ ಪಾತ್ರ ಮಾಡಿರುವವರು ಇವರೇನಾ? ಎಂದು ಮೂರು ಬಾರಿ ಕೇಳಿದರು’ ಎಂದರು.

‘ಉಮಾಶ್ರೀ ಅವರಿಗೆ ನಾಟಕ ಅಕಾಡೆಮಿಯಿಂದ ಜೀವಮಾನದ ಸಾಧನೆಗೆ ಪ್ರಶಸ್ತಿ ಘೋಷಣೆ ಆಗಿದ್ದರೂ ರಾಜಕೀಯ ಕಾರಣಗಳಿಗೆ ಆ ಪ್ರಶಸ್ತಿ ಪ್ರದಾನ ನಡೆದಿಲ್ಲ’ ಎಂದು ವಿಶ್ವನಾಥ್ ಪ್ರಸ್ತಾಪಿಸಿದರು. ಅದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ‘ಎರಡು ವರ್ಷಗಳಿಂದ ಪ್ರಶಸ್ತಿಗಳ ಪ್ರದಾನ ನಡೆದಿಲ್ಲ. ಪ್ರಶಸ್ತಿಗೆ ಆಯ್ಕೆಯಾದವರಲ್ಲಿ ಇಬ್ಬರು ನಿಧನರಾಗಿದ್ದಾರೆ. ಈ ಬಾರಿಯ ಪ್ರಶಸ್ತಿಯನ್ನೂ ಸೇರಿಸಿ ಪ್ರದಾನ ಮಾಡಲಾಗುವುದು’ ಎಂದು ತಿಳಿಸಿದರು.

ಎಂಜಿನಿಯರಿಂಗ್: ಅರ್ಜಿ ಸಲ್ಲಿಕೆಗೆ ಅವಕಾಶ

ಬೆಂಗಳೂರು: ಎಂಜಿನಿಯರಿಂಗ್ 2 ಅಥವಾ 3ನೇ ಸೆಮಿಸ್ಟರ್‌ಗೆ ನೇರ ಪ್ರವೇಶಾತಿಗೆ (ಲ್ಯಾಟರಲ್ ಎಂಟ್ರಿ) ಅರ್ಹರಾಗಿರುವ ವೃತ್ತಿನಿರತ ಡಿಪ್ಲೊಮಾ ಪದವೀಧರರು, ಡಿ.18ರಿಂದ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಡಿ.21ರಂದು ಅರ್ಜಿ ಸಲ್ಲಿಕೆಗೆ ಕೊನೆ ದಿನ. ಡಿ.26ರ ಸಂಜೆ ರ‍್ಯಾಂಕ್ ಪಟ್ಟಿ ಪ್ರಕಟಿಸಲಾಗುವುದು. ಡಿ.27 ಮತ್ತು 28ರಂದು ಪ್ರಾಧಿಕಾರದ ಕಚೇರಿಯಲ್ಲಿ ದಾಖಲಾತಿ ಪರಿಶೀಲನೆ ನಡೆಸಲಾಗುವುದು. ಲಭ್ಯವಿರುವ ಎಂಜಿನಿಯರಿಂಗ್ ಕಾಲೇಜುಗಳು, ಕೋರ್ಸುಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್: http://kea.kar.nic.inನಲ್ಲಿ ಪರಿಶೀಲಿಸಬಹುದು ಎಂದು ತಿಳಿಸಿದ್ದಾರೆ.

ಕೆಸೆಟ್ ನೋಂದಣಿಗೆ ಅವಕಾಶ: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ ಸೆಟ್) ಇದುವರೆಗೂ ನೋಂದಣಿ ಮಾಡಿಕೊಳ್ಳದೆ ಇರುವವರಿಗೆ ಮತ್ತೊಂದು ಅವಕಾಶ ಕಲ್ಪಿಸಲಾಗಿದೆ. ಡಿ.18 ಮತ್ತು 19ರಂದು ನೋಂದಣಿ ಮಾಡಿಕೊಳ್ಳಬಹುದಾಗಿದೆ.

ಕೆ–ಸೆಟ್ ಪರೀಕ್ಷೆಯಲ್ಲಿ ಲಿಪಿಕಾರರ ನೆರವು ಬಯಸಿರುವ ಅಭ್ಯರ್ಥಿಗಳು ಡಿ.22ರ ಸಂಜೆ 5ರ ಒಳಗೆ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ನೀಡಿರುವ ಲಿಂಕ್‌ನಲ್ಲಿ, ಲಿಪಿಕಾರರ ಮಾಹಿತಿ ನಮೂದಿಸುವುದು ಕಡ್ಡಾಯ ಎಂದು ಪ್ರಕಟಣೆ ತಿಳಿಸಿದೆ.

ಯೋಗೇಶ್ವರ್ ಭಾವನ ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಅವರ ಭಾವ ಮಹದೇವಯ್ಯ ಕೊಲೆ ಪ್ರಕರಣದ ಪ್ರಮುಖ ಆರೋಪಿಯನ್ನು ಪೊಲೀಸರು ಶುಕ್ರವಾರ ತಮಿಳುನಾಡಿನಲ್ಲಿ ಬಂಧಿಸಿದ್ದಾರೆ.

ಮಹದೇವಯ್ಯ ಅವರ 11ನೇ ದಿನದ ತಿಥಿ ಕಾರ್ಯದ ದಿನವೇ ಚನ್ನಪಟ್ಟಣ ಪೊಲೀಸರು ಮುರುಗನ್ (45) ಎಂಬಾತನನ್ನು ಬಂಧಿಸಿದ್ದಾರೆ. ಕೃತ್ಯದಲ್ಲಿ ಭಾಗಿಯಾದ ಆತನ ಇಬ್ಬರು ಸಂಬಂಧಿಕರಿಗಾಗಿ ಪೊಲೀಸರು ಶೋಧ ಮುಂದುವರೆಸಿದ್ದಾರೆ. ಮುರುಗನ್‌ನನ್ನು ಬಂಧಿಸಿ ಚನ್ನಪಟ್ಟಣಕ್ಕೆ ಕರೆತರಲಾಗುತ್ತಿದೆ. ಬಳಿಕ ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹದೇವಯ್ಯ ಅವರ ವಡ್ಡರದೊಡ್ಡಿಯಲ್ಲಿ ಯೋಗೇಶ್ವರ್ ಸಹೋದರ ಸಿ.ಪಿ.ಗಂಗಾಧರ್ ಅವರ ತೋಟದಲ್ಲಿ ಎರಡು ವರ್ಷಗಳಿಂದ ಮುರುಗನ್ ಕೂಲಿ ಕೆಲಸ ಮಾಡಿಕೊಂಡಿದ್ದ. ಕೆಲ ತಿಂಗಳ ಹಿಂದೆ ಕೆಲಸದಿಂದ ತೆಗೆದು ಹಾಕಲಾಗಿತ್ತು ಎಂದು ತಿಳಿದು ಬಂದಿದೆ.

ಸಿ.ಎಂಗೆ ಮನವಿ: ಸಚಿವ ಎಂ.ಬಿ. ಪಾಟೀಲ, ಖಂಡ್ರೆ, ಶಿವಾನಂದ ಪಾಟೀಲ, ಶರಣ ಪ್ರಕಾಶ ಸಹಿ

ಜಾತಿಗಣತಿ; ಲಿಂಗಾಯತರ ವಿರೋಧ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ) ವರದಿಯನ್ನು ಅಂಗೀಕರಿಸದೆ, ವೈಜ್ಞಾನಿಕವಾಗಿ ಮತ್ತು ವಾಸ್ತಾಂಶ ಆಧಾರಿತವಾಗಿ ಹೊಸದಾಗಿ ಜಾತಿ ಗಣತಿ ಮಾಡಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮನವಿ ಸಲ್ಲಿಸಿದೆ.

ಮಹಾಸಭಾದ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಶಾಮನೂರ ಶಿವಶಂಕರಪ್ಪ ನೇತೃತ್ವದಲ್ಲಿ ವೀರಶೈವ ಲಿಂಗಾಯತ ಸಮುದಾಯದ ಸಚಿವರು, ಶಾಸಕರ ನಿಯೋಗ ಸಿದ್ದರಾಮಯ್ಯ ಅವರನ್ನು ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ಶುಕ್ರವಾರ ಭೇಟಿ ಮಾಡಿ ಮನವಿ ಸಲ್ಲಿಸಿದೆ.

ನಿಯೋಗದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್. ಪಾಟೀಲ, ಆಡಳಿತ ಪಕ್ಷದ ಮುಖ್ಯ ಸಚೇತಕ ಅಶೋಕ ಎಂ. ಪಟ್ಟಣ ಇದ್ದರು. ಗುರುವಾರ ನಡೆದ ಸಮಾಜದ ಎಲ್ಲ ಸಚಿವರು ಮತ್ತು ಶಾಸಕರ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದೂ ಮನವಿಯಲ್ಲಿ ತಿಳಿಸಲಾಗಿದೆ.



ಅಖಿಲಭಾರತ ಲಿಂಗಾಯತ ವೀರಶೈವ ಮಹಾಸಭಾದ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದರು. ಸಚಿವರಾದ ಶಿವಾನಂದ ಪಾಟೀಲ, ಎಂ.ಬಿ. ಪಾಟೀಲ, ಈಶ್ವರ ಖಂಡ್ರೆ ಇದ್ದರು

ಮನವಿಗೆ ಶಾಸಕರಾದ ಎಂ.ವೈ. ಪಾಟೀಲ, ಲಕ್ಷ್ಮಣ ಸವದಿ, ಸಿ.ಸಿ. ಪಾಟೀಲ ಸಹಿ ಹಾಕಿದ್ದಾರೆ.

‘ಸಮ ಸಮಾಜದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದ್ದೇ ವೀರಶೈವ ಮಹಾಸಭಾ. ನಾವು ಯಾರ ಹಕ್ಕನ್ನೂ ಕಸಿದುಕೊಳ್ಳುವವರಲ್ಲ. ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಬೇಕು ಎನ್ನುವುದು ನಮ್ಮ ತತ್ವ. ಅದೇ ನಮ್ಮ ಬದ್ಧತೆ. ಆದರೆ, ರಾಜ್ಯದಲ್ಲಿ ಈಗಾಗಲೇ ನಡೆದಿರುವ ಸಾಮಾಜಿಕ, ಆರ್ಥಿಕ (ಜಾತಿ ಗಣತಿ) ಸಮೀಕ್ಷೆ ಅಸಮರ್ಪಕವಾಗಿದೆ. ಇದನ್ನು ಅಂಗೀಕರಿಸಿದರೆ ನಮ್ಮ ಸಮಾಜಕ್ಕೆ ಅಷ್ಟೇ ಅಲ್ಲದೆ, ಸಮಾಜದ ವಂಚಿತರು, ಶೋಷಿತರು, ಮಧ್ಯಮ ವರ್ಗದ ಆರ್ಥಿಕ ದುರ್ಬಲರಿಗೆ ಘೋರ ಅನ್ಯಾಯ ಆಗಲಿದೆ’ ಎಂದೂ ಮನವಿಯಲ್ಲಿ ಉಲ್ಲೇಖಿಸಲಾಗಿದೆ.

‘ನಾವು ಜಾತಿ ಗಣತಿ ವಿರೋಧಿಗಳಲ್ಲ. ಆದರೆ ಎಂಟು ವರ್ಷಗಳ ಹಿಂದೆ ನಡೆಸಲಾದ ಸಾಮಾಜಿಕ– ಆರ್ಥಿಕ ಸಮೀಕ್ಷೆ ಹಲವು ವೈರುಧ್ಯ ಮತ್ತು ಲೋಪಗಳಿಂದ ಕೂಡಿದೆ. ಅದನ್ನು ಸರಿಪಡಿಸುವ ಅಗತ್ಯವಿದೆ. ಹೀಗಾಗಿ, ಹೊಸತಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು’ ಎಂದು ಆಗ್ರಹಿಸಲಾಗಿದೆ

‘ಅಧಿಕಾರಿಗಳು ಕಚೇರಿಯಲ್ಲಿಯೇ ಕುಳಿತು ಈ ಸಮೀಕ್ಷಾ ವರದಿ ಸಿದ್ಧಪಡಿಸಿದ್ದಾರೆ. ಸಮೀಕ್ಷೆ ನಡೆದಾಗ ವೀರಶೈವ ಲಿಂಗಾಯತ ಸಮುದಾಯದ ಬಹುಪಾಲು ಜನರು ತಮಗೆ ಲಭಿಸುವ ಮೀಸಲಾತಿಯಲ್ಲಿ ಅನ್ಯಾಯವಾಗುತ್ತದೆ ಎಂಬ ಭಯದಿಂದ ವೀರಶೈವ ಅಥವಾ ಲಿಂಗಾಯತ ಎಂದು ಬರೆಸದೆ ತಮ್ಮ ಒಳಪಂಗಡಗಳನ್ನು ನಮೂದಿಸಿದ್ದಾರೆ. ಅಂತೆಯೇ ಕರ್ನಾಟಕದಲ್ಲಿರುವ ಹಲವರು ತಮ್ಮ ಜಾತಿಯ ಕುರಿತಂತೆ ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ. ಆದರೆ ನಿಜವಾಗಿ ಅವರು ಆ ಜಾತಿ, ಸಮುದಾಯಕ್ಕೆ ಸೇರಿದವರೇ ಎಂಬ ಸತ್ಯಾಸತ್ಯತೆ ಅರಿಯಲು ಯಾವುದೇ ಪರಿಶೀಲನೆ ಅಥವಾ ಪರಾಮರ್ಶೆ ಆಗಿಲ್ಲ. ಸಮೀಕ್ಷೆಯಲ್ಲಿ ಸಂಗ್ರಹಿಸಿರುವ ಮಾಹಿತಿಯಲ್ಲೇ ದೋಷವಿದೆ ಎನ್ನುವುದು ಮಹಾಸಭಾದ ಅಭಿಪ್ರಾಯ’ ಎಂದು ತಿಳಿಸಲಾಗಿದೆ.

‘ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನೂ ಸೇರಿಸಿ ಸಂಪೂರ್ಣ ವೈಜ್ಞಾನಿಕವಾಗಿ ಹೊಸತಾಗಿ ಜಾತಿಗಣತಿ ನಡೆಸಿ, ವಾಸ್ತವಾಂಶ ಆಧರಿಸಿ ಅಂಕಿ–ಅಂಶಗಳನ್ನು ದಾಖಲಿಸಿದರೆ ಅರ್ಹರಿಗೆ ಸೌಲಭ್ಯ ಕಲ್ಪಿಸಲು ಅನುಕೂಲವಾಗುತ್ತದೆ’ ಎಂದೂ ಮನವಿಯಲ್ಲಿ ತಿಳಿಸಲಾಗಿದೆ.

ಕೃಷಿ ಸಾಲದ ಬಡ್ಡಿ ಮನ್ನಾ

ಒಂದನೇ ಪುಟದಿಂದ...

‘ಪ್ರತ್ಯೇಕ ರಾಜ್ಯ ಬೇಡಿಕೆ ಏಕೀಕರಣಕ್ಕೆ ಹೋರಾಟ ಮಾಡಿ ಪ್ರಾಣ ತ್ಯಾಗ ಮಾಡಿದವರಿಗೆ ನಾವು ಮಾಡುವ ಅಪಮಾನ. ಏಕೀಕರಣಕ್ಕಾಗಿ ರಾಜ್ಯದ ಉದ್ದಗಲ ಹಲವು ಜನ ಹೋರಾಟ ಮಾಡಿದ್ದರು’ ಎಂದು ಅವರು ತಿಳಿಸಿದರು.

ಹೈದ್ರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನಕ್ಕಾಗಿ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್, ವೈಜನಾಥ್ ಪಾಟೀಲ ಮುಂತಾದವರು ಹೋರಾಡಿದ್ದರು. ಯುಪಿಎ ಅವಧಿಯಲ್ಲಿ ಅದು ಈಡೇರಿತು ಎಂದು ಸಿದ್ದರಾಮಯ್ಯ ಸ್ಮರಿಸಿದರು.

ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನ ಖರ್ಚಾಗಿ ಅಭಿವೃದ್ಧಿಯಾಗಬೇಕು. ಕಿತ್ತೂರು ಕರ್ನಾಟಕದ 5 ತಾಲ್ಲೂಕುಗಳು ಸೇರಿ ಅತಿ ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ಕೊಡಲಾಗುವುದು. ಕಲ್ಯಾಣ ಕರ್ನಾಟಕಕ್ಕೆ 2013–14 ರಿಂದ ಈವರೆಗೆ ಒಟ್ಟು ₹14,877.36 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ₹10,280 ಕೋಟಿ ಬಿಡುಗಡೆ ಆಗಿದೆ. ₹8,330 ಕೋಟಿ ಖರ್ಚಾಗಿದೆ ಎಂದು ಹೇಳಿದರು.

ಮುಂದಿನ ವರ್ಷದಿಂದ ₹5,000 ಕೋಟಿಗಳನ್ನು ಕಲ್ಯಾಣ ಕರ್ನಾಟಕಕ್ಕೆ ನೀಡಲಾಗುವುದು. ಮುಂಬೈ ಕರ್ನಾಟಕದ ಹಿಂದುಳಿದ ತಾಲ್ಲೂಕುಗಳಿಗೂ ಅನುದಾನ ನೀಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಆಕ್ಷೇಪಗಳಿಗೆ ಮುಖ್ಯಮಂತ್ರಿ ಉತ್ತರ:

- ಈಗ ಮಾಡಿರುವ ಎಲ್ಲ ಘೋಷಣೆಗಳಿಗೂ ಪೂರಕ ಅಂದಾಜುಗಳಲ್ಲಿ ಅಗತ್ಯ ಅನುದಾನ ಒದಗಿಸಲಾಗುವುದು.
- ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಅನುದಾನ ಒದಗಿಸಲಾಗುವುದು.
- ಸ್ಥಳೀಯರಿಗೆ ಉದ್ಯೋಗ ನೀಡುವುದನ್ನು ಕಡ್ಡಾಯಗೊಳಿಸಲು ಕಾನೂನು ತಿದ್ದುಪಡಿ ಕುರಿತು ಪರಿಶೀಲಿಸಲಾಗುವುದು.
- ವಿಜಯಪುರ ಜಿಲ್ಲೆಯಲ್ಲಿ ಒಣ ದ್ರಾಕ್ಷಿ ದಾಸ್ತಾನಿಗೆ ಶೈತ್ಯಾಗಾರಗಳ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗುವುದು

ಗದ್ದಲದ ಮಧ್ಯೆಯೇ ಕಲಾಪ ಅಂತ್ಯ

ಮುಖ್ಯಮಂತ್ರಿಯವರ ಉತ್ತರದಲ್ಲಿ ಉತ್ತರ ಕರ್ನಾಟಕದ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಯಾವುದೇ ಅಂಶಗಳಿಲ್ಲ ಎಂದು ದೂರಿದ ಬಿಜೆಪಿ ಸದಸ್ಯರು ಸಭಾತ್ಯಾಗ ನಡೆಸಿದರು.

ಬಿಜೆಪಿ ಸದಸ್ಯರು ಮತ್ತೆ ಸದನಕ್ಕೆ ಬರುತ್ತಿದ್ದಂತೆಯೇ ಸಭಾಧ್ಯಕ್ಷ ಯು.ಟಿ. ಖಾದರ್ ಅವರು ಈ ಅಧಿವೇಶನದ ವರದಿಯನ್ನು ಓದಲಾರಂಭಿಸಿದರು. ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್ ಹೇಳಿಕೆ ಸೇರಿದಂತೆ ತಾವು ಪ್ರಸ್ತಾಪಿಸಿದ್ದ ಕೆಲವು ವಿಷಯಗಳ ಕುರಿತು ನಿಯಮ 69ರಡಿ ಚರ್ಚೆಗೆ ಅವಕಾಶ ನೀಡುವಂತೆ ಬಿಜೆಪಿ ಸದಸ್ಯರು ಆಗ್ರಹಿಸಿದರು.

ಸ್ಪೀಕರ್ ವರದಿ ಓದುವುದನ್ನು ಮುಂದುವರಿಸಿದರು. ಸಭಾಧ್ಯಕ್ಷರ ಪೀಠದ ಎದುರು ಧಾವಿಸಿದ ಬಿಜೆಪಿ ಸದಸ್ಯರು ಧರಣಿ ಆರಂಭಿಸಿದರು. ಗದ್ದಲದ ಮಧ್ಯೆಯೇ ವರದಿ ಓದುವುದನ್ನು ಪೂರ್ಣಗೊಳಿಸಿದ ಸ್ಪೀಕರ್, ರಾಷ್ಟ್ರಗೀತೆಯೊಂದಿಗೆ ಸದನದ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಲೋಕಸಭೆಯಲ್ಲಿ ಭದ್ರತಾ ಲೋಪ: ಕೋರ್ಟ್ ಮುಂದೆ ಪೊಲೀಸರ ಹೇಳಿಕೆ • ಝಾ 7 ದಿನ ಪೊಲೀಸರ ವಶಕ್ಕೆ

‘ಬೇಡಿಕೆ ಈಡೇರಿಕೆಗೆ ಅರಾಜಕತೆ ಸೃಷ್ಟಿ ಯತ್ನ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಅರಾಜಕತೆ ಸೃಷ್ಟಿಸಿ ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಳ್ಳುವಂತೆ ಮಾಡಲು ತಮ್ಮ ತಂಡ ಬಯಸಿತ್ತು ಎಂದು ಸಂಸತ್ತಿನ ಭದ್ರತಾ ಉಲ್ಲಂಘನೆ ಪ್ರಕರಣದ ಪ್ರಮುಖ ಸಂಚುಕೋರ ಎನ್ನಲಾಗಿರುವ ಲಲಿತ್ ಝಾ ತನಿಖಾಧಿಕಾರಿಗಳಿಗೆ ತಿಳಿಸಿರುವುದಾಗಿ ದೆಹಲಿ ಪೊಲೀಸರು ಶುಕ್ರವಾರ ಕೋರ್ಟ್‌ನಲ್ಲಿ ಹೇಳಿದ್ದಾರೆ.

ಇಡೀ ಪಿತೂರಿಯನ್ನು ಬಯಲು ಮಾಡಲು ಝಾ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಬೇಕೆಂದು ಪೊಲೀಸರು ವಾದಿಸಿದರು. 15 ದಿನಗಳವರೆಗೆ ಪೊಲೀಸ್ ವಶಕ್ಕೆ ನೀಡುವಂತೆ ಪ್ರಾಸಿಕ್ಯೂಟರ್ ಒತ್ತಾಯಿಸಿದರು. ಝಾ ಅವರನ್ನು ಏಳು ದಿನಗಳವರೆಗೆ ಪೊಲೀಸರ ವಶಕ್ಕೆ ಒಪ್ಪಿಸಲು ಕೋರ್ಟ್ ಆದೇಶಿಸಿತು.

ಗುರುವಾರ ರಾತ್ರಿ ಇಲ್ಲಿನ ಕರ್ತವ್ಯ ಪಥ ಪೊಲೀಸ್‌ಠಾಣೆಯಲ್ಲಿ ಲಲಿತ್ ಝಾ ಶರಣಾಗಿದ್ದರು. ಇವರೊಂದಿಗಿದ್ದ ಮಹೇಶ್ ಕುಮಾವತ್ ಎಂಬವರನ್ನೂ ಪೊಲೀಸರು ವಿಚಾರಣೆಗೆ ಒಳಪಡಿಸಿದರು. ರಾಜಸ್ಥಾನದಲ್ಲಿ ಝಾ ಅಡಗಿಕೊಳ್ಳಲು ಇವರು ನೆರವಾಗಿದ್ದರು.

ಝಾ ಬಿಹಾರ ಮೂಲದವರು. ಇವರು ಬಳಸುತ್ತಿದ್ದ ಫೋನ್ ಅನ್ನು ಪತ್ತೆಹಚ್ಚಲು ಸಾಧ್ಯವಾಗಿಲ್ಲ. ಅದರ ಪತ್ತೆಗೆ ವಿಚಾರಣೆ ನಡೆಸಬೇಕಿದೆ. ಸಾಗರ್, ಮನೋರಂಜನ್, ನೀಲಂ ಮತ್ತು ಅಮೋಲ್ ಅವರಿಂದ ಪಡೆದಿದ್ದ ನಾಲ್ಕು ಮೊಬೈಲ್ ಫೋನ್‌ಗಳನ್ನು ನಾಶ ಮಾಡಿದ್ದಾಗಿ ಝಾ ಹೇಳಿದ್ದಾರೆ ಎಂದು ಪೊಲೀಸರು ನ್ಯಾಯಾಲಯಕ್ಕೆ ಮಾಹಿತಿ ನೀಡಿದರು.

ಲಲಿತ್ ಝಾ

‘ಇಡೀ ಸಂಚನ್ನು ಹೇಗೆ ರೂಪಿಸಲಾಯಿತು ಎಂಬುದನ್ನು ಅವರು ಹೇಳಿದ್ದಾರೆ. ಕಾರ್ಯಾಚರಣೆಯ ವಿಧಾನದ ಬಗ್ಗೆ ಮಾಹಿತಿ ಪಡೆಯಲು ಇನ್ನಷ್ಟು ವಿಚಾರಣೆಗೊಳಪಡಿಸುವ ಅಗತ್ಯವಿದೆ’ ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ನ್ಯಾಯಾಲಯಕ್ಕೆ ಹೇಳಿದರು.

ಸಂಸತ್ತಿನ ಭದ್ರತೆ ಉಲ್ಲಂಘಿಸುವ ಯೋಜನೆ ರೂಪಿಸಲು ಹಲವು ಬಾರಿ ಭೇಟಿಯಾಗಿದ್ದೇವೆ ಎಂದು ಆರೋಪಿಗಳು ತಿಳಿಸಿರುವುದಾಗಿ ಪೊಲೀಸರು ಹೇಳಿದರು.

ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರ ಈಡೇರಿಸುವಂತೆ ಒತ್ತಡ ಹಾಕಲು ಬಯಸಿದ್ದರು. ಸಾಕ್ಷ್ಯಗಳ ನಾಶಕ್ಕಾಗಿ ಸಹಚರರ ಫೋನ್‌ಗಳನ್ನು ಪಡೆದುಕೊಂಡಿದ್ದು ಬಹು ದೊಡ್ಡ ಸಂಚಿನ ಭಾಗವೇ ಆಗಿದೆ. ಜೈಪುರದಿಂದ ದೆಹಲಿಗೆ ತೆರಳುವ ಮಾರ್ಗ ಮಧ್ಯೆ ಫೋನನ್ನು ಎಸೆದಿದ್ದಾರೆ ಎಂದು ಪ್ರಾಸಿಕ್ಯೂಟರ್ ಅವರು ಕೋರ್ಟ್‌ಗೆ ವಿವರಿಸಿದರು.

ಆರೋಪಿಗಳನ್ನು ಪರಸ್ಪರ ಮುಖಾಮುಖಿಯಾಗಿಸಲು, ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಲು, ನಾಲ್ಕು ದಿನಗಳ ಹಿಂದೆ ಅವರು ತಂಗಿದ್ದ ಹೋಟೆಲ್‌ಗೆ ಕರೆದೊಯ್ಯಲು ಮತ್ತು ಅವರ ಹಣಕಾಸು ವ್ಯವಹಾರ ಹಾಗೂ ದಾಳಿ ನಡೆಸಲು ಯಾರಾದರೂ ಹಣ ನೀಡಿದ್ದಾರಾ ಎಂಬುದನ್ನು ವಿಚಾರಿಸಲು ಪೊಲೀಸರು ಬಯಸಿದ್ದಾರೆ ಎಂದರು.

ಘಟನೆಗೆ ಹೊರ ದೇಶ ಅಥವಾ ವಿದೇಶಿ ಶಕ್ತಿಗಳ ಕೈವಾಡ ಇದೆಯಾ ಎಂಬ ಬಗ್ಗೆಯೂ ತನಿಖೆ ನಡೆಸುತ್ತಿರುವುದಾಗಿ ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಝಾ ಅವರು ಬುಧವಾರ ರಾತ್ರಿ ರಾಜಸ್ಥಾನ ತಲುಪಿದ್ದು ಮಹೇಶ್ ಅವರನ್ನು ಭೇಟಿ ಮಾಡಿದ್ದಾರೆ. ಮಹೇಶ್ ಮತ್ತು ಅವರ ಸೋದರ ಸಂಬಂಧಿ ಕೈಲಾಸ್ ಅವರು ಇವರಿಗೆ ರೂಮಿನ ವ್ಯವಸ್ಥೆ ಮಾಡಿದ್ದಾರೆ ಎಂದು ಹೇಳಲಾಗಿದೆ. ಝಾ ಪೊಲೀಸರ ಮುಂದೆ ಶರಣಾಗುತ್ತಾರೆ ಎಂದು ಗುರುವಾರ ಕೈಲಾಸ್‌ಗೆ ತಿಳಿಸಲಾಗಿದೆ.

ಸಂಸತ್ತಿನ ಭದ್ರತೆ ಉಲ್ಲಂಘಿಸಿದ ತಂಡದ ಜತೆ ಮಹೇಶ್ ಇರಬೇಕಿತ್ತು. ಆದರೆ ಆತ ಅಂದು ಸ್ಥಳಕ್ಕೆ ಬರಲು ಸಾಧ್ಯವಾಗಿರಲಿಲ್ಲ ಎಂದು ಮೂಲಗಳು ಹೇಳಿವೆ.

ಪೊಲೀಸರ ಪ್ರಕಾರ, ಭಗತ್‌ಸಿಂಗ್, ಚಂದ್ರಶೇಖರ್ ಆಜಾದ್ ಮತ್ತು ಸುಭಾಷ್ ಚಂದ್ರ ಬೋಸ್ ಅವರಂತಹ ಕ್ರಾಂತಿಕಾರಿಗಳ ಹಲವು ಚಿತ್ರಗಳು, ಕೋಟ್‌ಗಳನ್ನು ಇನ್‌ಸ್ಟಾಗ್ರಾಂನಲ್ಲಿ ಝಾ ಪೋಸ್ಟ್ ಮಾಡಿದ್ದರು.

ಅಣ್ಣನಿಗೆ ಅಚ್ಚರಿ (ಕೋಲ್ಕತ್ತ ವರದಿ): ಸಂಸತ್ ಭದ್ರತೆ ಉಲ್ಲಂಘನೆ ಪ್ರಕರಣದಲ್ಲಿ ಲಲಿತ್ ಝಾ ಆರೋಪಿಯಾಗಿರುವುದಕ್ಕೆ, ಅವರ ಅಣ್ಣ ಶಂಭು ಝಾ ಅಚ್ಚರಿ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ಗುರುವಾರ ರಾತ್ರಿ ಪೊಲೀಸರಿಗೆ ಶರಣಾಗಿದ್ದ ಲಲಿತ್ ಝಾ
- ಇನ್ನೂ ಇಬ್ಬರ ವಿಚಾರಣೆ
- 4 ಮೊಬೈಲ್ ಫೋನ್‌ಗಳನ್ನು ನಾಶ ಮಾಡಿದ್ದ ಆರೋಪಿ

ಏಳು ‘ಸ್ಮೋಕ್ ಕ್ಯಾನ್’ ವಶ: ಎಫ್‌ಐಆರ್ ಮಾಹಿತಿ

ನವದೆಹಲಿ: ಲೋಕಸಭೆಯಲ್ಲಿ ಹಾಗೂ ಸಂಸತ್ ಭವನದ ಹೊರಗಡೆ ಸ್ಮೋಕ್ ಕ್ಯಾನ್ (ಅನಿಲ ಉಗುಳುವ ಡಬ್ಬಿ) ಪ್ರಯೋಗಿಸಿದ್ದ ಆರೋಪದಲ್ಲಿ ಬಂಧಿತರಾಗಿರುವ ನಾಲ್ವರು ಆರೋಪಿಗಳಿಂದ ಪೊಲೀಸರು ಒಟ್ಟು ಏಳು ಸ್ಮೋಕ್ ಕ್ಯಾನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

‘ಜೈ ಹಿಂದ್’ ಹಾಗೂ ಮಣಿಪುರ ಜನಾಂಗೀಯ ಘರ್ಷಣೆಗೆ ಸಂಬಂಧಿಸಿದ ಬರಹಗಳನ್ನು ಒಳಗೊಂಡ ಕರ ಪತ್ರಗಳನ್ನೂ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಎಫ್‌ಐಆರ್ ಹೇಳಿದೆ.

ಡಿ.ಮನೋರಂಜನ್, ಸಾಗರ್ ಶರ್ಮಾ ಅವರು ಬುಧವಾರ ಲೋಕಸಭೆಯ ಸಂದರ್ಶಕರ ಗ್ಯಾಲರಿಯಿಂದ ಸದನದೊಳಗೆ ಜಿಗಿದು ದಾಂದಲೆ ಎಬ್ಬಿಸಿದ್ದರು. ಇವರಿಬ್ಬರು ತಮ್ಮ ಸ್ಪೋರ್ಟ್ಸ್ ಶೂ ಒಳಗಡೆ ಎರಡು ‘ಸ್ಮೋಕ್ ಕ್ಯಾನ್’ಗಳನ್ನು ಅಡಗಿಸಿಟ್ಟುಕೊಂಡಿದ್ದರು.

ಅಮೋಲ್ ಶಿಂಧೆ ಹಾಗೂ ನೀಲಂ ವರ್ಮಾ ಅವರು ಸಂಸತ್ ಭವನದ ಹೊರಗಡೆ ಪ್ರತಿಭಟನೆ ಮಾಡಿದ್ದರು. ಬಳಕೆಯಾಗದ ಒಂದು ಸ್ಮೋಕ್ ಕ್ಯಾನ್ ಸೇರಿ ಒಟ್ಟು ಐದು ಸ್ಮೋಕ್ ಕ್ಯಾನ್‌ಗಳನ್ನು ಅವರ ಬಳಿಯಿಂದ ವಶಪಡಿಸಿಕೊಳ್ಳಲಾಗಿದೆ. ಆಧಾರ್ ಕಾರ್ಡ್‌ಗಳು ಮತ್ತು ಲೋಕಸಭೆಗೆ ಪ್ರವೇಶಿಸಲು ಬಳಸಿದ ಪಾಸ್‌ಗಳೂ ದೊರೆತಿವೆ ಎಂಬ ಮಾಹಿತಿ ಎಫ್‌ಐಆರ್‌ನಲ್ಲಿದೆ.

‘ಸ್ಮೋಕ್ ಕ್ಯಾನ್’ಗಳನ್ನು ಅಡಗಿಸಿಡಲು ಸಾಗರ್ ಮತ್ತು ಮನೋರಂಜನ್ ತಮ್ಮ ಶೂಗಳ ವಿನ್ಯಾಸವನ್ನು ಮಾರ್ಪಾಡು ಮಾಡಿದ್ದರು. ಶೂಗಳ ಸೋಲ್‌ಗೆ (ಅಡಿಭಾಗ) ಹೆಚ್ಚುವರಿ ರಬ್ಬರ್ ಪದರಗಳನ್ನು ಅಳವಡಿಸಿ ಕ್ಯಾನ್‌ಗಳನ್ನು ಇಡಲು ವ್ಯವಸ್ಥೆ ಮಾಡಿದ್ದರು.

ಸಾಗರ್ ಅವರು ಬೂದು ಬಣ್ಣದ ಸ್ಪೋರ್ಟ್ಸ್ ಶೂ, ತಿಳಿ ಖಾಕಿ ಬಣ್ಣದ ಸಾಕ್ಸ್ ಧರಿಸಿದ್ದರೆ, ಮನೋರಂಜನ್ ಅವರು ಕಡು ಬೂದು ಬಣ್ಣದ ಶೂ ಮತ್ತು ನೀಲಿ ಬಣ್ಣದ ಸಾಕ್ಸ್ ಧರಿಸಿದ್ದರು. ಸಂಸತ್ ಭವನದ ಹೊರಗಡೆ ಪ್ರತಿಭಟನೆ ಮಾಡಿದ್ದ ಅಮೋಲ್ ಮತ್ತು ನೀಲಂ ಅವರು ನಿರುದ್ಯೋಗ ಸಮಸ್ಯೆ ಮತ್ತು ಸರ್ವಾಧಿಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದರು ಎಂದು ಎಫ್‌ಐಆರ್ ಹೇಳಿದೆ.

‘ಒಳಾಂಗಣದಲ್ಲಿ ಬಳಸಬಾರದು’: 2 ‘ಸ್ಮೋಕ್ ಕ್ಯಾನ್’ಗಳನ್ನು ಬಳಸುವಾಗ ವಹಿಸಬೇಕಾದ ಎಚ್ಚರಿಕೆಗಳ ಬಗ್ಗೆಯೂ ಕ್ಯಾನ್ ಹೊರಭಾಗದಲ್ಲಿ ಬರೆಯಲಾಗಿತ್ತು. ಬಳಸುವಾಗ ‘ಕಣ್ಣಿನ ಸುರಕ್ಷತೆಗೆ ಕನ್ನಡಕ ಹಾಕಿಕೊಳ್ಳಬೇಕು ಹಾಗೂ ಕೈಗವಸು ಧರಿಸಿರಬೇಕು’, ‘ಒಳಾಂಗಣದಲ್ಲಿ ಬಳಸಲೇಬಾರದು’, ‘18 ವರ್ಷಕ್ಕಿಂತ ಮೇಲಿನವರು ಮಾತ್ರ ಬಳಸಬಹುದು’, ‘ವಿಮಾನದಲ್ಲಿ ಕೊಂಡೊಯ್ಯುವಂತಿಲ್ಲ’ ಎಂಬ ಸೂಚನೆಗಳು ಇದ್ದವು ಎಂದು ಎಫ್‌ಐಆರ್ ತಿಳಿಸಿದೆ.

ಝಾ ಗೆಳೆಯನ ವಿಚಾರಣೆ

ಕೋಲ್ಕತ್ತ (ಪಿಟಿಐ): ಲೋಕಸಭೆಯಲ್ಲಿ ನಡೆದ ಭದ್ರತಾ ಉಲ್ಲಂಘನೆ ಪ್ರಕರಣದ ಪ್ರಮುಖ ಆರೋಪಿ ಲಲಿತ್ ಮೋಹನ್ ಝಾನ ಗೆಳೆಯ ನೀಲಾಕ್ಷ ಆಯಿಚ್ ಅವರನ್ನು ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯಲ್ಲಿ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಬ್ಯಾರಕ್‌ಪುರದ ಪೊಲೀಸರ ತಂಡವು ಗುರುವಾರ ಹಾಲಿಶಹರ್‌ನಲ್ಲಿರುವ ಝಾ ಅವರ ನಿವಾಸಕ್ಕೆ ತೆರಳಿ ವಿಚಾರಣೆ ನಡೆಸಿದ್ದಾರೆ. ‘ಸ್ವಯಂ ಸೇವಾ ಸಂಸ್ಥೆಯೊಂದರಲ್ಲಿ ಝಾ ಮತ್ತು ನೀಲಾಕ್ಷ ಕೆಲ ಸಮಯ ಜತೆಯಾಗಿ ಕೆಲಸ ಮಾಡಿದ್ದರು. ಈ ವೇಳೆ ಅವರಿಬ್ಬರ ನಂಟಿನ ಬಗ್ಗೆ ಪ್ರಶ್ನೆಗಳನ್ನು ಕೇಳಲಾಯಿತು’ ಎಂದು ತಿಳಿಸಿದರು.

ಝಾ ಅವರು ಲೋಕಸಭೆಯಲ್ಲಿ ನಡೆದ ಘಟನೆಯ ವಿಡಿಯೊವನ್ನು ಪಶ್ಚಿಮ ಬಂಗಾಳದ ಕಾಲೇಜೊಂದರ ವಿದ್ಯಾರ್ಥಿಯಾಗಿರುವ ನೀಲಾಕ್ಷ ಅವರಿಗೆ ಕಳುಹಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ. ‘ನೀಲಾಕ್ಷ ಅವರ ಮೊಬೈಲ್ ಫೋನ್ ಪರಿಶೀಲಿಸಲಾಗಿದೆ. ಮುಂದಿನ ತನಿಖೆಯ ನಿಟ್ಟಿನಲ್ಲಿ ಅವು ಮಹತ್ವದ್ದಾಗಿವೆ’ ಎಂದು ಅಧಿಕಾರಿ ಮಾಹಿತಿ ನೀಡಿದರು.

ಶಾ ಹೇಳಿಕೆಗೆ ವಿಪಕ್ಷ ಪಟ್ಟು

ಒಂದನೇ ಪುಟದಿಂದ...

ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಕರೆದಿದ್ದ ಸಭೆಗೂ ವಿಪಕ್ಷಗಳ ನಾಯಕರು ಗೈರಾದರು. ಭದ್ರತಾ ವೈಫಲ್ಯದ ವಿಷಯವನ್ನು ಮುಂದಿಟ್ಟುಕೊಂಡು ಸೋಮವಾರವೂ ಹೋರಾಟ ಮುಂದುವರಿಯಲಿದೆ ಎಂದು ವಿರೋಧ ಪಕ್ಷದ ಮೂಲಗಳು ತಿಳಿಸಿವೆ.

ಚಳಿಗಾಲದ ಅಧಿವೇಶನದಿಂದ ಅಮಾನತುಗೊಂಡ ಲೋಕಸಭೆಯ 13 ಸಂಸದರು ಹಾಗೂ ರಾಜ್ಯಸಭೆಯ ಒಬ್ಬರು ಸಂಸದರು ಶಾ ಹೇಳಿಕೆಗೆ ಆಗ್ರಹಿಸಿ ಸಂಸತ್‌ನ ಗಾಂಧಿ ಪ್ರತಿಮೆಯ ಮುಂಭಾಗದಲ್ಲಿ ಶುಕ್ರವಾರ ಬೆಳಿಗ್ಗೆ ಮೌನ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಗೆ ಬೆಂಬಲ ನೀಡಿದರು.

‘ಆರೋಪಿಗಳಿಗೆ ಪಾಸ್ ನೀಡಿದ ಪ್ರತಾಪಸಿಂಹ ಮುಕ್ತವಾಗಿ ಓಡಾಡುತ್ತಿದ್ದಾರೆ. ಭಾರತದ ಜನರ ಪರವಾಗಿ ಧ್ವನಿ ಎತ್ತಿದ್ದಕ್ಕಾಗಿ ನನ್ನನ್ನು ಹಾಗೂ ನನ್ನ ಸಹೋದ್ಯೋಗಿಗಳನ್ನು ಸದನದಿಂದ ಅಮಾನತುಗೊಳಿಸಲಾಗಿದೆ. ಸದನದಲ್ಲಿ ಪ್ರಧಾನಿ ಹಾಗೂ ಗೃಹ ಸಚಿವರು ಹೇಳಿಕೆ ನೀಡಬೇಕು ಎಂಬುದು ನಮ್ಮ ನೈಜ ಬೇಡಿಕೆ’ ಎಂದು ಅಮಾನತುಗೊಂಡಿರುವ ಸಂಸದ ಹಿಬಿ ಈಡನ್ ಹೇಳಿದರು.

‘ಇಂಡಿಯಾ’ ಒಕ್ಕೂಟದ ನಾಯಕರು ಸಭೆ ಸೇರಿ ಭದ್ರತಾ ಲೋಪದ ಕುರಿತು ಚರ್ಚೆಗೆ ಒತ್ತಾಯಿಸಲು ನಿರ್ಧರಿಸಿದರು.

‘ಈ ವಿಷಯದಲ್ಲಿ ಬಿಜೆಪಿ ಕುರಿತು ವಿರೋಧ ಪಕ್ಷದ ನಾಯಕರು ಜಾಗರೂಕರಾಗಿರಬೇಕು. ಇದನ್ನು ರಾಷ್ಟ್ರೀಯ ಭದ್ರತೆಯ ವಿಷಯವನ್ನಾಗಿ ಬಿಜೆಪಿಯವರು ಪರಿವರ್ತಿಸುವ ಸಾಧ್ಯತೆ ಇದೆ. ಜತೆಗೆ, ವಿರೋಧ ಪಕ್ಷದವರು ಸಹಕರಿಸುತ್ತಿಲ್ಲ ಎಂದು ಬಿಂಬಿಸಲೂಬಹುದು. ಎಚ್ಚರಿಕೆಯ ನಡೆ ಇಡಬೇಕು’ ಎಂದು ಕೆಲವು ಮುಖಂಡರು ಸಭೆಯಲ್ಲಿ ಕಿವಿಮಾತು ಹೇಳಿದರು ಎಂದು ಮೂಲಗಳು ಹೇಳಿವೆ.

‘ಭದ್ರತಾ ವೈಫಲ್ಯದ ಕುರಿತು ಪ್ರಶ್ನೆ ಮಾಡಿದ ಸಂಸದರನ್ನು ಸದನದಿಂದ ಹೊರ ಹಾಕಲಾಗಿದೆ. ಇದು ಅನ್ಯಾಯದ ಪರಮಾವಧಿ. ಈ ಕುರಿತು ನಾವೆಲ್ಲ ಒಗ್ಗಟ್ಟಿನಿಂದ ಹೋರಾಟ ಮಾಡಬೇಕು ಹಾಗೂ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಬೆಳಿಗ್ಗೆ 11 ಗಂಟೆಗೆ ರಾಜ್ಯಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಜಗದೀಪ್ ಧನಕರ್, ‘ಭದ್ರತಾ ಲೋಪಕ್ಕೆ ಸಂಬಂಧಿಸಿದ ಗಂಭೀರ ಪರಿಸ್ಥಿತಿಯ ಕುರಿತು ಚರ್ಚೆಗೆ ಆಗ್ರಹಿಸಿ ನನಗೆ 23 ನೋಟಿಸ್‌ಗಳು ಬಂದಿವೆ. ಪ್ರಕರಣದ ಕುರಿತು ತನಿಖೆ ನಡೆಯುತ್ತಿದ್ದು, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲಾಗುತ್ತದೆ’ ಎಂದರು.

ಈ ವಿಷಯದ ಕುರಿತು ಚರ್ಚಿಸಲು ಕೂಡಲೇ ಕಾಲಾವಕಾಶ ನೀಡಬೇಕು ಎಂಬ ವಿಪಕ್ಷ ಸದಸ್ಯರ ಬೇಡಿಕೆಯನ್ನು ಅವರು ಒಪ್ಪಲಿಲ್ಲ. ಸದಸ್ಯರು ಘೋಷಣೆಗಳನ್ನು ಕೂಗಿದರು. ಆಗ ಮಧ್ಯಪ್ರವೇಶಿಸಿದ ಸಭಾನಾಯಕ ಪೀಯೂಷ್ ಗೋಯಲ್, ಬೆಳಗಾವಿಯಲ್ಲಿನ ಮಹಿಳೆಯ ಬೆತ್ತಲೆ ಪ್ರಕರಣವನ್ನು ಉಲ್ಲೇಖಿಸಿದರು. ಕರ್ನಾಟಕದ ಕಾನೂನು ಸುವ್ಯವಸ್ಥೆ ಕುರಿತು ಮೊದಲು ಮಾತನಾಡಬೇಕು ಎಂದರು.

‘ಭದ್ರತಾ ಲೋಪದ ಕುರಿತು ಶಾ ಅವರು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ. ಆದರೆ, ಅವರು ಸದನದಲ್ಲಿ ಹೇಳಿಕೆ ನೀಡಲು ಸಿದ್ಧರಿಲ್ಲ. ಅವರು ಮೊದಲು ಹೇಳಿಕೆ ನೀಡಲಿ’ ಎಂದು ವಿಪಕ್ಷಗಳ ಸದಸ್ಯರು ಒತ್ತಾಯಿಸಿ ಸಭಾಪತಿ ಪೀಠದ ಎದುರು ಧರಣಿ ಮುಂದುವರಿಸಿದರು. ಗಲಾಟೆ ಹೆಚ್ಚಾದಾಗ ಸಭಾಪತಿಯವರು ಕಲಾಪವನ್ನು ಮುಂದೂಡಿದರು.

ಭದ್ರತಾ ಲೋಪ: ಬಿಜೆಪಿ– ಟಿಎಂಸಿ ವಾಕ್ಸಮರ

ಕೋಲ್ಕತ್ತ (ಪಿಟಿಐ): ಲೋಕಸಭೆಯಲ್ಲಿ ಉಂಟಾದ ಭದ್ರತಾ ಲೋಪದ ಬಗ್ಗೆ ತನ್ನ ಮೇಲಿರುವ ಆರೋಪಗಳನ್ನು ಮತ್ತು ವೈಫಲ್ಯವನ್ನು ಮುಚ್ಚಿಕೊಳ್ಳಲು ಬಿಜೆಪಿಯು ಗಮನ ಬೇರೆಡೆ ಸೆಳೆಯುವ ತಂತ್ರವನ್ನು ಅನುಸರಿಸುತ್ತಿದೆ ಎಂದು ಟಿಎಂಸಿ ಶುಕ್ರವಾರ ಆರೋಪಿಸಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಟಿಎಂಸಿ ಹಿರಿಯ ನಾಯಕಿ ಮತ್ತು ಪಶ್ಚಿಮ ಬಂಗಾಳದ ಸಚಿವೆ ಶಶಿ ಪಂಜ, ‘ಸಂಸತ್ತಿನಲ್ಲಿ ಸಾಮಾನ್ಯವಾಗಿ 300 ಮಂದಿ ಭದ್ರತಾ ಸಿಬ್ಬಂದಿ ಇರುತ್ತಾರೆ. ಆದರೆ, ಬುಧವಾರ ಮಾತ್ರ 176 ಭದ್ರತಾ ಸಿಬ್ಬಂದಿ ಇದ್ದಿದ್ದು ಏಕೆ’ ಎಂಬ ವಿಪಕ್ಷಗಳ ಪ್ರಮುಖ ಪ್ರಶ್ನೆಗೆ ಉತ್ತರಿಸುವ ಬದಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿಯು, ಬಂಧಿತರ ತವರು ರಾಜ್ಯಗಳು ಮತ್ತು ಅವರ ಸಂಪರ್ಕದಲ್ಲಿದ್ದವರ ಬಗ್ಗೆ ಗಮನ ಹರಿಸುತ್ತಿದೆ ಎಂದು ಕುಟುಕಿದರು.

ಪಶ್ಚಿಮ ಬಂಗಾಳದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸುಕಾಂತ ಮಜುಂದಾರ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಚಿತ್ರ

‘ಭದ್ರತಾ ವೈಫಲ್ಯದ ಹೊಣೆಯನ್ನು ಶಾ ಅವರು ಇನ್ನೂ ಹೊತ್ತುಕೊಂಡಿಲ್ಲ. ವೈಫಲ್ಯ ಮುಚ್ಚಿಹಾಕಲು ಬಿಜೆಪಿ ಎಲ್ಲ ರೀತಿಯಲ್ಲೂ ದಿಕ್ಕು ತಪ್ಪಿಸುವ ತಂತ್ರಗಳನ್ನು ಅನುಸರಿಸುತ್ತಿದೆ. ಪ್ರಕರಣದಲ್ಲಿ ಬಂಧಿತರ ಸುತ್ತ ಕಥೆ ಹೆಣೆಯುತ್ತಿದೆ. ಆರೋಪಿಗಳಲ್ಲಿ ಒಬ್ಬರು ಹಿಂದೆ ವಾಸಿಸುತ್ತಿದ್ದ ಅಥವಾ ಭೇಟಿ ನೀಡಿದ ರಾಜ್ಯದ ಆಡಳಿತ ಪಕ್ಷವನ್ನು ಘಟನೆಗೆ ಯಾವ ರೀತಿ ಹೊಣೆಯಾಗಿಸುವುದೆಂದು ನೋಡುತ್ತಿದೆ’ ಎಂದು ಟೀಕಿಸಿದರು.

ಪ್ರಮುಖ ಆರೋಪಿ ಲಲಿತ್ ಮೋಹನ್ ಝಾ ಅವರು ಟಿಎಂಸಿಯ ಹಿರಿಯ ಶಾಸಕರೊಂದಿಗೆ ಪೂಜಾ ಮಂಟಪದಲ್ಲಿದ್ದ ಫೋಟೊಗಳನ್ನು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಮತ್ತು ಬಿಜೆಪಿ ರಾಜ್ಯ ಅಧ್ಯಕ್ಷ ಸುಕಾಂತ ಮಜುಂದಾರ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಶಶಿ ಪಂಜ ಅವರು, ‘ಅನೇಕ ಜನರು ನಾಯಕರೊಂದಿಗೆ ಹಲವಾರು ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ತಮ್ಮೊಂದಿಗೆ ಕ್ಯಾಮೆರಾ ಮುಂದೆ ಕಾಣಿಸುವ ಎಲ್ಲರ ಹಿನ್ನೆಲೆಯನ್ನು ನಾಯಕರು ತಿಳಿಯಲು ಸಾಧ್ಯವೇ’ ಎಂದು ಪ್ರಶ್ನಿಸಿದ್ದಾರೆ.

ಸಂಸತ್ತಿನ ಭದ್ರತೆ ಉಲ್ಲಂಘಿಸಿರುವ ಕೃತ್ಯದಲ್ಲಿ ಟಿಎಂಸಿ ಭಾಗಿಯಾಗಿರುವ ಬಗ್ಗೆ ಬಿಜೆಪಿಗೆ ಖಚಿತತೆ ಇದ್ದರೆ ಗೃಹ ಸಚಿವ ಅಮಿತ್ ಶಾ ಅಥವಾ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಐಟಿ ವಿಭಾಗದ ಮೂಲಕ ಸುಳ್ಳು ಕಥೆ ಹೆಣೆಯುವ ಬದಲು ಸದನದ ಒಳಗೆ ಹೇಳಿಕೆ ನೀಡಬೇಕು. ಈ ರೀತಿ ಕಥೆ ಹೆಣೆಯುವುದರಿಂದ ಪ್ರಕರಣದ ಸರಿಯಾದ ತನಿಖೆಗೆ ಮತ್ತು ಇಂತಹ ಪ್ರಕರಣ ಭವಿಷ್ಯದಲ್ಲಿ ತಪ್ಪಿಸಲು ಯಾವುದೇ ನೆರವಾಗುವುದಿಲ್ಲ ಎಂದು ಹೇಳಿದರು. ಮಾಳವೀಯ ಅವರ ‘ಎಕ್ಸ್’ ಪೋಸ್ಟ್ ಉಲ್ಲೇಖಿಸಿ, ‘ಮಮತಾ ಬ್ಯಾನರ್ಜಿ ತಮ್ಮ ಪಕ್ಷದ ಹಿರಿಯ ನಾಯಕ ತಪಸ್ ರಾಯ್ ಅವರೊಂದಿಗಿನ ಲಲಿತ್ ಝಾ ಸಂಬಂಧದ ಬಗ್ಗೆ ಮೌನ ವಹಿಸಲ್ಲ’ ಎಂದು ಶಶಿ ಹೇಳಿದ್ದಾರೆ.

ಮಾಳವೀಯ ಅವರು ಮಜುಂದಾರ್ ಅವರ ಪೋಸ್ಟ್ ಅನ್ನು ಪುನಃ ಹಂಚಿಕೊಂಡಿದ್ದು, ‘ನಮ್ಮ ಪ್ರಜಾಪ್ರಭುತ್ವದ ದೇಗುಲದ ಮೇಲಿನ ದಾಳಿಯ ಮಾಸ್ಟರ್ ಮೈಂಡ್ ಲಲಿತ್ ಝಾ ಟಿಎಂಸಿಯ ತಪಸ್ ರಾಯ್ ಅವರೊಂದಿಗೆ ಬಹಳ ಸಮಯದಿಂದ ನಿಕಟ ಸಂಬಂಧ ಹೊಂದಿದ್ದಾರೆ. ತನಿಖೆಗೆ ಇದು ಪುರಾವೆ ಅಲ್ಲವೇ?’ ಎಂದಿದ್ದಾರೆ.

ಸಂಸತ್‌ನ ಚಳಿಗಾಲದ ಅಧಿವೇಶನದಿಂದ ಅಮಾನತುಗೊಂಡಿರುವ ಸಂಸದರೊಂದಿಗೆ ಕಾಂಗ್ರೆಸ್ ಸಂಸದೆ ಸೋನಿಯಾ ಗಾಂಧಿ ಶುಕ್ರವಾರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

‘ಕ್ರಮ ಕೈಗೊಳ್ಳಿ, ಇಲ್ಲ ಸಾಯಲು ಬಿಡಿ’

ಉತ್ತರಪ್ರದೇಶ: ಸಿಜೆಐಗೆ ಪತ್ರ ಬರೆದ ಜಿಲ್ಲಾ ನ್ಯಾಯಾಧೀಶೆ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಬಾಂದಾ ಜಿಲ್ಲೆಯ ಮಹಿಳಾ ನ್ಯಾಯಾಧೀಶೆ ಒಬ್ಬರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದು ಘನತೆಯಿಂದ ಜೀವ ಕಳೆದುಕೊಳ್ಳಲು ಅನುಮತಿ ಕೋರಿದ್ದಾರೆ. ಜಿಲ್ಲಾ ನ್ಯಾಯಾಧೀಶರೊಬ್ಬರ ವಿರುದ್ಧ ತಾವು ದಾಖಲಿಸಿದ್ದ ಲೈಂಗಿಕ ದೌರ್ಜನ್ಯ ದೂರಿಗೆ ಸಂಬಂಧಿಸಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಆರೋಪಿಸಿದ್ದಾರೆ.

ಈ ಪತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆಯೇ, ಮುಖ್ಯ ನ್ಯಾಯಮೂರ್ತಿಯವರ ಸೂಚನೆ ಮೇರೆಗೆ ಸುಪ್ರೀಂಕೋರ್ಟ್ ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡಿದೆ. ದೂರಿನ ಕುರಿತ ತನಿಖೆ ಯಾವ ಹಂತದಲ್ಲಿದೆ ಎಂಬುದರ ಮಾಹಿತಿ ಒದಗಿಸಲು ಅಲಹಾಬಾದ್ ಹೈಕೋರ್ಟ್‌ಗೆ ಸೂಚಿಸಿದೆ.

ಬಾರಾಬಂಕಿಯಲ್ಲಿದ್ದಾಗ ವೃತ್ತಿ ಜೀವನದಲ್ಲಿ ನಿಂದನೆ ಮತ್ತು ಕಿರುಕುಳ ಅನುಭವಿಸಿದ್ದು ಜೀವ ಕಳೆದುಕೊಳ್ಳಲು ಅನುಮತಿ ನೀಡಬೇಕು ಎಂದು ಎರಡು ಪುಟಗಳ ಪತ್ರದಲ್ಲಿ ನ್ಯಾಯಾಧೀಶೆ ಮನವಿ ಮಾಡಿದ್ದಾರೆ.

‘ನನಗೆ ಇನ್ನು ಬದುಕಬೇಕೆಂಬ ಇಚ್ಛೆಯಿಲ್ಲ. ಒಂದೂವರೆ ವರ್ಷದಿಂದ ನಾನು ಜೀವಂತ ಶವದಂತೆ ಆಗಿದ್ದೇನೆ. ಆತ್ಮವಿಲ್ಲದ ಮತ್ತು ನಿರ್ಜೀವ ದೇಹವನ್ನು ಹೊತ್ತು ಸುತ್ತಾಡುವುದರಲ್ಲಿ ಇನ್ನು ಯಾವ ಸಾರ್ಥಕತೆಯೂ ಇಲ್ಲ. ಜೀವನದಲ್ಲೀಗ ನನಗೆ ಯಾವುದೇ ಗುರಿ ಉಳಿದಿಲ್ಲ. ಘನತೆಯಿಂದ ನನ್ನ ಜೀವ ಕೊನೆಗಾಣಿಸಿಕೊಳ್ಳಲು ದಯವಿಟ್ಟು ಅನುಮತಿ ನೀಡಬೇಕು’ ಎಂದು ಕೋರಿದ್ದಾರೆ.

ಆಂತರಿಕ ದೂರುಗಳ ಸಮಿತಿ (ಐಸಿಸಿ) ಮುಂದೆ ಇರುವ ದೂರಿನ ವಿಚಾರಣೆಯ ಪ್ರಗತಿ ಬಗ್ಗೆ ಮಾಹಿತಿ ನೀಡಲು ಅಲಹಾಬಾದ್ ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರಿಗೆ ಸುಪ್ರೀಂ ಕೋರ್ಟ್‌ನ ಪ್ರಧಾನ ಕಾರ್ಯದರ್ಶಿಯವರು ಕೇಳಿದ್ದಾರೆ. ಸಿಜೆಐ ಆದೇಶದ ಮೇರೆಗೆ ಮಾಹಿತಿ ಕೇಳಲಾಗಿದೆ.

ಈ ಮೊದಲು ಮಹಿಳಾ ನ್ಯಾಯಾಧೀಶರು ಅರ್ಜಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದರು. ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಸಂದೀಪ್ ಮೆಹ್ತಾ ಅವರ ಪೀಠದ ಮುಂದೆ ಈ ಅರ್ಜಿ ವಿಚಾರಣೆಗೆ ಬಂದಿತ್ತು.

‘ಆಂತರಿಕ ದೂರುಗಳ ಸಮಿತಿಗೆ ಈ ವಿಷಯದ ಅರಿವಿದೆ. ಈ ವಿಚಾರವಾಗಿ ನಿರ್ಣಯವನ್ನು ಅಂಗೀಕರಿಸಲಾಗಿದ್ದು, ಅದಕ್ಕೆ ಅಲಹಾಬಾದ್ ಹೈಕೋರ್ಟ್ ಮುಖ್ಯನ್ಯಾಯಮೂರ್ತಿಗಳ ಅನುಮೋದನೆ ಬಾಕಿ ಇದೆ’ ಎಂದು ಹೇಳಿದ ಪೀಠವು ಅರ್ಜಿ ವಜಾಗೊಳಿಸಿತ್ತು.

ಮಸೀದಿ ಸಮೀಕ್ಷೆ ತಡೆಗೆ ‘ಸುಪ್ರೀಂ’ ನಕಾರ

ನವದೆಹಲಿ (ಪಿಟಿಐ): ಮಥುರಾದಲ್ಲಿ ಕೃಷ್ಣ ಜನ್ಮಭೂಮಿ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಶಾಹಿ ಈದ್ಗಾ ಆವರಣದಲ್ಲಿ ಸಮೀಕ್ಷೆ ನಡೆಸಲು ಗುರುವಾರ ಅನುಮತಿ ನೀಡಿರುವ ಅಲಹಾಬಾದ್ ಹೈಕೋರ್ಟ್‌ನ ಆದೇಶಕ್ಕೆ ತಡೆಯಾಜ್ಞೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮೇಲ್ಮನವಿ ಮೂಲಕ ಆದೇಶವನ್ನು ಪ್ರಶ್ನಿಸುವಂತೆ ಸೂಚಿಸಿದೆ.

ಹೈಕೋರ್ಟ್ ಆದೇಶದಲ್ಲಿ ಮಧ್ಯಪ್ರವೇಶಿಸಬೇಕೆಂದು ಮಸೀದಿ ಆಡಳಿತ ಮಂಡಳಿ ಪರ ಹಿರಿಯ ವಕೀಲ ಹುಜೇಫಾ ಅಹ್ಮದಿ ಅವರು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್‌ವಿಎನ್ ಭಟ್ಟಿ ಅವರ ಪೀಠವನ್ನು ಕೋರಿದ್ದರು.

ಡಿ.10ಕ್ಕೆ ವಿಮಾನ ಏರಿದ್ದ ಮನೋರಂಜನ್

ಮೈಸೂರು: ಲೋಕಸಭೆಯಲ್ಲಿ ಕಲಾಪದ ವೇಳೆ ಪ್ರೇಕ್ಷಕರ ಗ್ಯಾಲರಿಯಿಂದ ಜಿಗಿದಿದ್ದ ಆರೋಪಿ ಮನೋರಂಜನ್ ಡಿ.10 ರಂದು ಬೆಂಗಳೂರಿನಿಂದ ದೆಹಲಿಗೆ ವಿಮಾನದಲ್ಲಿ ತೆರಳಿದ್ದು, ₹ 6 ಸಾವಿರ ನೀಡಿ ಏಜೆನ್ಸಿ ಮೂಲಕ ಟಿಕೆಟ್ ಬುಕ್ ಮಾಡಿರುವುದು ಗುಪ್ತಚರ ಇಲಾಖೆಯ ತನಿಖೆಯಿಂದ ತಿಳಿದು ಬಂದಿದೆ.

ಬೆಂಗಳೂರು ಹಾಗೂ ಮೈಸೂರಿನಲ್ಲಿ ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದ ವ್ಯಕ್ತಿಯೊಬ್ಬರನ್ನು ಸಂಪರ್ಕಿಸಿದ್ದ ಮನೋರಂಜನ್ ಟಿಕೆಟ್ ಕಾಯ್ದಿರಿಸಲು ತಿಳಿಸಿದ್ದ. ಆಂತರಿಕ ಭದ್ರತಾ ವಿಭಾಗದ ಪೊಲೀಸರು ಆತನನ್ನು ಕರೆಸಿ ವಿಚಾರಣೆ ನಡೆಸಿದ್ದು, ‘ಗ್ರಾಹಕನೆಂಬ ಹಿನ್ನೆಲೆಯಲ್ಲಿ ಸೇವೆ ನೀಡಿದ್ದೇವೆ. ಆತನ ಇತರೆ ಚಟುವಟಿಕೆ ಬಗ್ಗೆ ಮಾಹಿತಿ ಇಲ್ಲ ಎಂದಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಭದ್ರತಾ ವಿಭಾಗದ ಸೂಚನೆ ಹಿನ್ನೆಲೆಯಲ್ಲಿ ವಿಜಯನಗರದ ಎರಡನೇ ಹಂತದ ಮನೆಯಲ್ಲಿರುವ ಮನೋರಂಜನ್ ಕೊಠಡಿಗೆ ಬೀಗ ಹಾಕಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಪೊಲೀಸರು ಸಂಸದ ಪ್ರತಾಪ ಸಿಂಹ ಕಚೇರಿಯನ್ನು ಪರಿಶೀಲಿಸಿ, ಸಂದರ್ಶಕರ ಮಾಹಿತಿಗಳ ವಿವರ ಸಂಗ್ರಹಿಸಿದರು.

ಮನೆಗೆ ಬಂದಿದ್ದ ಸಾಗರ್‌ಶರ್ಮಾ: ‘ಪ್ರಕರಣದ ಆರೋಪಿ ಸಾಗರ್ ಶರ್ಮ ಮೇ ತಿಂಗಳಲ್ಲಿ ಎರಡು ಬಾರಿ ಮನೆಗೆ ಬಂದಿದ್ದ’ ಎಂದು ಮನೋರಂಜನ್ ಪೋಷಕರು ಆಂತರಿಕ ಭದ್ರತೆ ವಿಭಾಗದ ಸಿಬ್ಬಂದಿಗೆ ತಿಳಿಸಿದ್ದಾರೆ.

ಸಹಿ ಅಭಿಯಾನ: ಪ್ರತಾಪ ಸಿಂಹ ಅವರನ್ನು ಸಂಸದ ಸ್ಥಾನದಿಂದ ವಜಾಕ್ಕೆ ಆಗ್ರಹಿಸಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಂಘಟನೆ ಸದಸ್ಯರು ಶುಕ್ರವಾರ ಸಹಿ ಸಂಗ್ರಹ ನಡೆಸಿದರು.

ಮಹಾರಾಜ ಕಾಲೇಜು ಮೈದಾನದ ಬಳಿ, ಒಂದು ಕೈಯಲ್ಲಿ ಸ್ಮೋಕ್ ಬಾಂಬು, ಇನ್ನೊಂದು ಕೈಯಲ್ಲಿ ಸದನದ ಪಾಸ್ ಹಿಡಿದ ಪ್ರತಾಪ ಸಿಂಹ ಅವರ ಭಾವಚಿತ್ರ, ‘ದೇಶದ್ರೋಹಿ’ ಎಂಬ ಪೋಸ್ಟರ್ ಪ್ರದರ್ಶಿಸಿದರು. ಪೊಲೀಸರು ಅದನ್ನು ತೆರವುಗೊಳಿಸಿದರು. ‘500ಕ್ಕಿಂತಲೂ ಹೆಚ್ಚಿನ ಸಹಿ ಸಂಗ್ರಹಿಸಿದ್ದೇವೆ. ಮನವಿಯನ್ನು ರಾಜ್ಯಪಾಲರಿಗೆ ಕಳುಹಿಸುತ್ತೇವೆ’ ಎಂದು ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಬಿಜೆಪಿಯಿಂದ ದೂರು: ‘ಸಂಸದರ ಭಾವಚಿತ್ರವನ್ನು ಉಗ್ರಗಾಮಿ ರೀತಿ ಬಿಂಬಿಸಿ ಮೈಸೂರಿನಲ್ಲಿ ಕೋಮು ಗಲಭೆಗೆ ಪ್ರಚೋದಿಸಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದು ಬಿಜೆಪಿ ಮುಖಂಡ ಆನಂದ್, ಕೆ.ಎಸ್.ಶಿವರಾಮು ವಿರುದ್ಧ ಲಕ್ಷ್ಮೀಪುರಂ ಠಾಣೆಗೆ ದೂರು ನೀಡಿದ್ದಾರೆ.

ಉತ್ತರ ಪ್ರದೇಶ: ಬಾಲಕಿ ಮೇಲೆ ಅತ್ಯಾಚಾರ ಪ್ರಕರಣ

ಬಿಜೆಪಿ ಶಾಸಕನಿಗೆ 25 ವರ್ಷ ಜೈಲು

ಸೋನ್‌ಭದ್ರ (ಉತ್ತರ ಪ್ರದೇಶ) (ಪಿಟಿಐ): ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಪ್ರಕರಣದಲ್ಲಿ ಉತ್ತರ ಪ್ರದೇಶದ ದುದ್ಧಿ ಕ್ಷೇತ್ರದ ಬಿಜೆಪಿ ಶಾಸಕ ರಾಮ್ ದುಲಾರ್ ಗೊಂಡಗೆ ಸೋನ್‌ಭದ್ರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 25 ವರ್ಷಗಳ ಕಠಿಣ ಜೈಲು ಶಿಕ್ಷೆ ಹಾಗೂ ₹ 10 ಲಕ್ಷ ದಂಡ ವಿಧಿಸಿ ಶುಕ್ರವಾರ ಆದೇಶಿಸಿದೆ.

ಪ್ರಕರಣ ಕುರಿತ ಆದೇಶ ಪ್ರಕಟಿಸಿದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಅಹ್ಸಾನ್ ಉಲ್ಲಾ ಖಾನ್ ಅವರು, ದಂಡದ ಮೊತ್ತವನ್ನು ಸಂತ್ರಸ್ತೆಯ ಪುನರ್‌ವಸತಿಗೆ ಬಳಸುವಂತೆ ಸೂಚಿಸಿದ್ದಾರೆ. ಸಂತ್ರಸ್ತೆಗೆ ವಿವಾಹವಾಗಿದ್ದು, ಆಕೆಗೆ ಎಂಟು ವರ್ಷದ ಮಗಳಿದ್ದಾಳೆ. 2014ರಲ್ಲಿ ರಾಮ್ ದುಲಾರ್ ಗೊಂಡ, ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಗೊಂಡ ವಿರುದ್ಧ ಐಪಿಸಿ ಹಾಗೂ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು. ಈ ಘಟನೆ ನಡೆದ ವೇಳೆ ಗೊಂಡ ಶಾಸಕನಾಗಿರಲಿಲ್ಲ. ಪತ್ನಿ ಗ್ರಾಮ ಪಂಚಾಯಿತಿ ಅಧ್ಯಕ್ಷೆಯಾಗಿದ್ದರು.

ರಾಮ್ ದುಲಾರ್ ಗೊಂಡ

ವಿಚಾರಣೆ ಮೊದಲು ಪೋಕ್ಸೊ ನ್ಯಾಯಾಲಯದಲ್ಲಿ ನಡೆದಿತ್ತು. ಗೊಂಡ ವಿಧಾನಸಭೆಗೆ ಆಯ್ಕೆಯಾದ ನಂತರ ಸಂಸದರು–ಶಾಸಕರ ವಿರುದ್ಧದ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯಕ್ಕೆ ಪ್ರಕರಣವನ್ನು ವರ್ಗಾಯಿಸಲಾಯಿತು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಗೊಂಡ ತಪ್ಪಿತಸ್ಥ ಎಂದು ಡಿ.12 ರಂದು ಘೋಷಿಸಿತ್ತು. ಶುಕ್ರವಾರ ಶಿಕ್ಷೆ ಪ್ರಕಟಿಸಿದೆ ಎಂದು ವಿಶೇಷ ಸರ್ಕಾರಿ ವಕೀಲ ಸತ್ಯಪ್ರಕಾಶ್ ತ್ರಿಪಾಠಿ ತಿಳಿಸಿದ್ದಾರೆ.

25 ವರ್ಷ ಕಾರಾಗೃಹ ಶಿಕ್ಷೆ ವಿಧಿಸಿರುವ ಕಾರಣ, ಪ್ರಜಾಪ್ರಾತಿನಿಧ್ಯ ಕಾಯ್ದೆಯಡಿ ಶಾಸಕ ಸ್ಥಾನದಿಂದ ಗೊಂಡ ಅನರ್ಹಗೊಳಿಸುವ ಪ್ರಕ್ರಿಯೆಗೆ ಚಾಲನೆ ಸಿಗಲಿದೆ.

ರಾಜಸ್ಥಾನದ 14ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ

ಜನ್ಮದಿನದಂದೇ ಭಜನ್ ಲಾಲ್ ಪ್ರಮಾಣ

ಪ್ರಜಾವಾಣಿ ವಾರ್ತೆ/ ಪಿಟಿಐ

ಜೈಪುರ: ಭಜನ್ ಲಾಲ್ ಶರ್ಮಾ ಅವರು ರಾಜಸ್ಥಾನದ 14ನೇ ಮುಖ್ಯಮಂತ್ರಿಯಾಗಿ ಶುಕ್ರವಾರ ಪ್ರಮಾಣವಚನ ಸ್ವೀಕರಿಸಿದರು.

ಇಲ್ಲಿನ ಐತಿಹಾಸಿಕ ಆಲ್ಬರ್ಟ್ ಹಾಲ್ ಮ್ಯೂಸಿಯಂ ಮುಂಭಾಗದ ರಾಮ ನಿವಾಸ್ ಬಾಗ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಒಳಗೊಂಡಂತೆ ಬಿಜೆಪಿಯ ಹಲವು ಉನ್ನತ ನಾಯಕರು ಪಾಲ್ಗೊಂಡರು.

ರಾಜಸ್ಥಾನ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿರುವ ಭಜನ್ ಲಾಲ್ ತಮ್ಮ 57ನೇ ಜನ್ಮದಿನದಂದು ಸಿ.ಎಂ ಹುದ್ದೆ ವಹಿಸಿಕೊಂಡದ್ದು ವಿಶೇಷ. ದಿಯಾ ಕುಮಾರಿ ಮತ್ತು ಪ್ರೇಮಚಂದ್ರ ಬೈರ್ವ ಅವರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸಿದರು.

ರಾಜ್ಯಪಾಲ ಕಲ್ರಾಜ್ ಮಿಶ್ರಾ ಅವರು ಮೂವರಿಗೂ ಪ್ರಮಾಣ ವಚನ ಬೋಧಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಪಕ್ಷದ ನೂರಾರು ಕಾರ್ಯಕರ್ತರು ಸಮಾರಂಭಕ್ಕೆ ಸಾಕ್ಷಿಯಾದರು. ‘ಜೈಶ್ರೀರಾಮ್’, ’ಮೋದಿ–ಮೋದಿ‘ ಘೋಷಣೆಗಳು ಮೊಳಗಿದವು.

ಜೈಪುರದಲ್ಲಿ ಶುಕ್ರವಾರ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ (ಎಡದಿಂದ) ಉಪಮುಖ್ಯಮಂತ್ರಿ ದಿಯಾ ಕುಮಾರಿ, ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಕಲ್ರಾಜ್ ಮಿಶ್ರಾ, ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಮತ್ತು ಉಪಮುಖ್ಯಮಂತ್ರಿ ಪ್ರೇಮಚಂದ್ ಬೈರ್ವ ಪಾಲ್ಗೊಂಡರು –ಪಿಟಿಐ ಚಿತ್ರ

ಆರ್‌ಎಸ್‌ಎಸ್ ಬೆಂಬಲಿತ ಭಜನ್ ಲಾಲ್ ಅವರನ್ನು ಬಿಜೆಪಿ ವರಿಷ್ಠರು ಡಿ.12 ರಂದು ರಾಜಸ್ಥಾನದ ನೂತನ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದರು. ಬ್ರಾಹ್ಮಣ ಸಮುದಾಯದ ಅವರು ಸಂಗಾನೇರ್ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ.

ನಿರ್ಗಮಿತ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದು, ನೂತನ ಸಿ.ಎಂಗೆ ಅಭಿನಂದನೆ ಸಲ್ಲಿಸಿದರು.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ, ಗಜೇಂದ್ರ ಸಿಂಗ್ ಶೆಖಾವತ್ ಮತ್ತು ಬಿಜೆಪಿ ಅಧಿಕಾರದಲ್ಲಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಸಾಧುಗಳು ಹಾಗೂ ಸಂತರು ಕಾರ್ಯಕ್ರಮದಲ್ಲಿ ಭಾಗಿಯಾದರು.

ಸಮಾರಂಭಕ್ಕೆ ಮುನ್ನ ಪ್ರವೇಶದ್ವಾರದ ಬಳಿ ಕೆಲಹೊತ್ತು ಗೊಂದಲ ಏರ್ಪಟ್ಟಿತು. ಪಕ್ಷದ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ತಳ್ಳಿ ಏಕಕಾಲದಲ್ಲಿ ಒಳಗೆ ನುಗ್ಗಲು ಪ್ರಯತ್ನಿಸಿದ್ದು ಇದಕ್ಕೆ ಕಾರಣ. ಹೆಚ್ಚಿನ ಸಂಖ್ಯೆಯ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ಮಹುವಾ ಅರ್ಜಿ ಜ. 3ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಲೋಕಸಭೆಯಿಂದ ತಮ್ಮನ್ನು ಉಚ್ಚಾಟಿಸಿರುವುದನ್ನು ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ ನಾಯಕಿ ಮಹುವಾ ಮೊಯಿತ್ರಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಜನವರಿ 3ಕ್ಕೆ ನಿಗದಿಪಡಿಸಿದೆ.

ಪ್ರಶ್ನೆ ಕೇಳಲು ಲಂಚ ಪಡೆದ ಪ್ರಕರಣ ಸಂಬಂಧ ನೀತಿ ಸಮಿತಿಯು ಅವರನ್ನು ದೋಷಿ ಎಂದು ವರದಿಯಲ್ಲಿ ಹೇಳಿತ್ತು. ವರದಿಯನ್ನು ಲೋಕಸಭೆ ಅಂಗೀಕರಿಸಿತ್ತು. ಆ ಬಳಿಕ ಮೊಯಿತ್ರಾ ಅವರು ತಮ್ಮ ಉಚ್ಚಾಟನೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಪ್ರಕರಣದ ಫೈಲುಗಳು ಶುಕ್ರವಾರ ಬೆಳಿಗ್ಗೆಯಷ್ಟೇ ಕೈಸೇರಿವೆ. ಪೀಠವು ಇವುಗಳನ್ನು ಇನ್ನೂ ಪರಿಶೀಲಿಸಿಲ್ಲ. ಇದಕ್ಕೆ ಸಮಯ ಬೇಕು ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರಿದ್ದ ಪೀಠ ಹೇಳಿತು. ಕೋರ್ಟ್‌ನ ಚಳಿಗಾಲದ ರಜೆ ಬಳಿಕ ಜ.3ರಂದು ವಿಚಾರಣೆ ಕೈಗೆತ್ತಿಕೊಳ್ಳುವುದಾಗಿ ಮೊಯಿತ್ರಾ ಅವರ ಪರ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ತಿಳಿಸಿತು.

ಸಂಕ್ಷಿಪ್ತ ಸುದ್ದಿ

2 ಲಕ್ಷ ಮಹಿಳೆಯರನ್ನು ಉದ್ದೇಶಿಸಿ ಜ.2ರಂದು ಮೋದಿ ಮಾತು

ತ್ರಿಶ್ಶೂರ್ (ಕೇರಳ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಜ.2ರಂದು ಎರಡು ಲಕ್ಷ ಮಹಿಳೆಯರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸಂಸತ್ತಿನ ಉಭಯ ಸದನಗಳಲ್ಲಿ ಮಹಿಳಾ ಮೀಸಲಾತಿ ಮಸೂದೆಯು ಅಂಗೀಕಾರಗೊಂಡಿರುವ ಕಾರಣ ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಲು ಕೇರಳ ಬಿಜೆಪಿ ಘಟಕವು ‘ಸ್ತ್ರೀ ಶಕ್ತಿ ಸಂಘಮಮ್’ ಎನ್ನುವ ಬೃಹತ್ ಸಮಾವೇಶವನ್ನು ಆಯೋಜಿಸಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಶುಕ್ರವಾರ ತಿಳಿಸಿದರು.

ಚುನಾವಣೆಗೆ ಪಾಂಡಿಯನ್ ಸ್ಪರ್ಧಿಸಲ್ಲ: ಬಿಜೆಡಿ

ಭುವನೇಶ್ವರ (ಪಿಟಿಐ): ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ನಿಕಟವರ್ತಿ, ಮಾಜಿ ಐಎಎಸ್ ಅಧಿಕಾರಿ ವಿ.ಕಾರ್ತಿಕೇಯನ್ ಪಾಂಡಿಯನ್ ಅವರು 2024ರ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಆಡಳಿತಾರೂಢ ಬಿಜೆಡಿ ಶುಕ್ರವಾರ ಸ್ಪಷ್ಟಪಡಿಸಿದೆ.

ಪಕ್ಷದ ರಾಜ್ಯ ಕಾರ್ಯಕಾರಿ ಸಮಿತಿ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಪಕ್ಷದ ಉಪಾಧ್ಯಕ್ಷ ದೇವಿ ಪ್ರಸಾದ್ ಮಿಶ್ರಾ ಅವರು ಈ ವಿಷಯ ತಿಳಿಸಿದರು.

‘ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಪಾಂಡಿಯನ್ ಸ್ಪಷ್ಟಪಡಿಸಿದ್ದಾರೆ. ಅವರು ಚುನಾವಣೆಯಲ್ಲಿ ಕಣಕ್ಕಿಳಿಯಲು ನಿರ್ಧರಿಸಿದರೂ ಯಾವುದೇ ಸಮಸ್ಯೆ ಇಲ್ಲ’ ಎಂದೂ ಹೇಳಿದರು.

ಪಾಂಡಿಯನ್ ಕಳೆದ ನ.27ರಂದು ಬಿಜೆಡಿ ಪಕ್ಷಕ್ಕೆ ಸೇರ್ಪಡೆಯಾದ ನಂತರ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ ಎಂಬ ವದಂತಿ ಹಬ್ಬಿತ್ತು.

ಕಾಂಗ್ರೆಸ್ ಸಂಸ್ಥಾಪನಾ ದಿನ: 28ಕ್ಕೆ ರ‍್ಯಾಲಿ

ನಾಗ್ಪುರ (ಪಿಟಿಐ): ಕಾಂಗ್ರೆಸ್ ಪಕ್ಷದ ಸಂಸ್ಥಾಪನಾ ದಿನದ ಅಂಗವಾಗಿ ಮಹಾರಾಷ್ಟ್ರದ ನಾಗ್ಪುರದಲ್ಲಿ ಡಿ.28ರಂದು ನಡೆಯಲಿರುವ ರ‍್ಯಾಲಿಯಲ್ಲಿ ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಹಾಲಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡಲಿದ್ದಾರೆ ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಶುಕ್ರವಾರ ತಿಳಿಸಿದರು.

ಈ ಸಂಬಂಧ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಹಿರಿಯ ನಾಯಕ ಮುಕುಲ್ ವಾಸ್ನಿಕ್ ಅವರ ಉಪಸ್ಥಿತಿಯಲ್ಲಿ ಹಿರಿಯ ನಾಯಕರ ಸಭೆ ನಡೆಯಿತು. ಸಭೆಯಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಘಟಕದ ಮುಖ್ಯಸ್ಥ ನಾನಾ ಪಟೋಲೆ, ಮಾಜಿ ಸಚಿವ ಬಾಳಾಸಾಹೇಬ್ ಥೋರಟ್, ಮಾಜಿ ಮುಖ್ಯಮಂತ್ರಿ ಅಶೋಕ್ ಚೌಹಾಣ್ ಮತ್ತಿತರರು ಭಾಗಿಯಾಗಿದ್ದರು.

ಬಿಇಎಲ್ ಜತೆ ರಕ್ಷಣಾ ಸಚಿವಾಲಯ ಒಪ್ಪಂದ

ನವದೆಹಲಿ(ಪಿಟಿಐ): ಭಾರತೀಯ ಸೇನೆಗೆ ಎಲೆಕ್ಟ್ರಾನಿಕ್ ಫ್ಯೂಸ್‌ಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿ ರಕ್ಷಣಾ ಸಚಿವಾಲಯವು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜೊತೆ ಒಪ್ಪಂದಕ್ಕೆ ಶುಕ್ರವಾರ ಸಹಿ ಹಾಕಿದೆ. ₹5,300 ಕೋಟಿ ವೆಚ್ಚದಲ್ಲಿ ಈ ಸಾಧನಗಳನ್ನು ಖರೀದಿ ಮಾಡಲಾಗುತ್ತದೆ. ಮದ್ದುಗುಂಡುಗಳ ಆಮದು ತಗ್ಗಿಸುವುದು ಹಾಗೂ ಸೇನೆಯಲ್ಲಿನ ಒಟ್ಟಾರೆ ಶಸ್ತ್ರಾಸ್ತ್ರಗಳ ದಾಸ್ತಾನು ಹೆಚ್ಚಿಸುವುದು ಈ ಖರೀದಿಯ ಉದ್ದೇಶ ಎಂದು ಸಚಿವಾಲಯ ತಿಳಿಸಿದೆ.

‘ಬಿಇಎಲ್‌ನ ಪುಣೆ ಘಟಕದಿಂದ ಎಲೆಕ್ಟ್ರಾನಿಕ್ ಫ್ಯೂಸ್‌ಗಳನ್ನು ಖರೀದಿಸಲಾಗುತ್ತದೆ. ಮುಂದಿನ 10 ವರ್ಷಗಳ ಅವಧಿಗೆ ಬಿಇಎಲ್ ಇವುಗಳನ್ನು ಪೂರೈಸಲಿದೆ. ಈ ಸಂಬಂಧ ಐತಿಹಾಸಿಕ ಒಪ್ಪಂದಕ್ಕೆ ಡಿ.15ರಂದು ಸಹಿ ಹಾಕಲಾಗಿದೆ’ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

‘ಬಿಇಎಲ್‌ನ ಪುಣೆ ಮತ್ತು ನಾಗ್ಪುರ ಘಟಕಗಳಲ್ಲಿ ಈ ಫ್ಯೂಸ್‌ಗಳನ್ನು ಉತ್ಪಾದಿಸಲಾಗುತ್ತದೆ. ಒಂದೂವರೆ ಲಕ್ಷ ಕೆಲಸದ ದಿನ ಉದ್ಯೋಗ ಸೃಷ್ಟಿಯಾಗಲಿದೆ’ ಎಂದು ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ನೀವು ಯಾವುದೇ ಕೆಲಸ ಮಾಡಿದರೂ ಎಷ್ಟು ಉತ್ತಮವಾಗಿ ಮಾಡಬೇಕೆಂದರೆ, ಇತರರು ಮತ್ತೆ ಮತ್ತೆ ಬಂದು ಅದನ್ನು ನೋಡಬೇಕು ಮತ್ತು ಇನ್ನಷ್ಟು ಜನರನ್ನು ಕರೆತಂದು ತೋರಿಸಬೇಕು.

–ವಾಲ್ಟ್ ಡಿಸ್ನಿ

ನೇಪಥ್ಯಕ್ಕೆ ಸರಿದ ಹಳೆಯ ನಾಯಕರು ಹೊಸ ಆಯ್ಕೆಯಲ್ಲಿ ದೂರಗಾಮಿ ಲೆಕ್ಕಾಚಾರ

ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನ ವಿಧಾನಸಭೆಗಳಲ್ಲಿ ಬಿಜೆಪಿ ಭರ್ಜರಿ ಜಯ ಸಾಧಿಸಿದ ನಂತರ, ಅಲ್ಲಿನ ಹೊಸ ಮುಖ್ಯಮಂತ್ರಿಗಳ ಆಯ್ಕೆಯಲ್ಲಿ ಎದ್ದು ಕಾಣುತ್ತಿರುವುದು ಪಕ್ಷದ ವರಿಷ್ಠರ ತೀರ್ಮಾನದ ಛಾಪು. ಅದರಲ್ಲೂ ಮುಖ್ಯವಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಧಿಕಾರದ ಹಾಗೂ ತಾತ್ವಿಕ ಪ್ರಭಾವ ಅಲ್ಲಿ ಕಾಣುತ್ತಿದೆ. ಈ ಮೂರೂ ರಾಜ್ಯಗಳಲ್ಲಿ ಜನಪ್ರಿಯತೆ ಪಡೆದಿದ್ದ ಹಾಗೂ ಪ್ರಬಲರಾಗಿದ್ದ ನಾಯಕರನ್ನು ಪಕ್ಕಕ್ಕೆ ಸರಿಸಲಾಗಿದೆ. ಪಕ್ಷವು ಹೊಸ ಮುಖಗಳನ್ನು ಆಯ್ಕೆ ಮಾಡಿ, ಸರ್ಕಾರವನ್ನು ಮುನ್ನಡೆಸುವ ಹೊಣೆಯನ್ನು ಅವರಿಗೆ ನೀಡಿದೆ. ಛತ್ತೀಸಗಢದ ಮೊದಲು ಮುಖ್ಯಮಂತ್ರಿಯಾಗಿ ಬುಡಕಟ್ಟು ಸಮುದಾಯದ ನಾಯಕ ವಿಷ್ಣುದೇವ್ ಸಾಯ್ ಅವರನ್ನು ಆಯ್ಕೆ ಮಾಡಲಾಯಿತು. ಇದಾದ ನಂತರದಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿಯಾಗಿ ಒಬಿಸಿ ಸಮುದಾಯದ ನಾಯಕ ಮೋಹನ್ ಯಾದವ್ ಅವರ ಹೆಸರನ್ನು ಹಾಗೂ ರಾಜಸ್ಥಾನ ಮುಖ್ಯಮಂತ್ರಿಯಾಗಿ, ಮೊದಲ ಬಾರಿಗೆ ಶಾಸಕ ಆಗಿರುವ ಭಜನ್ ಲಾಲ್ ಶರ್ಮಾ ಅವರ ಹೆಸರನ್ನು ಘೋಷಿಸಲಾಯಿತು. ಈ ಮೂರೂ ಹೆಸರುಗಳ ಘೋಷಣೆಯು ಅಚ್ಚರಿ ಮೂಡಿಸುವಂಥದ್ದೇ ಆದರೂ ಈ ಹೆಸರುಗಳನ್ನು ಅಂತಿಮಗೊಳಿಸುವಲ್ಲಿ ಪಕ್ಷವು ದೀರ್ಘಾವಧಿಯ ಆಲೋಚನೆಗಳನ್ನು ಹೊಂದಿದೆ ಎಂಬುದು ಸ್ಪಷ್ಟ.

ಮೂರು ರಾಜ್ಯಗಳಲ್ಲಿನ ಹೊಸ ಮುಖ್ಯಮಂತ್ರಿಗಳ ಆಯ್ಕೆಯಲ್ಲಿ ಎದ್ದು ಕಾಣುತ್ತಿರುವುದು, ಬಿಜೆಪಿ ವರಿಷ್ಠರ ತೀರ್ಮಾನದ ಛಾಪು

ವಿಷ್ಣುದೇವ್ ಅವರಿಗೆ ಸಚಿವ ಆಗಿ ಕೆಲಸ ಮಾಡಿದ ಹಾಗೂ ಸಂಘಟನೆಯಲ್ಲಿ ತೊಡಗಿಸಿಕೊಂಡ ಅನುಭವ ಇದೆ. ಅವರನ್ನು ಆಯ್ಕೆ ಮಾಡಿರುವುದು ಪಕ್ಷವು ಬುಡಕಟ್ಟು ಸಮುದಾಯಗಳಿಗೆ ನೀಡುವ ಆದ್ಯತೆಯ ಸೂಚಕ ಎಂದು ಹೇಳಲಾಗುತ್ತಿದೆ. ಬುಡಕಟ್ಟು ಸಮುದಾಯವು ಛತ್ತೀಸಗಢದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 30ರಷ್ಟು ಪಾಲು ಹೊಂದಿದೆ. ಅಷ್ಟೇ ಅಲ್ಲ, ರಾಷ್ಟ್ರಮಟ್ಟದಲ್ಲಿ ಇವರ ಪಾಲು ಒಟ್ಟು ಜನಸಂಖ್ಯೆಯಲ್ಲಿ ಶೇ 9ರಷ್ಟು. ಬುಡಕಟ್ಟು ಸಮುದಾಯಕ್ಕೆ ಸೇರಿರುವ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿಯನ್ನಾಗಿ ಆಯ್ಕೆ ಮಾಡಲಾಯಿತು. ಅದರ ಮುಂದುವರಿದ ಹಂತವಾಗಿ ವಿಷ್ಣುದೇವ್ ಅವರ ಆಯ್ಕೆ ಎನ್ನಲಾಗುತ್ತಿದೆ ಕೂಡ. ಮಧ್ಯಪ್ರದೇಶದ ಮೋಹನ್ ಯಾದವ್ ಅವರು ಪ್ರಬಲ ಒಬಿಸಿ (ಇತರ ಹಿಂದುಳಿದ ಸಮುದಾಯ) ವರ್ಗಕ್ಕೆ ಸೇರಿದವರು. ಅವರ ಆಯ್ಕೆಯು ಉತ್ತರಪ್ರದೇಶ ಹಾಗೂ ಬಿಹಾರದಲ್ಲಿ ಕೂಡ ಪಕ್ಷದ ಪರವಾಗಿ ಪರಿಣಾಮ ಬೀರಬಹುದು ಎಂಬ ನಿರೀಕ್ಷೆ ಇದೆ. ಯಾದವ್ ಅವರ ಸಂಪುಟದಲ್ಲಿ ಇಬ್ಬರು ಉಪಮುಖ್ಯಮಂತ್ರಿಗಳು (ರಾಜೇಂದ್ರ ಶುಕ್ಲಾ ಮತ್ತು ಜಗದೀಶ್ ದೇವ್ಡಾ) ಇದ್ದಾರೆ. ಶುಕ್ಲಾ ಅವರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು, ದೇವ್ಡಾ ಅವರು ಪರಿಶಿಷ್ಟ ಜಾತಿಗೆ ಸೇರಿದವರು. ಇದು ಮಧ್ಯಪ್ರದೇಶದ ಸಚಿವ ಸಂಪುಟದಲ್ಲಿ ಜಾತಿಗಳ ಪ್ರಾತಿನಿಧ್ಯದ ವಿಚಾರದಲ್ಲಿ ಸಮತೋಲನವನ್ನು ತರುವ ಯತ್ನ ಕೂಡ ಹೌದು. ರಾಜಸ್ಥಾನದಲ್ಲಿ ಮುಂದುವರಿದ ಜಾತಿಗಳು ರಾಜಕೀಯವಾಗಿ ಪ್ರಾಮುಖ್ಯ ಪಡೆದಿವೆ. ಅಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಭಜನ್ ಲಾಲ್ ಶರ್ಮಾ ಅವರನ್ನು ಮುಖ್ಯಮಂತ್ರಿಯನ್ನಾಗಿ, ರಜಪೂತ ಸಮುದಾಯದ ದಿಯಾ ಕುಮಾರಿ ಮತ್ತು ದಲಿತ ಸಮುದಾಯಕ್ಕೆ ಸೇರಿದ ಪ್ರೇಮಚಂದ್ ಬೈರ್ವಾ ಅವರನ್ನು ಉಪಮುಖ್ಯಮಂತ್ರಿಗಳನ್ನಾಗಿ ನೇಮಕ ಮಾಡಲಾಗಿದೆ. ಜಾತಿ ಪ್ರಾತಿನಿಧ್ಯ ಮಾತ್ರವೇ ಅಲ್ಲದೆ ಪ್ರಾದೇಶಿಕ ಪ್ರಾತಿನಿಧ್ಯ ಕೂಡ ಇಲ್ಲಿ ಕೆಲಸ ಮಾಡಿದೆ.

ಹೊಸ ಮುಖ್ಯಮಂತ್ರಿಗಳ ಆಯ್ಕೆಯು ಪಕ್ಷದ ಪಾಲಿಗೆ ತಲೆಮಾರಿನ ಬದಲಾವಣೆಯನ್ನು ಹೇಳುತ್ತಿದೆ. ವಾಜಪೇಯಿ–ಅಡ್ವಾಣಿ ಯುಗದ ನಾಯಕರಾದ ರಮಣ್ ಸಿಂಗ್, ಶಿವರಾಜ್ ಸಿಂಗ್ ಚೌಹಾಣ್, ವಸುಂಧರಾ ರಾಜೇ ಅವರು ಹೊಸಬರಿಗೆ ದಾರಿ ಬಿಟ್ಟುಕೊಡಬೇಕಾಗಿದೆ. ಇದು ಚುನಾವಣಾ ಪ್ರಚಾರದ ಸಂದರ್ಭದಲ್ಲಿಯೂ ಕಂಡುಬಂದಿತ್ತು. ಈ ನಾಯಕರನ್ನು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಗಳು ಎಂದು ಘೋಷಿಸಿರಲಿಲ್ಲ. ಹೊಸ ಮುಖ್ಯಮಂತ್ರಿಗಳು ಪಕ್ಷದ ಸಿದ್ಧಾಂತದ ಜೊತೆ ಗಾಢವಾದ ನಂಟು ಹೊಂದಿರುವವರೂ ಹೌದು. ಇವರು ಎಬಿವಿಪಿ ಹಾಗೂ ಆರ್‌ಎಸ್‌ಎಸ್ ಜೊತೆ ನಿಕಟ ನಂಟು ಹೊಂದಿದ್ದಾರೆ. ಈ ಆಯ್ಕೆಗಳು 2024ರ ಲೋಕಸಭಾ ಚುನಾವಣೆಯ ದೃಷ್ಟಿಯಿಂದ ನಿರ್ದಿಷ್ಟ ಮಹತ್ವವನ್ನೇನೂ ಹೊಂದಿಲ್ಲ. ಪಕ್ಷವು ನೆಚ್ಚಿಕೊಳ್ಳುವುದು ಪ್ರಧಾನಿ ಮೋದಿ ಅವರ ಚರಿಷ್ಮಾ, ಅಯೋಧ್ಯೆಯಲ್ಲಿ ಮುಂದಿನ ತಿಂಗಳು ಉದ್ಘಾಟನೆ ಕಾಣಲಿರುವ ಶ್ರೀರಾಮ ಮಂದಿರ, ಸಂವಿಧಾನದ 370ನೇ ವಿಧಿ, ಜಾತಿ ಸಮೀಕರಣ ಹಾಗೂ ಸಾಮಾಜಿಕ ಸಮೀಕರಣವನ್ನು. ಇಲ್ಲಿರುವ ಇನ್ನೊಂದು ಸಂಗತಿಯೆಂದರೆ, ಬಿಜೆಪಿ ಕೂಡ ಸಂಪೂರ್ಣವಾಗಿ ವರಿಷ್ಠರ ತೀರ್ಮಾನವನ್ನು ನೆಚ್ಚಿಕೊಂಡಿರುವ ಪಕ್ಷ. ಅಲ್ಲಿ ಎಲ್ಲ ಪ್ರಮುಖ ನಿರ್ಣಯಗಳು ಆಗುವುದು ಮೇಲಿನ ಹಂತದಲ್ಲಿ ಮಾತ್ರ.

ದಿನದ ಟ್ವೀಟ್

ಪೂರ್ವಗ್ರಹ ಸಲ್ಲದು

ದುಷ್ಕರ್ಮಿಗಳ ದುಷ್ಕೃತ್ಯದ ಬಗ್ಗೆ ಸಣ್ಣ ಸುಳಿವು ಇದ್ದಿದ್ದರೂ ಅವರಿಗೆ ಪಾಸ್‌ಗಳನ್ನು ಕೊಡುತ್ತಿರಲಿಲ್ಲ ಎಂಬ 'ಸಂದೇಹದ ಲಾಭ'ವನ್ನು ಪ್ರತಾಪ್ ಸಿಂಹ ಅವರಿಗೆ ಕೊಡಬಹುದು. ಆದರೆ, ಅದೇ ಅವರೇನಾದರೂ ಕಾಂಗ್ರೆಸ್ ಸಂಸದರಾಗಿದ್ದರೆ ಅಥವಾ ಆರೋಪಿಗಳು ನಿರ್ದಿಷ್ಟ ಸಮುದಾಯಕ್ಕೆ ಸೇರಿದವರಾಗಿದ್ದರೆ ಎಷ್ಟರಮಟ್ಟಿಗೆ ಹುಯಿಲೆಬ್ಬಿಸಲಾಗುತ್ತಿತ್ತು ಎಂಬುದನ್ನು ಊಹಿಸಿ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ಮಹಿಳೆಯರು ಭಾರತದಲ್ಲಿ ಎಚ್ಚರದಿಂದ ಇರಬೇಕು ಮತ್ತು ಎಂದಿಗೂ ಏಕಾಂಗಿಯಾಗಿ ಸಂಚರಿಸಬಾರದು ಎಂದು ಪ್ರತಿಯೊಂದು ವಿದೇಶಿ ಪ್ರವಾಸ ಸಲಹಾ ಪುಸ್ತಕವೂ ಸಲಹೆ ನೀಡುವುದರಲ್ಲಿ ಅಚ್ಚರಿಯೇನೂ ಇಲ್ಲ. ಅಷ್ಟರಮಟ್ಟಿಗಿನ ಸುರಕ್ಷತೆ. ವ್ಹಾವ್.

(ಕೊರಿಯಾದ ವ್ಲಾಗರ್ ಕೆಲ್ಲಿ ಅವರು ಭಾರತ ದಲ್ಲಿ ಕಿರುಕುಳಕ್ಕೆ ಒಳಗಾದರು ಎಂಬ ಆರೋಪಕ್ಕೆ ಪ್ರತಿಕ್ರಿಯೆ)

ಚಿನ್ಮಯಿ ಶ್ರೀಪಾದ, ಗಾಯಕಿ

25 ವರ್ಷಗಳ ಹಿಂದೆ

ಬುಧವಾರ, 16-12-1998

• **ಧರ್ಮಸಿಂಗ್ ಬದಲಿಸಲು ಹೆಚ್ಚಿದ ಒತ್ತಡ**

ನವದೆಹಲಿ, ಡಿ. 15– ಈ ತಿಂಗಳ 18 ರಂದು ಒಂದು ದಿನದ ಎಐಸಿಸಿ ಅಧಿವೇಶನ ನಡೆಯುವುದು ಹತ್ತಿರವಾಗುತ್ತಿದ್ದಂತೆ, ದೆಹಲಿಗೆ ಕರ್ನಾಟಕದ ಕೆಲವು ಕಾಂಗ್ರೆಸ್ ನಾಯಕರ ಆಗಮನವು ದಿನೇ ದಿನೇ ಹೆಚ್ಚುತ್ತಿದೆ.

ಇದೇ ಸಂದರ್ಭ ಬಳಸಿಕೊಂಡು ಅನೇಕರು ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್ ಅವರ ಬದಲಾವಣೆಗೆ ಒತ್ತಡ ತರಲು ಆರಂಭಿಸಿದ್ದಾರೆ. ಇದರ ಜತೆಗೆ ಕಳೆದ ವಾರ ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಹುಟ್ಟುಹಬ್ಬಕ್ಕೆ ಶುಭಾಶಯ ಹೇಳುವ ನೆಪದಲ್ಲಿ ಬಂದ ಕೆಲವು ಮಹಿಳಾ ಕಾಂಗ್ರೆಸ್ ಕಾರ್ಯಕರ್ತೆಯರು ಎಐಸಿಸಿ ಅಧಿವೇಶನದವರೆಗೂ ಇಲ್ಲಿಯೇ ಉಳಿದುಕೊಂಡಿದ್ದಾರೆ. ಅವರು ರಾಜ್ಯದ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಾಣಿ ಸತೀಶ್ ಅವರ ಬದಲಾವಣೆಗೆ ಒತ್ತಡ ತರುವ ಚಟುವಟಿಕೆಯಲ್ಲಿ ತೊಡಗಿದ್ದಾರೆ.

• **ಇಂದಿನಿಂದ ಆಲಮಟ್ಟಿ ಕಾಮಗಾರಿ**

ಮಂಡ್ಯ, ಡಿ. 15– ಸುಪ್ರೀಂ ಕೋರ್ಟ್‌ನ ನಿರ್ದೇಶನದನ್ವಯ ನಾಳೆಯಿಂದಲೇ ಆಲಮಟ್ಟಿ ಕ್ರೆಸ್ಟ್ ಗೇಟ್ ಅಳವಡಿಕೆ ಕಾಮಗಾರಿಯನ್ನು ಆರಂಭಿಸುವುದಾಗಿ ರಾಜ್ಯದ ಭಾರಿ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಇಂದು ಇಲ್ಲಿ ತಿಳಿಸಿದರು.

ಅವರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಪತ್ರಕರ್ತರೊಡನೆ ಮಾತನಾಡಿ, ಆಂಧ್ರಕ್ಕೆ ಯಾವುದೇ ತೊಂದರೆಯಿಲ್ಲದಂತೆ ಕಾಮಗಾರಿ ಕೈಗೊಳ್ಳುವುದನ್ನು ಸ್ಪಷ್ಟಪಡಿಸಿ, ಇನ್ನೊಂದು ವಾರದಲ್ಲಿ ಕೋರ್ಟ್‌ಗೆ 'ಅಫಿಡವಿಟ್' ಸಲ್ಲಿಸಲಾಗುವುದು ಎಂದರು.

50 ವರ್ಷಗಳ ಹಿಂದೆ

ಭಾನುವಾರ, 16-12-1973

• **ಹುಬ್ಬಳ್ಳಿಯಲ್ಲಿ ಮತ್ತೆ ಗಲಭೆ, ಲೂಟಿ: ಲಾಠಿ-ಅಶ್ರುವಾಯು**

ಹುಬ್ಬಳ್ಳಿ, ಡಿ. 15– ನಗರದಲ್ಲಿ ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಮತ್ತು ಪೊಲೀಸರ ಮೇಲೆ ದಾಳಿ ನಡೆಸಿದ ಉದ್ರಿಕ್ತ ಮಹಾರಾಷ್ಟ್ರ ವಿರೋಧಿ ವಿದ್ಯಾರ್ಥಿ ಚಳವಳಿಗಾರರನ್ನು ಚದುರಿಸಲು ವಿದ್ಯಾನಗರ ಮತ್ತು ಹೊಸೂರು ಪ್ರದೇಶಗಳಲ್ಲಿ ಇಂದು ಪೊಲೀಸರು ಐದು ಅಶ್ರುವಾಯು ಷೆಲ್‌ಗಳನ್ನು ಸ್ಫೋಟಿಸಿದರು.

ನಿಷೇಧಾಜ್ಞೆ ಉಲ್ಲಂಘನೆ, ಗಲಭೆ ಮತ್ತು ಕಲ್ಲೆಸೆತದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 110 ಜನರನ್ನು ಬಂಧಿಸಲಾಯಿತು.

• **ಚಿನ್ನ ನಿಯಂತ್ರಣ ಆಜ್ಞೆ ಪುನರ್‌ಪರಿಶೀಲನೆ ಅಗತ್ಯ– ಅರಸು**

ಬೆಂಗಳೂರು, ಡಿ. 15– ಚಿನ್ನ ನಿಯಂತ್ರಣ ಆಜ್ಞೆಯ ಬಗ್ಗೆ ಪುನರ್‌ಪರಿಶೀಲನೆಯ ಅಗತ್ಯವನ್ನು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಇಲ್ಲಿ ಪ್ರತಿಪಾದಿಸಿದರು.

ಅನುಷ್ಠಾನಕ್ಕೆ ಬರದೆ ಕಾಗದ ರೂಪದಲ್ಲಿರುವ ಈ ಆಜ್ಞೆ ರದ್ದುಗೊಳಿಸುವುದೇ ಮೇಲು ಎಂದು ಅಭಿಪ್ರಾಯಪಟ್ಟರು.

ಪ್ರಥಮ ರಾಷ್ಟ್ರೀಯ ವಿಶ್ವಕರ್ಮ ಅಧಿವೇಶನದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಶ್ರೀ ಅರಸು ಅವರು, 'ನಮ್ಮ ದೇಶದಲ್ಲಿ ಆಭರಣಗಳ ತಯಾರಿಯನ್ನು ನಿಯಂತ್ರಿಸಿ ಹೊರಡಿಸುವ ಆಜ್ಞೆಯನ್ನು ಕಡ್ಡಾಯವಾಗಿ ಜಾರಿಗೆ ತರುವುದು ಸಾಧ್ಯವಿಲ್ಲ. ಚಿನ್ನ ನಿಯಂತ್ರಣ ಆಜ್ಞೆ ಜಾರಿಗೆ ಬಂದ ಮೇಲೆಯೂ 14 ಕ್ಯಾರೆಟ್ ಬದಲು 22 ಕ್ಯಾರೆಟ್ ಚಿನ್ನದಿಂದಲೇ ಒಡವೆಗಳನ್ನು ಮಾಡಿಸುವುದು ಮುಂದುವರಿದಿದೆ' ಎಂದರು.

ಶೈಕ್ಷಣಿಕ ಸಮಾನತೆಯ ಅನುಷ್ಠಾನ ಸರ್ಕಾರದ ಆದ್ಯತೆಯಾಗಬೇಕಿದೆ

ಗ್ಯಾರಂಟಿ ಪಟ್ಟಿಗೆ ಸೇರಲಿ ಶಿಕ್ಷಣ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಕರ್ನಾಟಕ ಸರ್ಕಾರವು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬದಲು ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಸಮಿತಿಯೊಂದನ್ನು ರಚಿಸಿದೆ. ರಾಜ್ಯ ಶಿಕ್ಷಣ ನೀತಿಯ ನಿರೂಪಣೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಆಳವಾದ ಅಧ್ಯಯನದ ಜೊತೆಗೆ, ಸಾಮಾಜಿಕ, ಪ್ರಾದೇಶಿಕ ಮತ್ತು ಆರ್ಥಿಕ ವೈವಿಧ್ಯಗಳ ವಾಸ್ತವಿಕತೆಯ ಅರಿವು ಅಗತ್ಯ. ಏಕರೂಪಿಯಲ್ಲದ ಭಾರತೀಯ ಸಮಾಜದಲ್ಲಿ ಬಹುತ್ವದ ಬುನಾದಿಯನ್ನು ಅರ್ಥಮಾಡಿಕೊಂಡು ಯಾವುದೇ ನೀತಿ ನಿರೂಪಣೆಯನ್ನು ಮಾಡಬೇಕಾಗುತ್ತದೆ.

ರಾಜ್ಯ ಸರ್ಕಾರವು ರಚಿಸಿರುವ ಸದರಿ ಸಮಿತಿಯಲ್ಲಿ ವಿಷಯತಜ್ಞರ ಒಂದು ಪಟ್ಟಿಯನ್ನು ಕೊಡಲಾಗಿದೆ. ನನ್ನ ವಿನಮ್ರ ತಿಳಿವಳಿಕೆಯೆಂದರೆ- ಪಠ್ಯಕ್ರಮ ಚೌಕಟ್ಟನ್ನು ರೂಪಿಸಲು ವಿವಿಧ ವಿಷಯತಜ್ಞರ ಅಗತ್ಯವಿರುತ್ತದೆ. ಶಿಕ್ಷಣ ನೀತಿಯನ್ನು ರೂಪಿಸಲು ಈ ಮೊದಲು ನಾನು ಹೇಳಿದ ಅಂಶಗಳನ್ನು ಆಧರಿಸಿದ ನೆಲೆ- ನಿಲುವುಗಳ ಅಗತ್ಯ ಇರುತ್ತದೆ. ಶಿಕ್ಷಣ ನೀತಿಯ ಆದ್ಯತೆಗಳೇನು ಎಂಬುದು ತುಂಬಾ ಮುಖ್ಯವಾಗುತ್ತದೆ.

ನನ್ನ ಅಭಿಪ್ರಾಯದಲ್ಲಿ, ಶೈಕ್ಷಣಿಕ ಸಮಾನತೆಯೇ ಶಿಕ್ಷಣ ನೀತಿಯ ಆದ್ಯತೆಯಾಗಬೇಕು. ಆದರೆ ಸಮಾನತೆಯ ತಾತ್ವಿಕತೆಯನ್ನು ಬಿಟ್ಟು ತಾಂತ್ರಿಕ ಅಂಶಗಳೇ ಮೇಲುಗೈ ಪಡೆದಿರುವುದು ನಮ್ಮ ಕಣ್ಣೆದುರಿನ ಸಮಕಾಲೀನ ಸತ್ಯ. ಈಗ ಪ್ರಾಥಮಿಕ ಶಾಲಾ ಶಿಕ್ಷಣವನ್ನು ಗಮನಿಸೋಣ. ಮೊದಲು ನಾಲ್ಕು ವರ್ಷ ಪ್ರಾಥಮಿಕ, ನಾಲ್ಕು ವರ್ಷ ಮಾಧ್ಯಮಿಕ, ಮೂರು ವರ್ಷ ಪ್ರೌಢಶಾಲೆ ಎಂದು ತರಗತಿಗಳ ತಾಂತ್ರಿಕ ವಿಂಗಡಣೆ ಮಾಡಲಾಗಿತ್ತು. ಆನಂತರ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಯನ್ನು ಏಳು ತರಗತಿಗಳಿಗೆ ಮಿತಿಗೊಳಿಸಲಾಯಿತು. ಎಂಟರಿಂದ ಹತ್ತನೇ ತರಗತಿಯವರೆಗೆ ಪ್ರೌಢಶಾಲೆ ಎನ್ನಲಾಯಿತು. ಆಮೇಲೆ ಕಿರಿಯ ಪ್ರಾಥಮಿಕವನ್ನು ಐದನೇ ತರಗತಿಯವರೆಗೆ ವಿಸ್ತರಿಸಲಾಯಿತು. ಹೀಗೆ ತರಗತಿಯ ವರ್ಷಾವಧಿಗಳನ್ನು ತಾಂತ್ರಿಕವಾಗಿ ವಿಂಗಡಿಸಲು ಇದ್ದ ತಾತ್ವಿಕ ಕಾರಣಗಳು ಸ್ಪಷ್ಟವಿಲ್ಲ. ಅದಕ್ಕಿಂತ ಮುಖ್ಯವಾಗಿ, ಹಿಂದೆ ಇದ್ದ ವಿಂಗಡಣೆಯಲ್ಲಿದ್ದ ಕೊರತೆಗಳೇನು, ತೊಂದರೆಗಳೇನು ಎಂಬುದಕ್ಕೆ ದೃಢವಾದ ಕಾರಣಗಳಿಲ್ಲ.

ಒಂದು ವರ್ಷದ ಪಿಯುಸಿಯನ್ನು ಎರಡು ವರ್ಷಗಳ ಪ್ರತ್ಯೇಕ ಘಟಕ ಮಾಡಿದ್ದಕ್ಕೆ ಸಮರ್ಥನೀಯ ಕಾರಣವಿತ್ತು. ಈ ಪದವಿಪೂರ್ವ ಘಟಕವು ಪ್ರೌಢಶಾಲೆ ಮತ್ತು ಸಾಮಾನ್ಯ ಪದವಿ ಹಾಗೂ ವೃತ್ತಿಪರ ಶಿಕ್ಷಣದ ನಡುವಿನ ಸ್ಥಿತ್ಯಂತರದ ಹಂತವಾಗಿ ತನ್ನದೇ ಮಹತ್ವ ಪಡೆದಿದೆ. ಬಾಲ್ಯವನ್ನು ಮೀರಿದ, ಯೌವನಕ್ಕೆ ಸಮೀಪಿಸಿದ ವಯೋಮಾನದ ನಡುವೆ ನಿಂತ ವಿದ್ಯಾರ್ಥಿ ಮನಸ್ಸುಗಳನ್ನು ಭವಿಷ್ಯದ ಶೈಕ್ಷಣಿಕ ಹಂತಕ್ಕೆ ಸಿದ್ಧಗೊಳಿಸುವ ಹಂತವಾಗಿ ಪದವಿಪೂರ್ವ ಘಟಕ ಮುಖ್ಯವಾದುದು. ಮುಂದೆ ಸಾಮಾನ್ಯ ಪದವಿಯ ಮೂರು ವರ್ಷ, ಸ್ನಾತಕೋತ್ತರ ಪದವಿಯ ಎರಡು ವರ್ಷ ಪ್ರಾಯೋಗಿಕವಾಗಿ ಸರಿಯಾಗಿತ್ತು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಪದವಿ ಪೂರ್ವದವರೆಗಿನ ಶಿಕ್ಷಣವನ್ನು ನಾಲ್ಕು ಹಂತವಾಗಿ ವಿಂಗಡಿಸಲಾಗಿದೆ. ಅಂಗನವಾಡಿಯಿಂದ ಎರಡನೇ ತರಗತಿಯವರೆಗೆ ತಳಹದಿಯ ಹಂತ, 3ರಿಂದ 5ನೇ ತರಗತಿಯವರೆಗೆ ಸಿದ್ಧತಾ ಹಂತ, 6ರಿಂದ 8 ಮಾಧ್ಯಮಿಕ ಹಂತ, 9ರಿಂದ 12ರವರೆಗೆ ಸೆಕೆಂಡರಿ ಹಂತ. ಕೊನೆಯ ಈ ಹಂತದ ಪ್ರಕಾರ, ಪದವಿ ಪೂರ್ವ ಶೈಕ್ಷಣಿಕ ಘಟಕವು ಶಾಲಾ ಶಿಕ್ಷಣದ ಭಾಗವಾಗಿ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ವಿಪರ್ಯಾಸದ ಸಂಗತಿಯೆಂದರೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು 'ರದ್ದು ಮಾಡಲು ಬದ್ಧವಾಗಿರುವುದಾಗಿ ಹೇಳುವ' ಕಾಂಗ್ರೆಸ್ ನೇತೃತ್ವದ ಸರ್ಕಾರವೂ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳಲ್ಲಿ ಇದೇ ಮಾದರಿಯನ್ನು ಅನುಸರಿಸುತ್ತಿದೆ!

ಇನ್ನು ಪದವಿ ಶಿಕ್ಷಣಕ್ಕೆ ಬಂದರೆ, ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ, ಏಕಕಾಲಕ್ಕೆ ಮೂರು ಮತ್ತು ನಾಲ್ಕು ವರ್ಷಗಳ ಪದವಿ ಹಂತ, ಒಂದು ಮತ್ತು ಎರಡು ವರ್ಷಗಳ ಸ್ನಾತಕೋತ್ತರ ಹಂತವೆಂದು ವಿಂಗಡಿಸಲಾಗಿದೆ. ಮೂರು ವರ್ಷದ ಪದವಿ ಪೂರೈಸಿದವರು ಎರಡು ವರ್ಷ ಮತ್ತು ನಾಲ್ಕು ವರ್ಷದ ಪದವಿ ಓದಿದವರು ಒಂದು ವರ್ಷದ ಸ್ನಾತಕೋತ್ತರ ಶಿಕ್ಷಣ ಪಡೆಯಬಹುದು. ನಾನಿಲ್ಲಿ ಪಠ್ಯಕ್ರಮದ ವಿಷಯಕ್ಕೆ ಹೋಗುವುದಿಲ್ಲ. ಅದು ಪ್ರತ್ಯೇಕವಾದ ಚಿಂತನೆಯ ವಿಷಯ. ನನ್ನ ಮುಖ್ಯ ಪ್ರಶ್ನೆಯೆಂದರೆ- ಹಿಂದಿನಿಂದ ಇಂದಿನವರೆಗಿನ ಸರ್ಕಾರಗಳು ಹೀಗೆ ತರಗತಿಗಳ ತಾಂತ್ರಿಕ ವಿಂಗಡಣೆ ಮಾಡಿ ಸಾಧಿಸಿದ್ದು ಏನು? ಶೈಕ್ಷಣಿಕ ಸಮಾನತೆಯ ತಾತ್ವಿಕತೆಗಿಂತ ಈ ತಾಂತ್ರಿಕತೆಯೇ 'ಆದ್ಯತೆ'ಯಾದದ್ದು ತಪ್ಪಲ್ಲವೆ?

ತರಗತಿಗಳ ತಾಂತ್ರಿಕ ವಿಂಗಡಣೆಯ ಜೊತೆಗೆ 'ತಂತ್ರಜ್ಞಾನ'ಕ್ಕೆ ಆದ್ಯತೆ ಕೊಡಲಾಗುತ್ತಿದೆ. ತಂತ್ರಜ್ಞಾನವನ್ನು ಎಲ್ಲಿ, ಹೇಗೆ ಮತ್ತು ಎಷ್ಟು ಬಳಸಬೇಕು ಎಂಬ ವಿವೇಕ ಮುಖ್ಯವಾಗಬೇಕಾಗಿದೆ. ತರಗತಿಗಳಲ್ಲಿ ತಂತ್ರಜ್ಞಾನವನ್ನು ಹಿತಮಿತವಾಗಿ ಬಳಸಬೇಕೇ ಹೊರತು ಒಂದು ಆದ್ಯತೆಯಾಗಬಾರದು. ತರಗತಿಯೆನ್ನುವುದು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಜ್ಞಾನ ಸಂವಾದದ ಸೇತುಬಂಧ. ಆದರೆ ಈಗ ತಂತ್ರಜ್ಞಾನವು 'ಜ್ಞಾನ'ಕ್ಕಿಂತ ಹೆಚ್ಚಾಗಿ ಉದ್ಯಮದ 'ತಂತ್ರ'ವಾಗಿಬಿಟ್ಟಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ಶೇ 40ರಷ್ಟು ಆನ್‌ಲೈನ್ ಶಿಕ್ಷಣಕ್ಕೆ ಅವಕಾಶ ಕಲ್ಪಿಸಿ, ತಂತ್ರಜ್ಞಾನೋದ್ಯಮಕ್ಕೆ ಒತ್ತು ಕೊಟ್ಟಿದೆ. ಅಷ್ಟೇಕೆ, ರಾಜ್ಯ ಸರ್ಕಾರದ ಕೆಲ ಸಚಿವರ ಹೇಳಿಕೆಗಳನ್ನು ಗಮನಿಸಿದರೆ, ಶಿಕ್ಷಣವು ಉದ್ಯಮಕ್ಕೆ ಅನುಗುಣವಾಗಿ ಇರಬೇಕೆಂಬುದು 'ನೀತಿ'ಯಾಗಿಬಿಟ್ಟಿದೆ. ಶಿಕ್ಷಣವು 'ಸೇವಾಕ್ಷೇತ್ರ' ಎಂಬ ಪರಿಕಲ್ಪನೆಯನ್ನು ಪಲ್ಲಟಗೊಳಿಸಲಾಗಿದೆ.

ಹೀಗೆ ಆದ್ಯತೆಗಳನ್ನು ಪಲ್ಲಟಗೊಳಿಸುವ 'ಜ್ಞಾನೋದ್ಯಮ' ಪರಿಕಲ್ಪನೆಯು ಉದ್ಯಮಿಗಳಂತೆಯೇ ಸರ್ಕಾರಗಳಿಗೂ ಪ್ರಿಯವಾಗಿದ್ದು, ಶೈಕ್ಷಣಿಕ ಸಮಾನತೆಯ ಧ್ಯೇಯ ಹಿಂದಿನ ಸಾಲಲ್ಲಿ ಸುಮ್ಮನೆ ಕೂತುಬಿಟ್ಟಿದೆ! ಈಗ ಶಾಲಾ ಶಿಕ್ಷಣವನ್ನೇ ನೋಡಿ. ಒಂದೇ ವಯಸ್ಸಿನ ಮಕ್ಕಳಲ್ಲಿ ಬಡವರ ಮತ್ತು ತಳಸಮುದಾಯದ ಮಕ್ಕಳಿಗೆ ಅಂಗನವಾಡಿಗಳು ಮತ್ತು ಉಳ್ಳವರಿಗೆ ಎಲ್‌ಕೆಜಿ, ಯುಕೆಜಿ ಎಂಬಂತಾಗಿದೆ. ಬಡವರ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಮಾತೃಭಾಷಾ ಮಾಧ್ಯಮ, ಸ್ಥಿತಿವಂತರ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ. ರಾಜ್ಯ ಪಠ್ಯಕ್ರಮ ಶಾಲೆಗಳು ಮತ್ತು ಕೇಂದ್ರೀಯ ಪಠ್ಯಕ್ರಮದ ಶಾಲೆಗಳ ನಡುವೆ ಅಗಾಧ ಅಂತರ. ಸರ್ಕಾರವೇ ತನ್ನ ಶಾಲೆಗಳಲ್ಲಿ ತಾರತಮ್ಯ ಮಾಡುವ ನೀತಿಯನ್ನು ಅನುಸರಿಸುತ್ತ ಕೆಲವರಿಗೆ ಮೊರಾರ್ಜಿ, ಡಾ. ಅಂಬೇಡ್ಕರ್, ರಾಣಿ ಚೆನ್ನಮ್ಮ, ನವೋದಯದಂತಹ ಸುಸಜ್ಜಿತ ವಸತಿ ಶಾಲೆಗಳ ಜೊತೆಗೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಆರಂಭಿಸಿ ಪೂರ್ಣ ಇಂಗ್ಲಿಷ್ ಮಾಧ್ಯಮ ಬೋಧನೆಗೆ ಅವಕಾಶ ಕಲ್ಪಿಸಿದೆ. ಈ ಮೂಲಕ ತಾನೇ ಒಪ್ಪಿಕೊಂಡಿರುವ 'ಕಿರಿಯ ಪ್ರಾಥಮಿಕ ಹಂತದಲ್ಲಿ ಕನ್ನಡ ಅಥವಾ ಮಾತೃಭಾಷಾ ಮಾಧ್ಯಮವೆಂಬ ನೀತಿ'ಯನ್ನು ಸ್ವಯಂ ಉಲ್ಲಂಘಿಸಿದೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ 4.11ನೇ ವಿಧಿಯಲ್ಲಿ ಮಾತೃಭಾಷೆ ಮಾಧ್ಯಮವನ್ನು 'ಸಾಧ್ಯವಾದ ಕಡೆ' ಅನುಷ್ಠಾನ ಮಾಡಬೇಕೆಂದು ಮಾತ್ರ ಹೇಳಲಾಗಿದೆ. ಶಿಕ್ಷಣ ಮಾಧ್ಯಮದ ವಿಷಯವನ್ನು ಹೊರತುಪಡಿಸಿಯೂ ಶಾಲಾ ಶಿಕ್ಷಣದಲ್ಲಿ ವಿವಿಧ ಮಾದರಿಯ ಶಾಲೆಗಳಿದ್ದು ಬಹುಸಂಖ್ಯಾತ ವಿದ್ಯಾರ್ಥಿಗಳಿಗೆ ಮೂಲಸೌಕರ್ಯ-ರಹಿತ ಸಾಮಾನ್ಯ ಶಾಲೆಗಳು, ಕೆಲವರಿಗೆ ಸುಸಜ್ಜಿತ ಶಾಲೆಗಳು ಎಂಬಂತಾಗಿವೆ. ಸಮಾನ ಶಾಲಾ ಶಿಕ್ಷಣಕ್ಕೆ ತಿಲಾಂಜಲಿ ನೀಡಿ ಒಂದೇ ವಯಸ್ಸಿನ ಮಕ್ಕಳ ನಡುವೆ ತಾರತಮ್ಯ ಮಾಡಲಾಗಿದೆ. ಸರ್ಕಾರಿ ಶಾಲಾ-ಕಾಲೇಜುಗಳಲ್ಲಿ ದುಡಿಯುವ ಅತಿಥಿ ಅಧ್ಯಾಪಕರ ಸಮಸ್ಯೆಗೂ ಪರಿಹಾರ ಹುಡುಕದೆ, ಅಗತ್ಯ ಪ್ರಮಾಣದ ಕಾಯಂ ಅಧ್ಯಾಪಕರನ್ನೂ ನೇಮಿಸದೆ ಎಲ್ಲ ಸರ್ಕಾರಗಳೂ ಕಾಲ ತಳ್ಳುತ್ತಿವೆ. ಇಂಥ ಹತ್ತಾರು ಸಮಸ್ಯೆಗಳನ್ನು ಪರಿಹರಿಸಿ ಶೈಕ್ಷಣಿಕ ಸಮಾನತೆಯ ಅನುಷ್ಠಾನವನ್ನು ಸರ್ಕಾರದ ಆದ್ಯತೆಯಾಗಿಸಬೇಕಾಗಿದೆ.

ಈ ದಿಸೆಯಲ್ಲಿ ಶಿಕ್ಷಣ ಕ್ಷೇತ್ರದ ಸಮಾನ ಸಮಗ್ರ ಸುಧಾರಣೆಯು ಕಾಂಗ್ರೆಸ್ ನೇತೃತ್ವದ ಸರ್ಕಾರದ ಗ್ಯಾರಂಟಿಗಳ ಪಟ್ಟಿಗೆ ಸೇರಬೇಕು. ಅಗತ್ಯ ಅನುದಾನ ಮತ್ತು ಅನುಷ್ಠಾನ ಮುಖ್ಯವಾಗಬೇಕು.

ಚುರುಮುರಿ

'ನಾನು' ಅಧ್ಯಕ್ಷ!

• ಬಿ.ಎಂ.ಹನೀಫ್

'ಜೆಡಿಎಸ್ ರಾಷ್ಟ್ರ ಘಟಕಕ್ಕೆ ನಾನು ಅಧ್ಯಕ್ಷ...' ಯಂಕ್ಟೇಶನ ಧ್ವನಿ ಅಪ್ಪಳಿಸಿತು.

'ಏನಯ್ಯಾ ಅದು? ಅವರಿಗೆ ಬೇರೆ ಯಾರೂ ಸಿಗಲಿಲ್ವಾ, ನಿನ್ನನ್ನು ಅಧ್ಯಕ್ಷ ಮಾಡೋದಕ್ಕೆ?!'

'ನಾನಲ್ಲ ಗುರುಗಳೇ... ಜೆಡಿಎಸ್‌ಗೆ ಕೇರಳದ 'ನಾನು' ರಾಷ್ಟ್ರ ಘಟಕದ ಅಧ್ಯಕ್ಷ. ಹಾಗಂತ ಇಬ್ರಾಹಿಂ ಸಾಹೇಬರು ಫರ್ಮಾನು ಹೊರಡಿಸಿದ್ದಾರೆ'.

'ನನ್ನ ಕರ್ಮ, ನಿನಗೆ ಕನ್ನಡ ಕಲಿಸಿದ್ನಲ್ಲಾ! ಅದು ನಾನು ಅಲ್ಲ... ನಾಣು! ಬಹುಶಃ ನಾರಾಯಣ ಅಂತ ಉದ್ದ ಹೆಸರು ಹೇಳಲು ಪುರಸತ್ತಿಲ್ಲದೆ ನಾಣು ಅಂತ ಇಟ್ಟಿರಬೇಕು. ಸರಿ, ಅದರಿಂದ ನಿನಗೇನು ತೊಂದರೆ?'

'ತೊಂದರೆ ಏನಿಲ್ಲ. ಈ ಕಡೆ ದೇವೇಗೌಡರು ರಾಷ್ಟ್ರ ಘಟಕದ ಅಧ್ಯಕ್ಷರಾಗಿರುವಾಗ ಅದೇ ಪಕ್ಷಕ್ಕೆ ಇನ್ನೊಬ್ಬರು ಅಧ್ಯಕ್ಷರು ಆಗೋದು ಹೇಗೆ?'

'ಅದು ಸರಿಯೇ. ಈ ಆಯ್ಕೆ ಪ್ರಕ್ರಿಯೆ ಎಲ್ಲಿ ನಡೀತು? ಸಭೇಲಿ ಯಾರೆಲ್ಲ ಇದ್ರಂತೆ?'

'ಇಬ್ರು ಮಾತ್ರ ಇದ್ರಂತೆ. ರಾಜ್ಯ ಘಟಕದ ಅಧ್ಯಕ್ಷರು ಮತ್ತು ರಾಷ್ಟ್ರ ಘಟಕದ ಅಧ್ಯಕ್ಷರು'.

'ಅಂದ್ರೆ ರಾಜ್ಯ ಅಧ್ಯಕ್ಷರು, ರಾಷ್ಟ್ರ ಅಧ್ಯಕ್ಷರನ್ನು ನೇಮಿಸಿದ್ದಾರೆ ಅಂತಾಯ್ತು. ಹೊಸ ಪಕ್ಷಕ್ಕೆ ಹೊಸ ಐಡಿಯಾ!'

'ಹೊಸ ಪಕ್ಷ ಅಲ್ಲ ಗುರುಗಳೇ. ಜೆಡಿಎಸ್ ಇರೋದು ಒಂದೇ ಪಕ್ಷ. ಅದರ ರಾಜ್ಯ ಮತ್ತು ರಾಷ್ಟ್ರ ಘಟಕಗಳಿಗೆ ಇಬ್ಬಿಬ್ಬರು ಅಧ್ಯಕ್ಷರು!'

'ಹೀಗಾದ್ರೆ ಜನರಿಗೆ ಕನ್‌ಫ್ಯೂಶನ್ನು ಜಾಸ್ತಿ ಆಗುತ್ತೆ. ಇಬ್ರಾಹಿಂ ಸಾಹೇಬರು ತಮ್ಮ ಪಕ್ಷಕ್ಕೆ ಹೊಸ ಹೆಸರು ಇಡಬೇಕು'.

'ಏನಂತ ಇಡಬಹುದು ಗುರುಗಳೇ?'

'ಜೆಡಿಎಸ್-ಐ ಅಂತ ಇಡಬಹುದು. ಐ ಅಂದ್ರೆ ಇಂಗ್ಲಿಷಲ್ಲಿ ಇಬ್ರಾಹಿಂ ಅಂತಲೂ ಆಗುತ್ತೆ, ನಾನು ಅಂತಲೂ ಆಗುತ್ತೆ. ಒಳ್ಳೇ ಸೆಕ್ಯುಲರ್ ಹೆಸರು'.

'ಮುಂದೆ ಇವರಿಬ್ರಿಗೂ ಜಗಳ ಬಂದು ಪಕ್ಷ ಇಬ್ಭಾಗ ಆದ್ರೆ?'

'ಆಗ ಜೆಡಿ-ಐಎಸ್ ಅಂತ ಒಂದು ಪಕ್ಷ, ಜೆಡಿ- ಐಎನ್ ಅಂತ ಇನ್ನೊಂದು ಪಕ್ಷ! ಜೆಡಿ-ಐಎಸ್ ಅಂದ್ರೆ ಜನತಾದಳ ಇಬ್ರಾಹಿಂ ಸಾಬ್ ಅಂತ. ಜೆಡಿ-ಐಎನ್ ಅಂದ್ರೆ ಇಬ್ರಾಹಿಂ ನಾಣು ಅಂತ. ಇಬ್ರೂ ರಾಷ್ಟ್ರ ಘಟಕದ ಅಧ್ಯಕ್ಷರು ಆಗಬಹುದು!'

ಸಂಗತ

ಕೇಳಲಿ ಮಕ್ಕಳ ಮನದ ಮಿಡಿತ

ಆರೋಗ್ಯಕ್ಕೆ ಸಂಬಂಧಿಸಿದ ಸರ್ಕಾರಿ ಕಾರ್ಯಕ್ರಮಗಳು, ಮಕ್ಕಳ ಮಾನಸಿಕ ಆರೋಗ್ಯದ ಕುರಿತು ಪೋಷಕರಿಗೆ ತಿಳಿವಳಿಕೆ ನೀಡುವ ಉಪಕ್ರಮವನ್ನೂ ಒಳಗೊಂಡಿರಬೇಕು

• ಸದಾಶಿವ್ ಸೊರಟೂರು

ತುಂಬಾ ಚೆನ್ನಾಗಿ ಓದುತ್ತಿದ್ದ ಜಾಣೆಯೊಬ್ಬಳು ಇದ್ದಕ್ಕಿದ್ದ ಹಾಗೆ ಕಲಿಕೆಯಲ್ಲಿ ಹಿಂದುಳಿದಳು. ಓದು ಕಡಿಮೆಯಾಯಿತು. ಮಾತು ಕಡಿಮೆಯಾಯಿತು. ಅಂಕಗಳು ಕಡಿಮೆಯಾದವು. ಶಿಕ್ಷಕರು ಶಾಲೆಗೆ ಪೋಷಕರನ್ನು ಕರೆಸಿ ಮಾತನಾಡಿದಾಗ, ಪೋಷಕರಿಗೂ ಅದೇ ಬೇಸರ. ಮನೆಯಲ್ಲೂ ತನ್ನ ಪಾಡಿಗೆ ತಾನಿರುತ್ತಾಳೆ ಅಂದರು. ಶಿಕ್ಷಕರು ಖುದ್ದಾಗಿ ಆ ಮಗುವನ್ನು ಕರೆದು ಮಾತನಾಡಿಸಿದಾಗಲೂ ಆಕೆ ಏನೊಂದೂ ಹೇಳಲಿಲ್ಲ. ಕೊನೆಯ ದಾರಿ ಎಂಬಂತೆ ಮನೋವೈದ್ಯರ ಬಳಿ ಕರೆದೊಯ್ದಾಗ ಕೊನೆಗೂ ವಿಷಯ ತಿಳಿಯಿತು. ನಿತ್ಯ ದಾರಿಯಲ್ಲಿ ಸಿಗುವ ಹುಡುಗನೊಬ್ಬನ ಕಿರುಕುಳದಿಂದ ಆಕೆ ನಲುಗಿದ್ದಳು. ಎಲ್ಲವೂ ಸುಖಾಂತ್ಯವಾಯಿತು. ಆ ಸಮಸ್ಯೆ ಹಾಗೇ ಮುಂದುವರಿದಿದ್ದರೆ ಆ ಮಗುವಿನ ಸ್ಥಿತಿ ಏನಾಗುತ್ತಿತ್ತೋ?

ಇನ್ನು ಕೆಲವು ಮಕ್ಕಳಿರುತ್ತಾರೆ. ತಮ್ಮ ಮೇಲಿನ ಒತ್ತಡಕ್ಕೆ ಪ್ರತಿಯಾಗಿ ಸ್ಫೋಟಗೊಳ್ಳುತ್ತಾರೆ. ಮನೆ ಬಿಟ್ಟು ಹೋಗುತ್ತಾರೆ. ದುಶ್ಚಟಗಳ ದಾಸರಾಗುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಆಕ್ರಮಣಶೀಲ ಮನಃಸ್ಥಿತಿ ಬೆಳೆಸಿಕೊಳ್ಳುತ್ತಾರೆ. ಈಚೆಗೆ ಶಾಲಾ ಮಕ್ಕಳ ಬ್ಯಾಗಿನಲ್ಲಿ ಬೀಡಿ, ಸಿಗರೇಟ್, ಗುಟ್ಕಾದಂತಹ ವಸ್ತುಗಳು ಸಿಕ್ಕ ಉದಾಹರಣೆಗಳಿವೆ. ಕೆಲವು ಮಕ್ಕಳಂತೂ ಕೆಲವರ ಮೇಲೆ ಅತಿಯಾದ ದೈಹಿಕ ದಾಳಿಗೆ ಮುಂದಾಗುತ್ತಾರೆ.

ಮಕ್ಕಳ ಮನಸ್ಸು ಕದಡುತ್ತಿದೆ. ಅದೀಗ ಆರೋಗ್ಯಕರವಾಗಿಲ್ಲ. ಪರೀಕ್ಷೆ ಭಯ, ಹರೆಯದಲ್ಲಿ ದೈಹಿಕ ಬದಲಾವಣೆಯ ಗೊಂದಲ, ಭೀತಿ, ಆಕರ್ಷಣೆ, ಪೋಷಕರ ಒತ್ತಡ, ಸಮಾಜದ ನಿರೀಕ್ಷೆಗಳು, ಕಂಗೆಡಿಸುವ ಸಾಮಾಜಿಕ ಜಾಲತಾಣಗಳು, ಸಿನಿಮಾಗಳು... ಮಗುವಿನ ಮನಸ್ಸಿನೊಳಗೆ ದ್ವಂದ್ವದ ಬಿರುಗಾಳಿ ಎಬ್ಬಿಸಲು ಇರುವ ಕಾರಣಗಳು ಒಂದೇ ಎರಡೇ!

ಮಗುವಿಗೆ ಜ್ವರ ಬಂದರೆ ಕಾಳಜಿ ಮಾಡುತ್ತೇವೆ. ಗಾಯವಾದರೆ ಆತಂಕಕ್ಕೆ ಒಳಗಾಗುತ್ತೇವೆ. ಆದರೆ ಮನಸ್ಸು ಕೂಡ ಹುಷಾರು ತಪ್ಪುತ್ತದೆ ಎಂಬುದರ ಅರಿವಿರಬೇಕು ನಮಗೆ. ಮನಸ್ಸಿಗೆ ಗಾಯವಾಗುತ್ತದೆ, ಬಳಲುತ್ತದೆ, ಪ್ರಭಾವಕ್ಕೆ ಒಳಗಾಗುತ್ತದೆ, ಸೋಲುತ್ತದೆ, ನೋವು ತಿನ್ನುತ್ತದೆ. ಜ್ವರಕ್ಕೆ ಔಷಧಿ ಕೊಟ್ಟಂತೆ ಮನಸ್ಸಿಗೂ ಮದ್ದು ಅರೆಯಬೇಕಾಗಿದೆ.

ಮಕ್ಕಳದು ಇರಲಿ, ವಯಸ್ಕರ ಮಾನಸಿಕ ಆರೋಗ್ಯದ ಬಗ್ಗೆ ಕೂಡ ನಾವು ನಮ್ಮ ದೇಶದಲ್ಲಿ ಅಷ್ಟಾಗಿ ಕಾಳಜಿ ವಹಿಸುತ್ತಿಲ್ಲ. ಇದು ಸರಿಯಲ್ಲ. ಬೆಳೆದು ನಾಳೆ ಸಮಾಜಕ್ಕೆ ಆಸ್ತಿಯಾಗಬೇಕಾದ ಮಕ್ಕಳು ಅನಾರೋಗ್ಯ ಪೀಡಿತ ಮನಸ್ಸು ಹೊಂದಿದ್ದರೆ ಹೇಗೆ?

ಅನೇಕ ಕಾರಣಗಳಿಂದ ಮಗು ಮಾನಸಿಕ ಸಮಸ್ಯೆಗಳಿಂದ ಬಳಲಬಹುದು. ಮಗುವಿಗೆ ಒಳ್ಳೆಯ ಶಾಲೆ, ಬಟ್ಟೆ, ಉತ್ತಮ ಆಹಾರ ಕೊಡುವಂತೆ ಉತ್ತಮ ಮಾನಸಿಕ ಆರೋಗ್ಯವನ್ನು ಹೊಂದುವುದೂ ಅದರ ಹಕ್ಕಾಗಬೇಕು. ಒಂದು ತೀವ್ರ ಜ್ವರ ನಮ್ಮನ್ನು ಗಾಬರಿಗೊಳಿಸಿದಷ್ಟೇ ಮಗುವಿನ ಬೇಸರ, ಸಿಟ್ಟು, ಖಿನ್ನತೆಯೂ ಆತಂಕಕ್ಕೆ ಈಡು ಮಾಡಬೇಕು.

ಎಷ್ಟೋ ಪೋಷಕರಿಗೆ ಇದರ ಬಗ್ಗೆ ಅರಿವು ಇರುವುದಿಲ್ಲ. ಆರೋಗ್ಯ ಕಾಯ್ದುಕೊಳ್ಳುವಿಕೆಗೆ ಸಂಬಂಧಿಸಿದಂತೆ ಸರ್ಕಾರಗಳು ರೂಪಿಸುವ ಕಾರ್ಯಕ್ರಮಗಳಲ್ಲಿ ಮಕ್ಕಳ ಮಾನಸಿಕ ಆರೋಗ್ಯದ ಕುರಿತು ಪೋಷಕರಿಗೆ ತಿಳಿವಳಿಕೆ ನೀಡುವ ಉಪಕ್ರಮಗಳೂ ಇರಬೇಕು. ಆಶಾ ಕಾರ್ಯಕರ್ತೆಯರು, ಅಂಗನವಾಡಿಗಳ ಮೂಲಕ ಮನೆಮನೆಯನ್ನೂ ತಲುಪಬೇಕು. ತಾಲ್ಲೂಕು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮನೋವೈದ್ಯರು ಇರುವಂತೆ ವ್ಯವಸ್ಥೆ ಮಾಡಬೇಕು.

ಸರ್ಕಾರಿ ಶಾಲೆಯ ಮಕ್ಕಳಿಗೆ ಈಗಾಗಲೇ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯದ ಯೋಜನೆ ಲಭ್ಯವಿದೆ. ಶಾಲೆಗೆ ವರ್ಷಕ್ಕೊಮ್ಮೆ ಬರುವ ವೈದ್ಯರು ಕಣ್ಣು, ಕಿವಿ, ಮೂಗು, ಎದೆಬಡಿತ ನೋಡಿ ಹೋಗುತ್ತಾರೆ. ಆದರೆ ಮಕ್ಕಳ ಮನಸ್ಸಿನ ಮಿಡಿತ ಅವರಿಗೆ ಕೇಳುವುದಿಲ್ಲ. ಹದಿಹರೆಯದ ನಿರ್ವಹಣೆ ಬಗ್ಗೆ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತದಾದರೂ ಎಲ್ಲರನ್ನೂ ಒಂದು ಕಡೆ ಕೂರಿಸಿ, ಪಾಠ ಹೇಳಿದಂತೆ ಹೇಳಿ ಎದ್ದು ಹೋಗಲಾಗುತ್ತದೆ. ಮಗು ಹೇಳಬೇಕು ಅಂದುಕೊಂಡ ಮನಸ್ಸಿನ ದ್ವಂದ್ವ, ತಾಕಲಾಟ ಅದರ ಗಂಟಲಲ್ಲೇ ಉಳಿದುಬಿಡುತ್ತದೆ.

ಶಾಲೆಗಳಲ್ಲಿ ವರ್ಷಕ್ಕೆ ಒಮ್ಮೆಯಾದರೂ ಮಕ್ಕಳಿಗೆ ಮನೋವೈದ್ಯರಿಂದ ಆಪ್ತ ಸಲಹೆಯಂತಹ ಕಾರ್ಯಕ್ರಮಗಳನ್ನು ಯೋಜಿಸಬೇಕು. ಇದರಿಂದ, ಮಗು ಯಾರ ಬಳಿಯೂ ಹೇಳಿಕೊಳ್ಳದೆ ಸ್ವತಃ ಅನುಭವಿಸುತ್ತಿರಬಹುದಾದ ಮಾನಸಿಕ ಸಂಕಟಗಳನ್ನು ವೈದ್ಯರ ಮುಂದೆ ಹೇಳಿಕೊಳ್ಳಲು ಅನುಕೂಲವಾಗುತ್ತದೆ. ಎಲ್ಲವನ್ನೂ ಗೆಳೆಯರ ಮುಂದೆ, ಶಿಕ್ಷಕರ ಮುಂದೆ ಅಥವಾ ಪೋಷಕರ ಮುಂದೆ ಹೇಳಿಕೊಳ್ಳಲಾಗದು. ಮನೋವೈದ್ಯರು ಅವರದೇ ಆದ ತಂತ್ರದ ಮೂಲಕ ಮಗುವಿನ ಮನಸ್ಸನ್ನು ತಲುಪಬಲ್ಲರು. ಆಗ ಸೂಕ್ತ ಚಿಕಿತ್ಸೆಗೆ ಅನುಕೂಲವಾಗುತ್ತದೆ. ಶಿಕ್ಷಕರೂ ಈ ಕುರಿತು ಗಮನಹರಿಸಬೇಕು. ಮಗುವಿನ ಮಾನಸಿಕ ತೊಳಲಾಟದ ಲಕ್ಷಣಗಳನ್ನು ಗುರುತಿಸಬೇಕು. ಪೋಷಕರ ಗಮನಕ್ಕೆ ತರಬೇಕು. ಮನೋವೈದ್ಯರನ್ನು ಸಂಪರ್ಕಿಸಬೇಕು. ಶಿಕ್ಷಕರನ್ನು ಈ ದಿಸೆಯಲ್ಲಿ ತರಬೇತುಗೊಳಿಸಬೇಕು.

ಆರೋಗ್ಯವಂತ ಮಗು ನಾಳೆಯ ಸಮಾಜದ ಆಸ್ತಿ. ಆರೋಗ್ಯವೆಂದರೆ ಬರೀ ದೈಹಿಕ ಕಾಯಿಲೆಗಳಿಂದ ಮುಕ್ತವಾಗಿರುವುದಲ್ಲ, ಮಾನಸಿಕವಾಗಿ, ಭಾವನಾತ್ಮಕವಾಗಿ ಸದೃಢವಾಗಿರುವುದೂ ಆಗಿರುತ್ತದೆ. ಆರೋಗ್ಯ ಎಂಬುದನ್ನು ಹೀಗೇ ಅಲ್ಲವೇ ವಿಶ್ವಸಂಸ್ಥೆಯು ವ್ಯಾಖ್ಯಾನಿಸಿರುವುದು!

ವಾಚಕರ ವಾಣಿ

ಕಟುವಾಸ್ತವ ಮರೆಯಾಗದಿರಲಿ

ಯುವಕರಿಬ್ಬರು ಸಂಸತ್ ಕಲಾಪ ನಡೆಯುತ್ತಿದ್ದ ಆವರಣಕ್ಕೆ ನುಗ್ಗಿದ್ದು ಮಹಾ ಅಪರಾಧ ಎಂಬುದರಲ್ಲಿ ಎರಡು ಮಾತಿಲ್ಲ. ಎಂದೇ ಇಡೀ ದೇಶ ಅವರನ್ನು ಅಡಿಯಿಂದ ಮುಡಿಯವರೆಗೂ ಖಂಡಿಸುತ್ತಿದೆ. ಸರಿಯೇ. ಆದರೆ, ಅವರು ಉಲ್ಲೇಖಿಸಿರುವ ರೈತರ ಸಮಸ್ಯೆ, ನಿರುದ್ಯೋಗದಂತಹ ಕಟುವಾಸ್ತವಗಳ ಕುರಿತೂ ಇದೇ ವೇಳೆ ನಾವೆಲ್ಲ ಧ್ವನಿ ಎತ್ತಬೇಕಲ್ಲವೇ? ಆರೋಪಿಗಳನ್ನು ಹೀನಾಯ ಗುಣವಾಚಕಗಳಿಂದ ದೂಷಿಸುತ್ತಿರುವ ಸುದ್ದಿವಾಹಿನಿಗಳು, ಈ ವಿಷಯದಲ್ಲೂ ತಮ್ಮ ಸಾಮಾಜಿಕ ಹೊಣೆಗಾರಿಕೆಯನ್ನು ಇದೇ ಸಮಯದಲ್ಲಿ ನಿರ್ವಹಿಸಬೇಕಲ್ಲವೇ?

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಸದನದಲ್ಲಿ ದಾಂದಲೆ: ರಾಜಕೀಯ ಸಲ್ಲ

ಸಂಸತ್ತಿನಲ್ಲಿ ಇಬ್ಬರು ಯುವಕರು 'ಸ್ಮೋಕ್ ಕ್ಯಾನ್' ಹಾರಿಸಿ ದಾಂದಲೆ ನಡೆಸಿದ್ದು ವಿಪರ್ಯಾಸವೇ ಸರಿ. ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆಗೆ ಲೋಕಸಭಾ ಸ್ಪೀಕರ್ ಆದೇಶಿಸಿದ್ದಾರೆ. ಆ ಯುವಕರಿಗೆ ಪಾಸ್ ನೀಡಲು ವ್ಯವಸ್ಥೆ ಕಲ್ಪಿಸಿದ್ದ ಸಂಸದ ಪ್ರತಾಪ ಸಿಂಹ ಅವರ ಉಚ್ಚಾಟನೆಗೆ ಪ್ರತಿಪಕ್ಷಗಳು ಆಗ್ರಹಿಸಿವೆ. ಒಬ್ಬ ಆರೋಪಿಯು ಸಂಸದರ ಕ್ಷೇತ್ರದವನಾಗಿರುವುದರಿಂದ ಅವನಿಗೆ ಮತ್ತು ಅವನ ಗೆಳೆಯನಿಗೆ ಸಂಸದರು ಸಂದರ್ಶಕರ ಗ್ಯಾಲರಿಗೆ ಪಾಸ್ ನೀಡುವ ವ್ಯವಸ್ಥೆ ಮಾಡಿರುವುದು ಸ್ವಾಭಾವಿಕ. ಅಲ್ಲದೆ, ಆ ಪಾಸ್ ಅವರನ್ನು ಭದ್ರತಾ ತಪಾಸಣೆಯೇ ಇಲ್ಲದೆ ಸಂಸತ್ ಭವನ ಪ್ರವೇಶಿಸಲು ಅನುವು ಮಾಡಿಕೊಡದು! ಹೀಗಾಗಿ, ಆಗಿರುವುದು ಭದ್ರತಾ ವೈಫಲ್ಯ ಎಂಬುದು ಮೇಲ್ನೋಟಕ್ಕೇ ಕಂಡುಬರುತ್ತದೆ.

ಒಂದು ವೇಳೆ ಸದನದಲ್ಲಿ ದಾಂದಲೆ ನಡೆಸುವುದಕ್ಕಾಗಿಯೇ ಸಂಸದರು ಪಾಸ್ ದೊರಕಿಸಿಕೊಟ್ಟಿದ್ದಲ್ಲಿ, ಅವರಿಗೆ ತಕ್ಕ ಶಿಕ್ಷೆಯಾಗಲಿ. ಆದರೆ ಅದಕ್ಕೂ ಮುನ್ನ ವಿಷಯವನ್ನು ರಾಜಕೀಯಕರಣಗೊಳಿಸದೆ, ಸುಗಮ ಕಲಾಪಕ್ಕೆ ಅನುವು ಮಾಡಿಕೊಡಬೇಕು. ಇಂತಹದ್ದೊಂದು ಮಹತ್ತರವಾದ ಜವಾಬ್ದಾರಿ ತಮ್ಮ ಮೇಲೆ ಇದೆ ಎಂಬುದನ್ನು ಸಂಸದರೆಲ್ಲರೂ ಅರಿಯಬೇಕು.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

ಆರನೇ ಗ್ಯಾರಂಟಿ ಜಾರಿಯಾಗಬೇಕಾದೀತು!

ಕುಡುಕರ ಅಲ್ಲಲ್ಲ ಮದ್ಯಪ್ರಿಯರ ಬೇಡಿಕೆಗಳನ್ನು ಓದಿದಾಗ (ಪ್ರ.ವಾ., ಡಿ. 15) ನಗದೇ ಇರಲು ಸಾಧ್ಯವಾಗಲಿಲ್ಲ. ಸಮಾಜದಲ್ಲಿ ಹೀನಾಯವಾಗಿ ಬಳಸುವ 'ಕುಡುಕ' ಎಂಬ ಪದ ಇವರಿಗೂ ಕೀಳರಿಮೆ ಉಂಟು ಮಾಡುತ್ತದೆ. ಹಾಗಾಗಿ, ಗೌರವಾನ್ವಿತವಾದ 'ಮದ್ಯಪ್ರಿಯ' ಎಂಬ ಪದ ಬಳಸಲು ಅವರು ಬೇಡಿಕೆ ಇಟ್ಟಿದ್ದಾರೆ! ಲಿವರ್ ಸಮಸ್ಯೆಯಿಂದ ಬಳಲುತ್ತಿರುವವರ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಬೇಕು, ಮದ್ಯಪ್ರಿಯರ ನಿಗಮ– ಮಂಡಳಿ ಸ್ಥಾಪಿಸಿ ಸಾಲ, ವಸತಿ ಸೌಕರ್ಯ ಒದಗಿಸಬೇಕು, ಮದ್ಯ ಸೇವಿಸಿ ಮೃತಪಟ್ಟ ಮದಿರಾದಾಸರ ಕುಟುಂಬಕ್ಕೆ ₹ 10 ಲಕ್ಷ ಪರಿಹಾರ ಕೊಡಬೇಕು ಎಂಬೆಲ್ಲ ಇವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಆರನೇ ಗ್ಯಾರಂಟಿಯನ್ನು ಜಾರಿಗೆ ತರಬೇಕಾಗಬಹುದು! ಇದೇನೂ ಅಸಂಭವವಲ್ಲ. ಯಾಕೆಂದರೆ ಈಗ ಕುಡುಕ ಮತದಾರರ ಸಂಖ್ಯೆ ಲಕ್ಷಗಳ ಲೆಕ್ಕದಲ್ಲಿ ಇರಬಹುದು.

ಕೃಷ್ಣ ಭಟ್, ಬೆಂಗಳೂರು

ಹಾಲಿನ ಬೆಲೆ ಏರಿಕೆ ಎಷ್ಟು ಸರಿ?

ಹೊಸ ವರ್ಷದ ಉಡುಗೊರೆಯಾಗಿ (?) ನಂದಿನಿ ಹಾಲಿನ ದರ ಹೆಚ್ಚಿಸಲಾಗುತ್ತದೆ ಎಂಬ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದು, ಜನರಲ್ಲಿ ಆತಂಕ ಉಂಟಾಗಿದೆ. ಮೂರ್ನಾಲ್ಕು ತಿಂಗಳುಗಳ ಹಿಂದಷ್ಟೇ ಲೀಟರಿಗೆ ಮೂರು ರೂಪಾಯಿಗಳಷ್ಟು ಹೆಚ್ಚಳ ಮಾಡಿದ್ದು, ಮತ್ತೆ ದರ ಪರಿಷ್ಕರಣೆ ಮಾಡಹೊರಟಿರುವುದು ಸರಿಯಲ್ಲ.

ಹಾಲಿನ ಅನ್ಯ ಬ್ರ್ಯಾಂಡ್‌ಗಳಿಗಿಂತ ನಂದಿನಿಯ ದರ ಕಡಿಮೆ ಇದೆ ಎಂಬ ಸಮರ್ಥನೆ ಸರಿಯಲ್ಲ. ಅವರು ಮಾಡಿದರೆಂದು ಇವರೂ ಮಾಡಬೇಕೆ? ಹಾಗೆ ನೋಡಿದರೆ ನೆರೆ ರಾಜ್ಯದಲ್ಲಿ ಬಸ್ ಪ್ರಯಾಣದರ ಕಡಿಮೆ ಇದೆ. ಇಲ್ಲೂ ಕಡಿಮೆ ಮಾಡಲಿ. ಅದನ್ಯಾಕೆ ಗಣನೆಗೆ ತೆಗೆದುಕೊಳ್ಳುವುದಿಲ್ಲ? ರೈತರು ಮತ್ತು ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಹಿತವನ್ನಷ್ಟೇ ಅಲ್ಲದೆ, ಗ್ರಾಹಕರ ಹಿತವನ್ನೂ ಕಾಪಾಡುವುದು ಸರ್ಕಾರದ ಕರ್ತವ್ಯ. ಈಗಾಗಲೇ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಗಾಯದ ಮೇಲೆ ಬರೆ ಏಕೆ? ಕೆಎಂಎಫ್ ಆಡಳಿತದಲ್ಲಿ ಆಗುವ ಅಥವಾ ಆಗುತ್ತಿರುವ ದುಂದುವೆಚ್ಚ ನಿಯಂತ್ರಿಸಿದಲ್ಲಿ, ಪೋಲಾಗುತ್ತಿರುವ ಹಣ ಉಳಿಯುತ್ತದೆ. ಈ ಕುರಿತು ಚಿಂತಿಸಿ ಕಾರ್ಯರೂಪಕ್ಕೆ ತರಲಿ. ಈಗಲೇ ಜನರು ಹೋಟೆಲಿಗೆ ಹೋಗಲು ಹಿಂಜರಿಯುವಂತಾಗಿದೆ. ಹೋಟೆಲುಗಳಲ್ಲಿ ಊಟ ತಿಂಡಿ ಇರಲಿ, ಕನಿಷ್ಠ ನೆಮ್ಮದಿಯಾಗಿ ಕಾಫಿ ಕುಡಿಯಲಾದರೂ ಸರ್ಕಾರ ಬಿಡಲಿ. ಹಾಲು ಮತ್ತು ಅದರ ಉಪ ಉತ್ಪನ್ನಗಳ ಬೆಲೆ ಕನಿಷ್ಠ ಒಂದು ವರ್ಷ ಕಾಲವಾದರೂ ಸ್ಥಿರವಾಗಿರಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬದಲಾಗಬೇಕಿದೆ ಪೋಷಕರ ಮನಃಸ್ಥಿತಿ

ಜಾತಿ ತಾರತಮ್ಯದ ಬಗ್ಗೆ ಬ್ರಾಹ್ಮಣರನ್ನು ದೂಷಿಸುವ ವಿಷಯದಲ್ಲಿ ಜನರ ಮನಃಸ್ಥಿತಿ ಬದಲಾಗಲಿ ಎಂದು ಆಶಿಸಿರುವ ಗುರು ಜಗಳೂರು ಅವರ ನೋವು (ವಾ.ವಾ., ಡಿ. 15) ಅರ್ಥವಾಗುತ್ತದೆ. ಆದರೆ ಜಾತಿ ತಾರತಮ್ಯದ ನಡೆ ನಾನು ಶಾಲಾ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ನನ್ನ ಗಮನಕ್ಕೆ ಬಂದಿದೆ. ತಂದೆತಾಯಿ ಮಕ್ಕಳಿಗೆ ಒಳ್ಳೆಯದನ್ನೇ ಕಲಿಸುತ್ತಾರೆ ಎನ್ನುವುದೇನೋ ಸರಿ. ಆದರೆ ಕೆಟ್ಟದ್ದನ್ನೇ ಅವರು ಒಳ್ಳೆಯದೆಂದು ನಂಬಿಕೊಂಡಿದ್ದರೆ? ನನ್ನ ಕೆಲವು ಸ್ನೇಹಿತರೇ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ್ದ ನಮ್ಮೆಲ್ಲರ ಇನ್ನೊಬ್ಬ ಸ್ನೇಹಿತನನ್ನು ಮುಟ್ಟಿಸಿಕೊಳ್ಳದಂತೆ, ಅವನು ಇಲ್ಲದ ಸಂದರ್ಭದಲ್ಲಿ ನನಗೆ ತಿಳಿಹೇಳುತ್ತಿದ್ದರು. 7ನೇ ತರಗತಿಯಲ್ಲಿದ್ದ ವಿದ್ಯಾರ್ಥಿಗಳಿಂದ ಇಂತಹ ಮಾತು ಬರುತ್ತದೆಂದರೆ, ಖಂಡಿತ ಚಿಕ್ಕಂದಿನಿಂದಲೇ ಜಾತಿ ತಾರತಮ್ಯದ ಸಂಗತಿ ಅವರಲ್ಲಿ ಅಷ್ಟು ತೀಕ್ಷ್ಣವಾಗಿ ಬೇರೂರುವಂತೆ ಅವರ ತಂದೆ–ತಾಯಿಯೇ ಮಾಡಿರಬೇಕೆನ್ನುವುದು ಸಾಮಾನ್ಯ ಜ್ಞಾನವಲ್ಲವೇ? ಅಂಥ ತಂದೆ–ತಾಯಿಯ ಮನಸ್ಸು ಬದಲಾಗಬೇಕಿರುವುದು ಇಂದಿನ ತುರ್ತು. ಆದರೆ ಹಾಗಾಗಬಹುದೇ?

ಜೊತೆಗೆ, ಮನುಸ್ಮೃತಿ ಗ್ರಂಥ ಎಲ್ಲೂ ಕಾಣಸಿಗದು ಎಂದು ಹೇಳುವುದು ಕೂಡ ಸರಿಯಲ್ಲ. ಸಾಮಾನ್ಯವಾಗಿ ಆಯಾ ಪ್ರದೇಶಗಳ ಆಟದ ಮೈದಾನಗಳಲ್ಲಿ ಕಾಲಕಾಲಕ್ಕೆ ಸಣ್ಣ ಮಟ್ಟದ ವಸ್ತುಪ್ರದರ್ಶನಗಳು ನಡೆಯುತ್ತಲೇ ಇರುತ್ತವೆ ಮತ್ತು ಅಲ್ಲಿನ ಒಂದು ಮಳಿಗೆಯು ಪುಸ್ತಕಗಳಿಗೆ ಮೀಸಲಾಗಿರುತ್ತದೆ. ಅಂತಲ್ಲಿ ಕೆಲವೆಡೆಯಾದರೂ ಈ ಪುಸ್ತಕ ಮತ್ತು ಜಾತೀಯತೆಗೆ ಪೂರಕವಾದ ಇನ್ನೊಂದಷ್ಟು ಪುಸ್ತಕಗಳು ಯಾವ ಅಡೆತಡೆಯಿಲ್ಲದೆ ರಾರಾಜಿಸುತ್ತಿರುತ್ತವೆ.

ರವಿಕಿರಣ್ ಶೇಖರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ ನೆಲೆ ವಿಸ್ತರಿಸಬಲ್ಲ ಕ್ಷೇತ್ರ ಮರುವಿಂಗಡಣೆ

ಜಮ್ಮು ಮತ್ತು ಕಾಶ್ಮೀರಕ್ಕೆ ಚುನಾವಣೆ ನಡೆಸಿ ಎಂದು ಸುಪ್ರೀಂ ಕೋರ್ಟ್ ಈಚೆಗೆ ಕೇಂದ್ರ ಸರ್ಕಾರಕ್ಕೆ ಗಡುವು ನೀಡಿದೆ. ಚುನಾಯಿತ ವಿಧಾನಸಭೆಯನ್ನು 2018ರಲ್ಲಿ ವಿಸರ್ಜನೆ ಮಾಡಿದ ನಂತರ ಅಲ್ಲಿ ಚುನಾವಣೆಯೇ ನಡೆದಿಲ್ಲ. ಆದರೆ ಜಮ್ಮು ಮತ್ತು ಕಾಶ್ಮೀರದ ರಾಜ್ಯದ ಸ್ಥಾನವನ್ನು ತೆಗೆದುಹಾಕಲಾಗಿದೆ. ಅದನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿಸಲಾಗಿದೆ. ಚುನಾವಣೆ ನಡೆಸಿ ಎಂಬ ಅಲ್ಲಿನ ಜನರ ಆಗ್ರಹಕ್ಕೆ ಕೇಂದ್ರದ ಬಿಜೆಪಿ ಸರ್ಕಾರವು, 'ಕ್ಷೇತ್ರ ಮರುವಿಂಗಡಣೆ'ಯ ನಂತರ ಚುನಾವಣೆ ನಡೆಸಲಾಗುವುದು ಎಂದು ಹೇಳುತ್ತಲೇ ಬಂದಿತ್ತು. ಕ್ಷೇತ್ರ ಮರುವಿಂಗಡಣೆಯ ಕಾರ್ಯವೂ ಮುಗಿದಿದೆ. ಸಂಬಂಧಿತ ಮಸೂದೆಯನ್ನು ಸಂಸತ್ತು ಅಂಗೀಕರಿಸಬೇಕು ಮತ್ತು ರಾಷ್ಟ್ರಪತಿಯ ಅಂಕಿತವಷ್ಟೇ ಬೀಳಬೇಕು. ಆದರೆ ಈಗಿನ ಕ್ಷೇತ್ರ ಮರುವಿಂಗಡಣೆಯಿಂದ ಚುನಾವಣೆಯಲ್ಲಿ ಬಿಜೆಪಿಗೇ ಹೆಚ್ಚು ಅನುಕೂಲವಾಗಲಿದೆ ಎಂದು ಬಿಜೆಪಿವಿರೋಧಿ ಪಕ್ಷಗಳು ಆಕ್ರೋಶ ವ್ಯಕ್ತಪಡಿಸಿವೆ

● ಜಯಸಿಂಹ ಆರ್.

ಕ್ಷೇತ್ರ ಮರುವಿಂಗಡಣೆ ಆಯೋಗದ ಶಿಫಾರಸು ಮತ್ತು ವರದಿಗಳನ್ನು ದೇಶದ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿಲ್ಲ. ಅದರ ಶಿಫಾರಸುಗಳನ್ನು ಸಂಸತ್ತು ಅಂಗೀಕರಿಸಬೇಕು ಅಷ್ಟೆ. ಅದನ್ನು ಸಂಸತ್ತಿನ ಉಭಯ ಸದನಗಳು ಮತ್ತು ರಾಜ್ಯ ವಿಧಾನಸಭೆಯ ಮುಂದೆ ಇರಿಸಬಹುದಷ್ಟೆ. ಆ ಶಿಫಾರಸುಗಳನ್ನು ಜಾರಿಗೊಳಿಸಲೇಬೇಕು. ಕ್ಷೇತ್ರ ಮರುವಿಂಗಡಣೆಯಿಂದ ರಾಜ್ಯಗಳ (ವಿಧಾನಸಭೆ ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳನ್ನೂ ಒಳಗೊಂಡಂತೆ) ರಾಜಕೀಯ ಸಮೀಕರಣವೇ ಬದಲಾಗಿಬಿಡುತ್ತದೆ. ಅದರಿಂದ ಒಂದು ಪಕ್ಷಕ್ಕೆ ಮೇಲುಗೈ ಆಗಬಹುದು, ಬೇರೆ ಪಕ್ಷಗಳ ನೆಲೆಗಳೇ ಛಿದ್ರವಾಗಬಹುದು. ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಮರುವಿಂಗಡಣಾ ಆಯೋಗದ ಶಿಫಾರಸುಗಳೂ ಇಂಥದ್ದೇ ಪರಿಣಾಮವನ್ನುಂಟು ಮಾಡುತ್ತವೆ ಎಂದು ಅಲ್ಲಿನ ಪ್ರಾದೇಶಿಕ ಪಕ್ಷಗಳು ಕರಡು ವರದಿಯನ್ನು ವಿರೋಧಿಸಿದ್ದವು.

'ಕ್ಷೇತ್ರ ಮರುವಿಂಗಡಣಾ ಆಯೋಗದ ಶಿಫಾರಸುಗಳನ್ನು ನ್ಯಾಯಾಲಯಗಳಲ್ಲಿ ಪ್ರಶ್ನಿಸುವಂತಿಲ್ಲ ಎಂಬುದನ್ನೇ ಬಳಸಿಕೊಂಡು ಬಿಜೆಪಿ ತನಗೆ ಅನುಕೂಲ ಆಗುವಂತೆ ಕ್ಷೇತ್ರಗಳನ್ನು ವಿಂಗಡಿಸಿಕೊಂಡಿದೆ' ಎಂದು ಪಿಡಿಪಿ, ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಮತ್ತು ಜಮ್ಮು-ಕಾಶ್ಮೀರ ಪ್ರದೇಶ ಕಾಂಗ್ರೆಸ್ ಆರೋಪಿಸಿದ್ದವು. ಮರುವಿಂಗಡಣಾ ಕರಡು ವರದಿಯನ್ನು ತಿರಸ್ಕರಿಸಿದ್ದವು. ಕರಡು ವರದಿಗೆ ಬಂದಿದ್ದ ಆಕ್ಷೇಪ ಮತ್ತು ಅಭಿಪ್ರಾಯಗಳ ಬಗ್ಗೆ ಚರ್ಚಿಸಲು ಆಯೋಗವು 2022ರ ಏಪ್ರಿಲ್ 4 ಮತ್ತು 5ರಂದು ಸಾರ್ವಜನಿಕ ಸಭೆಗಳನ್ನು ಆಯೋಜಿಸಿತ್ತು. ಈ ಸಭೆಯನ್ನು ಪಿಡಿಪಿ, ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಬಹಿಷ್ಕರಿಸಿದ್ದವು. ಎರಡು ಸಭೆಗಳಲ್ಲಿ ಬಿಜೆಪಿಯ ನಾಯಕರು ಮತ್ತು ಕಾರ್ಯಕರ್ತರು ಸೇರಿ ಒಟ್ಟು 1,600 ಜನರು ಭಾಗಿಯಾಗಿದ್ದರು. ಕರಡು ವರದಿಗೆ ವ್ಯಕ್ತವಾಗಿದ್ದ ಆಕ್ಷೇಪಗಳನ್ನು ಆಯೋಗವು ಈ ಸಭೆಗಳ ನಂತರವೂ ಪರಿಗಣಿಸಲಿಲ್ಲ. ರಾಜಕೀಯ ಪಕ್ಷಗಳು ಮತ್ತು ಜನರಿಂದ ವ್ಯಕ್ತವಾಗಿದ್ದ ಆಕ್ಷೇಪಗಳನ್ನು ಬದಿಗೊತ್ತಿ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಿತು.

ಕ್ಷೇತ್ರ ಮರುವಿಂಗಡಣೆಯ ಸ್ವರೂಪವನ್ನು ಮತ್ತು ಯಾವ ಕ್ಷೇತ್ರಗಳನ್ನು ವಿಭಜಿಸಲಾಗಿದೆ ಎಂಬುದನ್ನು ಗಮನಿಸಿದರೆ ವಿರೋಧ ಪಕ್ಷಗಳ ಈ ಆರೋಪ ನಿಜ ಎನಿಸದೇ ಇರದು. ಕ್ಷೇತ್ರ ಮರುವಿಂಗಡಣೆ ಮೂಲಕ ಏಳು ಕ್ಷೇತ್ರಗಳನ್ನು ಹೊಸದಾಗಿ ರಚಿಸಲಾಗಿದ್ದರೂ ಅದರಲ್ಲಿ ಆರು ಕ್ಷೇತ್ರಗಳು ಬಿಜೆಪಿ ಪ್ರಾಬಲ್ಯದ ಜಿಲ್ಲೆಗಳಿಗೇ ಹೋಗಿವೆ. ಬಿಜೆಪಿ ಗೆದ್ದಿದ್ದ ಕ್ಷೇತ್ರಗಳನ್ನೇ ವಿಭಜಿಸಿ ಹೊಸ ಕ್ಷೇತ್ರಗಳನ್ನು ರಚಿಸಲಾಗಿದೆ. ಇನ್ನೊಂದೆಡೆ ವಿರೋಧ ಪಕ್ಷಗಳ ಪ್ರಾಬಲ್ಯವಿರುವ ಕ್ಷೇತ್ರಗಳನ್ನು ರದ್ದು ಮಾಡಲಾಗಿದೆ ಇಲ್ಲವೇ ಬೇರೆ ಕ್ಷೇತ್ರಗಳ ಜತೆಗೆ ವಿಲೀನ ಮಾಡಲಾಗಿದೆ. ಈ ರೀತಿ ಮಾಡಿರುವುದರಿಂದ ಪಿಡಿಪಿ, ಎನ್‌ಸಿ ಮತ್ತು ಕಾಂಗ್ರೆಸ್‌ನ ಮತಗಳು ಹಂಚಿಹೋಗಬಹುದು. ಅಂತಹ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಎರಡನೇ ಸ್ಥಾನದಲ್ಲಿದ್ದು, ಮರುವಿಂಗಡಣೆಯ ಕಾರಣಕ್ಕೆ ಆ ಕ್ಷೇತ್ರಗಳಲ್ಲಿ ಬಿಜೆಪಿಯೇ ಪ್ರಬಲ ಪಕ್ಷವಾಗುವ ಸಾಧ್ಯತೆ ಇದೆ.

ಹೆಚ್ಚಿನ ಕ್ಷೇತ್ರಗಳನ್ನು ಸೃಷ್ಟಿಸುವ ಸಲುವಾಗಿ ಕ್ಷೇತ್ರಗಳನ್ನು ಅವುಗಳ ಭೌಗೋಳಿಕ ಲಕ್ಷಣದ ಆಧಾರದಲ್ಲಿ ಮೂರು ವರ್ಗೀಕರಣ ಮಾಡಿಕೊಳ್ಳಲಾಗಿದೆ. ಸಾಮಾನ್ಯ ಪ್ರದೇಶದಲ್ಲಿರುವ ಕ್ಷೇತ್ರಗಳ ಸರಾಸರಿ ಜನಸಂಖ್ಯೆ 1.36 ಲಕ್ಷ. ಗುಡ್ಡಗಾಡು ಜಿಲ್ಲೆಗಳ ಕ್ಷೇತ್ರಗಳ ಸರಾಸರಿ ಜನಸಂಖ್ಯೆ 1.22 ಲಕ್ಷ (ಶೇ10ರಷ್ಟು ಕಡಿಮೆ) ಮತ್ತು ಬಯಲು ಜಿಲ್ಲೆಗಳ ಕ್ಷೇತ್ರಗಳ ಸರಾಸರಿ ಜನಸಂಖ್ಯೆ 1.49 ಲಕ್ಷ (ಶೇ10ರಷ್ಟು ಹೆಚ್ಚು) ಎಂದು ವರ್ಗೀಕರಣ ಮಾಡಲಾಗಿದೆ. ಜಮ್ಮು ವಿಭಾಗದ ಆರು ಜಿಲ್ಲೆಗಳು ಗುಡ್ಡಗಾಡು ಜಿಲ್ಲೆಗಳು ಎನಿಸಿಕೊಂಡಿವೆ. ಆ ಜಿಲ್ಲೆಗಳಲ್ಲಿ ಜನಸಂಖ್ಯೆ ಕಡಿಮೆ ಇದೆ. ಆದರೆ, ಗುಡ್ಡಗಾಡು ಜಿಲ್ಲೆಯ ಕ್ಷೇತ್ರಗಳ ಸರಾಸರಿ ಜನಸಂಖ್ಯೆಯನ್ನು ಕಡಿಮೆ ಮಾಡಿದ ಕಾರಣಕ್ಕೆ, ಈ ಜಿಲ್ಲೆಗಳ ಕ್ಷೇತ್ರಗಳ ಸಂಖ್ಯೆ ಏರಿಕೆಯಾಗಿದೆ. ಅಂತಹ ಜಿಲ್ಲೆಗಳೆಲ್ಲವೂ ಬಿಜೆಪಿ ಪ್ರಾಬಲ್ಯವಿರುವ ಜಮ್ಮು ವಿಭಾಗದಲ್ಲೇ ಇವೆ.

ಜಮ್ಮು ಮತ್ತು ಕಾಶ್ಮೀರ

1995ರಲ್ಲಿ ನಡೆಸಿದ್ದ ಕ್ಷೇತ್ರ ಮರುವಿಂಗಡಣೆಯಲ್ಲಿ ಜಿಲ್ಲೆಗಳನ್ನು ಹೀಗೆಯೇ ವರ್ಗೀಕರಣ ಮಾಡಲಾಗಿತ್ತೆ ಎಂಬ ಆಕ್ಷೇಪವೂ ವ್ಯಕ್ತವಾಗಿತ್ತು. ಆದರೆ ಆ ಕ್ಷೇತ್ರ ವಿಂಗಡಣೆಯ ಅಂತಿಮ ವರದಿಯೇ ಕಳೆದುಹೋಗಿದೆ ಎಂದು ಲೆಫ್ಟಿನೆಂಟ್ ಗವರ್ನರ್ ಕಚೇರಿ ಆಯೋಗಕ್ಕೆ ಉತ್ತರ ಬರೆದಿತ್ತು. ಸರ್ಕಾರದ ಸುಪರ್ದಿಯಲ್ಲಿ ಇದ್ದ ವರದಿ ಹೇಗೆ ಕಳೆದುಹೋಯಿತು ಎಂದು ವಿರೋಧ ಪಕ್ಷಗಳು ಅನುಮಾನ ವ್ಯಕ್ತಪಡಿಸಿದ್ದವು. ಆದರೆ ಆಯೋಗವು, 'ಭೌಗೋಳಿಕ ಲಕ್ಷಣಗಳ ಆಧಾರದಲ್ಲಿ ಕ್ಷೇತ್ರಗಳ ಸರಾಸರಿ ಜನಸಂಖ್ಯೆಯನ್ನು ಶೇ 20ರಷ್ಟು ಹೆಚ್ಚು ಅಥವಾ ಶೇ 20ರಷ್ಟು ಕಡಿಮೆ ಮಾಡಲು ಕ್ಷೇತ್ರ ಮರುವಿಂಗಡಣಾ ಕಾಯ್ದೆ ಅವಕಾಶ ಮಾಡಿಕೊಡುತ್ತದೆ. ಇದರ ಆಧಾರದಲ್ಲಿ ಈ ವರ್ಗೀಕರಣ ಮಾಡಿಕೊಳ್ಳಲಾಗಿದೆ' ಎಂದು ತನ್ನ ನಿರ್ಧಾರವನ್ನು ಅಂತಿಮ ವರದಿಯಲ್ಲಿ ಸಮರ್ಥಿಸಿಕೊಂಡಿತ್ತು.

ಇಷ್ಟೆಲ್ಲಾ ವಿರೋಧ ಮತ್ತು ಆಕ್ಷೇಪಗಳ ಹೊರತಾಗಿಯೂ ಆಯೋಗದ ಅಂತಿಮ ವರದಿಯು ಅಂಗೀಕಾರವಾಗಿದೆ. ಅದರ ಆಧಾರದಲ್ಲಿ ರಚಿಸಲಾದ 'ಜಮ್ಮು ಮತ್ತು ಕಾಶ್ಮೀರ ಮರುರಚನೆ (ತಿದ್ದುಪಡಿ) ಮಸೂದೆ-2023' ಸಂಸತ್ತಿನ ಅಂಗಳಕ್ಕೂ ಬಂದಿದೆ. ಲೋಕಸಭೆಯಲ್ಲಿ ಅಂಗೀಕಾರವೂ ಆಗಿದೆ. ಇವೆಲ್ಲವುಗಳ ಮಧ್ಯೆ 2024ರ ಸೆಪ್ಟೆಂಬರ್ 30ರ ಒಳಗೆ ಜಮ್ಮು ಮತ್ತು ಕಾಶ್ಮೀರಕ್ಕೆ ಚುನಾವಣೆ ನಡೆಸಬೇಕಿದೆ.

ಕಾಶ್ಮೀರ ವಿಭಾಗಕ್ಕೆ 2 ಪ್ಲಸ್, ಒಂದು ಮೈನಸ್

ಮೊದಲು	46
ನಂತರ	47

1 ಕಾಶ್ಮೀರ ವಿಭಾಗಕ್ಕೆ ಹೆಚ್ಚುವರಿಯಾಗಿ ದೊರೆತ ಕ್ಷೇತ್ರಗಳ ಸಂಖ್ಯೆ

ಕುಪ್ವಾರಾ
ಜಿಲ್ಲೆಯಲ್ಲಿ ಮೊದಲು ಐದು ಕ್ಷೇತ್ರಗಳಿದ್ದವು. ನಾಲ್ಕು ಕ್ಷೇತ್ರಗಳಲ್ಲಿ ಪಿಡಿಪಿ ಪ್ರಾಬಲ್ಯವಿದ್ದರೆ, ಕುಪ್ವಾರಾ ಕ್ಷೇತ್ರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಪ್ರಾಬಲ್ಯವಿದೆ. ಈಗ ಕುಪ್ವಾರಾ ಕ್ಷೇತ್ರವನ್ನು ಎರಡು ಕ್ಷೇತ್ರಗಳಾಗಿ ವಿಭಜಿಸಲಾಗಿದೆ. ಹೊಸದಾಗಿ ತ್ರೆಹಗಾಮ್ ಕ್ಷೇತ್ರವನ್ನು ರಚಿಸಲಾಗಿದೆ

ಕುಲ್ಗಾಮ್
ಕುಲ್ಗಾಮ್ ಜಿಲ್ಲೆಯಲ್ಲಿ ಈ ಮೊದಲು ನಾಲ್ಕು ವಿಧಾನಸಭಾ ಕ್ಷೇತ್ರಗಳಿದ್ದವು. ಬಿಜೆಪಿಯ ಕಟು ಟೀಕಾಕಾರರಾದ ಸಿಪಿಎಂನ ಮೊಹಮ್ಮದ್ ಯೂಸುಫ್ ತಾರಿಗಾಮಿ ಅವರದ್ದು ಕುಲ್ಗಾಮ್ ಕ್ಷೇತ್ರ. ಜಿಲ್ಲೆಯ ಮೂರೂ ಕ್ಷೇತ್ರಗಳನ್ನು ಸಂಪೂರ್ಣವಾಗಿ ಮರುವಿಂಗಡಣೆ ಮಾಡಲಾಗಿದೆ. ನಾಲ್ಕು ಕ್ಷೇತ್ರಗಳನ್ನು ರದ್ದು ಮಾಡಿ, ಹೊಸದಾಗಿ ಮೂರೇ ಕ್ಷೇತ್ರಗಳನ್ನು ರಚಿಸಲಾಗಿದೆ. ಇದರಿಂದ ಜಿಲ್ಲೆಯು ಒಂದು ಕ್ಷೇತ್ರವನ್ನು ಕಳೆದುಕೊಂಡಿದೆ

ಜಮ್ಮು: ಆರು ಜಿಲ್ಲೆಗಳಲ್ಲಿ ಆರು ಹೊಸ ಕ್ಷೇತ್ರ

ಮೊದಲು	37
ನಂತರ	43

6 ಜಮ್ಮು ವಿಭಾಗಕ್ಕೆ ಹೆಚ್ಚುವರಿಯಾಗಿ ದೊರೆತ ಕ್ಷೇತ್ರಗಳ ಸಂಖ್ಯೆ



ಅನಂತನಾಗ್
ಪಿಡಿಪಿ ಪ್ರಾಬಲ್ಯವಿರುವ ಈ ಜಿಲ್ಲೆಯಲ್ಲಿ ಮೊದಲು ಆರು ಕ್ಷೇತ್ರಗಳಿದ್ದವು. ಕೆಲವು ಕ್ಷೇತ್ರಗಳಲ್ಲಿ ಬಿಜೆಪಿಗೂ ಭದ್ರ ನೆಲೆ ಇದೆ. ಜಿಲ್ಲೆಯ ಅನಂತನಾಗ್ ವಿಧಾನಸಭಾ ಕ್ಷೇತ್ರವು ಪಿಡಿಪಿ ಮುಖ್ಯಸ್ಥರಾಗಿದ್ದ ಮುಫ್ತಿ ಮೊಹಮ್ಮದ್ ಸಯೀದ್ ಅವರ ಭದ್ರಕೋಟೆ. ಅವರ ನಿಧನದ ನಂತರ ಪಕ್ಷವನ್ನು ಮುನ್ನಡೆಸುತ್ತಿರುವ ಮೆಹಬೂಬಾ ಮುಫ್ತಿ ಅವರು ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದಾರೆ. ಈಗ ಅನಂತನಾಗ್ ಕ್ಷೇತ್ರವನ್ನು ವಿಭಜಿಸಿ, ಅನಂತನಾಗ್ ಮತ್ತು ಅನಂತನಾಗ್ ಪಶ್ಚಿಮ ಎಂಬ ಎರಡು ಹೊಸ ಕ್ಷೇತ್ರಗಳನ್ನು ಸೃಷ್ಟಿಸಲಾಗಿದೆ. ಬಿಜೆಪಿ ಪ್ರಾಬಲ್ಯವಿದ್ದ ಶಾಂಗೂಸ್ ಕ್ಷೇತ್ರದ ಕೆಲವು ಭಾಗವನ್ನು ಅನಂತನಾಗ್ ಪಶ್ಚಿಮ ಕ್ಷೇತ್ರಕ್ಕೆ ಸೇರಿಸಲಾಗಿದೆ

ಕಿಸ್ತವಾರ್
ಜಿಲ್ಲೆಯಲ್ಲಿ ಈ ಮೊದಲು ಎರಡು ಕ್ಷೇತ್ರಗಳಷ್ಟೇ ಇದ್ದವು. 2014ರ ಚುನಾವಣೆಯಲ್ಲಿ ಬಿಜೆಪಿ ಒಂದರಲ್ಲಿ ಗೆಲುವು ಸಾಧಿಸಿತ್ತು. 2014ರ ವಿಧಾನಸಭಾ ಚುನಾವಣೆಯಲ್ಲಿ ಜಿಲ್ಲೆಯ ಇಂದೇರ್‌ವಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಸಾಧಿಸಿದ್ದರು. ಅಲ್ಲಿ ಬಿಜೆಪಿ ಅಭ್ಯರ್ಥಿ ಕೆಲವೇ ಸಾವಿರ ಮತಗಳ ಅಂತರದಿಂದ ಸೋತಿದ್ದರು. ಈಗ ಇಂದೇರ್‌ವಲ್ ಕ್ಷೇತ್ರವನ್ನು ವಿಭಜಿಸಿ, ಪಾಡೆರ್ ಎಂಬ ಹೊಸ ಕ್ಷೇತ್ರವನ್ನು ಸೃಷ್ಟಿಸಲಾಗಿದೆ. ಬಿಜೆಪಿ ಪ್ರಾಬಲ್ಯದ ಕಿಸ್ತವಾರ್ ಕ್ಷೇತ್ರದ ಕೆಲವು ಪಂಚಾಯಿತಿಗಳನ್ನೂ ಈ ಕ್ಷೇತ್ರಕ್ಕೆ ಸೇರಿಸಲಾಗಿದೆ

ರಾಜೌರೀ
ಪಿಡಿಪಿ ಮತ್ತು ಬಿಜೆಪಿ ಸಮಾನ ಪ್ರಾಬಲ್ಯವಿರುವ ಜಿಲ್ಲೆಯಲ್ಲಿ ಒಟ್ಟು ನಾಲ್ಕು ಕ್ಷೇತ್ರಗಳಿದ್ದವು. 2014ರ ಚುನಾವಣೆಯಲ್ಲಿ ದಹ್ರಾಲ್ ಮತ್ತು ರಾಜೌರೀ ವಿಧಾನಸಭಾ ಕ್ಷೇತ್ರಗಳಲ್ಲಿ ಪಿಡಿಪಿ ಅಭ್ಯರ್ಥಿಗಳು ಜಯ ಸಾಧಿಸಿದ್ದರು. ನೌಶೇರಾ ಮತ್ತು ಕಾಲಾಕೋತೆ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಈಗ ಬಿಜೆಪಿ ಪ್ರಾಬಲ್ಯದ ನೌಶೇರಾ ಮತ್ತು ಕಾಲಾಕೋತೆ ಕ್ಷೇತ್ರಗಳನ್ನು ವಿಭಜಿಸಿ ಮೂರು ಕ್ಷೇತ್ರಗಳನ್ನಾಗಿಸಲಾಗಿದೆ. ಠಾಣಾ ಮಂಡಿ ಎಂಬ ಹೊಸ ಕ್ಷೇತ್ರವನ್ನು ಸೃಷ್ಟಿಸಲಾಗಿದೆ

ಡೋಡಾ
ಜಿಲ್ಲೆಯಲ್ಲಿ ಈ ಮೊದಲು ಡೋಡಾ ಮತ್ತು ಬಡೇರ್‌ವಾ ಎಂಬ ಎರಡು ಕ್ಷೇತ್ರಗಳು ಇದ್ದವು. ಎರಡೂ ಕ್ಷೇತ್ರಗಳು ಬಿಜೆಪಿ ಭದ್ರಕೋಟೆ. 2014ರ ಚುನಾವಣೆಯಲ್ಲಿ ಇಲ್ಲಿಂದ ಬಿಜೆಪಿ ಅಭ್ಯರ್ಥಿಗಳೇ ಆಯ್ಕೆಯಾಗಿದ್ದರು. ಈಗ ಈ ಎರಡು ಕ್ಷೇತ್ರಗಳನ್ನು ಮೂರು ಕ್ಷೇತ್ರಗಳಾಗಿ ವಿಂಗಡಿಸಲಾಗಿದೆ. ಹೊಸದಾಗಿ ಡೋಡಾ ಪಶ್ಚಿಮ ಎಂಬ ಕ್ಷೇತ್ರವನ್ನು ರಚಿಸಲಾಗಿದೆ

ಕಠುವಾ
ಜಿಲ್ಲೆಯಲ್ಲಿ ಈ ಮೊದಲು ಐದು ವಿಧಾನಸಭಾ ಕ್ಷೇತ್ರಗಳಿದ್ದವು. 2014ರ ವಿಧಾನಸಭಾ ಚುನಾವಣೆಯಲ್ಲಿ ಐದೂ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಕಠುವಾ ವಿಧಾನಸಭಾ ಕ್ಷೇತ್ರವನ್ನೇ ವಿಭಜಿಸಿ ಉತ್ತರ ಕಠುವಾ ಮತ್ತು ದಕ್ಷಿಣ ಕಠುವಾ ಎಂಬ ಎರಡು ಹೊಸ ಕ್ಷೇತ್ರಗಳನ್ನು ಸೃಷ್ಟಿಸಲಾಗಿದೆ. ಪರಿಣಾಮವಾಗಿ ಜಿಲ್ಲೆಯಲ್ಲಿನ ಕ್ಷೇತ್ರಗಳ ಸಂಖ್ಯೆ 6ಕ್ಕೆ ಏರಿಕೆಯಾಗಿದೆ

ಉಧಂಪುರ
ಈ ಮೊದಲು ಜಿಲ್ಲೆಯಲ್ಲಿ ಒಟ್ಟು ಮೂರು ಕ್ಷೇತ್ರಗಳಿದ್ದವು. ಮೂರೂ ಕ್ಷೇತ್ರಗಳು ಬಿಜೆಪಿಯ ಭದ್ರಕೋಟೆ. ಆದರೆ 2014ರ ಚುನಾವಣೆಯಲ್ಲಿ ಉಧಂಪುರ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿ ಜಯಗಳಿಸಿದ್ದರು. ಈಗ ಈ ಕ್ಷೇತ್ರವನ್ನು ಪೂರ್ವ ಉಧಂಪುರ ಮತ್ತು ಪಶ್ಚಿಮ ಉಧಂಪುರ ಎಂದು ಎರಡು ಪ್ರತ್ಯೇಕ ಕ್ಷೇತ್ರಗಳಾಗಿ ವಿಂಗಡಿಸಲಾಗಿದೆ. ಪರಿಣಾಮವಾಗಿ ಜಿಲ್ಲೆಯಲ್ಲಿನ ಕ್ಷೇತ್ರಗಳ ಸಂಖ್ಯೆ 4ಕ್ಕೆ ಏರಿಕೆಯಾಗಿದೆ

ಸಾಂಬಾ
ಜಿಲ್ಲೆಯಲ್ಲಿ ಮೊದಲು ಎರಡು ಕ್ಷೇತ್ರಗಳಿದ್ದವು. 2014ರ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿತ್ತು. ಈಗ ಎರಡೂ ಕ್ಷೇತ್ರಗಳಿಂದ ಕೆಲವು ಪಂಚಾಯಿತಿಗಳನ್ನು ಬೇರ್ಪಡಿಸಿ ರಾಮಗಢ ಎಂಬ ಹೊಸ ಕ್ಷೇತ್ರವನ್ನು ಸೃಷ್ಟಿಸಲಾಗಿದೆ

ನಾಮನಿರ್ದೇಶಿತರ ಸಂಖ್ಯೆ ಐದಕ್ಕೆ

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಗೆ 83(ಈಗ 90) ಸ್ಥಾನಗಳನ್ನು ಚುನಾವಣೆಯ ಮೂಲಕವೇ ತುಂಬಬೇಕು ಎಂದು ಜಮ್ಮು ಮತ್ತು ಕಾಶ್ಮೀರ ಮರುರಚನೆ ಕಾಯ್ದೆಯ 14ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಇದಲ್ಲದೆ, ಇಬ್ಬರು ಮಹಿಳೆಯರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡುವ ಅವಕಾಶವನ್ನೂ ಈ ಕಾಯ್ದೆಯಲ್ಲಿ ಮಾಡಿಕೊಳ್ಳಲಾಗಿತ್ತು.

ಈ ಕಾಯ್ದೆಯ 15ನೇ ಸೆಕ್ಷನ್ ಅಂತಹ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್‌ಗೆ ನೀಡಿದೆ. ಅದೂ, 'ಚುನಾಯಿತ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ತಕ್ಕಮಟ್ಟದಲ್ಲಿ ಇಲ್ಲ ಎಂದು ಲೆಫ್ಟಿನೆಂಟ್ ಗವರ್ನರ್‌ಗೆ ಭಾಸವಾದರೆ, ಅವರು ಇಬ್ಬರು ಮಹಿಳಾ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಬಹುದು' ಎಂದು 15ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿತ್ತು. ಆದರೆ, ಮಹಿಳಾ ಪ್ರಾತಿನಿಧ್ಯ ಎಷ್ಟಿರಬೇಕು? ಮಹಿಳೆಯರ ಸಂಖ್ಯೆ ಎಷ್ಟು ಇರದಿದ್ದರೆ ಅದು ಕಡಿಮೆ ಎನಿಸಿಕೊಳ್ಳುತ್ತದೆ ಎಂಬುದನ್ನು ಕಾಯ್ದೆಯಲ್ಲಿ ವಿವರಿಸಿಲ್ಲ. (ಇದರ ಮಧ್ಯೆ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರ ಹಾಗೂ ಪುದುಚೇರಿ ವಿಧಾಸಭೆಯ ಒಟ್ಟು ಸ್ಥಾನಗಳಲ್ಲಿ ಶೇ 33ರಷ್ಟನ್ನು ಮಹಿಳೆಯರಿಗೆ ಮೀಸಲಿರಿಸುವ ಮಸೂದೆಯನ್ನೂ ಈಗ ನಡೆಯುತ್ತಿರುವ ಅಧಿವೇಶನದಲ್ಲೇ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಿದೆ. ಎರಡೂ ಸದನಗಳಲ್ಲಿ ಈ ಮಸೂದೆ ಅಂಗೀಕಾರವಾಗಿದೆ).

ಈಗ ಈ ಕಾಯ್ದೆಗೆ ತಿದ್ದುಪಡಿ ತರಲು ಮಂಡಿಸಿರುವ ಮಸೂದೆಯಲ್ಲಿ ನಾಮ ನಿರ್ದೇಶಿತರ ಸಂಖ್ಯೆಯನ್ನು ಐದಕ್ಕೆ ಏರಿಸಲು ಅವಕಾಶ ಮಾಡಿಕೊಡಲಾಗಿದೆ. ಮಸೂದೆಯಲ್ಲಿ 15ಎ ಎಂಬ ಹೊಸ ಸೆಕ್ಷನ್ ಅನ್ನು ಸೇರಿಸಲಾಗಿದೆ. ಕಾಶ್ಮೀರದಿಂದ ವಲಸೆ ಹೋದವರ ಪ್ರತಿನಿಧಿಯಾಗಿ ಇಬ್ಬರು ಸದಸ್ಯರನ್ನು ವಿಧಾನಸಭೆಗೆ ಲೆಫ್ಟಿನೆಂಟ್ ಗವರ್ನರ್ ಅವರು ನಾಮನಿರ್ದೇಶನ ಮಾಡಲು ಈ ಸೆಕ್ಷನ್ ಅವಕಾಶ ಮಾಡಿಕೊಡುತ್ತದೆ. ಹೊಸದಾಗಿ ಸೇರಿಸಲಾಗಿರುವ 15ಬಿ ಸೆಕ್ಷನ್, ಪಾಕ್ ಆಕ್ರಮಿತ ಕಾಶ್ಮೀರದಿಂದ ವಲಸೆ ಬಂದವರ ಸಮುದಾಯದಿಂದ ಒಬ್ಬರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡುವ ಅಧಿಕಾರವನ್ನು ಲೆಫ್ಟಿನೆಂಟ್ ಗವರ್ನರ್‌ಗೆ ನೀಡುತ್ತದೆ.

ಈ ಮೂರು ಸೆಕ್ಷನ್‌ಗಳು ನೀಡುವ ಅಧಿಕಾರದ ಮೂಲಕ ಲೆಫ್ಟಿನೆಂಟ್ ಗವರ್ನರ್ ಅವರು ಒಟ್ಟು ಐವರು ಸದಸ್ಯರನ್ನು ವಿಧಾನಸಭೆಗೆ ನಾಮನಿರ್ದೇಶನ ಮಾಡಬಹುದಾಗಿದೆ. ಚುನಾಯಿತ ಪ್ರತಿನಿಧಿಗಳಿಗೆ ಇರುವ ಮತದಾನದ ಹಕ್ಕು ಈ ಐವರು ಸದಸ್ಯರಿಗೂ ಇದೆ. ಕೇಂದ್ರ ಸರ್ಕಾರದ ಪ್ರತಿನಿಧಿಯಾಗಿರುವ ಲೆಫ್ಟಿನೆಂಟ್ ಗವರ್ನರ್ ಅವರು, ಕೇಂದ್ರದಲ್ಲಿರುವ ಸರ್ಕಾರದ ಅನುಕೂಲಕ್ಕೆ ತಕ್ಕಂತೆ ನಾಮನಿರ್ದೇಶನ ಮಾಡಬಹುದು. ಇವರಿಗೆ ಮತದಾನದ ಹಕ್ಕೂ ಇರುವ ಕಾರಣದಿಂದ, ಕರಡು ಮಸೂದೆಯಲ್ಲಿದ್ದ ಈ ಅಂಶಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಆದರೆ ಆ ಆಕ್ಷೇಪವನ್ನು ಕಡೆಗಣಿಸಿ, ಮಸೂದೆಯನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

ಆಧಾರ: ಜಮ್ಮು-ಕಾಶ್ಮೀರ ಮರುರಚನೆ ಕಾಯ್ದೆ-2019, ಜಮ್ಮು-ಕಾಶ್ಮೀರ ಮರುರಚನೆ (ತಿದ್ದುಪಡಿ) ಮಸೂದೆ-2023, ಜಮ್ಮು ಮತ್ತು ಕಾಶ್ಮೀರ ಕ್ಷೇತ್ರ ಮರುವಿಂಗಡಣೆ ಆದೇಶ-1995, ಜಮ್ಮು ಮತ್ತು ಕಾಶ್ಮೀರ ಕ್ಷೇತ್ರ ಮರುವಿಂಗಡಣೆ ಅಂತಿಮ ವರದಿ-2022, ಪಿಟಿಐ

ನಾವು ನೋಡಿದ ಸಿನಿಮಾ

ಮಾಯಾನಗರಿ

- ನಿರ್ದೇಶನ: ಶಂಕರ್ ಆರಾಧ್ಯ
- ನಿರ್ಮಾಣ: ಶ್ವೇತಾ ಶಂಕರ್
- ತಾರಾಗಣ: ಅನೀಶ್ ತೇಜೇಶ್ವರ್, ಶ್ರಾವ್ಯಾ ರಾವ್, ತೇಜು, ದ್ವಾರಕೀಶ್ ಮತ್ತಿತರರು

ಮಾಯಾನಗರಿ ಚಿತ್ರದ ದೃಶ್ಯ

ಕಥೆಯೊಳಗೊಂದು ಕಥೆಯ ಹುಡುಕುತ್ತ...

ಚಿತ್ರದ ನಾಯಕ ಶಂಕರ್ ಸಿನಿಮಾ ನಿರ್ದೇಶಕನಾಗಬೇಕೆಂಬ ಕನಸಿನೊಂದಿಗೆ ಬೆಂಗಳೂರಿಗೆ ಬಂದವನು. ಅವಕಾಶಕ್ಕಾಗಿ ಅಲೆದು, ಹತ್ತಾರು ನಿರ್ಮಾಪಕರಿಗೆ ಕಥೆ ಹೇಳಿ ಸುಸ್ತಾಗುತ್ತಾನೆ. ಆತನ ಯಾವ ಕನಸುಗಳೂ ಈಡೇರದೇ ಸಾಯುವ ನಿರ್ಧಾರಕ್ಕೆ ಬರುತ್ತಾನೆ. ಆತ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸುವ ದೃಶ್ಯದಿಂದಲೇ 'ಮಾಯಾನಗರಿ' ಸಿನಿಮಾ ಪ್ರಾರಂಭವಾಗುತ್ತದೆ. ಸಿನಿಮಾರಂಗದಲ್ಲಿರುವವರಿಗೆ ಕಥೆ ಬಹುಬೇಗ 'ಕನೆಕ್ಟ್' ಆಗುತ್ತದೆ.

ಶಂಕರ್ ಈ ಚಿತ್ರದಲ್ಲಿ ನಟ ಶಂಕರ್‌ನಾಗ್ ಅಭಿಮಾನಿಯಾಗಿರುವುದರಿಂದ ಅವರನ್ನು ನೆನಪಿಸುವ ಕೆಲವು ದೃಶ್ಯಗಳು ಬರುತ್ತವೆ. ಇಡೀ ಸಿನಿಮಾದ ಕಥೆ ನಡೆಯುವ ಮುಖ್ಯ ಜಾಗಕ್ಕೂ ನಿರ್ದೇಶಕರು ಶಂಕರ್‌ನಾಗ್ ಹುಟ್ಟೂರಿನ ಹೆಸರನ್ನೇ ಇಟ್ಟು ಅವರ ಮೇಲಿನ ಪ್ರೀತಿಯನ್ನು ಇನ್ನಷ್ಟು ಮೆರೆದಿದ್ದಾರೆ. ಶಂಕರ್ ಪಾತ್ರದಲ್ಲಿ ಅನೀಶ್ ತೇಜೇಶ್ವರ್ ಅಚ್ಚುಕಟ್ಟಾಗಿ ನಟಿಸಿದ್ದಾರೆ. ನಟಿ ತೇಜು ಮೊದಲಾರ್ಧದಲ್ಲಿ ಸಿಗುವ ಸ್ವಲ್ಪ ಅವಕಾಶವನ್ನು ಚೆನ್ನಾಗಿ ಬಳಸಿಕೊಂಡಿದ್ದಾರೆ.

ಇಷ್ಟಾಗಿಯೂ ಸಿನಿಮಾ ಮಾಮೂಲಿ ಕಥೆಯಲ್ಲ. ನಿರ್ದೇಶಕರು ಕಥೆಗೆ ಅಲ್ಲಲ್ಲಿ ತಿರುವು ನೀಡುತ್ತಾ ಹೋಗುತ್ತಾರೆ. ನಟ ದ್ವಾರಕೀಶ್ ನಿರ್ಮಾಪಕನ ಪಾತ್ರದಲ್ಲಿ ತೆರೆಯ ಮೇಲೆ ಬಂದಿದ್ದು ಒಂದು ರೀತಿ ಅಚ್ಚರಿ. ಅವರ ಆಗಮನದ ನಂತರ ಚಿತ್ರ ಬೇರೆಯದೇ ರೀತಿ ತಿರುವು ಪಡೆದುಕೊಳ್ಳುತ್ತದೆ. ಇದೊಂದು ಮಾಮೂಲಿ ಹಾಡು, ಫೈಟು, ಲವ್ ಪರಿಕಲ್ಪನೆಯ ಚಿತ್ರ ಎನ್ನುವುದೇ ಸಂಪೂರ್ಣವಾಗಿ ಬದಲಾಗುತ್ತದೆ. ನಾಯಕ ಶಂಕರ್ ತನ್ನ ಚಿತ್ರಕ್ಕಾಗಿ ಒಂದು ಕಥೆಯನ್ನು ಹುಡುಕುವುದರೊಂದಿಗೆ ಚಿತ್ರ ಹಾರರ್ ಜಾನರ್‌ಗೆ ಬದಲಾಗುತ್ತದೆ. ಅದಕ್ಕೆ ಅಗತ್ಯ ಭಯವನ್ನು ಹುಟ್ಟಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಭಯದ ನಡುವೆಯೇ ಬರುವ ನಟ ಚಿಕ್ಕಣ್ಣ ಸಹಜವಾಗಿ ನಗಿಸುತ್ತಾರೆ.

ಇಡೀ ಚಿತ್ರವನ್ನು ಹಾರರ್ ಜಾನರ್‌ನಲ್ಲಿಯೇ ಕಟ್ಟಿಕೊಡುವ ಅವಕಾಶ ನಿರ್ದೇಶಕರಿಗಿತ್ತು. ಮೊದಲಾರ್ಧದಲ್ಲಿ ಕಥೆಗೆ ಅನವಶ್ಯ ಪ್ರೀತಿ, ಹೊಡೆದಾಟದ ದೃಶ್ಯಗಳನ್ನು ಸೇರಿಸಿ ಕಮರ್ಷಿಯಲ್ ಚಿತ್ರವನ್ನಾಗಿಸುವ ನಿರ್ದೇಶಕರ ಯತ್ನ ಫಲಿಸಿಲ್ಲ. ದ್ವಿತೀಯಾರ್ಧದಲ್ಲಿ ತೆರೆದುಕೊಳ್ಳುವ ಶ್ರಾವ್ಯರಾವ್ ಅಭಿನಯದ ಕಥೆಗೂ ಕಮರ್ಷಿಯಲ್ ಲೇಪ ಅನವಶ್ಯವಾಗಿತ್ತು. ಹಾರರ್ ಸನ್ನಿವೇಶಗಳಲ್ಲಿ ಹಿನ್ನೆಲೆ ಸಂಗೀತ ಭಯ ಹುಟ್ಟಿಸುತ್ತದೆ. ಆದರೆ ಹಾಡುಗಳು ಕಾಡುವುದಿಲ್ಲ. ಹಲವು ವರ್ಷಗಳಷ್ಟು ಹಳೆಯ ಸಿನಿಮಾ ಇದಾಗಿರುವುದರಿಂದ ಛಾಯಾಚಿತ್ರಗ್ರಹಣ ವರ್ಣಮಯವೆನಿಸುವುದಿಲ್ಲ.

-ವಿನಾಯಕ ಕೆ.ಎಸ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5531 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾರ್ಯಸಿದ್ಧಿಯಾಗಲು ಬೇಕಿರುವ ಹಣ (3)
3.ಮುಸಿಮುಸಿ ನಕ್ಕಿದ್ದು ನೈಜ ನಗುವಲ್ಲ! (4)
5.ರಾಗಕ್ಕೆ ಮನಸೋತಾಗಲೇ ಮೂಡಿತು ಪ್ರೀತಿ (4)
7.ಹೂಗಳನ್ನು ಜೋಡಿಸಿಡುವ ಪಾತ್ರೆ (3)
8.ಈ ಪರಿ ಕ್ರಮವಾಗಿ ಸುತ್ತುವುದು (5)
10.ಹರನಿಂದ ಪಡೆದಿರುವ ಆಶೀರ್ವಾದ (3)
11.ಓಲೆ ಧರಿಸಿ ನೀಡುವ ಆಹ್ವಾನ (4)
14.ದ್ವಿಜನಾಗಿಯೂ ಎಲ್ಲಾ ರಾಜ್ಯಗಳನ್ನು ಜಯಿಸುವುದು! (4)
15.ಅತ್ತ ಸುಳಿದಾಗ ಹರಡಿದ ಸುಗಂಧದ್ರವ್ಯ (3)

ಮೇಲಿಂದ ಕೆಳಕ್ಕೆ
2.ಸೀತೆಯನ್ನು ಹೊತ್ತೊಯ್ದವ ತಿರುಗಿದ್ದಾನಲ್ಲಾ? (3)
3.ಹುತ್ತರಿ ಹಬ್ಬದಂದು ಸರ್ಪದ ಮನೆ ಕಾಣಿಸೀತೇ? (2)
4.ಮಾನಿನಿಯ ಮೇಲೇ ಈ ಅನುಮಾನ! (3)
6.ಗಡಿ ದಾಟಿದಾಗ ತೋರಿಸಿದ್ದು ದೊಡ್ಡ ಹಾರೆ (3)
7.ಹೋಳಿಗೆಯಲ್ಲಡಗಿರುವ ಸತ್ವ! (3)
8.ಕಿತಾಪತಿ ಹಾರಿಸಿರುವ ಬಾವುಟ (3)
9.ಪುಸ್ತಕದ ಬಳಿಯಿರಿಸಿದ ತಲೆ (3)
10.ಕುಂಕುಮದೊಡನೆ ಇರಿಸಿರುವ ಅರಿಷಿಣ ದ್ರವ್ಯ (3)
12.ಅಕ್ಕ ತೋರಿದ ಆದರವಿಲ್ಲಿ ಉಲ್ಟಾ ಕಾಣಿಸಿತೇ? (3)
13.ಉಪಾಯದಿಂದ ಹಾಕಿರುವ ಬುನಾದಿ (2)



5530ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಾರ್ಥಿವ 3.ಕಲರವ
5.ಜರ್ಜರಿತ 7.ಸಮಿತಿ
8.ನಿರಪರಾಧಿ
10.ಆಕಾಂಕ್ಷೆ
11.ಸಭಾಗೃಹ
15.ಮಹಾಪ್ರಾಣ
16.ಕಸುವು

ಮೇಲಿಂದ ಕೆಳಕ್ಕೆ:
1.ಪಾರಜ 2.ವಲ್ಲರಿ
3.ಕಫ 4.ವದಂತಿ
6.ತವರ 7.ಸಮಾಧಿ
8.ನಿರೀಕ್ಷೆ 9.ರಾಕ್ಷಸ
10.ಆಶ್ರಮ 12.ಭಾವುಕ
13.ಹಗೇವು 14.ಜಾಣ

ಸುಡೊಕು 5917

				6		1		
9	2							8
	8		7			2		6
6		1		5		7		9
			8		6			
8				7		5		2
3		9		1				
			6		7	9	3	4
7		8		2			1	

5916 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಡಿಸೆಂಬರ್ 16, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಚತುರ್ಥಿ ಗಂ.20-01 **ನಕ್ಷತ್ರ:** ಶ್ರವಣ ಗಂ.28-37 **ಯೋಗ:** ಧ್ರುವ ಗಂ 07-03 ನಂತರ ವ್ಯಾಘಾತ ಗಂ.27-47 **ಕರಣ:** ವಣಿಜ ಗಂ.09-16, ವೃಶ್ಚಿಕ ಮಾಸದ 30 ನೇ ದಿನ,
ಮಳೆನಕ್ಷತ್ರ: ಮೂಲಾ 1, **ರಾಹುಕಾಲ:** ಬೆಳಿಗ್ಗೆ 09-00 – 10-30
ಸೂರ್ಯೋದಯ: 06-50 **ಸೂರ್ಯಾಸ್ತ:** 06-03
ಮುಸ್ಲಿಂ ದಿನಾಂಕ: 02 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 7, 1

ಮೇಷ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಹಿರಿಯರ ಹೇಳಿಕೆಯಂತೆ ಅಗತ್ಯಗಳನ್ನು ಪೂರೈಸುವ ಕಡೆಗೆ ಹೆಚ್ಚಿನ ಗಮನ ಹರಿಸಿ. ಆಟಿಕೆಗಳ ಮಾರಾಟದವರಿಗೆ ಉತ್ತಮ ಮಾರಾಟ ಹಾಗೂ ಲಾಭವಿರುವುದು.

ವೃಷಭ: ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಂಗಾತಿಯ ಸಂಪೂರ್ಣ ಬೆಂಬಲ ಸಿಗಲಿದೆ. ಇಂಧನ ವ್ಯಾಪಾರಿಗಳಿಗೆ ಅತ್ಯಧಿಕ ಲಾಭ ಪ್ರಾಪ್ತಿಯಾಗುತ್ತದೆ. ಹೊಸ ವಾಹನ ಖರೀದಿ ತುಂಬಾ ಅಗತ್ಯವೆನಿಸುತ್ತದೆ.

ಮಿಥುನ: ಪೊಲೀಸ್ ಅಧಿಕಾರಿಗಳಿಗೆ ಸರಿ ತಪ್ಪು ತೀರ್ಮಾನಿಸುವುದು ಕಷ್ಟವಾಗಲಿದೆ ಹಾಗೂ ವೃತ್ತಿಯಲ್ಲಿ ಒತ್ತಡ ಹೆಚ್ಚುವುದು. ಸಾಂಸಾರಿಕ ಒತ್ತಡದಿಂದ ವೃತ್ತಿಪರವಾದ ಜವಾಬ್ದಾರಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ.

ಕರ್ಕಾಟಕ: ದೈವಾನುಗ್ರಹ ನಿಮಗೊದಗಿರುವುದರಿಂದ ನಿಮ್ಮ ಕೆಲಸ ಕಾರ್ಯಗಳಿಗಿದ್ದ ಅಡೆತಡೆಗಳು ದೂರಾಗುವುದು. ಸರ್ಕಾರಿ ಕೆಲಸ ಕಾರ್ಯಗಳು ಬಹಳ ಸುಲಭವಾಗಿ ಕೈಗೂಡುವುದು. ಸ್ವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಿರಿ.

ಸಿಂಹ: ಸಂಪೂರ್ಣ ಮನಸ್ಸಿಟ್ಟು ಕೆಲಸ ಕಾರ್ಯಗಳನ್ನು ಮಾಡಿದಲ್ಲಿ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ಗಳಿಸುವಿರಿ, ವಿದೇಶಿ ವ್ಯವಹಾರಗಳು ಲಭಿಸಬಹುದು. ಕುಟುಂಬದ ಆರ್ಥಿಕ ಆದಾಯವು ಗಣನೀಯವಾಗಿ ಸುಧಾರಿಸುವುದು.

ಕನ್ಯಾ: ಈ ದಿನ ನಿಮ್ಮ ವ್ಯವಹಾರದಲ್ಲಿ ವಿದೇಶಿ ಸಂಪರ್ಕಗಳು ಅಥವಾ ದೊಡ್ಡ ಮಟ್ಟದ ದೇಶಿಯ ವ್ಯವಹಾರಗಳ ಸಂಪರ್ಕಗಳು ಹೆಚ್ಚಲಿವೆ. ಸಂಸ್ಥೆಯ ಆರ್ಥಿಕ ಆದಾಯವನ್ನು ಹೆಚ್ಚಿಸಲು ನಿಮ್ಮ ಶ್ರಮ ಅಗತ್ಯವಾಗಲಿದೆ.

ತುಲಾ: ಸೂರ್ಯನಾರಾಯಣನ ಸ್ಮರಣೆ ಮಾಡಿದಲ್ಲಿ ಆರೋಗ್ಯ ವೃದ್ಧಿಯಾಗಿ, ಮೈ ಕೈ ನೋವು ಶಮನಗೊಳ್ಳುತ್ತದೆ. ಅನುಭವ ಹೊಂದಿದ ಕೆಲಸಗಾರರ ಅಸಹಕಾರದಿಂದ ನಷ್ಟವನ್ನು ನೋಡಬೇಕಾಗಬಹುದು.

ವೃಶ್ಚಿಕ: ಇಂದಿನ ವ್ಯವಹಾರ ನೀವು ಊಹಿಸಿದ ವೆಚ್ಚಕ್ಕಿಂತ ಕಡಿಮೆ ಖರ್ಚಿನಲ್ಲಿ ಸಂಪೂರ್ಣವಾಗಿ ಸಂತೋಷವಾಗಲಿದೆ. ಸ್ನೇಹಿತರೊಡನೆ ಪ್ರವಾಸವನ್ನು ಹಮ್ಮಿಕೊಳ್ಳುವ ಮನಸ್ಸಾಗುವುದು.

ಧನು: ರಜೆಯ ದಿನವಾದರೂ ಅನಿವಾರ್ಯ ಕಾರಣದಿಂದಾಗಿ ಕಾರ್ಯಪ್ರವೃತ್ತರಾಗಬೇಕಾಗುವುದು. ಸಹೋದರರ ಸಲಹೆಯನ್ನು ಪಡೆದು ನಿಮ್ಮ ಹಳೆಯ ಯೋಜನೆಗಳಿಗೆ ಮರು ಜೀವ ಕೊಡಲು ನಿಶ್ಚಯಿಸಬಹುದು.

ಮಕರ: ಪ್ರೀತಿ ಪಾತ್ರರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಈ ದಿನ ಸೂಕ್ತ ಸಮಯವಾಗಿದೆ. ಮನಶ್ಶಾಸ್ತ್ರಜ್ಞರಿಗೆ ವೃತ್ತಿಯಲ್ಲಿ ಹಿನ್ನಡೆ ಉಂಟಾಗಬಹುದು. ನಾನಾ ಬಗೆಯ ಚಿಂತನೆಗಳು ನಿಮ್ಮನ್ನು ದಾರಿ ತಪ್ಪಿಸಲಿವೆ.

ಕುಂಭ: ಸಂಸಾರದಲ್ಲಿ ಹೆಚ್ಚಿನ ಸಾಮರಸ್ಯವಿದ್ದು ಮನಸ್ಸಿಗೆ ಶಾಂತಿ ನೆಮ್ಮದಿಗಳು ಉಂಟಾಗಲಿದೆ. ಕುಟುಂಬದಲ್ಲಿ ಸಂತಸದ ವಾತಾವರಣವಿರುತ್ತದೆ. ಉದ್ಯೋಗದಲ್ಲಿ ನಿಮ್ಮ ಅಸ್ತಿತ್ವ ಹಾಗು ಸ್ಥಾನಮಾನಗಳು ಭದ್ರವಾಗುವುದು.

ಮೀನ: ನೀವು ಅಪೇಕ್ಷಿಸುತ್ತಿರುವ ವಸ್ತು ನಿಮ್ಮ ಕೈ ಸೇರುವುದು. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಉತ್ತಮ ಅವಕಾಶವನ್ನು ಪಡೆಯುವಿರಿ. ಹಿರಿಯರ ಮತ್ತು ಮಕ್ಕಳ ಆರೋಗ್ಯದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

EDUCATION CORNER
ಕ್ಲಾಸಿಫೈಡ್ಸ್

PROPERTY CORNER
ಕ್ಲಾಸಿಫೈಡ್ಸ್

For more information call:080-28454466
Email: contactus@ujjvalworldschool.org | www.ujjvalworldschool.org
Ujjval World School, Near Kadugodi Bus Stand, Whitefield Post, Bangalore-560066
Affiliated to CBSE, New Delhi, Affiliation Number 831190

ಸೈಟುಗಳು ಮಾರಾಟಕ್ಕಿವೆ
ನೆಲಮಂಗಲ ಹತ್ತಿರ ನಾಗೇನಹಳ್ಳಿ 20x30
ರೂ.4 ಲಕ್ಷದಿಂದ ಪ್ರಾರಂಭ
ಹೊಸ APMC YARD ಹತ್ತಿರ ಮಾಕಳಿ DC CONVERTION ಸೈಟ್‌ಗಳು
ಚಿಕ್ಕಬಾಣಾವರ ಹತ್ತಿರ ತೊರೆನಾಗಸಂದ್ರ
ಮಾದನಾಯಕನಹಳ್ಳಿ
NH-4 ಇಂದ 1.5 ಕಿ.ಮಿ.
ನಗರ ಸಭೆ ಲಿಮಿಟ್ಸ್
ಬ್ಯಾಂಕ್ ಲೋನ್ ದೊರೆಯುತ್ತದೆ
ಸಂಪರ್ಕಿಸಿ: 7406994547

REAL ESTATE SELLING

Sites

Banashankari

COLDWELL BANKER VALUE ADD REALTY
#1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

BANASHANKARI 6TH STAGE, 4th BLOCK BDA SITE FOR SALE 40x60, NEAR KANAKAPURA ROAD METRO STATION Call:9606226222 9632173601

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

Anekal

PLOT FOR SALE 60X40, GATED COMMUNITY, ANEKAL, RS. 56 LAKHS, CONTACT: 9739024512

Arkavathi Layout

ARKAVATHI LAYOUT 20x30 East, 20x30 West 2nd block, 40x60 East 7th block. USR: 7019770736/ 8951614989.

Abbigere

"CANARA-BANK LAYOUT Kodigehalli 71x40 West BBMP A-katha BDA approved ₹3.70 Crore Genuine buyers only. "Sri.Ganesh Estates"- 9845286505"

Bannerghatta Road

SALE INDUSTRIAL Converted Vacant Land Suitable for Commercial & Residential 5220sft/ 7240sft/ 19700sft. Just 600mtrs from Hulimavu Metro Station. VernaDevelopers.com, M.G Road. 9353128035/ 9916310226

Gnanabharathi

20X30 BDA SITE SALE GNANABHARATHI LAYOUT 1st Block, VALAGEREHALLI, near Sirke Appartment,Rs.55 Lakhs. 9742681666

Hosur Road

1350 SQFT North Facing Site at Begur. Fully Compounded with Security Gate. A Khatha. 1.5KM from Hosur Road Metro. Rs. 5400/- Psft. 9008930130

Intl Airport Road

30x40 Converted Plots @ 1,70,000/-
142/- per sq.ft, 90 minutes Journey from Yelahanka
Ready for Registration
9343510635

Jayanagar

BDA Site SALE 2400sq.ft 2 minutes drive from Vajrahalli metro, 10 minutes to Jayanagar Complex. Vajramuni-Nagar. Contact: Krishnappa 6366482171. Ravikumar: 7760417584.

JAYANAGAR 2ND Block SITE SALE 62×53 W/S Corner and Byrasandra 40×45 North. Contact: 9448684258

J P Nagar

AVAILABLE 20X30 30X40 40X60 BDA SITES FOR SALE ANJANAPURA, JP NAGAR 9th BSK 6th STAGE: 9483494764

Kaggadasapura

1200 SQFT to 4000 sqft Sites available for sale in Kaggadaspura (Abbaiah Reddy Layout) 9611153404

Kanakapura Road

SITE SALE 30×40 Balaji Layout, 35×45 Bikashipura, 20×30 Duplex J.P. Nagar 8th Phase. Contact: 9448684258

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotioble: 9538680364/ 9986146147

JAYANAGAR HOUSING Society BDA Site Sale,30x40,West 10.950/- Negotioble Near 80" Road: 9538680364 / 9740150364

KAGGALIPURA SITE Sale 60x90, East Face BMRDA, Approved Gated Community, 2950/-Psft Negotioble: 8884707773, 9513004587

K R Puram

MEDAHALLI SITE_FOR Sale 50x32 North West Corner Near Royal Residency Hotel Medahalli (K.R.Puram) Call: 97311-11120

Kempegowda Layout

FOR SALE Nada Prabhu Kempegowda layout 8th block. BDA. NOC. size. 163/100. feet Road side. 163. feet. face west. Conversion land. Legal document. Rate Rs. 4500. Ph no. 9686469799

Magadi Road

SITE for Sale 30x40, Magadi MainRoad, Kempegowdanagar, Byadarahalli, Price:6000 sqft, Clear Title, owner:7760960284

Multiple Locations

SADHASHIVNAGAR RMV, Judicial Layout, Manyata, Nandhini layout, North county Dodaballapura.50x80, 60x90, 120x200, 44000sft. 2% commission. 9380586105.

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

Rajarajeshwari Nagar

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

Nelamangala



READY TO BUILD PLOTS FOR EVERY DREAM HOME
BMRDA Approved Sites available @ NEELAMANGALA
CALL +91 8722227780 +91 8660981179

Vishweshwariah Layout

SITE FOR sale 30×40 West facing BDA Sir M Vishweshvaraiah 2nd block 9448617696 LOKESH

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

"28X40 W/S Corner Residential BDA Site sale, near 100 Feet Road 1st Block Vishveshwaraiah Layout- 9845143579"

DIRECT OWNER 40x60 E/F BDA #2194 Site Sale VISHVESWARAIAH LAYOUT 1st Block, 60ft-Road, Rs.10800/-. Contact:9886634578

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

"BDA COMMERCIAL Site For-sale 20x60 North Face, Vishveshwaraiah 4th-Block, 80 Feet Road, opp.BDA Complex. 8618934679"

BDA SITE SALE 20x30 WF, 30x40 EF, SRMV 30x50 EF, Annapoorneshwari Nagar: 7760623953

Flat

Chandra Layout

CHANDRA LAYOUT Near Incometax Sona Apartment 2nd Floor 2 Bedroom 600Sqft 45 Lacks: 9448045601/ 9535811626

Kumaraswamy Layout

3-BHK E/F A-Khata Flat 2250Sqft FullyTeak Wood Italian Marbles 2-Carpark 1.6Cr Kumaraswamy Layout 15F Bustand 9611144096

Kanakapura Road

3-BHK FLAT Sale 1575 Sq.Ft N/F Full Interiors 70 Lakhs Off Kanakpura Road, Konankunte Near Junior Delhi Public School: 9343722162

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Outer Ring Road

FLAT FOR SALE, 3 BHK at Tin Factory /ORR, Gated Community, Pool, Gym, Near Metro. 1.17 Cr. 9008588333, 080-40930707 MULTICITY CONSULTANTS. Brokers Welcome.

Agricultural Land Converted

Nelamangala

SALE: 73ACRES @ Nelamangala. 45000 and 22000sqft @ Nagadevanalli, East, 80feet Ring Road adjacent. Suitable for Schools, Apartments. Call: 8310333808

Commerical

Mysore Road

MYSORE ROAD Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

REAL ESTATE BUYING

Sites

Banashankari

BDASITES WANTED Anjanapura Arkhavathy Banashankari 6th Stage, Vishweswaraiah, Kempegowda Any BDA LayoutContact: 9845062822 8660751654

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

Joint Development

Joint Venture

"URGENTLY REQUIRED Property any-dimensions in & around Bangalore for Builders (Joint Venture or Individual). genuine Parties-Call: 9019533999/ 9731379933"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

WE FIX LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

RENTAL PROPERTIES

Accommodation Available

Commercial

WAREHOUSE FOR Rent at KIADB Anthranshalli Industrial. Area, 2nd phase Tumkur Available 2Acre's open space with Compound party can build their own additional Temporary Shed in open Space. Contact 9820070829, 9036468995.

Flats

ON RENT 3 BHK Flat with all amenities, 1 car parking in V.V. Puram near Lalbagh Metro. Strictly vegetarians. 9901066586

Guest House

INDIRANAGAR 80 Feet Road fully furnished A/C 4BHK Suitable: Guesthouse, 2Halls, 2Servant Rooms, 2Carpark Rent Rs.1.50 Lacs pm Call: 9901778787/ 9343728200

JOB OPPORTUNITIES

Accounts & Finance

WANTED ACCOUNTENT (Any degree, knowledge in Tally)at Chickpet Bangalore Siddhanta Fashion wholesale Readymade Shop.Mobile number 9731121799

Drivers

WANTED EXPERIENCED Water Tanker DRIVERS for Bangalore. Contact Immediately Phone:- 9448171416

General

REPUTED SECURITY Agency Require Experienced Field Officer, Marketing Manager/ Operations, Tally Clerk, Personnel Driver. Bangalore Ph:080-23437474 23437797 Mob:8892073262

BUSINESS

Business to Business

Business

HOW TO Start Real Estate Business with Legal Support and Liasion work Bangalore 9448181912

Services

PLASTIC JERRY CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

Celebrating Contemporary Art !!
at
Palace Grounds, Kings Court
Gate No.5, Bellary Road, Bengaluru
14-15-16-17 December 2023
11.00 am - 8.00 pm

INDIA ART FESTIVAL™
India's Contemporary Art Fair
Parking free

25 Art Galleries | 400 Artists | 3500 Artworks | 100 Booths

Tickets available on bookmyshow
Ticket ₹299/-
Scan QR code to book the tickets
India Art Festival tickets are available at Venue also
M: +91 8976044104-5-7-8 | E: indiaartfestival@gmail.com

Machinery & Tools

KAMCO JAPAN VSI 100-TPH cresher mechanic for sale. Location Kerala. Contact: Mob-9656002897

PERSONAL

Change of Name

I, N.VENKATAMUNI-YAMMA W/o. N.Shivashankar R/a Kasireddigondlahalli, Jakkarasanakuppa, Kolar,Karnataka-563121`declare that N.Venkatamuniyamma and Shwetha both names are`one and`the same person, belongs`to myself`only Vide affidavit Dated:19.8.2023 before`Notary Mamatha`N.K. Bengaluru.

CHANGE OF NAME
I, Rachel Jacob, daughter of Puthenveedu Abraham Raju, resident of No.104, Megha Maanay Homes, 59/60, Omkar Nagar, Krishna Garden Road, Mylasandra, Bangalore-560060, Karnataka State, India, and presently residing at 31, Lake Margaret Trail, St.Thomas, N5R6K7, Ontario, Canada, do hereby change my name from Anulata Raju to Rachel Jacob, with immediate effect.

I, MOHAMMED KHALID KARIM KHAN alias MOHAMMED KHALID alias MO. KHALID resident of 49/2, Hussaini Manzil, 9th Main Road, Mohan Kumar Nagar, Yeshwanthpur, Bangalore-560022 have changed my name to MOHAMMED KHALID vide affidavit dated 13/12/2023 sworn before notary Kundan Babu.M, Bangalore.

I, GURBIR SINGH BANSAL R/a#407/12, 4th main, 1st cross VinayakaNagar B-Block,HAL Airport Road,Bangalore 560017 Declare that My father name Kulwinder Singh and Kulwinder Singh Bansal one and`the same person.And my Mother name Kuljit Kaur and Kuljit Kaur Bansal one and the same person. Vide`affidavit dated:8.12.2023 before`notary D.K.Prakash Banglalore

I, ROHIT JOHNSON resident of No.TF 03, Zaib Blossom, 2nd Cross, 4th Main, Kammanahalli Church, Keerthi Layout, Kacharkanahalli, Bengaluru-560084 have changed my name to ROHIT JOHNSON SHETTY vide affidavit dated 15/12/2023 sworn before notary N.Peruvazhuthi, Bengaluru

CHANGE OF NAME
I, CHANDRASHEKAR. C and REKHA Residing at #48, 3rd Cross, ITC Colony, Cox Town, Jeevanahalli, Frazer Town, Bangalore-560005, have Changed our minor Son's name from DAVANAM SDDHATHA to DAVANAM SIDDHARTHA C vide affidavit dated 15.12.2023 before Notary Sivakumara. M.N. Bangalore. Henceforth he shall be known as DAVANAM SIDDHARTHA C only.

DH DECCAN HERALD
To Place your ad in Deccan Herald & Prajavani Classifieds
For details contact :
9901641752 : 9886213331
9845114560 : 9731810277
080 - 45557163 / 164

CHANGE OF NAME
I, ANUFOORNA, spouse of No 14486316X Rank HAVILDAR Name M. SHANKARAPPA Residing At: No. 10, Sathya Sai Layout, Bandapura, Bengaluru - 562106 have changed my name From ANUFOORNA to ANUPOORNA vide affidavit Dated 14/12/2023 before Notary C N Sreekanta Sastry, Bangalore.

I, THERESA Verghese. C, Aged About 50 years W/o. Biju C Luke, Residing at No. 309, 8th Cross, KPC Layout, off sarjapur road, Kasavanahalli, Bangalore-35 have changed my name to THERESA BIJU LUKE vide affidavit dated 05/09/23 Before Notary A.S. Narayana Reddy Bangalore-34.

I, PRISCILLA SATHEA, have changed my name to PRISCILLA PREM KUMAR Vide Affidavit dated 12.12.2023 sworn before advocate and notary Ambujakshi, Bangalore

CHANGE OF NAME
I, SYED UMAR Residing at #22, 7th Cross, Rose Garden, Neelasandra, Bangalore-560047 Declare that my name is wrongly mentioned in some documents as SYED OMER instead of SYED UMAR vide affidavit dated 15.12.2023 before Notary B.V.Nagabhushan, Bangalore. Henceforth I shall be known as SYED UMAR only.

I, SAYEED Pasha S/O, Mohammed Kasim R/o #622/4 3rd Floor 29th A Main Road Corporation Colony Jayanagar 9th Block Bangalore-69 have changed my name to Mohammed Basha.

Lost

DOCUMENT LOST
I, Tamada Janakarao S/o Tamada Lakshminarayana No. 9, Sy No 29/1, Hommadevanahalli, Bengaluru-560083 have lost my original property documents BTM 2390, Last page No.10, of Above said property vide FIR No. 0840430/2023 Finder Please Contact : 9972711621

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಪ್ರೊ ಕಬಡ್ಡಿ: ಪೈರೇಟ್ಸ್, ಪಲ್ಟನ್ ತಂಡಗಳಿಗೆ ಸೋಲು

ಮುಂಬಾ, ಸ್ಟೀಲರ್ಸ್ ಜಯಭೇರಿ



ಪುಣೇರಿ ಪಲ್ಟನ್ ತಂಡದ ರೈಡರನ್ನು ಹರಿಯಾಣ ಸ್ಟೀಲರ್ಸ್ ತಂಡದ ಆಟಗಾರರು ಹಿಡಿದೆಳೆದರು —ಪ್ರೊ ಕಬಡ್ಡಿ ಎಕ್ಸ್ ಚಿತ್ರ

ಪುಣೆ: ಉತ್ತರಾರ್ಧದಲ್ಲಿ ಇರಾನ್‌ನ ಅಮೀರ್‌ಮೊಹಮ್ಮದ್ ಝಫರ್‌ದಾನೇಶ್ ಅವರ ಅತ್ಯುತ್ತಮ ರೈಡಿಂಗ್ ನೆರವಿನಿಂದ ಯು ಮುಂಬಾ ತಂಡ, ತೀವ್ರ ಹೋರಾಟದ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶುಕ್ರವಾರ 42–40 ಪಾಯಿಂಟ್‌ಗಳಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು.

ಬಾಲೇವಾಡಿಯ ಶ್ರೀಶಿವಛತ್ರಪತಿ ಕ್ರೀಡಾ ಕಾಂಪ್ಲೆಕ್ಸ್‌ನಲ್ಲಿ ನಡೆದ ಪುಣೆ ಲೆಗ್‌ನ ಈ ಮೊದಲ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ವಿರಾಮದ ವೇಳೆಗೆ 21–18 ರಿಂದ ಮುಂದಿತ್ತು. ಈ ಮುನ್ನಡೆಗೆ ಪಟ್ನಾದ ಪ್ರಮುಖ ರೈಡರ್ ಸಚಿನ್ ಕಾರಣರಾಗಿದ್ದರು.

ಆದರೆ, ಉತ್ತರಾರ್ಧದಲ್ಲಿ ಝಫರ್‌ದಾನೇಶ್ 'ಸೂಪರ್‌ಟೆನ್' ಮೂಲಕ ಮುಂಬೈ ಮುನ್ನಡೆಗೆ ನೆರವಾದರು. ಅವರು 13 ಪಾಯಿಂಟ್ಸ್ ಕಲೆಹಾಕಿದರು. ರೈಡರ್ ಗುಮನ್ ಎಂಟು ಪಾಯಿಂಟ್ಸ್ ಗಳಿಸಿದರೆ, ನಾಯಕ ಸುರೇಂದರ್ ಸಿಂಗ್ ನಾಲ್ಕು ಟ್ಯಾಕಲ್ ಪಾಯಿಂಟ್ಸ್ ಗಳಿಸಿದರು.

ಪಟ್ನಾ ತಂಡದ ಪ್ರಮುಖ ರೈಡರ್ ಸಚಿನ್ ಮತ್ತೊಮ್ಮೆ ಮಿಂಚಿ ಸೂಪರ್ ಟೆನ್ (12 ಟಚ್ ಪಾಯಿಂಟ್ಸ್) ಸಾಧನೆಗೆ ಪಾತ್ರರಾದರ. ಸುಧಾಕರ್ ಏಳು ಪಾಯಿಂಟ್ಸ್ ಗಳಿಸಿದರು.

ಹರಿಯಾಣಕ್ಕೆ ಜಯ: ಹರಿಯಾಣ ಸ್ಟೀಲರ್ಸ್ ತಂಡ ಲೀಡ್‌ನ ಏರಿಳಿತ ಕಂಡ ಇನ್ನೊಂದು ಪಂದ್ಯದಲ್ಲಿ 44–39 ಪಾಯಿಂಟ್‌ಗಳಿಂದ ಆತಿಥೇಯ ಪುಣೇರಿ ಪಲ್ಟನ್ ತಂಡವನ್ನು ಸೋಲಿಸಿತು. ಹರಿಯಾಣ ಪರ ವಿನಯ್ 14 ಟಚ್ ಪಾಯಿಂಟ್ಸ್ ಸೇರಿದಂತೆ 15 ಪಾಯಿಂಟ್ಸ್ ಗಳಿಸಿ ಮಿಂಚಿದರು. ರಾಹುಲ್ ಸೆತ್ಪಾಲ್ ಆರು ಟ್ಯಾಕಲ್ ಪಾಯಿಂಟ್ಸ್ ಕಲೆಹಾಕಿದ್ದು ಕಡಿಮೆಯಲ್ಲ.

ಪುಣೇರಿ ತಂಡದ ಅಸ್ಲಂ ಮುಸ್ತಾಫಾ 9 ಪಾಯಿಂಟ್ಸ್ ಗಳಿಸಿದರು. ಮೋಹಿತ್ ಗೋಯತ್ ಈ ಪಂದ್ಯದಲ್ಲಿ ಎಂಟು ಪಾಯಿಂಟ್ಸ್ ಗಳಿಸುವ ಮೂಲಕ ಪಿಕೆಎಲ್‌ನಲ್ಲಿ 300 ರೈಡ್ ಪಾಯಿಂಟ್ಸ್ ಪೂರೈಸಿದರು.

ಬಿಎಫ್‌ಸಿಗೆ ಜಮ್ಶೆಡ್‌ಪುರ ಸವಾಲು ಇಂದು

ಬೆಂಗಳೂರು: ಬಿಎಫ್‌ಸಿ ತಂಡವು ಶನಿವಾರ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಜಮ್ಶೆಡ್‌ಪುರ ಎಫ್‌ಸಿ ತಂಡವನ್ನು ಎದುರಿಸಲಿದೆ.

ಸ್ಪೇನ್‌ನ ಮಾಜಿ ಆಟಗಾರ ಗೆರಾರ್ಡ್ ಜರಗೋಜಾ ಅವರು ಬಿಎಫ್‌ಸಿ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕವಾದ ಬಳಿಕ ನಡೆಯುತ್ತಿರುವ ಮೊದಲ ಪಂದ್ಯ ಇದಾಗಿದ್ದು, ತಂಡವು ಹೊಸ ಉತ್ಸಾಹದಲ್ಲಿದೆ.

ನೂರ್ ಅಬ್ಜಾಲ್ ಅವರನ್ನು ಬೆಂಗಳೂರಿನ ಎ.ಪಿ.ಎಸ್. ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ವಿಷ್ಣು ಭರತ್ ಗೌರವಿಸಿದರು

ರಾಷ್ಟ್ರೀಯ ಜೂಡೊ: ನೂರ್ ಅಬ್ಜಾಲ್‌ಗೆ ಕಂಚಿನ ಪದಕ

ಬೆಂಗಳೂರು: ಇಲ್ಲಿನ ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ ಸಂಸ್ಥೆಯ ದ್ವಿತೀಯ ಪಿಯುಸಿಯ ಅಂಧ ವಿದ್ಯಾರ್ಥಿ ನೂರ್ ಅಬ್ಜಾಲ್ ಅವರು ಪಂಜಾಬ್‌ನಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಮಟ್ಟದ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ಕಂಚಿನ ಪದಕ ಗೆದ್ದಿದ್ದಾರೆ.

ಇದೇ ಸಂಸ್ಥೆಯ ದ್ವಿತೀಯ ಬಿಕಾಂನ ಆರ್. ಶಾಬಾಜ್ ಅಹಮ್ಮದ್ ಅವರೂ ಜೂಡೊ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ್ದರು.

ಐದು ರಾಷ್ಟ್ರಗಳ ಹಾಕಿ ಟೂರ್ನಿ: ಸ್ಪೇನ್‌ಗೆ ಮಣಿದ ಭಾರತ ತಂಡಗಳು

ವಲೆನ್ಸಿಯಾ (ಸ್ಪೇನ್), (ಪಿಟಿಐ): ಭಾರತ ಪುರುಷರ ಹಾಕಿ ತಂಡ ತನಗಿಂತ ಕೆಳಕ್ರಮಾಂಕದ ಸ್ಪೇನ್ ಎದುರು 0–1 ಗೋಲಿನಿಂದ ಸೋತು ಐದು ರಾಷ್ಟ್ರಗಳ ಹಾಕಿ ಟೂರ್ನಿಯನ್ನು ಶುಕ್ರವಾರ ನಿರಾಶಾದಾಯಕ ರೀತಿ ಯಲ್ಲಿ ಆರಂಭಿಸಿತು. ಮಹಿಳೆಯರ ವಿಭಾಗ ದಲ್ಲೂ ಭಾರತ, ಇದೇ ಎದುರಾಳಿಗೆ 2–3 ಗೋಲುಗಳಿಂದ ಮಣಿಯಿತು.

ಆತಿಥೇಯ ತಂಡದ ಆಲ್ವಾರೊ ಇಗ್ಲೇಷಿಯಸ್ ಪಂದ್ಯದ ಏಕೈಕ ಗೋಲನ್ನು 29ನೇ ನಿಮಿಷ ಗಳಿಸಿದರು. ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಸ್ವರ್ಣ ಪದಕ ಗೆದ್ದು, ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಭಾರತ ವಿಶ್ವಕ್ರಮಾಂಕ-ದಲ್ಲಿ ಪ್ರಸ್ತುತ ಮೂರನೇ ಸ್ಥಾನದಲ್ಲಿದೆ. ಇನ್ನೊಂದೆಡೆ ಸ್ಪೇನ್ 8ನೇ ಸ್ಥಾನದಲ್ಲಿದೆ.

ವನಿತೆಯರ ತಂಡಕ್ಕೂ ಸೋಲು: ಭಾರತ ಮಹಿಳಾ ತಂಡ, ಐದು ರಾಷ್ಟ್ರಗಳ ಹಾಕಿ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಶುಕ್ರವಾರ 2–3 ಗೋಲುಗಳಿಂದ ಸ್ಪೇನ್ ತಂಡದ ಎದುರು ಸೋಲನುಭವಿಸಿತು.

ಗುರ್ಜಿತ್ ಕೌರ್ (13ನೇ ನಿಮಿಷ), ಸಂಗೀತಾ ಕುಮಾರಿ (14ನೇ ನಿಮಿಷ) ಭಾರತ ತಂಡದ ಪರ ಗೋಲು ಗಳಿಸಿದರೆ, ಸಾರಾ ಬೊರಿಯೊಸ್ (2ನೇ ನಿಮಿಷ), ಪೆಟ್ರೀಷಿಯಾ ಆಲ್ವಾರೆಝ್ ನಾರ್ಡಿಝ್ (30ನೇ ನಿಮಿಷ) ಮತ್ತು ಜೂಲಿಯಾ ಗರೆಟಾ (53ನೇ ನಿಮಿಷ) ಸ್ಪೇನ್ ಪರ ಗೋಲುಗಳನ್ನು ತಂದಿತ್ತರು.

ಭಾರತ ತಂಡ, ತನ್ನ ಮುಂದಿನ ಪಂದ್ಯವನ್ನು ಶನಿವಾರ ಬೆಲ್ಜಿಯಂ ವಿರುದ್ಧ ಆಡಲಿದೆ.

ವಿಜಯ್ ಹಜಾರೆ ಟ್ರೋಫಿ: ಫೈನಲ್ ಹಣಾಹಣಿ ಇಂದು

ರಾಜ್‌ಕೋಟ್: ಹರಿಯಾಣ ಮತ್ತು ರಾಜಸ್ಥಾನ ತಂಡಗಳು ಶನಿವಾರ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಹಣಾಹಣಿ ನಡೆಸಲಿವೆ.

ಉಭಯ ತಂಡಗಳೂ ಚೊಚ್ಚಲ ಪ್ರಶಸ್ತಿ ಜಯಿಸುವ ಛಲದಲ್ಲಿವೆ. ಅಶೋಕ್ ಮನೇರಿಯಾ ನಾಯಕತ್ವದ ಹರಿಯಾಣ ತಂಡವು ಸೆಮಿಫೈನಲ್‌ನಲ್ಲಿ ತಮಿಳುನಾಡು ತಂಡವನ್ನು ಸೋಲಿಸಿತ್ತು.

ಇನ್ನೊಂದು ಸೆಮಿಫೈನಲ್‌ನಲ್ಲಿ ರಾಜಸ್ಥಾನ ತಂಡವು ಕರ್ನಾಟಕವನ್ನು ಸೋಲಿಸಿತ್ತು.

ಪಂದ್ಯ ಆರಂಭ: ಮಧ್ಯಾಹ್ನ 1.30

ಹಾಕಿ: ಭಾರತಕ್ಕೆ ಸ್ಪೇನ್ ಸವಾಲು

ಕ್ವಾಲಾಲಂಪುರ (ಪಿಟಿಐ): ಎಫ್‌ಐಎಚ್ ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡವು ಶನಿವಾರ ಕಂಚಿನ ಪದಕಕ್ಕಾಗಿ ಬಲಿಷ್ಠ ಸ್ಪೇನ್ ತಂಡದ ವಿರುದ್ಧ ಸೆಣಸಲಿದೆ.

ಗುರುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಜರ್ಮನಿ ವಿರುದ್ಧ ದೊರೆತ 12 ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಾಗಿ ಪರಿವರ್ತಿಸಲು ವಿಫಲವಾದ ಉತ್ತಮ್ ಸಿಂಗ್ ಬಳಗ 1–4ರಿಂದ ಮುಗ್ಗರಿಸಿತ್ತು. ಮತ್ತೊಂದು ಸೆಮಿಫೈನಲ್‌ನಲ್ಲಿ ಸ್ಪೇನ್ 1–3ರಿಂದ ಫ್ರಾನ್ಸ್ ವಿರುದ್ಧ ಸೋತಿತ್ತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಸೋತಿರುವ ಉಭಯ ತಂಡಗಳು ಮೂರನೇ ಸ್ಥಾನಕ್ಕಾಗಿ ಪೈಪೋಟಿ ನಡೆಸಲಿವೆ.

ಫೈನಲ್ ಇಂದು: ಭುವನೇಶ್ವರದಲ್ಲಿ (2021) ನಡೆದ ಕೊನೆಯ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದ ಜರ್ಮನಿ ತಂಡವು, ಅದೇ ಕೂಟದಲ್ಲಿ ಕಂಚಿನ ಪದಕ ವಿಜೇತ ಫ್ರಾನ್ಸ್‌ನೊಂದಿಗೆ ಚಾಂಪಿಯನ್ ಕಿರೀಟಕ್ಕಾಗಿ ಶನಿವಾರ ಸೆಣಸಲಿದೆ.

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಅಶ್ವಥಪ್ಪನವರು
ತಿಂಡ್ಲು, ವಿದ್ಯಾರಣ್ಯಪುರ – 560 097
ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆಯಿತು. ನಿಮ್ಮ ಸರಳ ಜೀವನದ ಮಾರ್ಗದರ್ಶನ ನಮಗೆ ದಾರಿದೀಪ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುವ ಕುಟುಂಬದವರು ಮತ್ತು ಅಪಾರ ಬಂಧು ವರ್ಗದವರು. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ
ಪತ್ನಿಯರು ಹಾಗೂ ಮಕ್ಕಳು

manipalhospitals LIFE'S ON

ಸಾರ್ವಜನಿಕ ಸೂಚನಾ ಪತ್ರ

ಅಧಿಸೂಚನೆ

ಬೆಂಗಳೂರಿನ ವರ್ತೂರು ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯು ನಮ್ಮ ಪೋಷಕರು/ಗ್ರಾಹಕರಿಗೆ 2014ರ ಜುಲೈಯಿಂದ 2018ರ ಡಿಸೆಂಬರ್‌ವರೆಗಿನ ನಮ್ಮ ರೋಗಿಗಳಿಗೆ ಸಂಬಂಧಿಸಿದ ಒಳರೋಗಿ ಕಡತಗಳನ್ನು (ನಾನ್ – ಎಂಎಲ್‌ಸಿ) 15/01/2024 ರಂದು ಅಥವಾ ನಂತರದಲ್ಲಿ ಅಳಿಸಿಹಾಕಲಾಗುತ್ತದೆ ಎಂದು ಸೂಚಿಸಬಯಸುತ್ತದೆ.

ಒಂದು ವೇಳೆ ಯಾವುದೇ ರೋಗಿ ಅಥವಾ ಅವರ ಕಾನೂನಾತ್ಮಕ ಉತ್ತರಾಧಿಕಾರಿ (ರೋಗಿಯು ಅಧಿಕೃತವಾಗಿ ಲಿಖಿತರೂಪದಲ್ಲಿ ನಮೂದಿಸಿದ)ಯು ವೈದ್ಯಕೀಯ ವರದಿಗಳ ಪ್ರತಿಗಳನ್ನು ಪಡೆಯಬಯಸಿದಲ್ಲಿ, ಅವರು 15/01/2024 ರಂದು ಅಥವಾ ಮುಂಚಿತವಾಗಿ ವೈದ್ಯಕೀಯ ವರದಿಗಳ ಇಲಾಖೆಗೆ ಲಿಖಿತರೂಪದಲ್ಲಿ ಮನವಿಯನ್ನು ಸಲ್ಲಿಸಬಹುದಾಗಿದೆ.

ಮಣಿಪಾಲ್ ಆಸ್ಪತ್ರೆ ಬೆಂಗಳೂರು ಪರವಾಗಿ,

ಮಣಿಪಾಲ್ ಆಸ್ಪತ್ರೆ ವರ್ತೂರು ರಸ್ತೆ
ಸರ್ವೆ ಸಂಖ್ಯೆ. 10ಪಿ ಮತ್ತು 12ಪಿ, ರಾಮಗೊಂಡನಹಾಲ್, ವರ್ತೂರು ಕೋಡಿ, ವೈಟ್‌ಫೀಲ್ಡ್, ಬೆಂಗಳೂರು ಪೂರ್ವ – 560066

ಷೇರುಪೇಟೆ ವಹಿವಾಟು 969



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,182
ಇಂದಿನ ಅಂತ್ಯ	21,456
▲	274
ದಿನದ ಗರಿಷ್ಠ	21,492

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹600
12 ಮೊಟ್ಟೆಗೆ	₹80

ಮೈಸೂರು

100 ಮೊಟ್ಟೆಗೆ	₹604

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹920 (925)
ಪಾಮೋಲಿನ್	₹821 (822)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹255-466
ದ್ವಿತಳಿ (ಬಿ.ವಿ)	₹333-612

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.00
£ ಪೌಂಡ್	106.03
€ ಯುರೊ	90.97
¥ ಯೆನ್ (100ಕ್ಕೆ)	59

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಪುತ್ತೂರು	₹5500-9100
ತಿಪಟೂರು	₹7300-8000
ತುರುವೇಕೆರೆ	₹8000-8000

ದೇಶದಲ್ಲಿ ಗೃಹ ಬೆಲೆ ಶೇ 6ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಾಗತಿಕಮಟ್ಟದ ಗೃಹ ಬೆಲೆ ಏರಿಕೆಯಲ್ಲಿ ಭಾರತವು 18ನೇ ಸ್ಥಾನದಿಂದ 14ನೇ ಸ್ಥಾನಕ್ಕೆ ತಲುಪಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ನೈಟ್ ಫ್ರಾಂಕ್ ತಿಳಿಸಿದೆ.

ದೇಶದಲ್ಲಿ ಗೃಹ ಬೆಲೆಯು ವರ್ಷದಿಂದ ವರ್ಷಕ್ಕೆ ಸುಮಾರು ಶೇ 6ರಷ್ಟು ಏರಿಕೆಯಾಗುತ್ತಿದೆ.

ಹೆಚ್ಚಿನ ಬಡ್ಡಿದರದ ಮೂಲಕ ಹಣದುಬ್ಬರ ನಿಯಂತ್ರಿಸಲು ಕೇಂದ್ರೀಯ ಬ್ಯಾಂಕ್‌ಗಳು ಹರಸಾಹಸ ನಡೆಸುತ್ತಿವೆ. ಈ ಪ್ರಯತ್ನದ ಹೊರತಾಗಿಯೂ ವಾರ್ಷಿಕವಾಗಿ ಗೃಹ ಬೆಲೆಯು ದೇಶದಲ್ಲಿ ಏರುಗತಿಯಲ್ಲಿದೆ. ವಾರ್ಷಿಕ ಸರಾಸರಿ ಬೆಲೆ ಏರಿಕೆ ಬೆಳವಣಿಗೆಯು ಶೇ 3.5ರಷ್ಟಿದೆ. ಇದು ಕೋವಿಡ್ ಸಾಂಕ್ರಾಮಿಕ ಪೂರ್ವದ ಹತ್ತು ವರ್ಷಗಳ ಹಿಂದೆ ಇದ್ದ ಸರಾಸರಿ ಶೇ 3.7ರಷ್ಟಕ್ಕೆ ಸಮೀಪಿಸುತ್ತಿದೆ ಎಂದು ನೈಟ್ ಫ್ರಾಂಕ್ ವಿವರಿಸಿದೆ.

ಗೃಹ ಸಾಲದ ದರ ಹೆಚ್ಚಳ ಮತ್ತು ಹಣದುಬ್ಬರದ ಸವಾಲಿನ ಹೊರತಾಗಿಯೂ ದೇಶದ ಗೃಹ ಮಾರುಕಟ್ಟೆಯ ಬೆಳವಣಿಗೆ ಆಶಾದಾಯಕವಾಗಿದೆ. ಇದರಿಂದ ಸ್ಥಿರ ಆರ್ಥಿಕ ಬೆಳವಣಿಗೆಗೆ ಪೂರಕವಾಗಿದ್ದು, ಬಳಕೆದಾರರಿಗೆ ಹೆಚ್ಚಿನ ಆರ್ಥಿಕ ಭದ್ರತೆಯನ್ನು ಒದಗಿಸಿದೆ ಎಂದು ಹೇಳಿದೆ.

ಹೂಡಿಕೆದಾರರ ಸಂಪತ್ತು ₹8 ಲಕ್ಷ ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಮುಂಬೈ ಷೇರು ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಮೊದಲ ಬಾರಿಗೆ ಶುಕ್ರವಾರ 71 ಸಾವಿರ ಅಂಶಗಳನ್ನು ದಾಟಿದೆ. ಮೂರು ದಿನದಲ್ಲಿ ಹೂಡಿಕೆದಾರರು ₹8.11 ಲಕ್ಷ ಕೋಟಿ ಲಾಭ ಗಳಿಸಿದ್ದಾರೆ.

ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿದರ ಪರಿಷ್ಕರಣೆ ಮಾಡಿಲ್ಲ. ಜತೆಗೆ, ಮುಂದಿನ ವರ್ಷ ಬಡ್ಡಿದರ ಕಡಿತದ ಸೂಚನೆಯನ್ನು ನೀಡಿದೆ. ಇದು ಈಕ್ವಿಟಿ ಮಾರುಕಟ್ಟೆಗಳಿಗೆ ನಿರಂತರ ವಿದೇಶಿ ನಿಧಿಯ ಒಳಹರಿವು ಮತ್ತು ಷೇರುಗಳ ಏರಿಕೆಗೆ ಉತ್ತೇಜನ ನೀಡಿದೆ.

ಮೂರನೇ ದಿನದ ವಹಿವಾಟಿನಲ್ಲಿ ಸೆನ್ಸೆಕ್ಸ್ 969 ಅಂಶ ಏರಿಕೆಯಾಗಿ ಗರಿಷ್ಠ ಮಟ್ಟವಾದ 71,483 ತಲುಪಿ ಅಂತ್ಯಗೊಂಡಿತು. ವಹಿವಾಟಿನ ವೇಳೆ 1,091 ಅಂಶ ಏರಿಕೆಯಾಗಿ 71,605ಕ್ಕೆ ತಲುಪಿತ್ತು.

ಮೂರು ದಿನದಲ್ಲಿ ಬಿಎಸ್‌ಇ 1,932 ಅಂಶ ಏರಿಕೆ ಕಂಡಿದೆ. ಬಿಎಸ್‌ಇಯಲ್ಲಿ ನೋಂದಾಯಿತ ಸಂಸ್ಥೆಗಳ ಮಾರುಕಟ್ಟೆ ಬಂಡವಾಳೀಕರಣ (ಎಂ–ಕ್ಯಾಪ್) ₹357 ಲಕ್ಷ ಕೋಟಿಗೆ ತಲುಪಿ, ಹೊಸ ದಾಖಲೆ ಬರೆದಿದೆ.

ಎಚ್‌ಸಿಎಲ್ ಟೆಕ್ನಾಲಜೀಸ್ ನಂತರದ ಸ್ಥಾನದಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸ್, ಇನ್ಫೊಸಿಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಟಾಟಾ ಸ್ಟೀಲ್, ಎನ್‌ಟಿಪಿಸಿ, ಟೆಕ್ ಮಹೀಂದ್ರ ಮತ್ತು ವಿಪ್ರೊ ಗಳಿಕೆ ಕಂಡಿವೆ.

ಚಿನ್ನ ₹150, ಬೆಳ್ಳಿ ₹700 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂ.ಗೆ ₹150 ಏರಿಕೆಯಾಗಿ, ₹63,100ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹700 ಹೆಚ್ಚಳವಾಗಿ ₹78,100 ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಕೆ ಆಗಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲೂ ಬೆಲೆ ಏರಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ರೂಪಾಯಿ ಮೌಲ್ಯ ಏರಿಕೆ

ಅಮೆರಿಕದ ಡಾಲರ್ ಎದುರು ಕುಸಿತ ದಾಖಲಿಸಿದ್ದ ರೂಪಾಯಿ ಮೌಲ್ಯವು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ ಕೊಂಚ ಚೇತರಿಕೆ ಕಂಡಿದೆ. 27 ಪೈಸೆ ಏರಿಕೆಯಾಗಿ ಅಮೆರಿಕದ ಡಾಲರ್ ಎದುರು 83.03ರಂತೆ ವಿನಿಮಯಗೊಂಡಿತು.

ಎಸ್‌ಇಎಯಿಂದ ತೈಲ ವರ್ಷದ ಮೊದಲ ತಿಂಗಳ ವರದಿ ಬಿಡುಗಡೆ

ಅಡುಗೆ ಎಣ್ಣೆ ಆಮದು ಶೇ 25 ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಅಡುಗೆ ಎಣ್ಣೆ ಆಮದು 2023–24ರ ತೈಲ ವರ್ಷದ (ನವೆಂಬರ್–ಅಕ್ಟೋಬರ್) ಮೊದಲ ತಿಂಗಳಾದ ನವೆಂಬರ್‌ನಲ್ಲಿ ಶೇ25ರಷ್ಟು ಇಳಿಕೆಯಾಗಿ, 11.60 ಲಕ್ಷ ಟನ್‌ಗೆ ತಲುಪಿದೆ.

ಹಿಂದಿನ ವರ್ಷ ಇದೇ ಅವಧಿಯಲ್ಲಿ 15.45 ಲಕ್ಷ ಟನ್ ಇತ್ತು ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಇಎ) ಶುಕ್ರವಾರ ತಿಳಿಸಿದೆ.

ಕಚ್ಚಾ ತಾಳೆ ಎಣ್ಣೆ, ಸೋಯಾಬಿನ್ ಎಣ್ಣೆ ಮತ್ತು ಸೂರ್ಯಕಾಂತಿ ಕಚ್ಚಾ ಎಣ್ಣೆ ಆಮದು ಕೂಡ ಇಳಿಕೆ ಕಂಡಿದೆ. ನವೆಂಬರ್‌ನಲ್ಲಿ ಆಮದಾದ ಒಟ್ಟು ತೈಲದಲ್ಲಿ ಅಡುಗೆ ಎಣ್ಣೆ 11.48 ಲಕ್ಷ ಟನ್ ಮತ್ತು ಅಡುಗೆಯೇತರ ಎಣ್ಣೆ 12,498 ಟನ್ ಆಗಿದೆ. ಭಾರತವು

ವಿಶ್ವದಲ್ಲೇ ಪ್ರಮುಖ ಅಡುಗೆ ಎಣ್ಣೆ ಖರೀದಿದಾರ ದೇಶವಾಗಿದ್ದು, ರಿಫೈನ್ಡ್ ಮತ್ತು ಕಚ್ಚಾ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ.

ಎಸ್‌ಇಎ ಪ್ರಕಾರ, ನವೆಂಬರ್‌ನಲ್ಲಿ ದೇಶದಲ್ಲಿ ಕಚ್ಚಾ ಅಡುಗೆ ಎಣ್ಣೆ ಶೇ 26.34ರಷ್ಟು ಇಳಿಕೆಯಾಗಿ 9.77 ಲಕ್ಷ ಟನ್‌ಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 13.26 ಲಕ್ಷ ಟನ್ ಇತ್ತು.

ರಿಫೈನ್ಡ್ (ಸಂಸ್ಕರಿಸಿದ) ಅಡುಗೆ ಎಣ್ಣೆಯ ರಫ್ತು ಕೂಡ ಹಿಂದಿನ ವರ್ಷದ ನವೆಂಬರ್‌ಗೆ ಹೋಲಿಸಿದರೆ 2.02 ಲಕ್ಷ ಟನ್‌ನಿಂದ ಪ್ರಸಕ್ತ ವರ್ಷಕ್ಕೆ ಶೇ 15.41ರಷ್ಟು ಇಳಿಕೆಯಾಗಿ 1.71 ಲಕ್ಷ ಟನ್‌ಗೆ ತಲುಪಿದೆ.

ಆರ್‌ಬಿಡಿ ಪಾಮೊಲಿನ್ ಆಮದು ನವೆಂಬರ್‌ನಲ್ಲಿ 1.71 ಲಕ್ಷ ಟನ್ ಆಗಿದ್ದು, ಹಿಂದಿನ ಇದೇ ಅವಧಿಯಲ್ಲಿ 2.02 ಲಕ್ಷ ಟನ್ ಇತ್ತು. ಆದರೆ, ಸಾಗಣೆಯು ಪ್ರಸಕ್ತ ಅಕ್ಟೋಬರ್‌ನಲ್ಲಿ 53,497 ಟನ್‌ಗಳಿಂದ ಮೂರು ಪಟ್ಟು ಏರಿಕೆಯಾಗಿದೆ.

ಕಚ್ಚಾ ತಾಳೆ ಎಣ್ಣೆ ಆಮದು 9.31 ಲಕ್ಷ ಟನ್‌ನಿಂದ 6.92 ಲಕ್ಷ ಟನ್‌ಗೆ ಇಳಿಕೆ ಆಗಿದೆ ಎಂದು ಎಸ್‌ಇಎ ಅಂಕಿ–ಅಂಶಗಳು ತಿಳಿಸಿವೆ. ಸೂರ್ಯಕಾಂತಿ ಕಚ್ಚಾ ಎಣ್ಣೆಯ ಆಮದು 1.57 ಲಕ್ಷ ಟನ್‌ನಿಂದ 1.28 ಲಕ್ಷ ಟನ್‌ಗೆ ಹಾಗೂ ಸೋಯಾಬಿನ್ ಕಚ್ಚಾ ಎಣ್ಣೆ 2.29 ಲಕ್ಷ ಟನ್‌ನಿಂದ 1.49 ಲಕ್ಷ ಟನ್‌ಗೆ ಕಡಿಮೆ ಆಗಿದೆ.

ದಾಸ್ತಾನು ಪ್ರಮಾಣ ಕಡಿಮೆ

ಡಿಸೆಂಬರ್ 1ರಂತೆ ಅಡುಗೆ ಎಣ್ಣೆ ದಾಸ್ತಾನು 29.60 ಲಕ್ಷ ಟನ್‌ಗಳಾಗಿದ್ದು, ಹಿಂದಿನ ತಿಂಗಳಿಗಿಂತ 1.79 ಲಕ್ಷ ಟನ್‌ಗಳಷ್ಟು ಕಡಿಮೆಯಾಗಿದೆ. ಭಾರತವು ಇಂಡೊನೇಷ್ಯಾ ಮತ್ತು ಮಲೇಷ್ಯಾದಿಂದ ತಾಳೆ ಎಣ್ಣೆ, ಅರ್ಜೆಂಟೀನಾದಿಂದ ಸೋಯಾಬಿನ್, ಉಕ್ರೇನ್ ಮತ್ತು ರಷ್ಯಾದಿಂದ ಸೂರ್ಯಕಾಂತಿ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತಿದೆ.

ಕಚ್ಚಾ ತಾಳೆ ಎಣ್ಣೆ (ಸಿಪಿಒ) ಮತ್ತು ರಿಫೈನ್ಡ್ ಎಣ್ಣೆ ನಡುವಿನ ಪ್ರಸ್ತುತ ಪರಿಣಾಮಕಾರಿ ಆಮದು ಸುಂಕದ ಶೇ 8.25 ವ್ಯತ್ಯಾಸವು ಸಿಪಿಒಗೆ ವಿರುದ್ಧವಾಗಿ ದೇಶಕ್ಕೆ ರಿಫೈನ್ಡ್ ಪಾಮೊಲಿನ್ ಆಮದುಗಳನ್ನು ಉತ್ತೇಜಿಸುತ್ತದೆ ಎಂದು ಎಸ್‌ಇಎ ಹೇಳಿದೆ. ಈ ಸಿದ್ಧಪಡಿಸಿದ ಸರಕುಗಳ ಆಮದು ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿರುದ್ಧವಾಗಿದೆ. ದೇಶದ ತಾಳೆ ಸಂಸ್ಕರಣಾ ಉದ್ಯಮದ ಸಾಮರ್ಥ್ಯದ ಬಳಕೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ತಿಳಿಸಿದೆ.

ಪಾಮೊಲಿನ್ ರಫ್ತು ಮಾಡುವ ದೇಶಗಳು (ಮಲೇಷ್ಯಾ ಮತ್ತು ಇಂಡೋನೇಷ್ಯಾ) ಭಾರತದ ಕೈಗಾರಿಕೆಗಳಿಗೆ ನೀಡುತ್ತಿರುವ ಪ್ರೋತ್ಸಾಹವೇ ಪಾಮೊಲಿನ್ ಆಮದು ಹೆಚ್ಚಳವಾಗಲು ಕಾರಣವಾಗಿದೆ. ಕಚ್ಚಾ ತಾಳೆ ಮೇಲೆ ಹೆಚ್ಚಿನ ರಫ್ತು ಸುಂಕ ಮತ್ತು ರಿಫೈನ್ಡ್ ಪಾಮೊಲಿನ್ ಮೇಲೆ ಕಡಿಮೆ ರಫ್ತು ಸುಂಕ ವಿಧಿಸುತ್ತಿರುವುದೇ ಇದಕ್ಕೆ ಕಾರಣವಾಗಿದೆ ಎಂದು ಎಸ್‌ಇಎ ಹೇಳಿದೆ.

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹2000-3000
ಮಧ್ಯಮ	₹1500-2000
ಸಣ್ಣ	₹500-1000

ಮುಂಬೈ ಧಾರಣೆ

ಶೇಂಗಾ

15-12-2023

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	865 (867)
ಪಾಮ್ ವಾರದ ಡೆಲಿವರಿ	823 (824)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (865)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,050 (62,200)
ಬೆಳ್ಳಿ ಕೆ.ಜಿ 74,200 (74,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಮಾಸ್ ನಾಶಕ್ಕೆ ಹಲವು ತಿಂಗಳು ಬೇಕಿದೆ: ಸಚಿವ ಯೋವ್ ಗ್ಯಾಲಂಟ್

ಯುದ್ಧ ನಿಲ್ಲದು; ಇಸ್ರೇಲ್ ಹೇಳಿಕೆ

ಟೆಲ್ ಅವಿವ್ (ಎಪಿ): ಹಮಾಸ್ ನಾಶಪಡಿಸಲು ತಿಂಗಳುಗಳು ಬೇಕಾಗಲಿವೆ ಎಂದು ಇಸ್ರೇಲ್ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಹೇಳಿದ್ದಾರೆ.

ಗಾಜಾದಲ್ಲಿ ಮೂರನೇ ತಿಂಗಳಿಗೆ ಕಾಲಿಟ್ಟಿರುವ ಯುದ್ಧ ಕೊನೆಗೊಳಿಸುವ ಸಂಬಂಧ ವೇಳಾಪಟ್ಟಿ ಬಗ್ಗೆ ಚರ್ಚಿಸಲು ಅಮೆರಿಕ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಅವರು ಇಸ್ರೇಲ್ ನಾಯಕರನ್ನು ಭೇಟಿಯಾದ ಬೆನ್ನಲ್ಲೇ ಯೋವ್ ಗ್ಯಾಲಂಟ್ ಅವರಿಂದ ಈ ಹೇಳಿಕೆ ಹೊರಬಿದ್ದಿದೆ.

ಗಾಜಾ ಪಟ್ಟಿಯಲ್ಲಿ ಆಗಿರುವ ವಿನಾಶವನ್ನು ಗಮನದಲ್ಲಿಟ್ಟು-ಕೊಂಡು ತಕ್ಷಣವೇ ಕದನ ವಿರಾಮ ಘೋಷಿಸುವಂತೆ ಮತ್ತು ಮಾನವೀಯ ಪರಿಹಾರಕ್ಕೆ ಹಾದಿ ಮಾಡಿಕೊಡುವಂತೆ ಇಸ್ರೇಲ್ ಹಾಗೂ ಅದರ ಮಿತ್ರ ರಾಷ್ಟ್ರ ಅಮೆರಿಕದ ಮೇಲೆ ಅಂತರರಾಷ್ಟ್ರೀಯ ಒತ್ತಡ ಹೆಚ್ಚುತ್ತಿರುವುದರ ನಡುವೆಯೂ ಇಸ್ರೇಲ್ ಸದ್ಯಕ್ಕೆ ಯುದ್ಧ ನಿಲ್ಲಿಸದು ಎನ್ನುವುದು ಗ್ಯಾಲಂಟ್ ಅವರ ಈ ಹೇಳಿಕೆಯಿಂದ ವ್ಯಕ್ತವಾಗಿದೆ.

ಅ.7ರಂದು ಹಮಾಸ್ ನಡೆಸಿದ ದಾಳಿಗೆ ಪ್ರತೀಕಾರವಾಗಿ ಇಡೀ ಹಮಾಸ್ ಬಂಡುಕೋರ ಸಂಘಟನೆಯನ್ನು ಸಂಪೂರ್ಣ ನಾಶಪಡಿಸುವವರೆಗೂ ಕಾರ್ಯಾಚರಣೆ ನಿಲ್ಲದು ಎನ್ನುವ ತನ್ನ ದೃಢ ನಿಲುವನ್ನು ಇಸ್ರೇಲ್ ನಾಯಕರು ಪುನರುಚ್ಚರಿಸಿದ್ದಾರೆ.

‘ಹಮಾಸ್ ದಶಕಕ್ಕೂ ಹೆಚ್ಚು ಕಾಲದಿಂದ ಗಾಜಾದಲ್ಲಿ ಮಿಲಿಟರಿ ಮೂಲಸೌಕರ್ಯ ನಿರ್ಮಿಸುತ್ತಿದೆ. ಅವುಗಳನ್ನು ಸಂಪೂರ್ಣ ನಾಶಮಾಡುವುದು ಸುಲಭವಲ್ಲ. ಅದಕ್ಕೆ ಕಾಲಾವಕಾಶ ಬೇಕಾಗುತ್ತದೆ. ಆದರೆ, ನಾವು ಇದರಲ್ಲಿ ಗೆಲ್ಲುತ್ತೇವೆ ಮತ್ತು ಅವುಗಳನ್ನು ಸಂಪೂರ್ಣ ನಾಶಪಡಿಸು-ತ್ತೇವೆ’ ಎಂದು ಗ್ಯಾಲಂಟ್ ಹೇಳಿದರು.



ಇಸ್ರೇಲ್ ಯೋಧರು ಥಳಿಸಿದ ಪರಿಣಾಮ ಗಾಯಗೊಂಡಿರುವ ಎನಡೋಲು ಸುದ್ದಿಸಂಸ್ಥೆ ಛಾಯಾಗ್ರಾಹಕ ಮುಸ್ತಫಾ ಅಲ್–ಖಾರೂಫ್ ಅವರಿಗೆ ಜೆರುಸಲೇಂನ ಹೊರವಲಯದ ವಸತಿ ಪ್ರದೇಶದಲ್ಲಿದ್ದ ಆಂಬುಲೆನ್ಸ್‌ನಲ್ಲಿ ಶುಕ್ರವಾರ ಚಿಕಿತ್ಸೆ ನೀಡಲಾಯಿತು –ಎಎಫ್‌ಪಿ ಚಿತ್ರ

ಯುದ್ಧ ನಿಲ್ಲದು: ಟೆಲ್ ಅವಿವ್‌ನಲ್ಲಿ ಜೇಕ್ ಸುಲ್ಲಿವಾನ್ ಜೊತೆಗಿನ ಮಾತುಕತೆಯ ನಂತರ, ಇಸ್ರೇಲಿ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು, 'ಹಮಾಸ್ ಅನ್ನು ಸಂಪೂರ್ಣ ನಾಶಮಾಡುವವರೆಗೆ, ಸಂಪೂರ್ಣ ವಿಜಯ ಸಾಧಿಸುವವರೆಗೆ ಹೋರಾಟ ಮುಂದುವರಿಸಲು ದೇಶವು ಹಿಂದೆಂದಿಗಿಂತಲೂ ಈಗ ಹೆಚ್ಚು ದೃಢ ನಿರ್ಧಾರ ಮಾಡಿದೆ ಎಂದು ತಮ್ಮ ಮಿತ್ರರಾಷ್ಟ್ರಕ್ಕೆ ತಿಳಿಸಿದರು.

ಯುದ್ಧ ಬೇರೆ ಹಂತಕ್ಕೆ: ಜೇಕ್ ಸುಲ್ಲಿವಾನ್

ಜೆರುಸಲೇಂ (ಎಎಫ್‌ಪಿ): ಗಾಜಾದಲ್ಲಿನ ಯುದ್ಧವು ಹಮಾಸ್ ನಾಯಕತ್ವವನ್ನು ನಿಖರ ಗುರಿಯಾಗಿಸಲಿದೆ ಮತ್ತು ಗುಪ್ತಚರ ಚಾಲಿತ ಕಾರ್ಯಾಚರ-ಣೆಗಳ ಮೇಲೆ ಕೇಂದ್ರೀಕೃತವಾಗಿ-ರುವ ಹೊಸ ಹಂತಕ್ಕೆ ಪರಿವರ್ತನೆ ಯಾಗಲಿದೆ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವಾನ್ ಶುಕ್ರವಾರ ಇಸ್ರೇಲ್‌ನಲ್ಲಿ ಹೇಳಿದ್ದಾರೆ.

ಈ ಯುದ್ಧದಲ್ಲಿ ಇಸ್ರೇಲ್ ತನ್ನ ಉದ್ದೇಶಗಳನ್ನು ಸಾಧಿಸಲು ತಿಂಗಳುಗಳನ್ನು ತೆಗೆದುಕೊಳ್ಳ-ಲಿದೆ. ಆದರೆ, ಹೋರಾಟವು ಹಲವು ಹಂತಗಳಲ್ಲಿ ಮುಂದುವ-ರಿಯುತ್ತದೆ. ಸದ್ಯದ ತೀವ್ರವಾದ ಬಾಂಬ್ ದಾಳಿ ಮತ್ತು ಭೂ ದಾಳಿಯ ಕಾರ್ಯಾಚರಣೆಗಳನ್ನು ಬದಲಿಸಿಕೊಳ್ಳಲಿದೆ ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟಡದ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಭವಿಷ್ಯ

Astrology

ಒಂದೇ ಕರೆಯಲ್ಲಿಶಾಶ್ವತ ಪರಿಹಾರ ಸ್ತ್ರೀಪುರುಷ.ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿಪರಿಹಾರ ಪಂಡಿತ್:ಮೋಡಿ.ಬೆಟ್ಟಪ್ಪ ಉಚಿತ:ಭವಿಷ್ಯ:ಖಚಿತ ಪರಿಹಾರ,ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

ತತ್ವಮಸಿ ಟೂರ್ಸ್ ವತಿಯಿಂದ ವಿಮಾನ, ಎಸಿ ಬಸ್ ವಸತಿ,ಊಟ, ಸಂದರ್ಶನ ಚೀಟಿ ಒಳಗೊಂಡಿದೆ 22.01.2024 12.04.2024 10 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 1,45,000. 03.02.2024 09.02.2024 6 ದಿನಗಳ ದುಬೈ,ಅಬುಧಾಬಿ,ಶಾರ್ಜಾ 87500- 95000. 23.01.2024 6 ದಿನಗಳ ಜ್ಯೋತಿರ್ಲಿಂಗ ದರ್ಶನ, ಉಜ್ಜಯಿನಿ ಮಹಾಕಾಳೇಶ್ವರ,ಓಂಕಾರೇಶ್ವರ, ಮಾಂಡು,ಸಾಂಚಿ ಇಂದೋರ್ 35000. 16.03.2024 6 ದಿನಗಳ ಕಾಶಿ ಯಾತ್ರೆ ಪ್ರಯಾಗ್ ರಾಜ್,ಅಯೋಧ್ಯ,ಕಾಶಿ,ಗಯಾ 35000. ಸಂಪರ್ಕಿಸಿ: ತತ್ವಮಸಿ ಟೂರ್ಸ್ 9663775484 7795787484

★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 03.01.2024 10ದಿನಗಳು ರಾಜಸ್ಥಾನಪ್ರವಾಸ. 16.01.2024 10ದಿನಗಳು ಗುಜರಾತ್ ಪ್ಯಾಕೇಜ್. 10.01.2024 4ದಿನಗಳು ಉಜ್ಜೈನ್,ಓಂಕಾರೇಶ್ವರ ಪ್ಯಾಕೇಜ್.9945445809/ 9902433500

7/11 ದಿನಗಳ ಸಿಂಗಪುರ, ಮಲೇಷ್ಯಾ ಮತ್ತು ಥೈಲ್ಯಾಂಡ್. 10 ದಿನಗಳ ಕಾಂಬೋಡಿಯಾ ಮತ್ತು ವಿಯೆಟ್ನಾಂ, 18 ದಿನಗಳ ಯುಕೆ ಮತ್ತು ಯುರೋಪ್, 7 ದಿನಗಳ ಜಪಾನ್, 6 ದಿನಗಳ ಅಂಡಮಾನ್. ಭಟ್ ಟ್ರಾವೆಲ್ಸ್: 9844037295

ವ್ಯಾಪಾರ

Business to Business

Business

ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಜ್ಞಾತ ಸ್ಥಳಕ್ಕೆ ಅಲೆಕ್ಸಿ ನವಾಲ್ನಿ: ಬೆಂಬಲಿಗರ ಆರೋಪ

ಮಾಸ್ಕೊ (ಎಎಫ್‌ಪಿ): ರಷ್ಯಾದ ವಿರೋಧ ಪಕ್ಷದ ನಾಯಕ, ಬಂಧಿತ ಅಲೆಕ್ಸಿ ನವಾಲ್ನಿ ಅವರನ್ನು ಮಾಸ್ಕೊ ಸಮೀಪದ ಕಾರಾಗೃಹದಿಂದ ಅಜ್ಞಾತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ಅವರ ವಕ್ತಾರ ಶುಕ್ರವಾರ ಆರೋಪಿಸಿದ್ದಾರೆ.

‘ಅಲೆಕ್ಸಿ ಅವರನ್ನು ಡಿ.11ರಂದು ಇಲ್ಲಿನ ವ್ಲಾಡಿಮಿರ್ ಕಾರಾಗೃಹದಿಂದ ಬೇರೆಡೆಗೆ ಕರೆದೊಯ್ಯಲಾಗಿದೆ. ಎಲ್ಲಿಗೆ ಕರೆದೊಯ್ಯಲಾಗಿದೆ ಎಂದು ತಿಳಿದುಬಂದಿಲ್ಲ. ವಕೀಲರು ಡಿ.6ರಿಂದಲೂ ಅಲೆಕ್ಸಿ ಅವರನ್ನು ನೋಡಿಲ್ಲ. ಅವರು ಅದೇ ಕಾರಾಗೃಹದಲ್ಲಿ ಇದ್ದಿದ್ದರೆ, ಭೇಟಿಯಾಗಲು ಏಕೆ ಅವಕಾಶ ನೀಡುತ್ತಿಲ್ಲ’ ಎಂದು ಅಲೆಕ್ಸಿ ಬೆಂಬಲಿಗರಾದ ಕಿರಾ ಯಾರ್ಮಿಶ್ ಹೇಳಿದರು.

ಭಯೋತ್ಪಾದಕ ಕೃತ್ಯದಲ್ಲಿ ಭಾಗಿಯಾದ ಪ್ರಕರಣದಲ್ಲಿ ಅಲೆಕ್ಸಿ ಅವರು ಜೈಲು ಶಿಕ್ಷೆ ಅನುಭವಿಸುತ್ತಿದ್ದಾರೆ.

ದೇಶದ ರಫ್ತು ಶೇ 2.83 ಇಳಿಕೆ

ನವದೆಹಲಿ (ಪಿಟಿಐ): ದೇಶದ ರಫ್ತು ಪ್ರಮಾಣ ಪ್ರಸಕ್ತ ನವೆಂಬರ್‌ನಲ್ಲಿ ಶೇ 2.83ರಷ್ಟು ಇಳಿಕೆಯಾಗಿ, ₹2.81 ಲಕ್ಷ ಕೋಟಿಗೆ ತಲುಪಿದೆ. ಹಿಂದಿನ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2.89 ಲಕ್ಷ ಕೋಟಿ ಇತ್ತು ಎಂದು ಕೇಂದ್ರ ಸರ್ಕಾರ ಶುಕ್ರವಾರ ತಿಳಿಸಿದೆ.

ಆಮದು ಪ್ರಮಾಣವು ಹಿಂದಿನ ವರ್ಷದ ನವೆಂಬರ್‌ನಿಂದ ಪ್ರಸಕ್ತ ವರ್ಷದ ನವೆಂಬರ್‌ಗೆ ಹೋಲಿಸಿದರೆ ₹4.72 ಲಕ್ಷ ಕೋಟಿಯಿಂದ ₹4.52 ಲಕ್ಷ ಕೋಟಿಗೆ ಇಳಿಕೆ ಆಗಿದೆ ಎಂದು ಸರ್ಕಾರ ಬಿಡುಗಡೆ ಮಾಡಿದ ಅಂಕಿ–ಅಂಶಗಳು ತಿಳಿಸಿವೆ.

ದೇಶದ ವ್ಯಾಪಾರ ಕೊರತೆಯು ನವೆಂಬರ್‌ನಲ್ಲಿ ₹1.70 ಲಕ್ಷ ಕೋಟಿ ಇತ್ತು.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–

ನವೆಂಬರ್ ಅವಧಿಯಲ್ಲಿ ರಫ್ತು ಶೇ 6.51 ಇಳಿಕೆಯಾಗಿ ₹23.14 ಲಕ್ಷ ಕೋಟಿಗೆ ತಲುಪಿದೆ. ಇದೇ ಅವಧಿಯಲ್ಲಿ ಆಮದು ಪ್ರಮಾಣ ಶೇ 8.67ರಷ್ಟು ಇಳಿಕೆಯಾಗಿ ₹36.95 ಲಕ್ಷ ಕೋಟಿಗೆ ತಲುಪಿದೆ ಎಂದು ವಿವರಿಸಿವೆ.

ಜಾಗತಿಕ ಆರ್ಥಿಕ ಮಂದಗತಿಯ ನಡುವೆಯೂ ಭಾರತದ ರಫ್ತು ಆಶಾದಾಯಕ-ವಾಗಿದೆ ಎಂದು ವಾಣಿಜ್ಯ ಕಾರ್ಯದರ್ಶಿ ಸುನಿಲ್ ಬರ್ತ್ವಾಲ್ ಹೇಳಿದ್ದಾರೆ.

ಎಚ್–1ಬಿ ವೀಸಾ: ಮಿತಿ ತಲುಪಿದ ಅರ್ಜಿಗಳ ಸಂಖ್ಯೆ

ವಾಷಿಂಗ್ಟನ್ (ಪಿಟಿಐ): ಎಚ್–1ಬಿ ವೀಸಾ ಕೋರಿ, 2024ನೇ ಹಣಕಾಸು ವರ್ಷಕ್ಕೆ ನಿಗದಿ ಮಾಡಿರುವ ಸಂಖ್ಯೆಯಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ ಎಂದು ಅಮೆರಿಕದ ಪೌರತ್ವ ಮತ್ತು ವಲಸೆ ಸೇವೆ ಸಂಸ್ಥೆ (ಯುಎಸ್‌ಸಿಐಎಸ್) ಹೇಳಿದೆ.

ವೀಸಾಕ್ಕೆ ಆಯ್ಕೆಗೊಳ್ಳದ ಅರ್ಜಿದಾರರಿಗೆ ಆನ್‌ಲೈನ್ ಮೂಲಕ ಮಾಹಿತಿ ನೀಡಲಾಗುವುದು ಎಂದು ಯುಎಸ್‌ಸಿಐಎಸ್ ತಿಳಿಸಿದೆ.

ಅಮೆರಿಕದಲ್ಲಿ ಉದ್ಯೋಗ ಪಡೆದವರಿಗೆ ಎಚ್–1ಬಿ ವೀಸಾ ನೀಡಲಾಗುತ್ತದೆ. ಹೆಚ್ಚು ಕೌಶಲ ಹೊಂದಿದ ವೃತ್ತಿಪರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಅಮೆರಿಕದ ಕಂಪನಿಗಳಿಗೆ ಅವಕಾಶ ಇದ್ದು, ಭಾರತ ಮತ್ತು ಚೀನಾ ಪ್ರಜೆಗಳು ಹೆಚ್ಚಿನ ಸಂಖ್ಯೆಯಲ್ಲಿ ನೇಮಕಗೊಳ್ಳುತ್ತಾರೆ.

ಸರ್ಕಾರ ಹೇರಿರುವ ಮಿತಿ ಪ್ರಕಾರ, ವರ್ಷಕ್ಕೆ 65 ಸಾವಿರ ಎಚ್–1ಬಿ ವೀಸಾ ವಿತರಣೆಗೆ ಅವಕಾಶ ಇದೆ. ‘ವಿಶೇಷ ವಿನಾಯಿತಿ’ಯಡಿ 20 ಸಾವಿರ ವೀಸಾಗಳನ್ನು ವಿತರಿಸಲಾಗುತ್ತದೆ. ಈ ಎರಡೂ ವಿಧದ ವೀಸಾಗಳ ವಿತರಣೆಗೆ ನಿಗದಿ ಮಾಡಿರುವ ಸಂಖ್ಯೆಗೆ ತಕ್ಕಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ ಎಂದು ಯುಎಸ್‌ಸಿಐಎಸ್ ಹೇಳಿದೆ.

ಅಮೆರಿಕದ ಹಣಕಾಸು ವರ್ಷವು ಅಕ್ಟೋಬರ್ 1ರಿಂದ ಸೆಪ್ಟೆಂಬರ್ 30ರವರೆಗೆ ಇರುತ್ತದೆ.

ಐಪಿಎಸ್ ಅಧಿಕಾರಿಗೆ 15 ದಿನ ಜೈಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಚೆನ್ನೈ: ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ದಾಖಲಿಸಿದ್ದ ಕ್ರಿಮಿನಲ್ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಐಪಿಎಸ್ ಅಧಿಕಾರಿ ಜಿ.ಸಂಪತ್‌ಕುಮಾರ್ ಅವರಿಗೆ 15 ದಿನಗಳ ಜೈಲು ಶಿಕ್ಷೆ ವಿಧಿಸಿ ಮದ್ರಾಸ್ ಹೈಕೋರ್ಟ್ ಶುಕ್ರವಾರ ಆದೇಶಿಸಿದೆ.

ತನ್ನ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಸಂಪತ್ ಕುಮಾರ್ ಅವರಿಗೆ ಅನುಕೂಲವಾಗಲು ತೀರ್ಪನ್ನು 30 ದಿನಗಳ ಕಾಲ ಹೈಕೋರ್ಟ್ ಅಮಾನತಿನಲ್ಲಿಟ್ಟಿದೆ. ತೀರ್ಪನ್ನು ಅಮಾನತಿನಲ್ಲಿ ಡುವಂತೆ ಸಂಪತ್‌ಕುಮಾರ್ ಮನವಿ ಮಾಡಿರಲಿಲ್ಲ.

ನ್ಯಾಯಮೂರ್ತಿಗಳಾದ ಎಸ್.ಎಸ್.ಸುಂದರ್ ಹಾಗೂ ಸುಂದರಮೋಹನ್ ಅವರಿದ್ದ ವಿಭಾಗೀಯ ನ್ಯಾಯಪೀಠ ಅರ್ಜಿ

ವಿಚಾರಣೆ ನಡೆಸಿತು.

2013ರ ಐಪಿಎಲ್ ಬೆಟ್ಟಿಂಗ್ ಹಗರಣಕ್ಕೆ ತಮಗೆ ನಂಟಿದೆ ಎಂಬುದಾಗಿ ಸಂಪತ್‌ಕುಮಾರ್ ಹೇಳಿಕೆ ನೀಡಿದ್ದರು. ಇದಕ್ಕಾಗಿ ಅವರ ವಿರುದ್ಧ ಧೋನಿ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಈ ವಿಚಾರವಾಗಿ ಪ್ರತಿಕ್ರಿಯಿಸುವ ವೇಳೆ, ಸಂಪತ್‌ಕುಮಾರ್ ಅವರು ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ವಿರುದ್ಧ ಅವಹೇಳನಕಾರಿ ಆರೋಪಗಳನ್ನು ಮಾಡಿದ್ದರು ಎಂದು ದೂರಿದ್ದ ಧೋನಿ, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	585-590

ಅಡಿಕೆ

ಬಂಟ್ವಾಳ

ಕೋಕ	15000-27500
ಹೊಸತು	27500-36000
ಹಳತು	42500-45500

ಹೊನ್ನಾವರ

ಹಳೆಚಾಲಿ	36000-38000

ಕಾರ್ಕಳ

ಹೊಸತು	25000-36500
ಹಳತು	30000-46000

ಕುಮಟ

ಚಿಪ್ಪು	26089-34209
ಕೋಕ	20169-31009
ಫ್ಯಾಕ್ಟರಿ	11509-23299
ಹಳೆಚಾಲಿ	37369-39509
ಹೊಸಚಾಲಿ	33999-35309

ಪುತ್ತೂರು

ಕೋಕ	110000-25000
ಹೊಸತು	27000-36500

ಶಿವಮೊಗ್ಗ

ಬೆಟ್ಟೆ	45009-53399
ಗೊರಬಲು	17009-36698
ಹೊಸತು	44509-47899
ರಾಶಿ	42018-47899
ಸರಕು	57029-79296

ಸಿದ್ದಾಪುರ

ಬಿಳಿಗೋಟು	31189-35900
ಚಾಲಿ	36699-38899
ಕೋಕ	31299-33700
ಕೆಂಪುಗೋಟು	32099-32809
ರಾಶಿ	43609-47219
ತಟ್ಟಿಬೆಟ್ಟೆ	40009-42379

ಶಿರಸಿ

ಬೆಟ್ಟೆ	36609-45299
ಬಿಳಿಗೋಟು	31310-36989
ಚಾಲಿ	37009-39508
ಕೆಂಪುಗೋಟು	33547-33981
ರಾಶಿ	45429-47619

ಯಲ್ಲಾಪುರ

ಅಪಿ	58179-58179
ಬಿಳಿಗೋಟು	24899-34309
ಚಾಲಿ	36610-39799
ಕೋಕ	18599-31569
ಕೆಂಪುಗೋಟು	24899-34309
ರಾಶಿ	47000-56399
ತಟ್ಟಿಬೆಟ್ಟೆ	37699-46799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,400	13500	-	190.60
ಎಸಿ	7,690	7100	-	
ಆರ್‌ಪಿ	10,200	10800	-	ಲಂಡನ್-
ಆರ್‌ಸಿ	6,360	6400	-	2825 ಡಾಲರ್ಸ್

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಣಿಪುರ: 23 ಶವಗಳ ಅಂತ್ಯ ಸಂಸ್ಕಾರ

ಗುವಾಹಟಿ: ಮಣಿಪುರದಲ್ಲಿ ನಡೆದ ಹಿಂಸಾಚಾರ ಸಂದರ್ಭದಲ್ಲಿ ಮೃತಪಟ್ಟಿದ್ದ ಕುಕಿ ಸಮುದಾಯಕ್ಕೆ ಸೇರಿದ ಕನಿಷ್ಠ 23 ಜನರ ಮೃತದೇಹಗಳ ಅಂತ್ಯಸಂಸ್ಕಾರವನ್ನು ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಶುಕ್ರವಾರ ನಡೆಸಲಾಯಿತು.

ಮೃತರ ಕುಟುಂಬಸ್ಥರು ಅಂತಿಮ ನಮನ ಸಲ್ಲಿಸಿದ ನಂತರ ಫೀಜಾಂಗ್ ಗ್ರಾಮದ ಹುತಾತ್ಮರ ಸಮಾಧಿ ಸ್ಥಳದಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು.

ಕಳೆದ ಮೇ ಮತ್ತು ಜೂನ್‌ನಲ್ಲಿ ಮೈತೇಯಿ ಸಮುದಾಯದ ದುಷ್ಕರ್ಮಿಗಳು ನಡೆಸಿದ ದಾಳಿಯಲ್ಲಿ ಅವರು ಮೃತಪಟ್ಟಿದ್ದರು ಎಂಬ ಆರೋಪ ಇದೆ. 19 ಸಂತ್ರಸ್ತರ ಶವವನ್ನು ಇಂಫಾಲ್ ಆಸ್ಪತ್ರೆಯ ಶವಾಗಾರದಿಂದ ಕಾಂಗ್‌ಪೋಕ್ಪಿಗೆ ಶುಕ್ರವಾರ ಏರ್‌ಲಿಫ್ಟ್ ಮಾಡಲಾಗಿತ್ತು. ನಾಲ್ಕು ಮೃತದೇಹಗಳು ಕಾಂಗ್‌ಪೋಕ್ಪಿ ಶವಾಗಾರದಲ್ಲಿಯೇ ಇದ್ದವು.

ಗುರುವಾರ, ಕುಕಿ ಸಮುದಾಯದ 41 ಮೃತದೇಹಗಳನ್ನು ಚುರಾಚಾಂದಪುರಕ್ಕೆ ಮತ್ತು ಮೈತೇಯಿ ಸಮುದಾಯಕ್ಕೆ ಸೇರಿದ ನಾಲ್ಕು ಶವಗಳನ್ನು ಚುರಾಚಾಂದಪುರದ ಶವಾಗಾರದಿಂದ ಇಂಫಾಲ್‌ಗೆ ಸಾಗಿಸಲಾಗಿತ್ತು.

ಕುಕಿ ಜನಾಂಗದ 87 ಮೃತದೇಹಗಳ ಅಂತ್ಯ ಸಂಸ್ಕಾರವು ಮುಂದಿನ ವಾರ ಚುರಾಚಾಂದಪುರದಲ್ಲಿ ನಡೆಯಲಿದೆ.

‘ದೆಹಲಿ ವಿಮಾನನಿಲ್ದಾಣ: ಮೇ ಒಳಗೆ ಸ್ಕ್ಯಾನರ್ ಅಳವಡಿಕೆ’

ನವದೆಹಲಿ(ಪಿಟಿಐ): ದೆಹಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಪೂರ್ಣ ದೇಹವನ್ನು ಸ್ಕ್ಯಾನ್ ಮಾಡುವ ವ್ಯವಸ್ಥೆಯನ್ನು ಬರುವ ಮೇ ಒಳಗಾಗಿ ಅಳವಡಿಸಲಾ-ಗುತ್ತದೆ.

ಇದರ ಜೊತೆಗೆ, ಕಂಪ್ಯೂಟೆಡ್ ಟೊಮೊಗ್ರಾಫಿ ಎಕ್ಸ್ ರೆ (ಸಿಟಿಎಕ್ಸ್) ಯಂತ್ರಗಳನ್ನು ಸಹ ಅಳವಡಿಸಲಾಗು-ತ್ತದೆ ಎಂದು ನಾಗರಿಕ ವಿಮಾನ ಭದ್ರತಾ ಬ್ಯುರೊದ (ಬಿಸಿಎಎಸ್) ನಿರ್ದೇಶಕ ಜನರಲ್ ಜುಲ್ಫೀಕರ್ ಹಸನ್ ಶುಕ್ರವಾರ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ದೇಶದ ಇತರ ವಿಮಾನ ನಿಲ್ದಾಣಗಳಲ್ಲಿ ಸ್ಕ್ಯಾನರ್‌ಗಳು ಹಾಗೂ ಸಿಟಿಎಕ್ಸ್ ಯಂತ್ರಗಳನ್ನು ಅಳವಡಿಸುವ ಗಡುವನ್ನು ವಿಸ್ತರಿಸ ಲಾಗುತ್ತದೆ ಎಂದರು.

ಸಿಟಿಎಕ್ಸ್ ಯಂತ್ರಗಳ ನೆರವಿನಿಂದ ತಪಾಸಣೆ ನಡೆಸಿದಾಗ, ಪ್ರಯಾಣಿಕರು ತಮ್ಮ ಬ್ಯಾಗುಗಳಲ್ಲಿರುವ ಎಲೆಕ್ಟ್ರಾನಿಕ್ ವಸ್ತುಗಳನ್ನು ಹೊರಗೆ ತೆಗೆಯುವ ಅಗತ್ಯವಿರುವುದಿಲ್ಲ.ಸ್ಕ್ಯಾನರ್‌ಗಳನ್ನು ಅಳವಡಿಸಲು ಮುಂದಿನ ವರ್ಷ ಡಿ.31 ಕೊನೆಯ ದಿನವಾಗಿದೆ.

ಠಾಣೆ ಮೇಲೆ ದಾಳಿ: 11 ಮಂದಿ ಸಾವು

ದುಬೈ (ಎಪಿ): ಶಂಕಿತ ಪ್ರತ್ಯೇಕತಾವಾದಿಗಳ ಗುಂಪೊಂದು ಆಗ್ನೇಯ ಇರಾನ್ ಪೊಲೀಸ್ ಠಾಣೆ ಮೇಲೆ ಗುರುವಾರ ತಡರಾತ್ರಿ ನಡೆಸಿದ ದಾಳಿಯಲ್ಲಿ 11 ಮಂದಿ ಪೊಲೀಸರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಮಾಧ್ಯಮವೊಂದು ಶುಕ್ರವಾರ ವರದಿ ಮಾಡಿದೆ.

ಸಿಸ್ತಾನ್ ಮತ್ತು ಬಲೂಚಿಸ್ತಾನ ಪ್ರಾಂತ್ಯದ ಉಪ ಗವರ್ನರ್ ಅಲಿ ರಿಝಾ ಮರ್ಹೆಮತಿ ಅವರು, ‘ತಡರಾತ್ರಿ 2 ಗಂಟೆ ವೇಳೆ ನಡೆಸಿದ ದಾಳಿಯಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಸೈನಿಕರು ಮೃತಪಟ್ಟಿದ್ದಾರೆ. ಪೊಲೀಸರು ನಡೆಸಿದ ಪ್ರತಿದಾಳಿಯಲ್ಲಿ ಹಲವು ದಾಳಿಕೋರರೂ ಸತ್ತಿದ್ದಾರೆ’ ಎಂದು ತಿಳಿಸಿದ್ದಾರೆ.

ಜೈಷ್–ಅಲ್–ಅದಿ ಪ್ರತ್ಯೇಕವಾದಿಗಳ ಗುಂಪು ದಾಳಿ ನಡೆಸಿರಬಹುದು ಎಂದು ಸರ್ಕಾರಿ ಸ್ವಾಮ್ಯದ ಮಾಧ್ಯಮ ಆರೋಪಿಸಿದೆ.

ಟೆಸ್ಟ್ ಕ್ರಿಕೆಟ್: ಭಾರತದ ವನಿತೆಯರಿಗೆ ಎರಡನೇ ದಿನವೇ ಭಾರಿ ಮುನ್ನಡೆ

ದೀಪ್ತಿ ಸ್ಪಿನ್ ಮೋಡಿಗೆ ಕುಸಿದ ಇಂಗ್ಲೆಂಡ್

ನವಿ ಮುಂಬೈ (ಪಿಟಿಐ): ಆಫ್‌ಬ್ರೇಕ್ ಬೌಲರ್ ದೀಪ್ತಿ ಶರ್ಮಾ ಅವರ ಮೋಡಿಯ ಮುಂದೆ ಇಂಗ್ಲೆಂಡ್ ಬ್ಯಾಟರ್‌ಗಳು ಕುಸಿದರು.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಹಿಳಾ ಟೆಸ್ಟ್ ಕ್ರಿಕೆಟ್ ಪಂದ್ಯದ ಎರಡನೇ ದಿನವಾದ ಶುಕ್ರವಾರ ದೀಪ್ತಿ (5.3–4–7–5) ಸ್ಪಿನ್ ದಾಳಿಗೆ ತತ್ತರಿಸಿದ ಇಂಗ್ಲೆಂಡ್ ತಂಡವು 136 ರನ್‌ಗಳಿಗೆ ಆಲೌಟ್ ಆಯಿತು. ಮೊದಲ ಇನಿಂಗ್ಸ್‌ನಲ್ಲಿ ದೀಪ್ತಿ (67; 113ಎ, 4X10, 6X1) ಬ್ಯಾಟಿಂಗ್‌ನಲ್ಲಿ ಮಿಂಚಿದ್ದರು.

ಭಾರತ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 428 ರನ್ ಮೊತ್ತಕ್ಕೆ ಪ್ರತ್ಯುತ್ತರ ನೀಡುವಲ್ಲಿ ಹೀಥರ್ ನೈಟ್ ಬಳಗವು ಎಡವಿತು. 292 ರನ್‌ಗಳ ಹಿನ್ನಡೆ ಅನುಭವಿಸಿತು. ನಥಾಲಿ ಶಿವರ್ ಬ್ರಂಟ್ (59; 70ಎ) ಅವರೊಬ್ಬರು ಮಾತ್ರ ಅರ್ಧಶತಕ ಗಳಿಸಿದರು. ಉಳಿದವರು ವೈಫಲ್ಯ ಅನುಭವಿಸಿದರು.

ಅದಕ್ಕೆ ಕಾರಣರಾಗಿದ್ದು ದೀಪ್ತಿ ಬೌಲಿಂಗ್. ಮಧ್ಯಮ ಮತ್ತು ಕೆಳಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲದಂತೆ ನೋಡಿಕೊಂಡರು. ರೇಣುಕಾ ಸಿಂಗ್ ಮತ್ತು ಪೂಜಾ ಅವರು ಮೇಲಿನ ಕ್ರಮಾಂಕದ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದರು.

ಭಾರತ ಮಹಿಳಾ ಕ್ರಿಕೆಟ್ ತಂಡದ ಬೌಲರ್ ದೀಪ್ತಿ ಶರ್ಮಾ ಐದು ವಿಕೆಟ್ ಗಳಿಸಿದ ಚೆಂಡನ್ನು ಪ್ರದರ್ಶಿಸಿದರು. ಸಹ ಆಟಗಾರ್ತಿಯರು ಸಂಭ್ರಮಿಸಿದರು –ಪಿಟಿಐ ಚಿತ್ರ

ಫಾಲೋಆನ್ ಹೇರುವ ಅವಕಾಶ ಆತಿಥೇಯ ತಂಡಕ್ಕೆ ಇತ್ತು. ಆದರೂ ಎರಡನೇ ಇನಿಂಗ್ಸ್ ಆಡಲು ನಿರ್ಧರಿಸಿದ ಹರ್ಮನ್‌ಪ್ರೀತ್ ಕೌರ್ ಬಳಗವು ದಿನದಾಟದ ಮುಕ್ತಾಯಕ್ಕೆ 42 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 186 ರನ್ ಗಳಿಸಿದೆ. ನಾಯಕಿ ಹರ್ಮನ್‌ಪ್ರೀತ್ (ಬ್ಯಾಟಿಂಗ್ 44; 67ಎ) ಮತ್ತು ಪೂಜಾ (ಬ್ಯಾಟಿಂಗ್ 17) ಕ್ರೀಸ್‌ನಲ್ಲಿದ್ದಾರೆ. ಒಟ್ಟು 478 ರನ್‌ಗಳ ಭಾರಿ ಮುನ್ನಡೆ ಸಾಧಿಸಿದೆ.

ಇದೀಗ ಭಾರತ ಮಹಿಳಾ ತಂಡವು ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ದೊಡ್ಡ ಗೆಲುವಿನ ಗುರಿಯೊಡ್ಡಿದ ದಾಖಲೆಯನ್ನು ಬರೆಯಲಿದೆ. 1998ರಲ್ಲಿ ಕೊಲಂಬೊದಲ್ಲಿ ನಡೆದಿದ್ದ ಪಂದ್ಯದಲ್ಲಿ ಶ್ರೀಲಂಕಾ ತಂಡವು ಪಾಕಿಸ್ತಾನಕ್ಕೆ 410 ರನ್‌ಗಳ ಗುರಿ ನೀಡಿದ್ದು ಇದುವರೆಗಿನ ದಾಖಲೆಯಾಗಿತ್ತು. ಆದರೆ, ಮೊದಲ ಇನಿಂಗ್ಸ್‌ನಲ್ಲಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ ಅರ್ಧಶತಕ ಗಳಿಸಿದ್ದ ಮೈಸೂರು ಹುಡುಗಿ ಶುಭಾ ಸತೀಶ್ ಎರಡನೇ ಇನಿಂಗ್ಸ್‌ನಲ್ಲಿ ಇನ್ನೂ ಬ್ಯಾಟಿಂಗ್ ಮಾಡಲು ಕ್ರೀಸ್‌ಗೆ ಬಂದಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಭಾರತ:** 104.3 ಓವರ್‌ಗಳಲ್ಲಿ 428 (ದೀಪ್ತಿ ಶರ್ಮಾ 67, ಪೂಜಾ ವಸ್ತ್ರಕರ್ ಔಟಾಗದೆ 10, ಲಾರೆನ್ ಬೆಲ್ 67ಕ್ಕೆ3, ಸೋಫಿ ಎಕ್ಲೆಸ್ಟೋನ್ 91ಕ್ಕೆ3) **ಇಂಗ್ಲೆಂಡ್:** 35.3 ಓವರ್‌ಗಳಲ್ಲಿ 136 (ನಥಾಲಿಯ ಶಿವರ್ ಬ್ರಂಟ್ 59, ಡೇನಿಲ್ ವ್ಯಾಟ್ 19, ಸ್ನೇಹಾ ರಾಣಾ 25ಕ್ಕೆ2, ದೀಪ್ತಿ ಶರ್ಮಾ 7ಕ್ಕೆ5) ಎರಡನೇ ಇನಿಂಗ್ಸ್: **ಭಾರತ:** 42 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 186 (ಶಫಾಲಿ ವರ್ಮಾ 33, ಸ್ಮೃತಿ ಮಂದಾನ 26, ಜೆಮಿಮಾ ರಾಡ್ರಿಗಸ್ 27, ಹರ್ಮನ್‌ಪ್ರೀತ್ ಕೌರ್ ಬ್ಯಾಟಿಂಗ್ 44, ದೀಪ್ತಿ ಶರ್ಮಾ 20, ಪೂಜಾ ವಸ್ತ್ರಾಕರ್ ಬ್ಯಾಟಿಂಗ್ 17, ಶಾರ್ಲೊಟ್ಟೀನ್ 68ಕ್ಕೆ4, ಸೋಫಿ ಎಕ್ಸೆಲ್‌ಸ್ಟೋನ್ 76ಕ್ಕೆ2)

ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್: ಪಾಕ್ ಹೋರಾಟ

ಪರ್ತ್ (ರಾಯಿಟರ್ಸ್): ಪದಾರ್ಪಣೆ ಪಂದ್ಯದಲ್ಲಿ ವೇಗದ ಜೊತೆಗೆ ವಿಶ್ವಾಸದಿಂದ ಬೌಲ್ ಮಾಡಿದ ಅಮಿರ್ ಜಮಾಲ್ ಆರು ವಿಕೆಟ್‌ಗಳನ್ನು ಪಡೆದರು. ಪಾಕಿಸ್ತಾನ ತಂಡ ಅವರ ಉತ್ತಮ ಬೌಲಿಂಗ್ ನೆರವಿನಿಂದ ಪರ್ತ್‌ನಲ್ಲಿ ನಡೆಯುತ್ತಿರುವ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವಾದ ಶುಕ್ರವಾರ ಆಸ್ಟ್ರೇಲಿಯಾ ತಂಡವನ್ನು 487 ರನ್‌ಗಳಿಗೆ ಆಲೌಟ್ ಆಡಿತು.

ದಿನದಾಟ ಮುಗಿದಾಗ ಪಾಕಿಸ್ತಾನ ತಂಡ ಎಚ್ಚರಿಕೆಯ ಆರಂಭ ಮಾಡಿದ್ದು 53 ಓವರುಗಳಲ್ಲಿ 2 ವಿಕೆಟ್‌ಗೆ 132 ರನ್ ಗಳಿಸಿದೆ. ಆರಂಭ ಆಟಗಾರ ಅಬ್ದುಲ್ಲಾ ಶಫೀಖ್ 42 ರನ್ ಗಳಿಸಿದರು. ಪ್ರವಾಸಿ ತಂಡ ಇನಿಂಗ್ಸ್ ಬಾಕಿ ತೀರಿಸಲು ಇನ್ನೂ 355 ರನ್ ಗಳಿಸಬೇಕಾಗಿದೆ.

ಅಬ್ದುಲ್ಲಾ ಶಫೀಕ್ ವಿಕೆಟ್ ಗಳಿಸಿದ ಆಫ್ ಸ್ಪಿನ್ನರ್ ನಥಾನ್ ಲಯನ್ ಟೆಸ್ಟ್‌ಗಳಲ್ಲಿ 497ನೇ ವಿಕೆಟ್ ಪಡೆದರು.

ಇದಕ್ಕೆ ಮೊದಲು, ಮಿಚೆಲ್ ಮಾರ್ಷ್ ಅವರ 90 ರನ್‌ಗಳ ನೆರವಿನಿಂದ ಆಸ್ಟ್ರೇಲಿಯಾದ ಮೊದಲ ಇನಿಂಗ್ಸ್ ಮೊತ್ತ ಉಬ್ಬಿತು. ಮೊದಲ ದಿನ ಡೇವಿಡ್ ವಾರ್ನರ್ 164 ರನ್ ಹೊಡೆದಿದ್ದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: **ಆಸ್ಟ್ರೇಲಿಯಾ:** 113.2 ಓವರುಗಳಲ್ಲಿ 487 (ಡೇವಿಡ್ ವಾರ್ನರ್ 164, ಟ್ರಾವಿಸ್ ಹೆಡ್ 40, ಮಿಚೆಲ್ ಮಾರ್ಷ್ 90, ಅಲೆಕ್ಸ್ ಕ್ಯಾರಿ 34; ಅಮಿರ್ ಜಮಾಲ್ 111ಕ್ಕೆ6); **ಪಾಕಿಸ್ತಾನ:** 53 ಓವರುಗಳಲ್ಲಿ 2 ವಿಕೆಟ್‌ಗೆ 132 (ಅಬ್ದುಲ್ಲಾ ಶಫೀಕ್ 42, ಇಮಾಂ ಉಲ್ ಹಕ್ ಔಟಾಗದೇ 38, ಶಾನ್ ಮಸೂದ್ 30)

DhanlaxmiBank
DHANLAXMI BANK
is hiring
JUNIOR/SENIOR OFFICERS
For details, visit our website
Ph: 040-2354 7236
www.dhanbank.com/careers

ಮುಂಬೈ ಇಂಡಿಯನ್ಸ್‌ಗೆ ಪಾಂಡ್ಯ ನಾಯಕ

5 ಬಾರಿಯ ಚಾಂಪಿಯನ್ ರೋಹಿತ್ ನಾಯಕತ್ವಕ್ಕೆ ವಿರಾಮ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಹಾರ್ದಿಕ್ ಪಾಂಡ್ಯ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ.

ತಂಡವು ಐದು ಸಲ ಪ್ರಶಸ್ತಿ ಜಯಿಸಿದಾಗಲೂ ನಾಯಕರಾಗಿದ್ದ ರೋಹಿತ್ ಶರ್ಮಾ ಅವರನ್ನು ಕೆಳಗಿಳಿಸಲಾಗಿದೆ.

ಕಳೆದ ಎರಡು ಆವೃತ್ತಿಗಳಲ್ಲಿ ಗುಜರಾತ್ ಟೈಟನ್ಸ್ ತಂಡದ ನಾಯಕರಾಗಿದ್ದ ಹಾರ್ದಿಕ್ ಅವರನ್ನೂ ಹೋದ ತಿಂಗಳಷ್ಟೇ ನಡೆದಿದ್ದ ಟ್ರೇಡ್‌ನಲ್ಲಿ ಮುಂಬೈ ತಂಡವು ಸೇರ್ಪಡೆ ಮಾಡಿಕೊಂಡಿತ್ತು.

‘ನಾಯಕತ್ವದ ಬದಲಾವಣೆಯು ನಮ್ಮ ಫ್ರ್ಯಾಂಚೈಸಿಯ ಭವಿಷ್ಯದ ಯೋಜನೆಯ ಭಾಗವಾಗಿದೆ. ರೋಹಿತ್ ಅವರ ಅತ್ಯದ್ಭುತವಾದ ನಾಯಕತ್ವ ಮತ್ತು ನೀಡಿರುವ ಸೇವೆಗೆ ಆಭಾರಿಯಾಗಿದ್ದೇವೆ. ಮುಂಬೈ ತಂಡಕ್ಕೆ ಮೊದಲಿನಿಂದಲೂ ಖ್ಯಾತನಾಮ ಆಟಗಾರರ ನಾಯಕತ್ವ ಲಭಿಸಿರುವುದು ಸೌಭಾಗ್ಯವೇ ಸರಿ. ಸಚಿನ್ ತೆಂಡೂಲ್ಕರ್, ಹರಭಜನ್ ಸಿಂಗ್, ರಿಕಿ ಪಾಂಟಿಂಗ್ ಮತ್ತು ರೋಹಿತ್ ಅವರು ತಂಡವನ್ನು ಬಲಿಷ್ಠಗೊಳಿಸಿದ್ದಾರೆ’ ಎಂದು ಫ್ರ್ಯಾಂಚೈಸಿಯು ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ರೋಹಿತ್ 2013ರಿಂದ ಮುಂಬೈ ತಂಡಕ್ಕೆ ನಾಯಕರಾಗಿದ್ದರು. ತಂಡವು ಅದೇ ವರ್ಷ ಮೊದಲ ಬಾರಿಗೆ ಚಾಂಪಿಯನ್ ಆಗಿತ್ತು. 2015, 2017, 2019 ಮತ್ತು 2020ರಲ್ಲಿಯೂ ಪ್ರಶಸ್ತಿ ಗೆದ್ದಿತ್ತು. ಹೋದ ಆವೃತ್ತಿಯಲ್ಲಿ ತಂಡವು ಪ್ಲೇ ಆಫ್ ಪ್ರವೇಶಿಸಿತ್ತು.

‘ಹಾರ್ದಿಕ್ ನಾಯಕತ್ವವನ್ನು ಸ್ವಾಗತಿಸುತ್ತೇನೆ. ಇದು ಮುಂಬೈ ತಂಡದ ಪರಂಪರೆ ಮತ್ತು ಭವಿಷ್ಯದ ದೃಷ್ಟಿಯಿಂದ ಮಹತ್ವದ ಭಾಗವಾಗಿದೆ’ ಎಂದು ಫ್ರ್ಯಾಂಚೈಸಿಯ ಗ್ಲೋಬಲ್ ಮುಖ್ಯಸ್ಥ ಮಹೇಲಾ ಜಯವರ್ಧನೆ ಹೇಳಿದ್ದಾರೆ.

ಹಾರ್ದಿಕ್ ಪಾಂಡ್ಯ ಮತ್ತು ರೋಹಿತ್ ಶರ್ಮಾ

‘ರೋಹಿತ್ ನಾಯಕತ್ವವು ಯುವ ಆಟಗಾರರಿಗೆ ಮಾರ್ಗದರ್ಶಿಯಾಗಿದೆ. ಅವರು ಮಾಡಿರುವ ದಾಖಲೆಯೇ ಒಂದು ಮೈಲಿಗಲ್ಲು. ಮುಂಬೈ ಇಂಡಿಯನ್ಸ್ ತಂಡವನ್ನು ಮತ್ತಷ್ಟು ಸಬಲಗೊಳಿಸಲು ಅವರು ಮುಂದೆಯೂ ಮಾರ್ಗದರ್ಶನ ನೀಡಲಿದ್ದಾರೆ’ ಎಂದಿದ್ದಾರೆ.

ರೋಹಿತ್ ಭಾರತ ಟೆಸ್ಟ್ ಮತ್ತು ಏಕದಿನ ತಂಡದ ನಾಯಕರಾಗಿದ್ದಾರೆ. ಈಚೆಗೆ ಅವರ ನಾಯಕತ್ವದಲ್ಲಿ ಭಾರತ ತಂಡವು ವಿಶ್ವಕಪ್ ಫೈನಲ್ ಪ್ರವೇಶಿಸಿತ್ತು.

ಮುಂಬೈ ತಂಡವು ಐಪಿಎಲ್ ಆರಂಭದಿಂದಲೂ ಇದೆ. ಚೆನ್ನೈ ಸೂಪರ್ ಕಿಂಗ್ಸ್ ಬಿಟ್ಟರೆ ಅತ್ಯಂತ ಯಶಸ್ವಿ ತಂಡ ಇದಾಗಿದೆ. ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಕೂಡ ಐದು ಸಲ ಪ್ರಶಸ್ತಿ ಜಯಿಸಿದೆ.

ಕರ್ನಾಟಕ ಸರಕಾರ
ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ
ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಸುಬ್ರಹ್ಮಣ್ಯ, ಕಡಬ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ 574238
ದೂರವಾಣಿ: 08257- 281224, 236200, 281200, 281265, 295300
E-mail: eokukkesubrahmanya@gmail.com
ಚಂಪಾಷಷ್ಠಿ ಮಹೋತ್ಸವ – 2023
ಉತ್ಸವಗಳ ವಿವರಗಳು:
ತಾ. 16.12.2023 ಶನಿವಾರ : ರಾತ್ರಿ ಹೂವಿನ ತೇರಿನ ಉತ್ಸವ
ತಾ. 17.12.2023 ಆದಿತ್ಯವಾರ : ರಾತ್ರಿ ಪಂಚಮಿ ರಥೋತ್ಸವ, ತೈಲಾಭ್ಯಂಜನ
ತಾ. 18.12.2023 ಸೋಮವಾರ : ಪ್ರಾತಃಕಾಲ ಚಂಪಾಷಷ್ಠಿ ಮಹಾರಥೋತ್ಸವ
ತಾ. 19.12.2023 ಮಂಗಳವಾರ : ಅವಭೃತೋತ್ಸವ, ನೌಕಾವಿಹಾರ
ಭಕ್ತಾದಿಗಳು ಶ್ರೀ ದೇವರ ಉತ್ಸವದಲ್ಲಿ ಪಾಲ್ಗೊಂಡು, ಶ್ರೀ ಸುಬ್ರಹ್ಮಣ್ಯ ದೇವರ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.
ವಿ.ಸೂ: 1) ತಾ.16.12.2023 (ಚೌತಿ) ಮತ್ತು ತಾ. 17.12.2023 (ಪಂಚಮಿ) ದಿನಗಳಲ್ಲಿ ಭಕ್ತಾದಿಗಳ ಪ್ರಾರ್ಥನೆ ಸೇವೆ ರಾತ್ರಿ ಹೊತ್ತಿನಲ್ಲಿ ಇರುವುದಿಲ್ಲ. ತಾ. 18.12.2023 (ಚಂಪಾಷಷ್ಠಿ) ದಿನದಂದು ಮಧ್ಯಾಹ್ನ ಪ್ರಾರ್ಥನೆ ಸೇವೆ ಇರುವುದಿಲ್ಲ. 2) ತಾ. 18.12.2023 ರ ಚಂಪಾಷಷ್ಠಿ ದಿನ ಆಶ್ಲೇಷ ಬಲಿ ಮತ್ತು ನಾಗಪ್ರತಿಷ್ಠೆ ಸೇವೆಗಳು ನೆರವೇರಲ್ಪಡುವುದಿಲ್ಲ. 3) ತಾ.16.12.2023 (ಚೌತಿ) ಮತ್ತು ತಾ. 17.12.2023 (ಪಂಚಮಿ) ದಿನಾಂಕ 18.12.2023 (ಚಂಪಾಷಷ್ಠಿ) ಮತ್ತು ತಾ.24.12.2023ರಂದು ಪಂಚಾಮೃತ ಮಹಾಭಿಷೇಕ ಸೇವೆ ನೆರವೇರುವುದಿಲ್ಲ.4) ವಾರ್ಷಿಕ ಚಂಪಾಷಷ್ಠಿ ಜಾತ್ರಾ ಪ್ರಯುಕ್ತ ತಾ.10.12.2023ರಿಂದ 24.12.2023ರ ವರೆಗೆ ಸಾಯಂಕಾಲದ ಆಶ್ಲೇಷ ಬಲಿ ಸೇವೆ ನೆರವೇರುವುದಿಲ್ಲ. 5) ಕಿರುಷಷ್ಠಿ ಮಹೋತ್ಸವವು ತಾ. 16.01.2024ರಂದು ಜರಗುವುದು.
ಶ್ರೀ ಎಚ್. ಬಸವರಾಜೇಂದ್ರ ಭಾ.ಆ.ಸೇ
ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ, ಬೆಂಗಳೂರು
ಶ್ರೀ ಮುಲ್ಲೈ ಮುಹಿಲನ್ ಎಂ.ಪಿ.ಭಾ.ಆ.ಸೇ
ಜಿಲ್ಲಾಧಿಕಾರಿಗಳು, ಮಂಗಳೂರು,ದ.ಕ.ಜಿಲ್ಲೆ
ಡಾ| ನಿಂಗಯ್ಯ ಎಂ.ಎ.;ಜಿಡಿಸಿ
ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಶ್ರೀ ರಾಜಣ್ಣ ಸಹಾಯಕ ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಮತ್ತು ಸಿಬ್ಬಂದಿ ವರ್ಗ
ಶ್ರೀ ಮೋಹನ ರಾಮ ಎಸ್. ಸುಳ್ಳಿ
ಅಧ್ಯಕ್ಷರು, ವ್ಯವಸ್ಥಾಪನಾ ಸಮಿತಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ
ಹಾಗೂ ವ್ಯವಸ್ಥಾಪನಾ ಸಮಿತಿಯ ಸದಸ್ಯರು
ಶ್ರೀ ಸೀತಾರಾಮ ಎಡಪಡಿತ್ತಾಯ,
ಶ್ರೀ ಲೋಕೇಶ್,ಶ್ರೀಮತಿ ವನಜಾ ವಿ.ಭಟ್,
ಶ್ರೀಮತಿ ಶೋಭಾ ಎಸ್.ಜಿ,
ಶ್ರೀ ಮನೋಹರ ರೈ,
ಶ್ರೀ ಪಿ.ಜಿ.ಎಸ್.ಎನ್. ಪ್ರಸಾದ್,
ಶ್ರೀ ದರ್ಬೆ ಪ್ರಸನ್ನ, ಶ್ರೀ ಶ್ರೀವತ್ಸ ವಿ.
ಸರ್ವ ಸದಸ್ಯರು, ಮಾಸ್ಟರ್‌ಪ್ಲಾನ್ ಮೇಲ್ವಿಚಾರಣಾ ಸಮಿತಿ

ಮಹೇಂದ್ರಸಿಂಗ್ ಧೋನಿಯ ಜೆರ್ಸಿ 'ಸೆವೆನ್'ಗೆ ನಿವೃತ್ತಿ ಗೌರವ

ನವದೆಹಲಿ (ಪಿಟಿಐ): ವಿಶ್ವಕಪ್ ವಿಜೇತ ಭಾರತ ತಂಡದ ನಾಯಕರಾಗಿದ್ದ ಮಹೇಂದ್ರಸಿಂಗ್ ಧೋನಿ ಅವರು ಧರಿಸುತ್ತಿದ್ದ '7' ಸಂಖ್ಯೆಯ ಪೋಷಾಕಿಗೆ 'ನಿವೃತ್ತಿ' ಘೋಷಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ನಿರ್ಧರಿಸಿದೆ.

ಧೋನಿಯ ಸಾಧನೆಗಳನ್ನು ಗುರುತಿಸಿ ಗೌರವಾರ್ಥವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇದರೊಂದಿಗೆ ಇನ್ನು ಮುಂದೆ ಬೇರೆ ಯಾವುದೇ ಕ್ರಿಕೆಟಿಗನೂ ಈ ಸಂಖ್ಯೆಯ ಪೋಷಾಕನ್ನು ಧರಿಸುವಂತಿಲ್ಲ.

ಧೋನಿ 2019ರಲ್ಲಿ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಆಡಿದ ನಂತರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಕಣಕ್ಕಿಳಿದಿರಲಿಲ್ಲ. 2020ರ ಆಗಸ್ಟ್ 15ರಂದು ಅವರು ನಿವೃತ್ತಿ ಘೋಷಿಸಿದ್ದರು.

ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ನಾಯಕರಾಗಿ ಮುಂದುವರಿದಿದ್ದಾರೆ.

ದಿಗ್ಗಜ ಸಚಿನ್ ತೆಂಡೂಲ್ಕರ್ ಅವರು

ಮಹೇಂದ್ರಸಿಂಗ್ ಧೋನಿ

2013ರಲ್ಲಿ ನಿವೃತ್ತರಾಗಿದ್ದರು. ಅವರು 10 ಸಂಖ್ಯೆಯ ಪೋಷಾಕು ಧರಿಸುತ್ತಿದ್ದರು. ಅವರ ನಿವೃತ್ತಿಯ ನಂತರ ಯಾರೂ ಈ ಸಂಖ್ಯೆಯ ಜೆರ್ಸಿ ಧರಿಸಿರಲಿಲ್ಲ. ಆದರೆ, 2017ರಲ್ಲಿ ಶ್ರೀಲಂಕಾ ವಿರುದ್ಧದ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಶಾರ್ದೂಲ್ ಠಾಕೂರ್ ಕೂಡ ಇದೇ ಸಂಖ್ಯೆಯ ಪೋಷಾಕು ಧರಿಸಿದ್ದರು. ಆಗ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಟೀಕೆಗಳು ವ್ಯಕ್ತವಾಗಿದ್ದವು. ಆಗ ಅವರ ಜೆರ್ಸಿಗೆ (10) ವಿಶ್ರಾಂತಿ ನೀಡಿ ಗೌರವಿಸಲಾಗಿತ್ತು.

'ಧೋನಿ ಅವರು ದಿಗ್ಗಜ ಆಟಗಾರ. ಅವರು ಭಾರತ ಮತ್ತು ವಿಶ್ವದ ಕ್ರಿಕೆಟ್‌ಗೆ ನೀಡಿದ ಕೊಡುಗೆಯು ಅಮೂಲ್ಯವಾದುದು. ಅವರ ಸಾಧನೆ ಮತ್ತು ಕಾಣಿಕೆಗಳನ್ನು ಗೌರವಿಸಲು 7ನೇ ಸಂಖ್ಯೆಯ ಪೋಷಾಕನ್ನು ನಿವೃತ್ತಿಗೊಳಿಸಲು ನಿರ್ಧರಿಸಲಾಗಿದೆ' ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ತಿಳಿಸಿದ್ದಾರೆ.

ಧೋನಿ ಅಂತರರಾಷ್ಟ್ರೀಯ ಕ್ರಿಕೆಟಿಗೆ ವಿದಾಯ ಹೇಳಿದಾಗ ಅವರ ಜೆರ್ಸಿ ಸಂಖ್ಯೆಗೆ ನಿವೃತ್ತಿ ನೀಡಿ ಗೌರವಿಸಬೇಕು ಎಂದು ವಿಕೆಟ್‌ಕೀಪರ್ ದಿನೇಶ್ ಕಾರ್ತಿಕ್ ಆಗ್ರಹಿಸಿದ್ದರು. ಈ ರೀತಿ ಒತ್ತಾಯಿಸಿದ ಮೊದಲ ಕ್ರಿಕೆಟಿಗ ಅವರಾಗಿದ್ದರು.

ಕ್ರಿಕೆಟ್ ಅಲ್ಲದೇ ಬೇರೆ ಕ್ರೀಡೆಗಳಲ್ಲಿಯೂ ದಿಗ್ಗಜ ಆಟಗಾರರ ಜೆರ್ಸಿಯನ್ನು ಗೌರವಾರ್ಥ ನಿವೃತ್ತಿಗೊಳಿಸುವ ಪದ್ಧತಿ ಇದೆ. ಶಿಕಾಗೊ ಬುಲ್ಸ್ ತಂಡ ದಲ್ಲಿ ಆಡುತ್ತಿದ್ದ ಬ್ಯಾಸ್ಕೆಟ್‌ಬಾಲ್ ದಿಗ್ಗಜ ಮೈಕೆಲ್ ಜೋರ್ಡಾನ್ ಅವರು ಧರಿಸುತ್ತಿದ್ದ 23ನೇ ಸಂಖ್ಯೆ ಪೋಷಾಕಿಗೂ ಈ ಗೌರವ ನೀಡಲಾಗಿತ್ತು.



ಅಮೃತ್ ರಾಜ್, ಪೇಸ್ ಟೆನಿಸ್ ಹಾಲ್ ಆಫ್ ಫೇಮ್‌ನಲ್ಲಿ ಸ್ಥಾನ ಪಡೆದ ಮೊದಲ ಏಷ್ಯನ್ನರಾಗಿದ್ದಾರೆ!

ಬ್ಯಾಡ್ಮಿಂಟನ್: ಸೆಮಿಗೆ ಅಶ್ವಿನಿ–ತನಿಶಾ

ಕಟಕ್ (ಪಿಟಿಐ): ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ್ತಿ ನೊಝೊಮಿ ಓಕುಹರಾ, ಒಡಿಶಾ ಮಾಸ್ಟರ್ಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್ ತಲುಪಿದರು. ಇನ್ನೊಂದೆಡೆ ಮಹಿಳಾ ಡಬಲ್ಸ್‌ನಲ್ಲಿ ಭಾರತದ ಅಶ್ವಿನಿ ಪೊನ್ನಪ್ಪ– ತನಿಶಾ ಕ್ರಾಸ್ಟೊ ಜೋಡಿ ಶುಕ್ರವಾರ ಅಂತಿಮ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಆಟಗಾರ್ತಿಯರು 22–20, 20–22, 21–14ರಲ್ಲಿ ಚೀನಾದ ಸುಂಗ್ ಶುವೊ ಯುನ್– ಯು ಚೀನ್ ಹುಯಿ ಜೋಡಿಯನ್ನು ಮಣಿಸಿದರು. ಆದರೆ ಸೋದರಿಯರಾದ ರುತುಪರ್ಣ ಪಾಂಡಾ– ಶ್ವೇತಪರ್ಣ ಪಾಂಡಾ ಸೋತರು. ಇಂಡೊನೇಷ್ಯಾದ ಜೆಸಿತಾ ಪುತ್ರಿ ಮಿಯಾನ್ಸೊರೊ– ಫೆಬಿ ಸೆತಿಯಾನಿನ್‌ಗ್ರುಮ್ 21–9, 21–15 ರಿಂದ ಭಾರತದ ಆಟಗಾರ್ತಿಯರನ್ನು ಸೋಲಿಸಿತು. ಜಪಾನ್‌ನ ಒಕುಹರಾ 21–5, 21–13 ರಿಂದ ಇಂಡೊನೇಷ್ಯಾದ ರುಝೂನಾ ಅವರನ್ನು ಸುಲಭವಾಗಿ ಸೋಲಿಸಿದರು.

ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಉನ್ನತಿ ಹೂಡಾ ಪ್ರಬಲ ಹೋರಾಟದ ನಂತರ 16–21, 21–7, 21–15 ರಿಂದ ಅನುಪಮಾ ಉಪಾಧ್ಯಾಯ ಅವರನ್ನು ಸೋಲಿಸಿದರು.

ಆಯುಷ್ ಶೆಟ್ಟಿ ಮುನ್ನಡೆ: ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತ ಆಯುಷ್ ಶೆಟ್ಟಿ 21–16, 21–14 ರಿಂದ ಸ್ವದೇಶದ ಶುಭಂಕರ್ ಡೇ ಅವರನ್ನು ಸೋಲಿಸಿ ಪುರುಷರ ಸಿಂಗಲ್ಸ್ ನಾಲ್ಕರ ಘಟ್ಟಕ್ಕೇರಿದರು.

ಕಿರಣ್ ಜಾರ್ಜ್ 21–10, 21–16 ರಲ್ಲಿ ಮೀರಬಾ ಲುವಾಂಗ್ ಮೈಸ್ನಂ ಅವರನ್ನು ಸೋಲಿಸಿ ಸೆಮಿಫೈನಲ್‌ಗೆ ಮುನ್ನಡೆದರು.

ಕಿರಣ್ ಜಾರ್ಜ್

ಸತೀಶ್ ಕುಮಾರ್ 21–10, 21–16 ರಿಂದ ಚಿರಾಗ್ ಸೇನ್ ಅವರನ್ನು ಮಣಿಸಿದರು.

ಇನ್ನಷ್ಟು ಕ್ರೀಡಾ ಸುದ್ದಿಗಳು 9B

ಕ್ರಿಕೆಟ್: ರಾಜ್ಯ ಸಂಭಾವ್ಯ ತಂಡ ಆಯ್ಕೆ

ಬೆಂಗಳೂರು: ಬಿಸಿಸಿಐ ಮಹಿಳಾ ಏಕದಿನ ಕ್ರಿಕೆಟ್ ಟ್ರೋಫಿ ಟೂರ್ನಿಗೆ ಕರ್ನಾಟಕದ 30 ಸಂಭಾವ್ಯ ಆಟಗಾರ್ತಿಯರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರಕಟಿಸಿದೆ.

ಸಂಭಾವ್ಯ ಆಟಗಾರ್ತಿಯರು: ವೇದಾ ಕೃಷ್ಣಮೂರ್ತಿ, ಶ್ರೇಯಾಂಕಾ ಆರ್. ಪಾಟೀಲ, ದಿವ್ಯಾ ಜ್ಞಾನಾನಂದ, ಪ್ರತ್ಯೂಷಾ ಕುಮಾರ್ (ವಿಕೆಟ್ ಕೀಪರ್), ಸಿ. ಪ್ರತ್ಯೂಷಾ, ವೃಂದಾ ದಿನೇಶ್, ಸಹನಾ ಎಸ್. ಪವಾರ್, ವಿ. ಚಂದು, ಅದಿತಿ ರಾಜೇಶ್, ಚಾಂದಸಿ ಕೃಷ್ಣಮೂರ್ತಿ, ರಾಮೇಶ್ವರಿ ಗಾಯಕವಾಡ, ಪುಷ್ಪಾ ಕಿರೇಸೂರು, ಶಿಶಿರಾ ಗೌಡ, ಜಿ.ಆರ್. ಪ್ರೇರಣಾ, ರೋಶಿನಿ ಕಿರಣ್, ಕೃಷಿಕಾ ರೆಡ್ಡಿ, ಸಂಜನಾ ಎಚ್. ಬಟ್ನಿ (ವಿಕೆಟ್ ಕೀಪರ್), ಪಿ. ಸಲೋನಿ, ಪಿ. ರೋಹಿತಾ ಚೌಧರಿ, ಅನಘಾ ಮುರಳಿ, ನಿಕಿ ಪ್ರಸಾದ್, ಮಿಥಿಲಾ ವಿನೋದ್, ಬಿ. ಚೇತನಾ, ಅನನ್ಯಾ ಹೆಗ್ಡೆ, ನಮಿತಾ ಡಿಸೋಜ, ಸಿ.ಎಸ್. ಸವಿ, ಸೌಮ್ಯಾ ವರ್ಮಾ (ವಿಕೆಟ್ ಕೀಪರ್), ಎನ್.ಜಿ. ಪ್ರಕೃತಿ (ವಿಕೆಟ್ ಕೀಪರ್), ಬಿ.ಜಿ. ತೇಜಶ್ವಿನಿ, ಎಂ. ಪೂಜಾ ಕುಮಾರಿ. ವಿ.ಆರ್. ವನಿತಾ (ಕೋಚ್).